ಸಾಹಿತ್ಯ-ಸಂಸ್ಕೃತಿ-ಸಂಶೋಧನೆಯ ನಿಯತಕಾಲಿಕ

ಪ್ರತಿಸ್ಪಂದ

ಕೊಡು-ಕೊಳ್ಳುವಿಕೆಗಳ ಸಂಕರ..

ಗೌರವ ಸಂಪಾದಕರು

ಕೆ. ಆರ್. ಬಸವರಾಜು

ಸಂಪಾದಕರು

ಡಾ. ಸರಸ್ವತಿ ಕೆ. ಬಿ.

ಸಾಹಿತ್ಯ, ಸಂಸ್ಕೃತಿ – ಸಂಶೋಧನ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ

LITERATURE, CULTURE - RESEARCH QUARTERLY PEER - REVIEWED JOURNAL

ISSN: 2320-9941

ಸಂಪುಟ: ೦೮, ಸಂಚಿಕೆ ೦೪, ಡಿಸೆಂಬರ್ ೨೦೨೪

VOLUME: 08, ISSUE: 04, DECEMBER 2024

ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ತಜ್ಞಪರಿಶೀಲನ ಪತ್ರಿಕೆ

literature, culture - Research Quarterly Peer - Reviewed journal

ISSN: 2320–9941

ಪ್ರತಿಸ್ಪಂದ

ಕೊಡು–ಕೊಳ್ಳುವಿಕೆಯ ಸಂಕರ

ಸಂಪುಟ: 08, ಸಂಚಿಕೆ 04, ಡಿಸೆಂಬರ್ 2024

VOLUME: 08, ISSUE: 04, December 2024

ಗೌರವ ಸಂಪಾದಕರು

ಕೆ. ಆರ್. ಬಸವರಾಜು

ಸಂಪಾದಕರು

ಡಾ. ಸರಸ್ವತಿ ಕೆ. ಬಿ.

ಪ್ರಕಟಣೆ :
ಪ್ರತಿಸ್ಪಂದ ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ಪತ್ರಿಕೆ
ತೋಟದ ಮನೆ ನಂ 107(25)
ಕಂಚಾಘಟ್ಟ ಹೊಸ ಬಡಾವಣೆ
ತಿಪಟೂರು 572201
e-mail: prathispandha@gmail.com
wibsite : https://prathispandha.wordpress.com/

ತಜ್ಞ ಪರಿಶೀಲನ ಸಮಿತಿ
PEER REVIEW COMMITTEE

ಡಾ. ಸರಸ್ವತಿ ಕೆ. ಬಿ.
ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ
ಬಿ.ಎಂ.ಎಸ್ ಸ.ಪ್ರ.ದ.ಕಾ, ಹುಳಿಯಾರು
ತುಮಕೂರು ಜಿಲ್ಲೆ, ಕರ್ನಾಟಕ

Dr. Saraswati K. B
Associate Professor, Department of English
BMS GFGC, Huliyar
Tumkur District, Karnataka

ಡಾ. ದತ್ತಾತ್ರೇಯ ಎಂ
ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ
ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ
ಶಿವಮೊಗ್ಗ ಜಿಲ್ಲೆ, ಕರ್ನಾಟಕ

Dr. Dattatreya M.
Associate Professor, Department of English
Kuvempu University, Jnanasahyadri,
Shankaraghatta
Shivamogga Dist, Karnataka

ಡಾ. ಎಂ. ರಂಗಸ್ವಾಮಿ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ, ತಮಿಳುನಾಡು

Dr. M. Rangaswamy
Assistant Professor,
Department of Kannada
University Of Madras,
Chenni, Tamil Nadu

ಡಾ. ಜ್ಯೋತಿ ಕೆ. ಬಿ.
ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ
ತುಮಕೂರು ಜಿಲ್ಲೆ, ಕರ್ನಾಟಕ

Dr. Jyoti K. B.
Professor, Department of English
Govt. First Grade College, Koratagere,
Tumkur District, Karnataka

ಡಾ. ಗೋವಿಂದರಾಯ ಎಂ.
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ
ತುಮಕೂರು ಜಿಲ್ಲೆ, ಕರ್ನಾಟಕ

Dr. Govindaraya M.
Associate Professor
Department of Kannada
Govt. First Grade College, Madhugiri
Tumkur District, Karnataka

ಅನಿತ ಕೆ. ವಿ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮೌಂಟ್ ಕಾರ್ಮಲ್ ಕಾಲೇಜು, ಸ್ವಾಯತ್ತ, ವಸಂತನಗರ
ಬೆಂಗಳೂರು, ಕರ್ನಾಟಕ

Anitha K. V.
Assistant Professor, Department of Kannada
Mount Carmel College Autonomous, Vasanthnagar
Bengaluru, Karnataka

ಡಾ. ರವಿಶಂಕರ್ ಎ. ಕೆ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ, ಕೆ. ನಾರಾಯಣಪುರ
ಬೆಂಗಳೂರು, ಕರ್ನಾಟಕ

Dr. Ravishankar A. K.
Assistant Professor, Department of Kannada
Kristu Jayanti College Autonomous, K. Narayanapura
Bengaluru, Karnataka

ಸಿದ್ಧರಾಮಯ್ಯ ಡಿ. ಎಂ
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಬಾಡೇನಹಳ್ಳಿ, ಗುಬ್ಬಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Siddaramaiah D. M
Graduate Primary Teacher
Government Higher Primary School
Baadenahalli, Gubbi Taluk,
Tumkur District, Karnataka

ಪ್ರೊ. ರಾಮು ಟಿ. ಡಿ.
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಕಾತ್ರಿಕೆಹಾಲ್, ಚಿಕ್ಕನಾಯಕನಹಳ್ಳಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Ramu T. D
Graduate Primary Teacher
Government Higher Primary School
Kathrikehal, C N Halli Taluk
Tumkur District, Karnataka

ಸಂಪಾದಕೀಯ...

ನಿಜವಾದ ಜ್ಞಾನವು ಅಜ್ಞಾನವನ್ನು ಒಪ್ಪಿಕೊಳ್ಳುವುದರಿಂದ ಪ್ರಾರಂಭವಾಗುತ್ತದೆ. ಪ್ರಶ್ನಿಸುವ ಮತ್ತು ಸಂಭಾಷಿಸುವುದರಿಂದ ಪಥ್ಯವನ್ನು ತಲುಪಬಹುದು ಎಂಬುದು ಸಾಕ್ರಟಿಸ್ ಅಭಿಮತ.

ಪ್ರಶ್ನಿಸುವುದು ಒಂದು ಕಲೆ; ಪ್ರಶ್ನೆಗಳು ನಮ್ಮೊಳಗೆ ನಾವು ಕೇಳಿಕೊಳ್ಳುವ ಹುಡುಕಾಟಗಳಾದಾಗ ವಿಶೇಷವಾದ ಶಿಸ್ತೊಂದು ಮೂಡುತ್ತದೆ. ಇಂತಹ ಶಿಸ್ತು ತನ್ನ ಬೆಳಕಿನಲ್ಲಿ ನಮ್ಮ ಅವಿವೇಕಗಳು, ಅಸಭ್ಯತೆಗಳು, ಅನಾಗರೀಕತೆಗಳನ್ನು ನಾಶಮಾಡುತ್ತದೆ. ಆದರೆ ಇದಕ್ಕೆ ಒಂದು ಮುಖ್ಯವಾದ ಷರತ್ತೆಂದರೆ, ನಾನು ತಿಳಿದಿರುವುದು ತೀರಾ ಕಡಿಮೆ ಎಂಬ ಅರಿವು. ಅಜ್ಞಾನವನ್ನು ಒಪ್ಪಿಕೊಳ್ಳುವ ಇಚ್ಛೆ. ಇದು ಅಹಂಕಾರದಿಂದ ಮಸುಕಾಗಿರುತ್ತದೆ.

ದೊರೆ ಈಡಿಪಸ್ ತನ್ನ ಜನ್ಮರಹಸ್ಯವನ್ನು ಹುಡುಕುವ ಹಠಕ್ಕೆ ಬೀಳುವುದರಿಂದ ಸತ್ಯದ ಭಯಾನಕ ಮುಖ ದರ್ಶನವಾಗುತ್ತದೆ.

ಪ್ರಶ್ನೆ ಕೇಳುವುದು ಒಂದು ಅರ್ಹತೆ. ಇದನ್ನು ಸಂಶೋಧಕರು ತುಂಬಾ ಉತ್ಸಾಹದಿಂದ ಭಿನ್ನ ಭಿನ್ನ ಮಾರ್ಗಗಳಿಂದ ತಮ್ಮದಾಗಿಸಿಕೊಳ್ಳಲು ಶ್ರಮಿಸುತ್ತಾರೆ.

ಕೇಳಿದ ಪ್ರಶ್ನೆಗಳು ನಮ್ಮೊಳಗನ್ನು ಬದಲಾಯಿಸಿ, ಬದುಕಿನ ಬೆಳಕನ್ನು ಎಲ್ಲೆಡೆ ಪಸರಿಸಲಿ. ಹೊಸವರ್ಷವು ಹೊಸತನ್ನು ನೀಡಲಿ. ಮುಂದಿನ ಒಂಬತ್ತನೆಯ ಸಂಪುಟವು ಹೊಸ ಆಶಯಗಳೊಂದಿಗೆ ಸಿದ್ಧಗೊಂಡು ನಿಮ್ಮನ್ನು ತಲುಪುವ ಆಕಾಂಕ್ಷೆ ನಮ್ಮದು.

ಡಾ. ಸರಸ್ವತಿ ಕೆ. ಬಿ
ಸಂಪಾದಕರು

ಸಲಹಾ ಮಂಡಳಿಯ ಚಿಂತನೆಗಳು

ಜಾಗತೀಕರಣದಿಂದ ಸಮಾಜದ ಮತ್ತು ಸಂಸ್ಕೃತಿಯ ಮೇಲೆ ಉಂಟುಮಾಡುವ ಪರಿಣಾಮಗಳು, ವೈದ್ಯಲೋಕದ ವಿಸ್ಮಯಗಳು ತಿಳಿಸುವ ವೈಜ್ಞಾನಿಕ ಚಿಂತನೆಯ ಸೆರೆಂಡಿಪಿಟಿ ಕೃತಿ ಓದು, ಇಸ್ಲಾಂ ಧರ್ಮವನ್ನು ಮನೋವಿಜ್ಞಾನದ ನೆಲೆಯಲ್ಲಿ ಚಿಂತಿಸಿರುವ ಬರಹ, ಆಧುನಿಕ ಸಮಾಜದಲ್ಲಿ ಬದುಕುತ್ತಿರುವ ಹೆಣ್ಣಿನ ತಲ್ಲಣಗಳ ಚಿಂತನೆ, ಮಹಿಳಾ ಸಂವೇದನೆಗಳ ಮರು ಓದು, ನೀರಿನ ಮಹತ್ವದ ಅವಲೋಕನ, ಪು.ತಿ.ನ, ಸಿದ್ದಲಿಂಗಯ್ಯ, ಲಂಕೇಶ್, ಜೆ.ಪಿ ದೊಡಮನಿ ಅವರ ಬರಹಗಳಲ್ಲಿ ಜೀವನ ಮೌಲ್ಯಗಳನ್ನು ಗುರುತಿಸಿರುವ ಹೊಸ ನೋಟದ ಬರಹಗಳು ಈ ಸಂಚಿಕೆಯಲ್ಲಿ ಅರ್ಥಪೂರ್ಣವಾಗಿವೆ. ಓದುಗರಿಗೆ ಉತ್ತಮ ಜ್ಞಾನ ಒದಗಿಸುತ್ತವೆ. – **ಅನಿತ ಕೆ.ವಿ**

ಲೇಖಕರು ತಾವು ಆಯ್ದುಕೊಂಡಿರುವ ವಿಷಯ ಹಾಗೂ ದೃಷ್ಟಿಕೋನಕ್ಕೆ ಬದ್ಧವಾಗಿ ಸಮಗ್ರತೆಯನ್ನು ಪ್ರದರ್ಶಿಸಿರುವುದುಅಭಿನಂದನಾರ್ಹ. ಇಂತಹ ಕೌಶಲ್ಯವು ವಿಶ್ವವಿದ್ಯಾಲಯಗಳ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಗಳಿಸಲು ಸಹಕಾರಿಯಾಗುತ್ತವೆ. ಇದರೊಟ್ಟಿಗೆ ಹೊಸದನ್ನು ಸೃಷ್ಟಿಸುವ, ತತ್ವಗಳನ್ನು ಪಲ್ಲಟಿಸುವ, ನಂಬಿಕೆಗಳನ್ನು ಬುಡಮೇಲು ಮಾಡುವ ಒಳಹುಗಳನ್ನು ಹೆಣೆದರೆ ಲೇಖನಗಳು ಇನ್ನೂ ಅದ್ಭುತವಾಗಿ ಮೂಡುತ್ತವೆ. – **ಡಾ. ಜ್ಯೋತಿ ಕೆ. ಬಿ.**

ಕೆಲವು ಲೇಖನಗಳು ನಮ್ಮ ಕಣ್ಣೆದುರಿನ ಪ್ರಸ್ತುತದ ಸಂವೇದನೆಗಳನ್ನು ಪ್ರತಿಫಲಿಸುತ್ತವೆ. ಎಸ್. ಜಿ. ಸಿದ್ದರಾಮಯ್ಯ ಅವರ ಕವನದಲ್ಲಿ 'ಗಿಡುಗ' ಜಾಗತೀಕರಣದ ಮತ್ತು 'ಎರೆಹುಳ' ನೆಲಮೂಲ ಸಂಸ್ಕೃತಿಯ ಸಂಕೇತಗಳಾಗಿ ವಸಾಹತುಶಾಹಿ ವ್ಯವಸ್ಥೆಯ ಬಿಗಿ ಹಿಡಿತಕ್ಕೆ ನಲುಗಿ ತನ್ನ ಅಸ್ಮಿತೆಯನ್ನೇ ಕಳೆದುಕೊಂಡ ನಮ್ಮ ನೆಲದ ಬಹುಮುಖಿ ಸಂಸ್ಕೃತಿಗಳು ಇಂದಿನ ನವವಸಾಹತೀಕರಣದ ಕಬಂಧ ಬಾಹುಗಳ ಪ್ರಭಾವದಿಂದ ಮೂಲ ಸ್ವರೂಪವನ್ನೇ ಕಳೆದುಕೊಂಡು ನಶಿಸಿಹೋಗುವ ಅಪಾಯದಲ್ಲಿರುವುದನ್ನು ಅರ್ಥಪೂರ್ಣವಾಗಿ ವಿಶ್ಲೇಷಿಸಿದ್ದಾರೆ.

– ಸಿದ್ಧರಾಮಯ್ಯ ಡಿ. ಎಂ

ISSN : 2320-9941
Linking ISSN (ISSN-L): 2320-9941
Key-title: Prathispandha
Title proper: Prathispandha.
Country: India
Medium: Print
Last modification date: 01/09/2014
Type of record: Confirmed
ISSN Center responsible of the record: ISSN National Centre for India

For all potential issues concerning this bibliographic record (missing or wrong data etc.), please contact the ISSN National Centre mentioned above by clicking on the link.

ಪರಿವಿಡಿ

1. ನೆಲಮೂಲ ಸಂಸ್ಕೃತಿಯ ತಲ್ಲಣ : ಗಿಡುಗ ಮತ್ತು ಎರೆಹುಳ – ಡಾ.ಪ್ರೇಮ್‌ಕುಮಾರ ಕೆ 1
2. ಸೆರೆಂಡಿಪಿಟಿ ಕೃತಿಯ ಓದು – ಶ್ರೀಮತಿ ಗೀತಾ ಎಸ್ 5
3. ಇಸ್ಲಾಂ ಧರ್ಮದಲ್ಲಿ ಮನೋವಿಜ್ಞಾನ – ಡಾ. ಸೈಯದ್ ಮುಯಿನ್ 9
4. ಶಿವನ ಮೀಸುವ ಹಾಡು – ಮಹಿಳಾ ಸಂವೇದನೆ – ಡಾ. ಕಿರಣಕುಮಾರ್ ಹೆಚ್. ಜಿ. 13
5. ಬಹುಮುಖ ಪ್ರತಿಭೆಯ ಅಭಿನೇತ್ರಿ 'ಬಿ.ಜಯಶ್ರೀ'ಯ ಕಥನ – ಶ್ಯಾಮಣ್ಣ ಮಡ್ಡೇರ್ 19
6. ಡಾ. ಸಿದ್ದಲಿಂಗಯ್ಯ ಅವರ ಏಕಲವ್ಯ ನಾಟಕ: ಮರುಚಿಂತನೆ – ಶ್ರೀಮತಿ ರಾಧಾ ಆರ್. ನಾಡಿಗ್ 23
7. ನೇಮಿಚಂದ್ರರ ಪ್ರಬಂಧಗಳಲ್ಲಿ ಜೀವನ ದರ್ಶನ – ದಾಕ್ಷಾಯಣಮ್ಮ ಎಸ್. 28
8. 'ಅಂತಃಕರಣದ ಮೌನ'ಕ್ಕೆ ಧ್ವನಿಯಾದ : ಪು.ತಿ.ನ. ಅವರ 'ಕಣಿವೆಯ ಮುದುಕ' ಕವನ –ಡಾ. ರಂಗಸ್ವಾಮಿ ಹೆಚ್. 32
9. ವಚನ ಸಾಹಿತ್ಯ ಮತ್ತು ಸಾಮಾಜಿಕ ಚಲನಶೀಲತೆ – ಡಾ. ಪಿ. ನಾಗರಾಜ 41
10. ಲಂಕೇಶರ ಕಥನ ಸಾಹಿತ್ಯದಲ್ಲಿ ಬದುಕಿನ ಸಂಕೀರ್ಣತೆಯ ಅನಾವರಣ – ಡಾ. ಸಂಗಮೇಶ ಎಸ್. ಗಣಿ 47
11. ಸಂಕೀರ್ಣದೊಳಗೆ ಕಂಡ ಸರಳ ವ್ಯಕ್ತಿತ್ವದ ಕೃಷಿ – ಡಾ. ರವಿಶಂಕರ್ ಎ.ಕೆ 52
12. ಯುರೋಪಿನ ಫ್ಯಾಂಟಸಿ ಕತೆಗಳಲ್ಲಿನ ಸಂರಚನೆಗಳು: Hansel and Gartel ಕತೆಯ ಓದು – ಡಾ. ಸರಸ್ವತಿ ಕೆ.ಬಿ 56
13. 'ಶ್ರೀರಾಮಾಯಣ ದರ್ಶನಂ' ಸ್ವಪ್ನಗಳ ಪಾತ್ರ – ಶಿವರಾಜು ಎಸ್. 60

ನೆಲಮೂಲ ಸಂಸ್ಕೃತಿಯ ತಲ್ಲಣ : ಗಿಡುಗ ಮತ್ತು ಎರೆಹುಳ

ಡಾ. ಪ್ರೇಮ್‌ಕುಮಾರ ಕೆ.
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಕಾಲೇಜು, ಬೆಂಗಳೂರು.
premkumara.k@kristujayanti.com

"

ಗ್ರಾಮೀಣ ನೆಲದ ಸೊಗಡನ್ನು ಸವಿದು ಬೆಳೆದ ಅಪ್ಪಟ ಹಳ್ಳಿಗಾಡಿನ ಕವಿ ಎಸ್.ಜಿ. ಸಿದ್ಧರಾಮಯ್ಯ. ಸಾಮಾನ್ಯ ಕುಟುಂಬವೊಂದರಲ್ಲಿ ಅವರು ೧೯.೧೧.೧೯೪೬ ರಲ್ಲಿ ತುಮಕೂರು ಜಿಲ್ಲೆಯ ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನ ಸಿಂಗಾಪುರ ಗ್ರಾಮದಲ್ಲಿ ಜನಿಸಿದರು. ವಿದ್ಯಾಭ್ಯಾಸದ ಹಾದಿಯಲ್ಲಿ ಹೊರಟು ನಗರದ ಬದುಕಿನ ಅನುಭವವನ್ನು ಪಡೆಯುತ್ತಾರೆ. ತುಮಕೂರಿನ ಸಿದ್ಧಗಂಗಾ ಕಾಲೇಜಿನಲ್ಲಿ ಅಧ್ಯಾಪಕರಾಗಿ ವೃತ್ತಿಜೀವನ ಆರಂಭಿಸಿದ ಅವರು ಮಡಿಕೇರಿ, ಸಿಂಧನೂರು, ತುಮಕೂರು, ಕೊರಟಗೆರೆ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ತುಮಕೂರು, ಚಿಕ್ಕನಾಯಕನ ಹಳ್ಳಿ, ಹೊಸದುರ್ಗ, ಮಧುಗಿರಿ ಕಾಲೇಜುಗಳಲ್ಲಿ ಪ್ರಾಂಶುಪಾಲರಾಗಿ ಹುದ್ದೆ ನಿರ್ವಹಿಸಿದ್ದಾರೆ. ಹಳ್ಳಿಯ ಹೊಲ–ಗದ್ದೆಗಳಲ್ಲಿ ಬೆವರು–ಬಿಸಿಲನ್ನು ಹೊದ್ದು ಬೆಳೆದವರು, ಅಧ್ಯಾಪಕರಾಗಿ ನಾಲ್ಕು ಗೋಡೆಗಳ ಒಳಗೆ ವಿದ್ಯಾರ್ಥಿಗಳ ಎದೆಯಲ್ಲಿ ಬದುಕಿನ ಬೀಜ ಬಿತ್ತಿದರು. ವೃತ್ತಿಯ ಜೊತೆ ಜೊತೆಗೆ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ಹೆಗ್ಗಳಿಕೆ ಇವರದು. ಸಾಹಿತ್ಯದ ವಿವಿಧ ಪ್ರಕಾರಗಳಾದ ಕಾವ್ಯ, ನಾಟಕ, ವಿಮರ್ಶೆ, ಅನುಭವ ಕಥನ, ಪ್ರವಾಸ ಕಥನ, ಸಂಪಾದನೆ ಕ್ಷೇತ್ರಗಳಲ್ಲಿ ಕೃಷಿ ಮಾಡಿದ್ದಾರೆ.

ಕನ್ನಡ ಸಾಹಿತ್ಯ ವಲಯದಲ್ಲಿ ಕವಿ ಎಂದೆ ಗುರುತಿಸಲಾಗಿರುವ ಎಸ್. ಜಿ. ಸಿದ್ಧರಾಮಯ್ಯ ಅವರು ನವ್ಯ ಸಾಹಿತ್ಯ ಹೆಚ್ಚು ಪ್ರಚಲಿತವಿದ್ದ ಕಾಲದಲ್ಲಿ ಕಾವ್ಯಲೋಕ ಪ್ರವೇಶ ಮಾಡಿದರು. ನವ್ಯಕವಿಗಳು ಬರೆಯುತ್ತಿದ್ದ ಮಾದರಿಯಲ್ಲಿ ಇವರ ಮೊದಲೆರಡು ಕವನ ಸಂಕಲನಗಳು ಮೂಡಿ ಬಂದಿವೆಯಾದರೂ, ತಮ್ಮ ಕಾವ್ಯ ಪರಿಭಾಷೆಯನ್ನು ರೂಪಿಸಿಕೊಂಡಿರುವಲ್ಲಿ ನವ್ಯದವರಿಗಿಂತ ಇವರು ಭಿನ್ನವಾಗಿ ನಿಲ್ಲುತ್ತಾರೆ.

ಇವರು ಒಟ್ಟು ೧೨ ಕವನ ಸಂಕಲನಗಳನ್ನು ರಚಿಸಿದ್ದಾರೆ. ಇವರ ಕಾವ್ಯಗಳಲ್ಲಿ ನೆಲಮೂಲ ಸಂಸ್ಕೃತಿ, ದೇಸಿ ಚಿಂತನೆ, ಕೃಷಿ ಜೀವನ, ರೈತಾಪಿ ವರ್ಗದ ಬವಣೆ, ಹೆಣ್ಣು ಮತ್ತು ಮಣ್ಣು, ಪುರಾಣ, ಜೋಗಿ–ಜಂಗಮ, ಕಾಯಕ ಜೀವಿಗಳು ಇವರನ್ನು ಬಿಡದೆ ಕಾಡಿರುವ ಪ್ರತೀಕಗಳಾಗಿವೆ. ನಾಲ್ಕೂವರೆ ದಶಕಗಳ ಕಾಲ ಕಾವ್ಯಕ್ಷೇತ್ರದಲ್ಲಿ ನಿರಂತರವಾಗಿ ತೊಡಗಿಸಿಕೊಂಡು ಸಮಾಜಕ್ಕೆ ಸಾಹಿತ್ಯಿಕ ಕೊಡುಗೆ ನೀಡುತ್ತಿದ್ದಾರೆ.

ವಸಾಹತುಶಾಹಿ ಸಂಸ್ಕೃತಿಯಿಂದಾಗಿ ನಮ್ಮ ಬಹುಮುಖಿ ಸಂಸ್ಕೃತಿ ಪರಂಪರೆ ವಿನಾಶ ಹೊಂದಿತು ಎಂಬ ದುರಂತ ಸತ್ಯವನ್ನು ನಾವು ಗಮನಿಸಬೇಕು. ಪ್ರಸ್ತುತ ಆಧುನಿಕ ಬದುಕೆಂಬುದು ಕೊಳ್ಳುಬಾಕ ಸಂಸ್ಕೃತಿಗೆ ತೆರೆದುಕೊಂಡಿದೆ. ಯಂತ್ರ ನಾಗರಿಕತೆಯಿಂದ, ವಸಾಹತುಶಾಹಿ ಪ್ರಭಾವದಿಂದಾಗಿ ಭೋಗ ಸಂಸ್ಕೃತಿಯ ಕಪಿಮುಷ್ಟಿಗೆ ಸಿಕ್ಕಿರುವ ನಮ್ಮ ಭಾರತೀಯ ಸಂಸ್ಕೃತಿ ಡೋಲಾಯಮಾನ ಸ್ಥಿತಿಯಲ್ಲಿದೆ. ಈ ಅಂಶಗಳನ್ನು ಅವರ 'ಗಿಡುಗ ಮತ್ತು ಎರೆಹುಳ' ಎಂಬ ಕವನದಿಂದ ಪ್ರತಿನಿಧಿಸುತ್ತಿದ್ದಾರೆ. ಆ ಮೂಲಕ ಸಮಾಜವನ್ನು ದೇಶಿಯ ಚಿಂತನೆಯ ಹಿನ್ನೆಲೆಯಲ್ಲಿ ಮತ್ತೆ ಗಟ್ಟಿಗೊಳಿಸುವ ಪ್ರಯತ್ನವನ್ನು, ಪಾಶ್ಚಾತ್ಯ ಸಂಸ್ಕೃತಿಯ ಭಾವಬಂಧನದ ಬಿಡುಗಡೆ ಪಡೆಯುವ ತುರ್ತನ್ನು ಲೇಖಕರು ಮತ್ತೆ ಮತ್ತೆ ತಮ್ಮ ಕಾವ್ಯದಲ್ಲಿ ಪ್ರಯತ್ನಿಸಿರುವುದನ್ನು ಕಾಣಬಹುದು. ಪ್ರಧಾನ ಸಂಸ್ಕೃತಿಗೆ ಪರ್ಯಾಯ ಸಂಸ್ಕೃತಿಯನ್ನು ಮುಖಾಮುಖಿಯಾಗಿಸುವ ಮೂಲಕ ಇವರ ಕಾವ್ಯದಲ್ಲಿ ಸಂಘರ್ಷ ಎನ್ನುವುದು ಜಾಗೃತಾವಸ್ಥೆಯಲ್ಲಿರುವುದನ್ನು ಗುರುತಿಸಬಹುದು.

'ಗಿಡುಗ ಮತ್ತು ಎರೆಹುಳು' ಕವಿತೆಯು 'ಕಾಯಮಾಯದ ಹಾಡು' ಸಂಕಲನದ ಕವಿತೆ. ಇದು ಎಸ್.ಜಿ. ಸಿದ್ಧರಾಮಯ್ಯ ಅವರು ರಚಿಸಿರುವ ಒಂದು ಮಹತ್ವದ ಸಾಂಕೇತಿಕ ಕವನವಾಗಿದೆ. ಎರಡು ಪರಸ್ಪರ ಗುಣ ವಿಶೇಷತೆಗಳಿಗೆ ವಿರುದ್ಧವಾಗಿರುವ ಜೀವಿಗಳನ್ನು ಈ ಪದ್ಯದಲ್ಲಿ ಪ್ರತಿಮೆಗಳಾಗಿ ಬಳಸಲಾಗಿದೆ. ಕವಿ ಇಲ್ಲಿ ಬಳಸಿರುವ ಪ್ರತಿಮೆಗಳು ಬಹಳ ವಿಶೇಷವಾದುವು. ಗಿಡುಗ ಆಹಾರ ಸರಪಳಿಯಲ್ಲಿ ಅಗ್ರಸ್ಥಾನದಲ್ಲಿ ನಿಲ್ಲುತ್ತದೆ. ಅದೇ ಅಂತಿಮ ಬೇಟೆಗಾರ. ಏಕೆಂದರೆ ಆಹಾರ ಸರಪಳಿಯನ್ನು ಒಮ್ಮೆ ಗಮನಿಸುವುದಾದರೆ ಮಿಡತೆಯನ್ನು ಕಪ್ಪೆ ತಿನ್ನುತ್ತದೆ, ಕಪ್ಪೆಯನ್ನು ಹಾವು ತಿನ್ನುತ್ತದೆ, ಹಾವು ವಿಷಜಂತು ಎನ್ನುತ್ತೇವೆ. ಅಂತಹ ಹಾವನ್ನು ಹೊಂಚುಹಾಕಿ ಕುಕ್ಕಿಕೊಲ್ಲುವ ಚಾಣಾಕ್ಷತನ ಇರುವುದು ಗಿಡುಗ ಪಕ್ಷಿಗೆ. ಸೂಕ್ಷ್ಮದೃಷ್ಟಿ, ಹೊಂಚು ಹೂಡುವ ಚಾಣಾಕ್ಷ್ಯತನ, ಮಿಂಚಿನ ರೀತಿಯ ವೇಗ, ಚಾಕುಚಕ್ಯತೆ ಹಾಗೂ ಆಕ್ರಮಣಶೀಲ ಪ್ರೌವೃತ್ತಿ ಇದೆಲ್ಲವು ಸಹ ಅದರ ಗುಣಸ್ವಭಾವವನ್ನು ಪ್ರತಿನಿಧಿಸುತ್ತದೆ. ಆ ಕಾರಣಕ್ಕೆ ಕವಿ ಗಿಡುಗ ಪಕ್ಷಿಯನ್ನು ಜಾಗತೀಕರಣಕ್ಕೆ ಸಂಕೇತವಾಗಿ ಬಳಸಿದ್ದಾರೆ. ಅದರಂತೆಯೇ ಪ್ರತಿಸಂಕೇತವಾಗಿ ಎರೆಹುಳವನ್ನು ಬಳಸಿರುವುದು ಇನ್ನಷ್ಟು ವಿಶೇಷವಾಗಿದೆ. ಏಕೆಂದರೆ, ಎರೆಹುಳದ ಜೀವನಕ್ರಮವನ್ನು ಗಮನಿಸಬೇಕು. ನೆಲದಲ್ಲಿ ಹುಟ್ಟಿ ನೆಲದ ತ್ಯಾಜ್ಯಗಳನ್ನು ತಿಂದು ಬದುಕುವ ಈ ಸೂಕ್ಷ್ಮಜೀವಿ ತಾನು ಹುಟ್ಟಿದ ನೆಲಕ್ಕೆ ಫಲವತ್ತತೆಯನ್ನು ನೀಡುತ್ತದೆ. ಅದರ ಈ ಗುಣಸ್ವಭಾವಕ್ಕೆ ಪರೋಪಕಾರಜೀವಿ, ರೈತನ ಬೆನ್ನೆಲುಬು ಎಂದೆಲ್ಲಾ ಕರೆಯುವುದುಂಟು. ಈ ಜೀವಿ ತನ್ನ ನೆಲದಲ್ಲಿ, ತನ್ನ ನೆಲಕ್ಕಾಗಿ ಜೀವವನ್ನು ಸವೆಸುತ್ತದೆ. ಬದುಕಿನುದ್ದಕ್ಕು ನೆಲದ ಫಲವತ್ತತೆಯನ್ನು ಕಾಯುತ್ತಿದೆ. ಆದರೆ ಆ ನೆಲದ ಸ್ವರೂಪವೇ ಬದಲಾದಾಗ, ಹುಲುಸಾಗಿ ಬೆಳೆದು ಸಮೃದ್ಧಿಯನ್ನು ನೀಡುವ ತನ್ನ ನೆಲ ಇಂದು ನಾಶವಾಗುತ್ತಿದೆ ಎಂದಾಗ ತಾನಾದರೂ ಏನು ಮಾಡಬಲ್ಲೆ ಎಂಬ ಹತಾಶೆಯಲ್ಲಿ ಮಿಡುಕುತ್ತಿದೆ, ಬದುಕಿಗಾಗಿ ದುಡುಕುತ್ತಿದೆ.

ಕವಿತೆಯಲ್ಲಿ ಗಿಡುಗ ಜಾಗತೀಕರಣದ ಸಂಕೇತವಾಗಿದೆ ಮತ್ತು ಎರೆಹುಳು ನೆಲಮೂಲ ಸಂಸ್ಕೃತಿಯ ಸಂಕೇತವಾಗಿದೆ. ಹಾಗೆಯೆ ಭೂಮಿ ಮೇಲೆ ವಾಸಿಸುತ್ತಿರುವ ಸಾಮಾನ್ಯ ಜನರನ್ನು ಸೂಚಿಸುತ್ತದೆ. ಈ ಭೂಮಿಯ ಮೇಲೆ ಕೇವಲ ಬಲಿಷ್ಠ ಜೀವಿಗಳು ಬದುಕುವುದಷ್ಟೇ ಅಲ್ಲ, ಎಲ್ಲ ಜೀವರಾಶಿಯು ಬದುಕುವ ಅವಕಾಶವಿರಬೇಕು ಎಂಬುದನ್ನು ತಿಳಿಸುತ್ತಿದೆ. 'ಗಿಡುಗ ಮತ್ತು ಎರೆಹುಳ' ಈ ಕವಿತೆ ಪಾಶ್ಚಾತ್ಯ ವಸಾಹತುಶಾಹಿಯ ಆಕ್ರಮಣ ಮತ್ತು ದೇಸಿ ಸಂಸ್ಕೃತಿಯ ಮುಖಾಮುಖಿಯಾಗಿರುವ ಸ್ಪಷ್ಟ ಚಿತ್ರಣವನ್ನು ನೀಡುತ್ತಿದೆ. ವಸಾಹತುಶಾಹಿಯ ಆಕ್ರಮಣದಿಂದಾದ ದುಷ್ಪರಿಣಾಮವನ್ನು ಕೃಷಿ ಸಂಸ್ಕೃತಿಯ ಮೇಲೆ ನಡೆದಿರುವ ಅತ್ಯಾಚಾರವೆಂದೇ ಭಾವಿಸಬಹುದು. ವಸಾಹತುಶಾಯಿಯ ಮೂಲಮಂತ್ರ ಜಾಗತೀಕರಣ. ಅದು ನಮ್ಮ ದೇಶಿ ಸಂಸ್ಕೃತಿಯ ಮೇಲೆ ಯಾವ ರೀತಿಯಲ್ಲಿ ಆಕ್ರಮಣ ಮಾಡಿದೆ ಎಂಬುದನ್ನು ಆರಂಭಿಕ ಸಾಲುಗಳಲ್ಲಿ ನೋಡಬಹುದು.

ಪಶ್ಚಿಮದ ಕಡೆಯಿಂದ
ಪಂಚರಂಗಿಯ ಗಿಡುಗ
ರವ ರವ ರವ್ವನೆ ಹಾರಿಬಂತು
ಬಣ್ಣದ ಬೆರಗಿಗೆ ಕಣ್ಣಿನ ಬೆಡಗಿಗೆ
ಪೂರ್ವದ ಜೀವ ಜಾತಗಳೆಲ್ಲ ಮಾತು ಕಳೆದವು

ದೇಶೀ ಸಂಸ್ಕೃತಿಯ ಮೇಲಿನ ಆಕ್ರಮಣ ಪಾಶ್ಚಾತ್ಯ ದೇಶಗಳಿಂದ ಆಗುತ್ತಿರುವುದೆಂದು ಪಂಚರಂಗಿಯ ಗಿಡುಗ ಬಂದಿರುವುದು

ಪಶ್ಚಿಮದಿಂದ ಎಂಬುದರಲ್ಲಿ ಸ್ಪಷ್ಟವಾಗಿ ತಿಳಿಯುತ್ತದೆ. ಪಾಶ್ಚಾತ್ಯ ದೇಶಗಳು ನಮ್ಮ ದೇಶದ ಮೇಲೆ ನೇರವಾಗಿ ಆಕ್ರಮಣ ಮಾಡಿ ಅಧಿಕಾರ ಹಿಡಿಯಲಿಲ್ಲ, ಬಹುಸಂಸ್ಕೃತಿಯ ದೇಶ ಭಾರತವನ್ನು ತನ್ನ ತೆಕ್ಕೆಗೆ ಹಾಕಿಕೊಳ್ಳುವಲ್ಲಿ ಇದು ಬಹಳಷ್ಟು ಕಾಲ ತೆಗೆದುಕೊಂಡಿದೆ. ಇತಿಹಾಸದ ಪುಟವನ್ನು ಒಮ್ಮೆ ತಿರುವಿ ನೋಡಿದರೆ ವಾಸ್ಕೋಡಿಗಾಮ ಭಾರತಕ್ಕೆ ಜಲಮಾರ್ಗ ಕಂಡುಹಿಡಿದದ್ದು ವ್ಯಾಪಾರದ ದೃಷ್ಟಿಯಿಂದ. ಆದರೆ ಕಾಲಕಳೆದಂತೆ ಬ್ರಿಟೀಷರು ರಂಗುರಂಗಿನ ಆಮಿಷಗಳು, ಒಳಸಂಚುಗಳು, ಒಡೆದುಹಾಳುವ ನೀತಿ ಹಾಗೂ ರಾಜಕೀಯ ಕುತಂತ್ರವನ್ನು ಬಳಸಿ ನಮ್ಮ ನೆಲದ ಅಧಿಕಾರ ಹಿಡಿದುಕೊಂಡರು. ಈ ತಂತ್ರಗಾರಿಕೆಯೆ ಪಾಶ್ಚಾತ್ಯರ ಬ್ರಹ್ಮಾಸ್ತ್ರವಾಗಿದ್ದು ಇಂದಿಗೂ ಸಹ ನಮ್ಮ ದೇಶವನ್ನು ತನ್ನ ಕಬಂದಬಾಹುವಿನಿಂದ ಹಿಡಿದಿಟ್ಟಿದೆ. ಪಾಶ್ಚಾತ್ಯರ ತಂತ್ರಗಾರಿಕೆಯನ್ನೆ ಕವಿ ಪಂಚರಂಗಿಯ ಗಿಡುಗದ ಆಕ್ರಮಣ ಎಂಬುದಾಗಿ ಹೋಲಿಸಿರುವುದಾಗಿದೆ. ಆ ಪಂಚರಂಗಿಯ ಗಿಡುಗದ ನಯ ನಾಜೂಕಿಗೆ 'ಪೂರ್ವದ ಜೀವ ಜಾತುಗಳೆಲ್ಲ ಮಾತು ಕಳೆದವು' ಎನ್ನುವಲ್ಲಿ ನಮ್ಮ ದೇಶದ ಸಂಸ್ಕೃತಿಯೊಂದು ಆಕ್ರಮಣಶೀಲತೆಗೆ ಒಳಗಾಗಿದೆ ಎಂಬ ಧ್ವನಿ ಕಾಣುತ್ತದೆ. ಭಾಷೆ, ದೃಷ್ಟಿಕೋನ, ಸೃಜನಶೀಲತೆ, ಸ್ವಂತಿಕೆಯ ಮೇಲೆ ವಸಾಹತುಶಾಹಿಯ ಆಕ್ರಮಣದಿಂದ ಉಂಟಾಗಿರುವ ಪರಿಣಾಮ ಭೀಕರವಾದುದು ಎಂಬ ವಾಸ್ತವ ಸತ್ಯವಾಗಿದೆ. ಪಾಶ್ಚಾತ್ಯ ಸಂಸ್ಕೃತಿಯ ಆಕ್ರಮಣ ಎಷ್ಟು ಭೀಕರ ಪ್ರಭಾವ ಬೀರಿದೆ ಎಂಬುದನ್ನು ಕವಿ ಬಹಳ ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಇತಿಹಾಸದಲ್ಲಿ ಬ್ರಿಟಿಷರು ಭಾರತವನ್ನು ಆಕ್ರಮಿಸಿ ನೂರು ವರ್ಷಗಳ ಕಾಲ ಅಧಿಕಾರ ನಡೆಸಿದ ಪ್ರಭಾವ ಒಂದು ಕಡೆಯಾದರೆ, ಆಧುನಿಕ ಸಮಾಜದಲ್ಲಿ ಉಂಟಾಗಿರುವ ಪಾಶ್ಚಾತ್ಯೀಕರಣದ ಪ್ರಭಾವ ಮತ್ತೊಂದು ಕಡೆಯಾಗಿದೆ. ಆಧುನಿಕರಣದ ಮೂಲ ಮಂತ್ರಗಳಾದ ಉದಾರೀಕರಣ, ಜಾಗತೀಕರಣ, ಖಾಸಗೀಕರಣಗಳು ಇಡೀ ಬ್ರಹ್ಮಾಂಡವನ್ನು ಕುಕ್ಕಿ ತಿನ್ನುತ್ತಿರುವ ಪಂಚರಂಗಿನ ಗಿಡುಗವಾಗಿದೆ. ಜಾಗತೀಕರಣವು ಸಂಸ್ಕೃತಿಯ ಮೇಲೆ ಪರಿಣಾಮ ಬೀರುವ ಹಲವು ಮಾರ್ಗಗಳಿವೆ. ಯುಗಯುಗಾಂತರಗಳಲ್ಲಿ ಭಾರತವು ಸಾಂಸ್ಕೃತಿಕ ಪ್ರಭಾವಗಳಿಗೆ ಮುಕ್ತ ಮಾರ್ಗವನ್ನು ಹೊಂದಿದೆ ಮತ್ತು ಈ ಕಾರಣದಿಂದಾಗಿ ಶ್ರೀಮಂತವಾಗಿದೆ. ನಮ್ಮ ದೇಶ ಹಲವು ಭಾಷೆ ಹಾಗೂ ಸಂಸ್ಕೃತಿಗಳ ತವರೂರಾಗಿದ್ದು ಸಮೃದ್ಧವಾದ ವೈಶಿಷ್ಟ್ಯಗಳನ್ನು ಒಳಗೊಂಡಿತ್ತು. ಆದರೆ ಆಧುನೀಕರಣದ ಪ್ರಭಾವದಿಂದಾಗಿ ಕಳೆದ ಕೆಲವು ದಶಕಗಳಲ್ಲಿ ಪ್ರಮುಖ ಸಾಂಸ್ಕೃತಿಕ ಬದಲಾವಣೆಗಳು ನಮ್ಮ ಸ್ಥಳೀಯ ಸಂಸ್ಕೃತಿಗಳನ್ನು ಹಿಂದಿಕ್ಕುತ್ತವೆ ಎಂಬ ಭಯಕ್ಕೆ ಕಾರಣವಾಗಿವೆ. ಹೀಗಾಗಿ ನಮ್ಮ ಸಮಾಜದಲ್ಲಿ ರಾಜಕೀಯ ಮತ್ತು ಆರ್ಥಿಕ ವಿಷಯಗಳ ಬಗ್ಗೆ ಮಾತ್ರವಲ್ಲದೆ ಬಟ್ಟೆ, ಶೈಲಿ, ಸಂಗೀತ, ಚಲನಚಿತ್ರಗಳು, ಭಾಷೆಗಳು, ದೇಹ ಭಾಷೆಯ ಬದಲಾವಣೆಗಳೂ ಗಂಭೀರವಾದ ಭಿನ್ನ ಸ್ವರೂಪವನ್ನು ಪಡೆದುಕೊಳ್ಳುತ್ತಿವೆ. ಅದು ಎಷ್ಟರ ಮಟ್ಟಿಗೆ ನಮ್ಮ ಮೇಲೆ ಪ್ರಭಾವ ಬೀರಿದೆ ಎಂದರೆ ಕಾಯ ಪ್ರಾಣಗಳ ಹೊಟ್ಟೆಯ ಮೇಲೆ ಕಣ್ಣೀರಿನ ಬಟ್ಟೆ ಹಾಕುವ ಪರಿಸ್ಥಿತಿಗೆ ಬಂದು ನಿಲ್ಲಿಸಿದೆ. ಮಾತು, ನೋಟ, ಕೂಟ ನುಂಗಿರುವುದು ಜಾಗತೀಕರಣವೆಂಬ ಮಾಯೆ ಎಂಬುದನ್ನು ಗಮನಿಸಬೇಕು.

ಮಾತು ನುಂಗಿದ ಬಣ್ಣ
ನೋಟ ನುಂಗಿದ ಬಣ್ಣ
ಕೂಟ ನುಂಗಿದ ಬಣ್ಣ
ಭಯ ಜನಕ ಬಣ್ಣ
ಕರಿನೆರಳ ಸರಳಾಗಿ
ಪಂಚಭೂತಗಳೆಲ್ಲ ವಂಚನೆಯ ಬಣ್ಣಗದಡು

ಮಾತು ನುಂಗಿದ ಬಣ್ಣ ಎಂದರೆ ನಮ್ಮ ದೇಶವು ಹಲವಾರು ಸ್ಥಳೀಯ ಹಾಗೂ ಪ್ರಾದೇಶಿಕ ಭಾಷೆಗಳನ್ನು ಒಳಗೊಂಡಿದೆ. ಜಾಗತೀಕರಣದಿಂದಾಗಿ ಪ್ರಪಂಚದ ಮೂಲೆಮೂಲೆಯಲ್ಲೂ ಬಳಕೆಗೊಳ್ಳುತ್ತಿರುವ ಭಾಷೆ ಆಂಗ್ಲಭಾಷೆಯೊಂದೆ ಆಗಿದೆ. ಇದನ್ನು ಹೊರತುಪಡಿಸಿ ಮನುಷ್ಯನಿಗೆ ಬದುಕು ಇಲ್ಲವೆನ್ನುವ ಮಟ್ಟಿಗೆ ಆಂಗ್ಲ ಭಾಷೆಯು ಪ್ರಭಾವಿಸಿದೆ. ನೋಟ ನುಂಗಿದ ಬಣ್ಣ ಎಂದರೆ ಮೊದಲೇ ಹೇಳಿದಂತೆ ಬಹು ಸಂಸ್ಕೃತಿಯ ನಾಡಾದ ನಮ್ಮ ಸದೇಶದಲ್ಲಿ ಉಡುಗೆ ತೊಡುಗೆಗೆ ಸಂಬಂಧಿಸಿದಂತೆ ಸಂಸ್ಕಾರಯುತವಾದ ವಸ್ತ್ರವಿನ್ಯಾಸಗಳನ್ನು ಹೊಂದಿದ್ದವು ಆದರೆ ಇಂದು ಪಾಶ್ಚಾತ್ಯೀಕರಣದ ನೆಪದಲ್ಲಿ ಬದುಕಿನ ಶೈಲಿ ಸ್ವರೂಪಗಳೂ ವಿರೂಪಗೊಳ್ಳುತ್ತಿವೆ. ಕೂಟ ನುಂಗಿದ ಬಣ್ಣ ಎಂದರೆ ಜಾಗತೀಕರಣದಿಂದಾಗಿ ಅವಿಭಕ್ತ ಕುಟುಂಬದ ಮೇಲೆ ದುಷ್ಪರಿಣಾಮ ಉಂಟಾಗಿದೆ. ವಿಭಕ್ತ ಕುಟುಂಬಗಳು ಹೆಚ್ಚಾಗುತ್ತಿವೆ. ಈಗ ಹೆಚ್ಚುತ್ತಿರುವ ವೃದ್ಧಾಶ್ರಮಗಳಲ್ಲಿ ಇದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಕುಟುಂಬ ರೂಪಗಳಲ್ಲಿನ ವೈವಿಧ್ಯತೆಯು ಜಾಗತೀಕರಣಗೊಂಡ ಭಾರತದಲ್ಲಿ ವಿಭಕ್ತ ಕುಟುಂಬದ ಪ್ರಾಬಲ್ಯಕ್ಕೆ ದಾರಿ ಮಾಡಿಕೊಟ್ಟಿದೆ. ಮನುಷ್ಯ ಸಂಬಂಧಗಳಲ್ಲಿ ನಂಬಿಕೆ ಇಲ್ಲದಂತಾಗಿ ಎಲ್ಲೆಲ್ಲೂ ಮೊಸ, ದಗ, ವಂಚನೆ, ಕೊಲೆ–ಸುಲಿಗೆ, ಅತ್ಯಾಚಾರ–ಅನಾಚಾರ, ಭ್ರಷ್ಟಾಚಾರಗಳು ತಾಂಡವವಾಡುತ್ತಿವೆ. ಶಾಂತಿಯುತವಾದ ಜೀವನದಲ್ಲಿ ಭಯವನ್ನು ಹುಟ್ಟುಹಾಕಿರುವ ಜಾಗತೀಕರಣದ ಭೂತ ಎಲ್ಲರನ್ನು ಕಾಡುತ್ತಿದೆ.

'ಪಂಚಭೂತಗಳೆಲ್ಲ ವಂಚನೆಯ ಬಣ್ಣಗದಡು' ಎಂಬುದು ಪ್ರಕೃತಿಯ ಮೇಲಿನ ಜಾಗತೀಕರಣದ ಪ್ರಭಾವವನ್ನು ಕುರಿತುದಾಗಿದೆ.

ಪಂಚಭೂತಗಳೂ ಪ್ರಕೃತಿಯಲ್ಲಿನ ನೀರು, ಗಾಳಿ, ಬೆಂಕಿ, ಭೂಮಿ ಮತ್ತು ಬಾಹ್ಯಾಕಾಶಗಳನ್ನು ಪಂಚಭೂತಗಳು ಎಂದು ಕರೆಯಲಾಗುತ್ತದೆ. ಈ ಅಂಶಗಳು ಮಾನವ ದೇಹವನ್ನು ಒಳಗೊಂಡಂತೆ ಸೃಷ್ಟಿಯಲ್ಲಿನ ಎಲ್ಲಾ ವಸ್ತುಗಳ ಸೃಷ್ಟಿಗೆ ಕಾರಣವಾಗುತ್ತವೆ. ಸಂಪ್ರದಾಯ ಬದ್ಧ ನಮ್ಮ ಸಮಾಜದಲ್ಲಿ ಪ್ರಕೃತಿಯನ್ನು ದೇವರು ಎಂದು ಆರಾಧಿಸುವ ಪದ್ಧತಿ ಇದ್ದುದನ್ನು ಕಾಣಬಹುದು. ವಾಸ್ತವದಲ್ಲಿ ಆಧುನಿಕ ಸಮಾಜದ ಬೆಳವಣಿಗೆ ಎಂದು ಹೇಳುವ ಸ್ಥಿತಿವಂತ ಸಮಾಜವು ನಮ್ಮ ಪ್ರಾಚೀನರು ಹಾಕಿಕೊಟ್ಟ ಸಂಪ್ರದಾಯಗಳಲ್ಲಿ ಅಡಗಿರುವ ಅಭೂತ ಸತ್ಯಗಳ ಶೋಧನೆಯಲ್ಲಿ ಎಡವುತ್ತಿದ್ದಾರೆ. ಪ್ರಕೃತಿಯ ನಾಡಿಮಿಡಿತವನ್ನು ಅರಿತು ಯೋಜನೆಗಳನ್ನು ರೂಪಿಸಿರುವ ನಮ್ಮ ಪೂರ್ವಜರ ವಿಚಾರಗಳಿಗೆ ಮೌಢ್ಯವೆಂಬ ಮಸಿ ಬಳಿದು ಆಧುನೀಕರಣವೆಂಬ ವಂಚನೆಯ ಬಣ್ಣ ಬಳಿದುಕೊಂಡು ಬದುಕುತ್ತಿದ್ದಾರೆ. ಆದರೆ ವಾಸ್ತವ ಸತ್ಯವೇನೆಂದರೆ ನಮ್ಮ ಪ್ರಕೃತಿ ಮಾನವನ ಧೋರಣೆಯಿಂದಾಗಿ ತನ್ನ ಅಸ್ತಿತ್ವವನ್ನು ಕಳೆದುಕೊಂಡು ವಿನಾಶದ ಸುಳಿಗೆ ಸಿಲುಕುತ್ತಿರುವುದು ವಿಪರ್ಯಾಸವಾಗಿದೆ. ಈಗಲಾದರು ಮನುಷ್ಯ ಎಚ್ಚೆತ್ತುಕೊಳ್ಳುವುದು ಅಗತ್ಯವಿದೆ ಎಂಬ ತವಕ ಕವಿತೆಯಲ್ಲಿ ಧ್ವನಿತವಾಗಿದೆ.

ಯಾರಲಾ ಯಾರಲಾ
ನೆಲದ ವಾರಸು ಯಾರಲಾ?
ಹಳೆ ಬೇಲಿಯ ಬಳ್ಳಿಸಾಲ ಬುಡದಲ್ಲಿ
ತೇವಾಂಶದ ತವ ತವ ತವರಿನಲ್ಲಿ
ತೆವ ತೆವಳುತ ಪಿಸುಗುಟ್ಟಿದೆ ಎರೆಹುಳ
ಯಕ ಯಕ ಯಾಕಲಾ! ಯಾಕಲಾ?

'ನೆಲದ ವಾರಸು ಯಾರಲಾ?' ಎಂದು ಕೇಳುವಲ್ಲಿ ನೆಲದಲ್ಲಿ ಹುಟ್ಟಿ ಬೆಳೆದು ತನ್ನ ಅಸ್ಥಿತ್ವದ ಬೇರು ಬಿಟ್ಟಿರುವ ಜೀವಕ್ಕೆ ಬುಡಸಮೇತ ಕಿತ್ತೊಗೆಯುವ ಪರಿಸ್ಥಿತಿಯ ಭೀಕರತೆಯು ಕಣ್ಮುಂದೆ ಬಂದಾಗ ದಾಷ್ಟ್ಯವಾಗಿ ಹೋರಾಡುವ ಶಕ್ತಿ ಇಲ್ಲದಿರುವುದು ಬಿಂಬಿತವಾಗಿದೆ. ಪೂರ್ವದ ದೇಶದಲ್ಲಿನ ಭೂಮಿಯ ಯಾವುದೋ ಹಳೆಬೇಲಿಯ ನಡುವೆ ತೇವಾಂಶ ಹೊಂದಿರುವ ಜಾಗದಲ್ಲಿ ಎರೆಹುಳ ನಿಧಾನವಾಗಿ ಪಿಸುಗುಟ್ಟುತ್ತಿದೆ. ಯಾಕೆ ಪಾಶ್ಚಾತ್ಯೀಕರಣ? ಜಾಗತೀಕರಣ ಏಕೆ? ನಮ್ಮ ಸ್ವಂತಿಕೆಯ ಮೇಲೆ ನಿಲ್ಲುವ ಮೂಲಕ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ವಿರೋಧಿಸಲು ಒಂದು ಚಿಕ್ಕ ಜೀವಿಗೂ ಸಾಧ್ಯವಿದೆ ಎಂದು ತೋರಿಸುವ ಮೂಲಕ ಯಾಕೆ ಹೀಗೆ? ಎಂದು ಗಿಡುಗಕ್ಕೆ ಎದುರಾಗಿ ಈ ನೆಲದ ವಾರಸು ಯಾರು? ಎಂದು ಕೇಳುವ ಮೂಲಕ ಪೌರ್ವಾತ್ಯ ಸಮೂಹಕ್ಕೆ ಸೇರಿದೆಯೇ ಹೊರತು ನಿಮಗಲ್ಲ ಎಂದಿದೆ. ಮಣ್ಣಿನ ಸ್ವಂತಿಕೆಯನ್ನು ಉಳಿಸಿಕೊಂಡರೆ ಇಡೀ ಜಗತ್ತಿನ ಆಕ್ರಮಣಶೀಲತೆಯಿಂದ ಬಿಡುಗಡೆ ಹೊಂದಿ ನಿಜವಾದ ಸ್ವಾತಂತ್ರ್ಯಗಳಿಸಬಹುದೆಂಬ ಆತ್ಮವಿಶ್ವಾಸ ಕವಿತೆಯಲ್ಲಿ ಕಾಣಬಹುದು. ತನ್ನ ಸಂಸ್ಕೃತಿಯನ್ನು ವಸಾಹತು ಸಂಸ್ಕೃತಿಗೆ ಪರ್ಯಾಯವಾಗಿ ಕಟ್ಟಿಕೊಡಲು ಕೃಷಿಯನ್ನೆ ಅವಲಂಬಿಸಬೇಕೆಂಬ ವಿಚಾರವನ್ನು ಎಸ್.ಜಿ.ಸಿದ್ಧರಾಮಯ್ಯ ಅವರು ಪ್ರಜ್ಞಾಪೂರ್ವಕವಾಗಿಯೆ ಬಳಸಿಕೊಂಡಿದ್ದಾರೆ. ವ್ಯಂಗ್ಯ, ವಿಡಂಬನೆಯ ಮೂಲಕ ಕಾವ್ಯಕಟ್ಟುವ ಎಸ್.ಜಿ.ಸಿದ್ಧರಾಮಯ್ಯ ಅವರ ಅಕ್ಷರಗಳ ಜೋಡಣೆಯ ಕೃತಿಗಾರಿಕೆ ಈ ಕವಿತೆಯಲ್ಲಿ ಅದ್ಭುತವಾಗಿದೆ. ನೆಲಮೂಲ ಸಂಸ್ಕೃತಿಯನ್ನು ನಾಶಮಾಡಲು ನಿಂತಿರುವ ಜಾಗತೀಕರಣದ ಕರಾಳ ಮುಖ ಗಿಡುಗ ಪಕ್ಷಿಯಷ್ಟೇ ಕ್ರೂರ ಹಾಗು ಆಕ್ರಮಣಶೀಲ ಪ್ರೌವೃತ್ತಿಯಿಂದ ಕೂಡಿದೆ. ಶತಶತಮಾನಗಳಿಂದ ನೀರೆರೆದು ಸಮೃದ್ಧವಾಗಿ ಬೆಳೆದು ನಿಂತಿರುವ ನಮ್ಮ ಸಂಸ್ಕೃತಿ ಹಾಗು ನಾಗರೀಕತೆಯ ಮೇಲೆ ಮತ್ತಾವುದೋ ಶಕ್ತಿ ಸಂಚುಹೂಡಿ ನಲುಗಿಸುತ್ತಿರುವುದಕ್ಕೆ ಕವಿ ವಿಶಾದ ವ್ಯಕ್ತಪಡಿಸುತ್ತಾರೆ. ಜಾಗತೀಕರಣದ ಗಿಡುಗನ ಆಕ್ರಮಣಕ್ಕೆ ಪ್ರತಿರೋಧ ಒಡ್ಡುವಲ್ಲಿ ದೇಶೀಯ ಎರೆಹುಳದ ಆತ್ಮಸ್ಥೈರ್ಯ ನಮ್ಮ ಸಮಾಜದಲ್ಲಿ ಮೂಡಬೇಕಾಗಿದೆ. ಎರೆಹುಳುವನ್ನು ಕುಕ್ಕಿ ತಿನ್ನುವ ಗಿಡುಗನ ಅಂತ್ಯ ಎರೆಹುಳುವಿನಿಂದಲೇ ಆಗುವ ಅಜರಾಮರ ಸತ್ಯದ ಬೆಳಕಿನ ಅಗತ್ಯತೆ ನಮ್ಮ ಸಮಾಜದಲ್ಲಿ ಇದೆ ಎಂಬುದನ್ನು ಕವಿತೆಯು ಒಳಗೊಂಡಿದೆ.

ಆಕರ ಗ್ರಂಥ :

ಪ್ರೊ. ಎಸ್.ಜಿ. ಸಿದ್ಧರಾಮಯ್ಯ ಸಮಗ್ರ ಕಾವ್ಯ ಸಂಪುಟ., ಎಸ್.ಜಿ. ಸಿದ್ಧರಾಮಯ್ಯ., ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ,., ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨

ಸೆರೆಂಡಿಪಿಟಿ ಕೃತಿಯ ಓದು

ಶ್ರೀಮತಿ ಗೀತಾ ಎಸ್
ಸಂಶೋಧನಾ ವಿದ್ಯಾರ್ಥಿ
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು

❝

ಪೀಠಿಕೆ

ನಮ್ಮ ಅಧ್ಯಯನವು ವೈಜ್ಞಾನಿಕವಾಗಿದ್ದರೆ ಮಾತ್ರ ಸತ್ಯಗಳನ್ನು ಅರಿಯುಬಹುದು. ಇಲ್ಲದಿದ್ದರೆ ಖಾಸಗಿ ಭಾವಲೋಕದ ವ್ಯವಹಾರಗಳಲ್ಲಿ ತೇಲಿ ಹೋಗುತ್ತದೆ. ನಮ್ಮ ಸೃಜನ ಬರಹಗಳೆಲ್ಲ ಇಂತಹ ಆಕಸ್ಮಿಕಗಳನ್ನು ಸೃಷ್ಟಿಸುತ್ತವೆ. ಆದರೆ, ಮತ್ತೆ ಸತ್ಯದ ಹುಡುಕಾಟಕ್ಕೆ ಬುದ್ಧಿಯನ್ನು ಚುರುಕುಗೊಳಿಸುವ ಕಾರ್ಯವು ನಮ್ಮ ಕವಿತೆ, ಕಥೆ, ಅಂಕಣಗಳಿರುವ ಶಕ್ತಿಯಾಗಿದೆ. ಈ ಕಾರಣದಿಂದ ಸೃಜನ ಬರಹಗಳು ಕೂಡ ಇಂದು ವೈಜ್ಞಾನಿಕ ವಿಚಾರಗಳ ಮೊರೆಹೋಗುತ್ತಿವೆ. ಸಾಹಿತ್ಯ ರಚನೆಯಲ್ಲಿ ಎರಡು ಮಾದರಿಗಳನ್ನು ಗಮನಿಸಬಹುದು. ಕಲೆಯೊಳಗಿನ ವಿಜ್ಞಾನ ಹಾಗೂ ಪ್ರತ್ಯೇಕ ವಿಜ್ಞಾನ ಈ ಎರಡೂ ಕೂಡ ಜನಸಾಮಾನ್ಯರನ್ನು ತಲುಪುವ ಗುರಿಯನ್ನು ಹೊಂದಿರುವುದು, ಸರಳವಾದ ಭಾಷೆಯನ್ನು ಬಳಸುವುದು ಹಾಗೂ ಬೌದ್ಧಿಕತೆಯುನ್ನು ದರ್ಶನ ಮಾಡುವುದು. ಈ ಅಗತ್ಯ ವಿಚಾರಗಳೊಂದಿಗೆ ಸಂಶೋಧನೆ ಇಲ್ಲವೆ ಲೇಖನಗೊಳಿಸುವುದು ಮುಖ್ಯವಾಗುತ್ತದೆ.

ವಿಜ್ಞಾನ ಸಾಹಿತ್ಯ

ವಿಜ್ಞಾನ ಸಾಹಿತ್ಯವೆಂದರೆ ದರ್ಶನ. ಎಲ್ಲಾ ಅಧ್ಯಯನಗಳ ಮೂಲ ಕಾರ್ಯವೇ ಫಲಿತ. ಅದು ವೈಜ್ಞಾನಿಕವಾಗಿಯೇ ಇರುತ್ತದೆ.

ಆದರೆ, ಇಲ್ಲಿ ಅಡಗಿರುವ ಸತ್ಯವನ್ನು ಯಾವ ಪ್ರಯೋಗಾಲಯದಲ್ಲಿಯೂ ತೀರ್ಮಾನಿಸಿ, ಸೋಲುಗಳನ್ನು ಒಪ್ಪಿಕೊಳ್ಳಲಾಗುತ್ತಿಲ್ಲ. ವಿಜ್ಞಾನದಲ್ಲಿ ಇದೆಲ್ಲಾ ಸಾಧ್ಯವಿದೆ. ವಿಜ್ಞಾನದೊಂದಿಗೆ ಸಾಹಿತ್ಯದ ಸೇರ್ಪಡೆಯಾದರೆ, ಅದರ ಕ್ರಮವೇ ಬೇರೆಯಾಗುತ್ತದೆ. ಇಲ್ಲಿ ಎರಡು ವಿಚಾರಗಳು ಕಾಣಿಸುತ್ತವೆ. ವಿಜ್ಞಾನ ಮತ್ತು ಸಾಹಿತ್ಯ. ವಿಜ್ಞಾನವು ಅತ್ಯಂತ ಶಿಸ್ತು ರಚನೆಯ ಬೌದ್ಧಿಕ ಅನ್ವೇಷಣೆಯಾದರೆ, ಸಾಹಿತ್ಯವು ಅದನ್ನು ಓದುವ ಕ್ರಮವಾಗಿದೆ. ಸಾಹಿತ್ಯವು ಯಾವುದೇ ಪಠ್ಯಗಳನ್ನು ಸಾಂಗತ್ಯಗೊಳಿಸಬಲ್ಲದು. ಆದರೆ, ವಿಜ್ಞಾನಕ್ಕೆ ಅಂತಹ ಚಿಂತನೆಗಳಿರುವುದಿಲ್ಲ. ಮಾಹಿತಿಯನ್ನು ಸ್ಪಷ್ಟವಾಗಿ ಜನರಿಗೆ ತಲುಪಿಸುವ ಉದ್ದೇಶವಷ್ಟೇ ಅಡಗಿರುತ್ತದೆ. ಹಾಗಾದರೆ, ಈ ವಿಜ್ಞಾನ ಸಾಹಿತ್ಯವನ್ನು ಹೇಗೆ ರಚಿಸುತ್ತಾರೆ. ಇವರು ವಿಜ್ಞಾನಿಗಳೇ ಆಗಿರಬೇಕೆ, ಸಾಹಿತ್ಯ ಅಧ್ಯಯನಕಾರರಿಗೆ ಸಾಧ್ಯವಿಲ್ಲವೆ ಎಂಬ ಪ್ರಶ್ನೆಗಳನ್ನು ಇಲ್ಲಿ ದಾಖಲಿಸಬಹುದು.

ಪ್ರೊ. ಸಿ. ಎನ್. ಆರ್. ರಾವ್ ಅವರು ವಿಜ್ಞಾನ ಸಾಹಿತ್ಯ ರಚನೆ ಕುರಿತು ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ನಿರ್ಮಾಣ ಕೈಪಿಡಿ ಕೃತಿಯಲ್ಲಿ ತಮ್ಮ ಆಶಯವನ್ನು ಈ ರೀತಿಯಲ್ಲಿ ಅಭಿವ್ಯಕ್ತಪಡಿಸಿದ್ದಾರೆ. "ವಿಜ್ಞಾನ ಲೇಖನ ಬರೆಯುವವರು ಮೂರು ವಿಷಯಗಳನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು. ಮೊದಲು ಅವರು ಒಳ್ಳೆಯ ವಿಜ್ಞಾನಿಯಾಗಿರಬೇಕು. ಎರಡನೆಯದಾಗಿ ಅವರು ವಿಷಯವನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿರಬೇಕು. ಮೂರನೆಯದಾಗಿ ಏನನ್ನು ಬರೆಯಬೇಕು. ಹೇಗೆ ಬರೆಯಬೇಕು ಎಂದು ತಿಳಿದಿರಬೇಕು. ಹೆಚ್ಚಿನವರು ಅವರವರಿಗಾಗಿಯೇ ಬರೆದುಕೊಳ್ಳುತ್ತಾರೆ. ಅದನ್ನು ಓದುವವರು ಬೇರೆ ಎಂಬುದನ್ನು ಅವರು ಮರೆತೇ ಬಿಡುತ್ತಾರೆ." ಮುಂದುವರೆದಂತೆ ವಿಜ್ಞಾನ ಸಾಹಿತ್ಯ ರಚನೆಯ ಕುರಿತು ಸಾಧ್ಯತೆಗಳನ್ನು ಕೂಡ ಚರ್ಚಿಸಿದ್ದಾರೆ.

"ಸಂಶೋಧನಾ ಸಂಸ್ಥೆಗಳಿವೆ; ಅನೇಕ ಜನ ವಿಜ್ಞಾನಿಗಳಿದ್ದಾರೆ; ಅವರಲ್ಲಿ ಕನ್ನಡ ಭಾಷೆಯೂ ಚೆನ್ನಾಗಿ ಬರುವವರನ್ನು ಗುರುತಿಸಬೇಕು. ಅವರ ಕೈಲಿ ಕೆಲವು ಉತ್ತಮ ಪುಸ್ತಕಗಳನ್ನು ಬರೆಸಿ ಪ್ರಕಟಿಸಬೇಕು. ಇನ್ನೊಂದು ಅನುವಾದ: ವಿಜ್ಞಾನಿಗಳ ಸಹಾಯದಿಂದ ಇಂಗ್ಲಿಷ್‌ನಲ್ಲಿರುವ ಒಂದಷ್ಟು ಪುಸ್ತಕಗಳನ್ನು ಆಯ್ಕೆ ಮಾಡಿ ಉತ್ತಮ ಕನ್ನಡ ಭಾಷೆಯಲ್ಲಿ ಅನುವಾದ ಮಾಡಿಸುವುದು. ಚೀನಾದಲ್ಲಿ ನೋಡಿ, ಜಗತ್ತಿನಲ್ಲಿ ಯಾವುದೇ ಹೊಸ ವಿಜ್ಞಾನ ಪುಸ್ತಕ ಬರಲಿ, ಒಂದೆರಡು ತಿಂಗಳಲ್ಲಿ ಅದು ಚೀನೀ ಭಾಷೆಯಲ್ಲಿ ಬಂದುಬಿಟ್ಟಿರುತ್ತದೆ. ಹೀಗೆ ಮಾಡುತ್ತಾ ಮಾಡುತ್ತಾ ಒಂದು ಕಾಲದಲ್ಲಿ ನಮ್ಮ ಸಮ ಇದ್ದ ಚೀನಾ ವಿಜ್ಞಾನ ಸಂಶೋಧನೆ, ಅಭಿವೃದ್ಧಿಯಲ್ಲಿ ಎಲ್ಲ ದೇಶಗಳಿಗಿಂತ ಮುಂದಿದೆ. ಅನುವಾದ ಅವಮಾನವಲ್ಲ. ಒಟ್ಟಾರೆ ಜ್ಞಾನ ಕನ್ನಡದ ಓದುಗರಿಗೆ, ಬೋಧಕರಿಗೆ ಸಿಗಬೇಕು."

ಇದು ಪ್ರತ್ಯೇಕ ವಿಜ್ಞಾನ ಚಿಂತಕರಿಗೆ ಅನಿಸಬಹುದು. ಆದರೆ, ಇಲ್ಲಿ ನಿರ್ದಿಷ್ಟವಾದ ಸತ್ಯಗಳು ಅಡಗಿವೆ. ವಿಜ್ಞಾನ ಸಾಹಿತ್ಯವನ್ನು ಎರಡು ಮಾದರಿಯಲ್ಲಿ ರಚಿಸಬಹುದು. ವಿಜ್ಞಾನ ಕ್ಷೇತ್ರದ ಪ್ರತ್ಯೇಕ ಚಿಂತಕರು ಪ್ರಯೋಗಾಲಯದ ವಿಷಯಗಳನ್ನು ಅನ್ವೇಷಣೆ ಮಾಡುತ್ತಾ ಅದರ ಫಲಿತಗಳನ್ನು ಜನಸಾಮಾನ್ಯರಿಗೆ ಸರಳ ಭಾಷೆಯಲ್ಲಿ ತಲುಪಿಸಬಹುದು. ಆದರೆ, ಸಾಹಿತ್ಯ ಚಿಂತಕರು ಎರಡನೇ ದರ್ಜೆಯಲ್ಲಿ ವಿಜ್ಞಾನ ಸಾಹಿತ್ಯವನ್ನು ರಚಿಸಲು ಸಾಧ್ಯ. ಮೊದಲ ಹಂತದ ಅನ್ವೇಷಣೆಗಳು ಇವರಿಗೆ ಸಾಧ್ಯವಿಲ್ಲ. ಇಲ್ಲಿ ಕಲ್ಪಿಸಬಹುದು, ಸರಿ ತಪ್ಪುಗಳ ಅರಿವು ಮೂಡಿಸಬಹುದು, ವಿಜ್ಞಾನಿಗಳ ಸಾಹಸವನ್ನು ಸರಳೀಕರಿಸಬಹುದು, ಸಲಹೆ ನೀಡಬಹುದು. ಆದರೆ, ಇಲ್ಲಿ ನಿರ್ದಿಷ್ಟ ಫಲಿತಗಳನ್ನು ನೀಡಲು ಅಸಾಧ್ಯವಾಗುತ್ತದೆ. ನಾಗೇಶ್ ಹೆಗಡೆ ಅವರು ಲೇಖಕ, ಪರಿಸರವಾದಿ ಭೂ ವಿಜ್ಞಾನ, ಪರಿಸರ ವಿಜ್ಞಾನದಲ್ಲಿ ಪದವಿ ಗಳಿಸಿದವರು. ಆದರೆ, ಇವರು ವಿಜ್ಞಾನಿಯನ್ನಾಗಿ ಕಾಣಲು ಕಷ್ಟವಾಗಬಹುದು. ಇವರು ಪ್ರಾಧ್ಯಾಪಕರಾಗಿ, ಲೇಖಕರಾಗಿ ನೀಡುವ, ಅನುಭವಿಸುವ ಅನುಭವಗಳು ವಿಜ್ಞಾನದಲ್ಲಿ ಎರಡನೇ ದರ್ಜೆಯ ಲೇಖಕನನ್ನಾಗಿ ಸೃಷ್ಟಿಸುತ್ತವೆ. ಸೆರೆಂಡಿಪಿಟಿ ಕೃತಿಯ ಲೇಖಕ ಡಾ. ಕಿರಣ್ ವಿ.ಎಸ್ ಅವರು ಮೂಲತಃ ವೈದ್ಯರಾಗಿ ಅವರ ನೀಡುವ ವೈದ್ಯಲೋಕದ ವಿಸ್ಮಯಗಳು ನಮಗೆ ವಿಜ್ಞಾನದ ಬರಹವಾಗಿ ಲಭಿಸುತ್ತವೆ. ಇಲ್ಲಿ ವಿಜ್ಞಾನಕ್ಕೆ ಅನುಸರಿಸುವ ಪ್ರಯೋಗಾಲಯವು ಮುಖ್ಯವೆನಿಸಿ ಫಲಿತವು ಮೂಡುತ್ತದೆ. ಅಂತಹ ವಿಶಿಷ್ಟ ಬರಹವಾದ ಸೆರೆಂಡಿಪಿಟಿ ಕೃತಿಯ ಕುರಿತು ಈ ಮೇಲ್ಕಂಡ ವಿಚಾರಗಳ ಹಿನ್ನಲೆಯಲ್ಲಿ ಸಾಹಿತ್ಯ ಅಧ್ಯಯನಕಾರರ ದೃಷ್ಟಿಯಿಂದಲೇ ಗ್ರಹಿಸೋಣ.

ಸೆರೆಂಡಿಪಿಟಿ ಕೃತಿ ಚಿಂತನೆ

ನಮ್ಮ ಎಲ್ಲಾ ಅನ್ವೇಷಣೆಗಳು ಹೊಸ ಹೊಸ ಚಿಂತನೆಗಳಿಗೆ ಕಾರಣವಾಗಿವೆ. ಅವುಗಳು ಪ್ರತಿ ಕ್ಷೇತ್ರದಲ್ಲಿಯೂ ಕಂಡುಬರುತ್ತವೆ. ಡಾ. ವಿ.ಎಸ್ ಕಿರಣ್ ಅವರು ವೈದ್ಯಲೋಕದ ಅದ್ಭುತ ಆಕಸ್ಮಿಕಗಳನ್ನು ಅಧ್ಯಯನಮಾಡಿ ಇಲ್ಲಿ ದಾಖಲಿಸಿದ್ದಾರೆ. ಈ ಕೆಲಸವನ್ನು ಒಬ್ಬ ಸಾಮಾನ್ಯ ವಿಜ್ಞಾನ ಆಸಕ್ತನೂ ಮಾಡಬಹುದು. ಆದರೆ, ವೈದ್ಯಲೋಕವನ್ನು ಬಲ್ಲವರು ನಿರ್ವಹಿಸಿದಾಗ ಕಾಣುವ ಸತ್ಯಗಳು ಅವುಗಳ ನಿಖರತೆ ಬೇರೆಯೇ ಆಗಿರುತ್ತದೆ. ಸಾಹಿತ್ಯವು ಯಾವಾಗಲೂ ಸ್ಪಷ್ಟತೆಯನ್ನು ಬಯಸುತ್ತದೆ. ಈ ವೈದ್ಯರ ಬರಹಕ್ಕೆ ಮುನ್ನೋಟವಾಗಿ ಕೃತಿಯನ್ನು ಸರಳವಾಗಿ ಪರಿಚಯಿಸುವ ಉದ್ದೇಶದಿಂದ ಸೆರೆಂಡಿಪಿಟಿ ಎಂದರೇನು ಎಂಬುದಕ್ಕೆ ಇಲ್ಲಿ ಕೆಲವು ಮಾಹಿತಿಯನ್ನು ಗಮನಿಸಬಹುದು. ಶ್ರೀವತ್ಸ ಜೋಶಿ ಅವರು ಈ ಕೃತಿಗೆ ಮುನ್ನೋಟ ಬರೆಯುತ್ತಾ ವಿಶಾಲವಾದ ಚಿಂತನೆಗಳನ್ನು, ಕೃತಿಯ ಮೌಲ್ಯವನ್ನು ಸಾಂದ್ರೀಕರಿಸಿದ್ದಾರೆ. "ಅರಸುತ್ತಿದ್ದ ಬಳ್ಳಿ ಬಂದು ಕಾಲಿಗೆ ತೊಡರಿತು ಅಂತೊಂದು ಗಾದೆ ಮಾತಿದೆ. ಯಾವುದೋ ವಸ್ತುವನ್ನು ಹುಡುಕುವುದಕ್ಕಾಗಿ ಎಲ್ಲಿಲ್ಲದ

ಶ್ರಮ ಸಮಯ ವ್ಯಯಿಸಲು ತಯಾರಿರುತ್ತೇವೆ, ಆದರೆ ಅದೃಷ್ಟವಶಾತ್ ಆ ವಸ್ತು ತುಂಬ ಸುಲಭವಾಗಿಯೇ ಸಿಕ್ಕಿಬಿಡುತ್ತದೆ. ಅಂಥ ಸನ್ನಿವೇಶದ ಬಣ್ಣನೆಗೆ ಈ ಗಾದೆಯನ್ನು ಬಳಸುತ್ತೇವೆ. ಮತ್ತೆ ಕೆಲವೊಮ್ಮೆ ಹೀಗೂ ಆಗುವುದಿದೆ–ಯಾವುದೋ ವಸ್ತುವನ್ನು ಹುಡುಕುವುದಕ್ಕಾಗಿ ಎಲ್ಲಿಲ್ಲದ ಶ್ರಮ ಸಮಯ ವ್ಯಯಿಸಿರುತ್ತೇವೆ, ಆ ವಸ್ತುವಂತೂ ಇನ್ನೂ ಸಿಕ್ಕಿರುವುದಿಲ್ಲ, ಆದರೆ ಬೇರೆಯೇ ಒಂದು ವಸ್ತು ಬಳ್ಳಿಯಂತೆ ಬಂದು ಕಾಲಿಗೆ ತೊಡರಿಕೊಳ್ಳುತ್ತದೆ. ಬಳ್ಳಿಯೆಂದರೆ ಸಾಮಾನ್ಯ ಬಳ್ಳಿ ಅಲ್ಲ ಅಮೃತಬಳ್ಳಿ! ಅದು ಸಿಕ್ಕ ಸಂಭ್ರಮ ಎಷ್ಟಿರುತ್ತದೆಂದರೆ ಅಸಲಿ ಹುಡುಕಾಟವನ್ನು ನಾವು ಕೈಬಿಟ್ಟುಬಿಡುವುದೂ ಇದೆ! ಒಂದು ಒಳ್ಳೆಯ ಉದಾಹರಣೆ ಕೊಡುವುದಾದರೆ– ಪ್ರಾಣಿಗಳ ಬೇಟೆಗೆಂದು ಕಾಡಿಗೆ ಹೋಗಿದ್ದ ದುಷ್ಯಂತ ಮಹಾರಾಜನಿಗೆ ಕಣ್ವಮಹರ್ಷಿಯ ಆಶ್ರಮದ ಬಳಿಯಲ್ಲಿ ಚೆಲುವೆ ಶಕುಂತಲೆ ಭೇಟಿಯಾದದ್ದು. ಇಂಥ ಸನ್ನಿವೇಶದ ಬಣ್ಣನೆಗೆ ನನಗೆ ಗೊತ್ತಿದ್ದಂತೆ ಕನ್ನಡದಲ್ಲಿ ಗಾದೆ ಮಾತಿಲ್ಲ. ಆದರೆ ಇಂಗ್ಲಿಷ್ ಭಾಷೆಯಲ್ಲೊಂದು ಶಕುಂತಲೆಯಷ್ಟೇ ಅತಿ ಸುಂದರವಾದ ಪದ ಇದೆ, ಅದೇ Serendipity ಎಂಬ ಪದ. ಸೆರೆಂಡಿಪಿಟಿ ಎಂದು ಉಚ್ಚಾರ. ನಿಘಂಟು ತೆರೆದು ನೋಡಿದರೆ the occurrence and development of events by chance in a happy or beneficial way ಎಂಬ ಅರ್ಥ.

ಈ ಸೆರೆಂಡಿಪಿಟಿ ಎಂಬ ಸುಂದರ ಪದ ಇಂಗ್ಲಿಷ್ ಭಾಷೆಗೆ ಸೇರಿಕೊಂಡಿದ್ದೂ ಒಂದು ಸ್ವಾರಸ್ಯಕರ ಕಥೆ. ತುಂಬ ಹಿಂದೆ ಶೇಕ್ಸ್‌ಪಿಯರ್‌ನ ಕಾಲದಲ್ಲೆಲ್ಲ ಇದು ಇಂಗ್ಲಿಷ್ ಭಾಷೆಯ ಶಬ್ದಭಂಡಾರದಲ್ಲಿ ಇರಲಿಲ್ಲ. ಈಗ್ಗೆ ೨೬೬ ವರ್ಷಗಳ ಹಿಂದೆ, ಅಂದರೆ ೧೭೫೪ರಲ್ಲಿ, ಹೊರಾಸ್ ವಾಲ್ಪೋಲ್ ಎಂಬ ಆಂಗ್ಲ ಲೇಖಕ (ಆತ ಒಬ್ಬ ರಾಜಕಾರಣಿಯೂ ಆಗಿದ್ದನಂತೆ) ತನ್ನ ಸ್ನೇಹಿತ ಹೊರಾಸ್ ಮಾನ್ಸ್ ಎಂಬುವನಿಗೆ ಬರೆದ ಪತ್ರದಲ್ಲಿ ಮೊತ್ತಮೊದಲ ಬಾರಿ ಈ ಪದವನ್ನು ಬಳಸಿದನಂತೆ. 'ಸೆರೆಂಡಿಪ್ ದೇಶದ ಮೂವರು ರಾಜಕುಮಾರರು' ಎಂದು ಪರ್ಷಿಯಾದ ಒಂದು ಜನಪದ ಕಥೆ. ಅದನ್ನು ಸ್ನೇಹಿತನಿಗೆ ವಿವರಿಸುವಾಗ ಹೊರಾಸ್ ವಾಲ್ಪೋಲ್ 'ಸೆರೆಂಡಿಪಿಟಿ' ಎಂಬ ಪದವನ್ನು ಟಂಕಿಸಿದ್ದು."

ಇದಕ್ಕಿಂತಲೂ ಆಳವಾದ, ಸಾಹಿತ್ಯ ಲೇಪಿತ ಮುನ್ನೋಟವನ್ನು ನೀಡಲಾಗದು ಎನ್ನುವಷ್ಟು ಅರ್ಥಪೂರ್ಣವಾದ ಚಿಂತನೆಗಳನ್ನು ಶ್ರೀವತ್ಸ ಜೋಶಿಯವರು ನೀಡಿದ್ದಾರೆ. ವೈದ್ಯ ಲೋಕವನ್ನು ಡಾ. ಕಿರಣ್ ಅವರು ಸರಳವಾಗಿ ಪರಿಚಯಿಸುವ ಜೊತೆಗೆ ನಮ್ಮ ಪ್ರತಿ ಖಾಯಿಲೆಗೂ ನಮ್ಮ ಪ್ರಕೃತಿಗೂ ತನ್ನದೇ ಸಂಬಂಧವಿದೆ. ಕಾಯಿಲೆ ಸೃಷ್ಟಿಯಾಗುವ ಕಾರಣಗಳೂ ಕೂಡ ಪ್ರಕೃತಿಯನ್ನು ನಾವು ಕಡೆಗಣಿಸಿದಾಗ, ವಿರುದ್ಧ ನಡೆದಾಗ ಮಾತ್ರ ಸಮಸ್ಯೆ ಹೊಂದುತ್ತೇವೆ. ಆದರೆ, ಈ ಸಮಸ್ಯೆಗಳಿಗೆ ಪ್ರಕೃತಿಯು ತನ್ನೊಳಗೆ ಪರಿಹಾರಗಳನ್ನು ತುಂಬಿಕೊಂಡಿರುತ್ತದೆ. ಅದುವೆ ಮದ್ದು, ಅದನ್ನು ಅನ್ವೇಷಿಸಬೇಕು. ಈ ಅನ್ವೇಷಣೆಯಲ್ಲಿ ಬೇರೆ ಬೇರೆ ಖಾಯಿಲೆಗಳ ಕುರಿತು ಸಿಗುವ ಆಕಸ್ಮಿಕಗಳು ಕೂಡ ವಿಭಿನ್ನವಾಗಿದೆ. ಈ ಸ್ವರೂಪದ ಐವತ್ತು ಪ್ರಯೋಗಗಳು ಈ ಪುಸ್ತಕದಲ್ಲಿ ಓದಿಸಿಕೊಳ್ಳುತ್ತವೆ. ಇಂತಹ ಆಕಸ್ಮಿಕಗಳನ್ನು ಸಾಮಾನ್ಯ ಓದುಗರಾದ ನಾವು ಚರ್ಚಿಸಿದರೆ ಹೇಗೆ ಎಂಬುದನ್ನು ಒಂದು ಲೇಖನವನ್ನು, ವಿಸ್ಮಯವನ್ನು ಅಧ್ಯಯನ ಮಾಡುವ ಮೂಲಕ ಗ್ರಹಿಸೋಣ. ಒಂದು ಲೇಖನವನ್ನು ನಮ್ಮ ಓದುವಿಗೆ ತೆಗೆದುಕೊಂಡಾಗ ಕಾಣಿಸುವ ಸ್ವರೂಪ ಹೀಗಿದೆ.

ಮಲೇರಿಯಾ ಎಂಬ ಖಾಯಿಲೆಯು ಇಂದಿಗೂ ಎಲ್ಲರನ್ನೂ ಬಾದಿಸುತ್ತಿದೆ. ಅದಕ್ಕೆ ಮದ್ದು ಇರುವ ವಿಚಾರವನ್ನು ಇನ್ನೂ ಸರಳವಾಗಿ ವೈದ್ಯರು ಜನಸಾಮನ್ಯರಿಗೆ ಚಿಕಿತ್ಸೆಗಳ ಮೂಲಕ ಪರಿಚಯಿಸಬೇಕಿದೆ. ಆದರೆ, ಈ ಮದ್ದನ್ನು ಹೇಗೆ ಕಂಡು ಹಿಡಿಯಲಾಯಿತು ಎಂಬ ಅಧ್ಯಯನಕ್ಕೆ ಒಂದು ಕಥೆಯೇ ಲಭಿಸುತ್ತದೆ. 'ಪೆರುವಿನ ಕ್ವಿಟೊ ಮೂಲ ನಿವಾಸಿಗಳು ಚಳಿ, ಜ್ವರ ಹೋಗಲಾಡಿಸಲು ಒಂದು ಮರದ ತೊಗಟೆಯನ್ನು ಕಂಡುಕೊಂಡಿದ್ದರು. ಇದರ ಕಷಾಯದ ಪರಿಣಾಮವು ಯೂರೋಪಿನ ಸ್ಪೇನ್ ಜನರಿಗೆ ತಿಳಿದು, ಆ ಮದ್ದು ಯುರೋಪ್‌ಗೆ ಆಗಮಿಸಿತು. ಕೇಂಬ್ರಿಡ್ಜ್‌ನ ಡಾ. ಬ್ರಾಡಿ ಅವರು ಮೊದಲು ಮಲೇರಿಯಾಗೆ ಬಳಸಿ ಉಪಯೋಗ ಪಡೆದರು. ಅವರ ಸಹಾಯಕ ರಾಬರ್ಟ್ ಟಾಲ್ಬರ್ ಎಂಬಾತ ಇದನ್ನು ಚೆನ್ನಾಗಿ ಬಳಸುತ್ತಾ, ಬೇರೆ ಯಾರೂ ಬಳಸದಂತೆ ಪುಸ್ತಕ ಬರೆದು ಅದರ ಅಪಾಯ ಸೃಷ್ಟಿಸಿದನು. ಬ್ರಿಟಿಷ್ ಅಧಿಕಾರಿಗಳಿಗೆ ಈ ಮದ್ದಿನ ಉಪಯೋಗವಾಗಿ ಇವನಿಗೆ ಸರ್ ಬಿರುದು ನೀಡಿ ಗೌರವಿಸಿದರು. ಮುಂದೆ ೧೪ನೇ ಲೂಯಿ ಅದರ ರಹಸ್ಯ ಬರೆಸಿ, ಟಾಲ್ಬರ್‌ನ ಮರಣದ ನಂತರ ಪ್ರಕಟಿಸಿದರು. ಮುಂದೆ ಚಾರ್ಲ್ಸ್ ಮಾರಿ ಮತ್ತು ಜೋಸೆಫ್ ಸೇರಿ ಈ ಕುರಿತು ಆಳವಾಗಿ ಅಧ್ಯಯನ ಮಾಡುತ್ತಾರೆ. ಈ ಮದ್ದಿನ ತೊಗಟೆಯ ಮರಕ್ಕೆ ಕರೋಲಸ್ ಎಂಬವರು ಸಿಂಕೋನಾ ಎಂದು ಹೆಸರಿಟ್ಟರು. ಇದರ ತೊಗಟೆಯಿಂದ ಪಿಯರೆ ಹಾಗೂ ಕ್ಯಾವೆಂಟೊ ಎಂಬವರು 'ಕ್ವಿನೀನ್' ರಾಸಾಯನಿಕ ಪಡೆದರು. ತೊಗಟೆಯ ಕಷಾಯಕ್ಕಿಂತ ಇದರ ರಸಾಯನಿಕವೇ ಮಲೇರಿಯಾಕ್ಕೆ ಹೆಚ್ಚು ಪ್ರಯೋಜನವಾಯಿತು. ವುಡ್ವರ್ಡ್ ಮತ್ತು ಡೋರಿಂಗ್ ಎಂಬವರು ಈ ಕ್ವಿನೀನ್ ಕುರಿತು ಸಂಶೋಧನೆ ನಡೆಸಿ ಕೃತಕವಾಗಿ ತಯಾರಿಸುವ ಪದ್ಧತಿ ಕಂಡುಹಿಡಿದರು. ಇಡೀ ಪ್ರಪಂಚಕ್ಕೆ ವಿಸ್ತರಿಸಿದರು. ಇದು ಪ್ರಪಂಚದ ಮಲೇರಿಯಾ ರೋಗದ ಭಯಕ್ಕೆ ಮದ್ದು ನೀಡಿತು. ಯೂರೋಪ್, ಜಗತ್ತನ್ನು ಧೈರ್ಯವಾಗಿ ಆಳ್ವಿಕೆ ಮಾಡಲು ಈ ಮದ್ದು ಕೂಡ ಸಹಕಾರಿಯಾಯಿತು. ತೊಗಟೆಯಿಂದ ಶುರುವಾಗಿ ಕ್ವಿನೀನ್ ಹಂತ ತಲುಪಿದ ಮಲೇರಿಯಾ ರೋಗಕ್ಕೆ ಇಷ್ಟೆಲ್ಲಾ ಚರಿತ್ರೆ ಇದೆ'.

ಸೆರೆಂಡಿಪಿಟಿ ಕೃತಿಯ ಓದುವನ್ನು ಅರ್ಥಪೂರ್ಣ ಬರಹದಲ್ಲಿ ಶ್ರೀವತ್ಸ ಜೋಶಿ ಅವರು ಹೀಗೆ ಸ್ಪಷ್ಟಪಡಿಸಿದ್ದಾರೆ.

"ಸೆರೆಂಡಿಪಿಟಿ: ವೈದ್ಯಲೋಕದ ಅದ್ಭುತ ಆಕಸ್ಮಿಕಗಳು' ಪುಸ್ತಕದ ಎಲ್ಲ ಐವತ್ತು ಪ್ರಸಂಗಗಳನ್ನೂ ನಾನು ಕಳೆದ ಒಂದು–ಒಂದೂವರೆ ತಿಂಗಳ ಅವಧಿಯಲ್ಲಿ ಸಾವಕಾಶವಾಗಿ ಓದಿದ್ದೇನೆ. ಇದರಲ್ಲಿ ಬರುವ ಪಾಶ್ಚಾತ್ಯ ವಿಜ್ಞಾನಿಗಳ, ವೈದ್ಯರ, ಕಾಯಿಲೆಗಳ, ಕಾಯಿಲೆಕಾರಕ ಅಂಶಗಳ, ಮತ್ತು ಔಷಧಗಳ ಹೆಸರುಗಳನ್ನು ನೆನಪಿಟ್ಟುಕೊಳ್ಳುವುದು ತುಂಬ ಕಷ್ಟದ ವಿಚಾರವೇ. ಆದರೆ ಇದನ್ನೇನೂ ಪರೀಕ್ಷೆಯ ಸಿಲಬಸ್ ಎಂದು ಓದುತ್ತಿರುವುದು ಅಲ್ಲವಲ್ಲ! ಹಾಗಾಗಿ ಆ ಚಿಂತೆ ಬೇಕಿಲ್ಲ. ಪರಂತು ಮನುಕುಲವನ್ನು ಕಾಲಾನುಕಾಲಕ್ಕೆ ಬಾಧಿಸುತ್ತಲೇ ಬಂದಿರುವ ಕಾಯಿಲೆಗಳು, ಅವುಗಳನ್ನು ಮೆಟ್ಟಿ ನಿಲ್ಲಲು ನಡೆದಿರುವ ಮತ್ತು ಯಶ ಕಂಡಿರುವ ಪ್ರಯತ್ನಗಳು, ಉದ್ದೇಶಿಸಿರದ ಆದರೆ ಒಳ್ಳೆಯ ಫಲಿತಾಂಶ ಬೀರಿದ ಘಟನೆಗಳು ಮತ್ತು ಬೆಳವಣಿಗೆಗಳು– ಇವೆಲ್ಲವನ್ನು ವಿಶೇಷವಾಗಿ ಪ್ರಸ್ತುತ ಕೋವಿಡಾಯಣ ಕಾಲಘಟ್ಟದಲ್ಲಿ ಓದಿ ತಿಳಿದುಕೊಳ್ಳುವುದು ಒಂದು ವಿಶೇಷ ಅನುಭವ. ಕೆಲವೊಂದಿಷ್ಟು ಭಾರತೀಯರ ಉಲ್ಲೇಖವೂ ಇರುವುದು ಮತ್ತಷ್ಟು ಹೆಮ್ಮೆ ಪುಸ್ತಕದೊಳಗಿನ ಹೂರಣವನ್ನು ಒಂಚೂರೂ, ಸ್ಯಾಂಪಲ್ ರುಚಿಗಾಗಿಯೂ, ನಾನಿಲ್ಲಿ ಬೇಕಂತಲೇ ಹಂಚಿಕೊಂಡಿಲ್ಲ. ಪುಸ್ತಕವನ್ನು ನೀವೇ ಓದಿ ಅನುಭವಿಸಬೇಕು ಎಂಬ ಉದ್ದೇಶ. ಅಷ್ಟರಮಟ್ಟಿಗೆ ಅದೂ ಒಂದು ಸೆರೆಂಡಿಪಿಟಿಯೇ ಆಗಿರಲೆಂಬ ಆಶಯ."

ಫಲಿತಗಳು

೧. ಸಂಶೋಧನೆಯ ಮೂಲೋದ್ದೇಶವು ಸರಿಯಾದ ಅಂತಿಮ ತೀರ್ಮಾನಗಳಿಗೆ ಬರುವುದಷ್ಟೇ ಅಲ್ಲ, ಹೊಸ ಅನ್ವೇಷಣೆಗಳಿಗೆ ಸಮಸ್ಯೆಗಳನ್ನು ತೆರೆದಿಡುವುದು, ಜ್ಞಾನವನ್ನು ಬೆಳೆಸುವುದು.
೨. ವಿಜ್ಞಾನದ ಕೋನೆಯ ತೀರ್ಪು ಯಾವಾಗಲೂ ಅಪೂರ್ಣ ಎಂಬುದೇ ಆಗಿರುತ್ತದೆ. ಹೊಸ ಅನ್ವೇಷಣೆಗಳಿಗೆ ಸಮಸ್ಯೆಗಳನ್ನು ಸೃಷ್ಟಿಸುತ್ತಿರುತ್ತದೆ.
೩. ವಿಜ್ಞಾನವನ್ನು ಓದುವಾಗ ಭಾವನೆಗಳ ಪ್ರಧಾನತೆಗಿಂತ ಪ್ರಾಯೋಗಿಕ ಮನೋಸ್ಥೈರ್ಯ ಮುಖ್ಯವಾಗುತ್ತದೆ.
೪. ಎಲ್ಲಾ ಕ್ಷೇತ್ರಗಳಲ್ಲೂ ವೈಜ್ಞಾನಿಕ ವಿಚಾರಗಳಿರುತ್ತವೆ, ನೋಡುವ ದೃಷ್ಟಿಕೋನಗಳು ನಮ್ಮನ್ನು ವಿಶಾಲ ಜ್ಞಾನಕ್ಕೆ ಆಹ್ವಾನಿಸುತ್ತವೆ.
೫. ಪ್ರತಿ ಕ್ಷೇತ್ರದಲ್ಲಿಯೂ ಸೆರೆಂಟಿಪಿಟಿಗಳು ನಡೆಯುತ್ತವೆ. ಅವುಗಳನ್ನು ಅದ್ಭುತಗಳು ಎನ್ನುತ್ತೇವೆ. ಆದರೆ, ಆ ಪ್ರಯೋಗಕ್ಕೆ ಒಳಗಾದ ಮನಸ್ಸುಗಳಿಗೆ ಮಾತ್ರ ಹೊಸ ಚೈತನ್ಯ ಮತ್ತು ತೃಪ್ತಿಯೊಳಗಣ ಅತೃಪ್ತಿ ಇದ್ದೇ ಇರುತ್ತದೆ.
೬. ವೈದ್ಯ ಲೋಕದ ಅದ್ಭುತಗಳನ್ನು ಓದುವಾಗ, ಪ್ರತಿ ಖಾಯಿಲೆ, ಔಷಧಗಳಿಗೂ ಇಂತಹ ವಿಸ್ಮಯ ಕುತೂಹಲಗಳು ಜರುಗಿರುತ್ತವೆ. ನಾವು ಅನ್ವೇಷಣೆಯಲ್ಲಿ ಸೋತಾಗ ಅವು ನಿಂತುಹೋಗುತ್ತವೆ.
೭. ಪ್ರತಿ ಸೆರೆಂಡಿಪಿಟಿಯನ್ನು ಉಲ್ಲೇಖಿಸಲು ಸಾಹಿತ್ಯವೇ ಬೇಕು. ಅಂತಹ ಕೆಸಲವನ್ನು ಡಾ. ವಿ.ಎಸ್. ಕಿರಣ್ ಅವರು ನಿರ್ವಹಿಸಿದ್ದಾರೆ. ಇಲ್ಲಿನ ಐವತ್ತು ಶೀರ್ಷಿಕೆಗಳಿಗೂ ಆ ಶಕ್ತಿ ಅಡಗಿದೆ.
೮. ಉದಾಹರಣೆಗೆ : ಬೆಂಕಿ ಹೊತ್ತಿಸಿದ್ದ ಧಾನ್ಯದ ಕತೆ, ನೌಕಾಯಾನದ ನರಕವನ್ನು ನಿಗ್ರಹಿಸಿದ ನಿಂಬೆ, ಒಳಗೆ ಕ್ರಿಕೆಟ್ ದಾಂಡು; ಹೊರಗೆ ಜೀವರಕ್ಷಕ!, ಅಜ್ಜಮ್ಮನ ಜಾದೂ ಕಷಾಯ!, ರಾಜವಂಶದ ರಕ್ತದ ಚರಿತ್ರೆ!, ನಮ್ಮೆಲ್ಲರೊಳಗಿನ ನೀಲ–ಕಂಠ!, ಕಾಲರಾದ ರಹಸ್ಯ ಭೇದಿಸಿದ ಸಾಧಕ ಹೃದಯ ರಕ್ಷಕದ ತಲೆನೋವು!, ಜೀವರಕ್ಷಕವಾದ ರಜೆ!, ದಾರಿದೀಪವಾದ ಕೊಳೆತ ಆಲೂಗೆಡ್ಡೆ! ಇವೆಲ್ಲವೂ ಲೇಖನಗಳ ಶೀರ್ಷಿಕೆಗಳು. ಸಾಹಿತ್ಯದ ಅಗತ್ಯವು ಮುಖ್ಯವಾಗಿ, ಯಾವುದೇ ಅನುಭವಗಳನ್ನು ಸಂಕಲಿಸಲು ಸರಿಯಾದ ಭಾವನೆಗಳು ಬೇಕಾಗುತ್ತದೆ.ಅದನ್ನು ಸಾಹಿತ್ಯವು ಎಲ್ಲಾ ಕ್ಷೇತ್ರಗಳಿಗೂ ನೀಡುತ್ತಾ ಬಂದಿದೆ.

ಆಕರಗಳು

೧. ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ನಿರ್ಮಾಣ ಕೈಪಿಡಿ., ಪ್ರೊ. ಎಮ್. ಅಬ್ದುಲ್ ರೆಹಮಾನ್ ಪಾಷ., ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ವಿಜ್ಞಾನ ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ಕರ್ನಾಟಕ ವಿಜ್ಞಾನ ತಂತ್ರಜ್ಞಾನ ಅಕಾಡಮಿ, ಬೆಂಗಳೂರು ೨೦೨೦
೨. ಸೆರೆಂಡಿಪಿಟಿ (ವೈದ್ಯಲೋಕದ ಅಧ್ಭುತ ಆಕಸ್ಮಿಕಗಳು)., ಡಾ. ಕಿರಣ್ ವಿ.ಎಸ್., ಮುನ್ನೋಟ, ಶ್ರೀವತ್ಸಜೋಶಿ., ಮಣಿಪಾಲ್ ಟೆಕ್ನಾಲಜೀಸ್, ಬೆಂಗಳೂರು, ೨೦೨೦

ಮಾರ್ಗದರ್ಶಕರು:
ಡಾ. ಬಿ.ಸಿ ನಾಗೇಂದ್ರ ಕುಮಾರ್
ಪ್ರಾಧ್ಯಾಪಕರು, ಕನ್ನಡ ವಿಭಾಗ,
ಸರ್ಕಾರಿ ಕಲಾ ಕಾಲೇಜು, ಸ್ನಾತಕೋತ್ತರ ಮತ್ತು
ಕನ್ನಡ ಸಂಶೋಧನಾ ಕೇಂದ್ರ,
ಬೆಂಗಳೂರು – ೦೧

ಇಸ್ಲಾಂ ಧರ್ಮದಲ್ಲಿ ಮನೋವಿಜ್ಞಾನ

ಡಾ. ಸೈಯದ್ ಮುಯಿನ್
ಕನ್ನಡ ಸಹಾಯಕ ಪ್ರಾಧ್ಯಾಪಕ
ಕ್ರಿಸ್ತು ಜಯಂತಿ ಕಾಲೇಜು, ಸ್ವಾಯತ್ತ
ಕೆ.ನಾರಾಯಣಪುರ, ಕೊತ್ತನೂರು
ಬೆಂಗಳೂರು–೫೬೦೦೭೭

“

ಧಾರ್ಮಿಕ ನಂಬಿಕೆಗಳು ಮಾನವನ ಮನೋರಂಗದದ ಮೇಲೆ ಮಹತ್ತರವಾದ ಪ್ರಭಾವವನ್ನು ಬೀರುತ್ತವೆ ಮತ್ತು ವ್ಯಕ್ತಿಯ ಮಾನಸಿಕ, ದೈಹಿಕ ಮತ್ತು ಆಧ್ಯಾತ್ಮಿಕ ಯೋಗಕ್ಷೇಮದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಮನುಷ್ಯನ ನಿಜವಾದ ಸ್ವಭಾವವನ್ನು ತಿಳಿಯಲು ಸಂತರು, ತತ್ವಜ್ಞಾನಿಗಳು, ವಿಜ್ಞಾನಿಗಳು ಮತ್ತು ಸಂಶೋಧಕರು ಯುಗಯುಗಾಂತರಗಳಲ್ಲಿ ಅನೇಕ ಪ್ರಯತ್ನಗಳನ್ನು ಮಾಡಿದ್ದಾರೆ.

ಮನುಷ್ಯನಿಗೆ ತಾರ್ಕಿಕತೆ, ಆಲೋಚನಾ ಶಕ್ತಿ, ಭಾಷೆ ಮತ್ತು ಸ್ವತಂತ್ರ ಇಚ್ಛೆಯಂತಹ ವಿಭಿನ್ನ ಮತ್ತು ವಿಶಿಷ್ಟ ಗುಣಗಳನ್ನು ನೀಡಲಾಗಿದೆ. ಇವು ಅವನನ್ನು ಉಳಿದ ಸೃಷ್ಟಿಗಳಿಂದ ಪ್ರತ್ಯೇಕಿಸುತ್ತದೆ, ಅವನನ್ನು ಉದಾತ್ತ ಮತ್ತು ಅತ್ಯಂತ ಅದ್ಭುತವಾದ ಸೃಷ್ಟಿಯನ್ನಾಗಿ ಮಾಡುತ್ತದೆ (ಅಶ್ರಫ್ ಪವಿತ್ರ ಮಖ್ಲುಕಾತ್) ಎಂದು ಮಾನವನನ್ನು ಸಂಬೋಧಿಸಲಾಗಿದೆ.

"ನಾವು ನಿಜವಾಗಿಯೂ ಮಾನವಕುಲವನ್ನು ಅತ್ಯುತ್ತಮವಾದ ಅಚ್ಚುಗಳಲ್ಲಿ ಸೃಷ್ಟಿಸಿದ್ದೇವೆ." (ಪವಿತ್ರ– ಕುರ್ಆನ್ ೯೫:೪)ಕುರ್ಆನ್‌ನ ಮೇಲಿನ ಆಯತ್ ಮನುಷ್ಯನ ಅತ್ಯುತ್ತಮ ವಿನ್ಯಾಸವನ್ನು ತಿಳಿದುಕೊಳ್ಳುವ ಕುತೂಹಲವನ್ನು ಹೆಚ್ಚಿಸುತ್ತದೆ. ಮಾನವ ಸ್ವಾಭಾವಿಕವಾಗಿ ಕುತೂಹಲ ಜೀವಿಯಾಗಿರುವುದು ಆತನ ಬುದ್ಧಿಮತ್ತತೆಯೇ ಆಗಿದೆ.

ಮೊದಲನೆಯದಾಗಿ ಇಲ್ಲಿ ಮನೋವಿಜ್ಞಾನ ಪದದ ವ್ಯುತ್ಪತ್ತಿ ಹೀಗಿದೆ, ಮನೋವಿಜ್ಞಾನ ಎಂಬ ಪದವು ಗ್ರೀಕ್ ಪದವಾದ 'ಸೈಕ್' ಅಂದರೆ 'ಆತ್ಮ' ಮತ್ತು 'ಲೋಗೋಸ್' ಅಂದರೆ 'ವಿಷಯದ ಅಧ್ಯಯನ' ಎಂಬ ಪದದಿಂದ ಬಂದಿದೆ. ಆದ್ದರಿಂದ, ಮನೋವಿಜ್ಞಾನ ಎಂಬ ಪದವು ಆತ್ಮದ ಅಧ್ಯಯನ ಎಂದರ್ಥ. ಮನೋವಿಜ್ಞಾನದ ಇತಿಹಾಸವು ಪ್ರಾಚೀನ ಗ್ರೀಕ್ ತತ್ವಶಾಸ್ತ್ರಕ್ಕಿಂತ ಹಿಂದಿನದು. ಪ್ಲೇಟೋ (ಕ್ರಿಸ್ತಪೂರ್ವ ೪೨೪ –೩೪೮) ಮಾನವ ನಡವಳಿಕೆಯನ್ನು ರೂಪಿಸುವಲ್ಲಿ ಮನಸ್ಸಿನ ಪಾತ್ರವನ್ನು ಒತ್ತಿಹೇಳಿದನು. ಅರಿಸ್ಟಾಟಲ್ (ಕ್ರಿಸ್ತಪೂರ್ವ ೩೮೪ –೩೨೨) ತನ್ನ ಗ್ರಂಥ treatise de anima (ಆನ್ ದಿ ಸೋಲ್)ನಲ್ಲಿ ಮನಸ್ಸಿನ ತತ್ವಶಾಸ್ತ್ರ ಮತ್ತು ಆತ್ಮದ ಗುಣಲಕ್ಷಣಗಳ ಮೇಲೆ ಬರೆದಿದ್ದಾನೆ. ೧೬ನೇ ಶತಮಾನದಲ್ಲಿ ಮನೋವಿಜ್ಞಾನವು ದೇವತಾಶಾಸ್ತ್ರಜ್ಞರಲ್ಲಿ ಆತ್ಮದ ಅಧ್ಯಯನವಾಗಿ ಪ್ರಸಿದ್ಧವಾಯಿತು. ಮನೋವಿಜ್ಞಾನದ ಇತಿಹಾಸದಲ್ಲಿ ಅತ್ಯಂತ ಪ್ರಭಾವಶಾಲಿ ವ್ಯಕ್ತಿ ವಿಲ್ಹೆಲ್ಮ್ ವುಂಡ್ಟ್ (ಕ್ರಿಸ್ತ ಶಕ ೧೮೩೨–೧೯೨೦) ಈತನನ್ನು ಮನೋವಿಜ್ಞಾನದ ಪಿತಾಮಹ ಎಂದು ಪರಿಗಣಿಸಲಾಗಿದೆ, ಈತನು ಮನೋವಿಜ್ಞಾನವನ್ನು ಸ್ವತಂತ್ರ ವಿಜ್ಞಾನವಾಗಿ ಸ್ಥಾಪಿಸಿದನು.

೧೯ನೇ ಶತಮಾನದಲ್ಲಿ ಮನೋವಿಜ್ಞಾನ ಪದವನ್ನು ಮಾನಸಿಕ ಜೀವನದ ವಿಜ್ಞಾನ ಎಂದು ವ್ಯಾಖ್ಯಾನಿಸಲಾಯಿತು. ನಂತರ ಮತ್ತೆ ಪದದ ಅರ್ಥವನ್ನು ಬದಲಾಯಿಸಿ ನಡವಳಿಕೆಯ ಅಧ್ಯಯನ ಎಂದು ಉಲ್ಲೇಖಿಸಲಾಯಿತು. ೧೯ನೇ ಶತಮಾನದ ನಂತರದ ಭಾಗದಲ್ಲಿ ಆಸ್ಟ್ರಿಯನ್ ಮನೋವೈದ್ಯ ಸಿಗ್ಮಂಡ್ ಫ್ರಾಯ್ಡ್ (೧೮೫೬–೧೯೩೯) ಮನೋವಿಶ್ಲೇಷಣೆಯ ಸಿದ್ಧಾಂತವನ್ನು ಪ್ರಸ್ತಾಪಿಸಿದನು – ಇದು ಮನಸ್ಸನ್ನು ಅಧ್ಯಯನ ಮಾಡುವ, ಸುಪ್ತ ಮನಸ್ಸಿನ ಪಾತ್ರವನ್ನು ಬಹಿರಂಗಪಡಿಸುವ ಮತ್ತು ತನಿಖೆ ಮಾಡುವ ಆಧಾರದ ಮೇಲೆ ಮಾನಸಿಕ ಹಾಗೂ ಭಾವನಾತ್ಮಕ ಅಸ್ವಸ್ಥತೆಗಳಿಗೆ ಚಿಕಿತ್ಸೆ ನೀಡುವ ವಿಧಾನವಾಗಿದೆ.

ಪ್ರಸ್ತುತ ಮನೋವಿಜ್ಞಾನವು ಮಾನವನ ಮನಸ್ಸಿನೊಂದಿಗೆ ವ್ಯವಹರಿಸುವ ಜ್ಞಾನದ ಶಾಖೆ ಎಂದು ವ್ಯಾಖ್ಯಾನಿಸಲಾಗಿದೆ. "ಪ್ರಜ್ಞೆ ಮತ್ತು ನಡವಳಿಕೆಯ ಸತ್ಯಗಳ ಎಚ್ಚರಿಕೆಯ ಪರೀಕ್ಷೆಯಿಂದ ನಾವು ಪಡೆದ ಮನಸ್ಸಿನ ಜ್ಞಾನ" (ಗ್ರೋಲಿಯರ್, ವೆಬ್‌ಸ್ಟರ್ ಪದಕೋಶ) ಎಂದು ಪಾರಿಭಾಷಿಕ ಅರ್ಥವನ್ನು ನೀಡಲಾಗಿದೆ.

ಧರ್ಮ ಮತ್ತು ಮನೋವಿಜ್ಞಾನವು ಸಕಾರಾತ್ಮಕ ಸಂಬಂಧವನ್ನು ಹೊಂದಿದೆ. ಧಾರ್ಮಿಕ ನಂಬಿಕೆಗಳು ಮಾನವನ ಮನೋವಿಜ್ಞಾನದ ಮೇಲೆ ಮಹತ್ತರವಾದ ಪ್ರಭಾವವನ್ನು ಬೀರುತ್ತವೆ. ವ್ಯಕ್ತಿಯ ಮಾನಸಿಕ, ದೈಹಿಕ ಮತ್ತು ಆಧ್ಯಾತ್ಮಿಕ ಯೋಗಕ್ಷೇಮದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ.

ಕುರ್‌ಆನ್ ಮೂರು ವಿಧದ ನಫ್ಸ್ (ಮಾನವ ಮನಸ್ಸು)ಬಗ್ಗೆ ವಿವರಿಸುತ್ತದೆ ಅವುಗಳೆಂದರೆ ನಫ್ಸ್ ಇ ಮುತ್ಮೈನಾ –ಶಾಂತ ಆತ್ಮ/ ತೃಪ್ತ ಆತ್ಮ (ಪವಿತ್ರ ಕುರ್‌ಆನ್ ೮೯:೨೭), ನಫ್ಸ್ ಇ ಲಾವಾಮಾ –ಆತ್ಮವನ್ನು ದೂಷಿಸುವುದು (ಪವಿತ್ರ ಕುರ್‌ಆನ್ ೭೫:೨) ಮತ್ತು ನಫ್ಸ್ ಇ ಅಮ್ಮಾರಾ –ಆಜ್ಞಾಪಿಸುವ ಆತ್ಮ (ಪವಿತ್ರ ಕುರ್‌ಆನ್ ೧೨:೫೩). ಕುರ್‌ಆನ್ ಬೋಧನೆಯ ಕೇಂದ್ರ ವಿಷಯವು ಮನುಷ್ಯ ಮತ್ತು ಮನುಷ್ಯನ ಆಂತರಿಕ ಸ್ವಭಾವ, ಸಾಮಾಜಿಕ, ನೈತಿಕ ಮತ್ತು ಆಧ್ಯಾತ್ಮಿಕ ಅಂಶಗಳನ್ನು ತಿಳಿಸುತ್ತದೆ. ಆದ್ದರಿಂದ ಮನುಷ್ಯನಿಗೆ ವಿಶ್ವದಲ್ಲಿ ವಿಶೇಷ ಸ್ಥಾನವಿದೆ.

ಮನೋವಿಜ್ಞಾನಕ್ಕೆ ಇಸ್ಲಾಮಿಕ್ ದೃಷ್ಟಿಕೋನವು ಇಸ್ಲಾಮಿನ ಜ್ಞಾನವನ್ನು ಆಧರಿಸಿದೆ. ಇಸ್ಲಾಂ ಎಂಬ ಪದವು ಅರಬಿ ಭಾಷೆಯ "ಸಲಾಮಾ" ಎಂದರೆ 'ಶಾಂತಿ' ಎಂಬ ಪದದಿಂದ ಬಂದಿದೆ. ಇದು 'slm' ಎಂಬ ಮೂಲ ಪದದಿಂದ ಬಂದಿದೆ, ಅಂದರೆ ಒಬ್ಬರ ಇಚ್ಛೆಯನ್ನು ಅಲ್ಲಾಹನಿಗೆ ಸಲ್ಲಿಸುವ ಮೂಲಕ ಸಂಪಾದಿಸಿದ ಶಾಂತಿ ಮತ್ತು ಅಲ್ಲಾಹನಿಗೆ ಸಲ್ಲಿಸುವ ಅಥವಾ ಶರಣಾತರಾಗುವವರನ್ನು 'ಮುಸ್ಲಿಂ' ಎಂದು ಕರೆಯಲಾಗುತ್ತದೆ. ನೈತಿಕತೆಯುಳ್ಳ ಧರ್ಮವನ್ನು ಅನುಸರಿಸುವುದರಿಂದ ಮನಃಶಾಂತಿಯನ್ನು ಪಡೆಯಬಹುದೆಂಬ ಮಹದುದ್ದೇಶವನ್ನು ಇಸ್ಲಾಂ ಧರ್ಮವು ಹೊಂದಿದೆ. ಇಸ್ಲಾಮಿಕ್ ಮನೋವಿಜ್ಞಾನದ ಇತಿಹಾಸವು ಮಾನವಕುಲದ ಇತಿಹಾಸಕ್ಕಿಂತ ಹಿಂದಿನದು. ಅಲ್ಲಾಹ ಕುರ್‌ಆನ್‌ನಲ್ಲಿ ಹೇಳುತ್ತಾನೆ– ಮತ್ತು ಪ್ರಭು ದೇವದೂತರಿಗೆ ಹೇಳಿದರು– "ನಾನು ಭೂಮಿಯ ಮೇಲೆ ಒಬ್ಬ ಖಲೀಫನನ್ನು(ಪ್ರತಿನಿಧಿ) ನೇಮಿಸಲಿದ್ದೇನೆ" (ಪವಿತ್ರ ಕುರ್‌ಆನ್ ೨:೩೦). ಇಸ್ಲಾಂ ದೃಷ್ಟಿಕೋನದ ಪ್ರಕಾರ, ಮಾನವರು ಭೂಮಿಯ ಮೇಲೆ ಅಲ್ಲಾಹನ ಖಲೀಫಾ (ಪ್ರತಿನಿಧಿ) ಆಗಿದ್ದಾನೆ. ಅಲ್ಲಾಹನನ್ನು ಮಾತ್ರ ಆರಾಧಿಸಲು ನಿಗದಿತ ಸಮಯದವರೆಗೆ ಅಲ್ಲಾಹನ ದೈವಿಕ ಯೋಜನೆಯಡಿಯಲ್ಲಿ ಅವುಗಳನ್ನು ರಚಿಸಲಾಗಿದೆ. ಯಶಸ್ವಿ ಜೀವನ ನಡೆಸಲು ಭಕ್ತರಿಗೆ ಆರಾಧನೆ ಕಡ್ಡಾಯ. ಆರಾಧನೆಯು ಮನಃಶಾಂತಿಯ ಭಾಗವೂ ಆಗಿದೆ. ಇಸ್ಲಾಂ ಮನೋವಿಜ್ಞಾನವು ಮನಸ್ಸು, ತತ್ವಶಾಸ್ತ್ರ ಮತ್ತು ಆತ್ಮವನ್ನು ಒಟ್ಟಿಗೆ ನೋಡುವ ಸಮೀಕೃತ ಲಕ್ಷಣವನ್ನು ಹೊಂದಿದೆ. ಮಧ್ಯಪ್ರಾಚ್ಯ ವಿದ್ವಾಂಸರು ಮನೋವಿಜ್ಞಾನಕ್ಕೆ ಪ್ರಾಯೋಗಿಕ ವಿಧಾನವನ್ನು ಅಭಿವೃದ್ಧಿಪಡಿಸಲು ಪ್ರಾರಂಭಿಸಿದರೆ, ಇಸ್ಲಾಮಿನ

ಮನೋವಿಜ್ಞಾನವು ಕೇವಲ ಸಿದ್ಧಾಂತದ ಬದಲಿಗೆ ಗುಣಪಡಿಸುವ ಮಾರ್ಗಗಳನ್ನು ಆಧರಿಸಿದೆ. ಪ್ರಾಚೀನ ಮನೋವಿಜ್ಞಾನಿಗಳಂತೆ ಮುಸ್ಲೀಂ ವಿದ್ವಾಂಸರು ಮನೋವಿಜ್ಞಾನಕ್ಕೆ ನಿರ್ದಿಷ್ಟ ಪದವನ್ನು ಹೊಂದಿರಲಿಲ್ಲ ಮತ್ತು ತಮ್ಮನ್ನು ಮನಃಶಾಸ್ತ್ರಜ್ಞರೆಂದು ಗುರುತಿಸಿಕೊಳ್ಳಲು ಇಲ್ಲ ಎಂಬುದು ಬಹು ಮುಖ್ಯವಾದುದು.

ಆರಂಭಿಕ ಮುಸ್ಲಿಂ ಬರಹಗಳಲ್ಲಿ ವಿದ್ವಾಂಸರು ವ್ಯಕ್ತಿಯ ವ್ಯಕ್ತಿತ್ವವನ್ನು ವಿವರಿಸಲು ನಫ್ಸ್ (ಸ್ವಯಂ/ಮಾನಸಿಕ) ಮತ್ತು ಮಾನವ ಸ್ವಭಾವಕ್ಕೆ ಫಿತ್ರಾ (ಶುದ್ಧತೆ) ಎಂಬ ಪದವನ್ನು ಬಳಸಿದರು. ಇಸ್ಲಾಮಿಕ್ ಮನಃಶಾಶ್ತ್ರವು ಖಲ್ಬ್ (ಹೃದಯ), ರೂಹ್ (ಆತ್ಮ), ನಫ್ಸ್ (ಮನಸ್ಸು), ಅಕ್ಲ್ (ಬುದ್ಧಿಶಕ್ತಿ) ಮತ್ತು ಇರಾದಾ (ಸಂಕಲ್ಪ)ದಂತಹ ಪರಿಕಲ್ಪನೆಗಳನ್ನು ಚರ್ಚಿಸುತ್ತದೆ.

ಮಧ್ಯಕಾಲೀನ ಕಾಲದಲ್ಲಿ ಪವಿತ್ರ–ಕಿಂಡಿ (ಕ್ರಿ.ಶ.೮೦೧–೮೭೩)ನಂತಹ ತತ್ವಜ್ಞಾನಿಗಳು ಆತ್ಮದ ಕಾರ್ಯಗಳನ್ನು ಮತ್ತು ಮನುಷ್ಯನ ಬೌದ್ಧಿಕ ಆಕಾಂಕ್ಷೆಗಳನ್ನು ತನ್ನ ಕೃತಿ ಆನ್ ಸ್ಲೀಪ್ ಅಂಡ್ ಡ್ರೀಮ್ ಮತ್ತು ಫಸ್ಟ್ ಫಿಲಾಸಫಿಯಲ್ಲಿ ಚರ್ಚಿಸಿದ್ದಾರೆ. ಅಬು ಝೈದ್ ಪವಿತ್ರ ಬಲ್ಖಿ (ಕ್ರಿ.ಶ.೮೫೦–೯೩೪) ತನ್ನ ಪುಸ್ತಕ ದಿ ಸಸ್ಟೆನೆನ್ಸ್ ಆಫ್ ದಿ ಬಾಡಿ ಅಂಡ್ ದಿ ಸೋಲ್‌ನಲ್ಲಿ ದೈಹಿಕ ಮತ್ತು ಮಾನಸಿಕ ಅಸ್ವಸ್ಥತೆಗಳ ಬಗ್ಗೆ ಚರ್ಚಿಸಿದ್ದಾರೆ. ದೈಹಿಕ ಕಾಯಿಲೆಗಳನ್ನು ಮಾನಸಿಕ ಅಸ್ವಸ್ಥತೆಗಳಿಂದ ಬೇರ್ಪಡಿಸಿದ ಮೊದಲ ಮುಸ್ಲಿಂ ಮನಶ್ಶಾಸ್ತ್ರಜ್ಞ ಪವಿತ್ರ–ಫರಾಬಿ (ಕ್ರಿ.ಶ.೮೭೦–೯೫೦) ಸಾಮಾಜಿಕ ಮನೋವಿಜ್ಞಾನದಲ್ಲಿ ವಿಶೇಷ ಅಧ್ಯಯನಗಳನ್ನು ನಡೆಸಿದರು. ಇಬ್ನ್–ಸಿನಾ (ಕ್ರಿ.ಶ.೯೮೦–೧೦೩೭) ಅವರ ಪುಸ್ತಕ ಕಿತಾಬ್ ಪವಿತ್ರ ಶಿಫಾದಲ್ಲಿ ಅವರು ಮನಸ್ಸಿನ ದೇಹದ ಸಂಬಂಧಗಳು, ಇಂದ್ರಿಯ ಗ್ರಹಿಕೆ ಮತ್ತು ಸಂಬಂಧಿತ ಅರಿವಿನ ಅಂಶಗಳನ್ನು ಒಳಗೊಂಡಂತೆ ಮಾನವ ಮನೋವಿಜ್ಞಾನದ ವಿವಿಧ ಅಂಶಗಳನ್ನು ಚರ್ಚಿಸಿದ್ದಾರೆ. ಪವಿತ್ರ–ಗಜಾಲಿ (ಕ್ರಿ.ಶ.೧೦೫೮–೧೧೧೧) ಮನೋವಿಜ್ಞಾನದಲ್ಲಿ ಮಹತ್ವದ ಕೊಡುಗೆಯನ್ನು ನೀಡಿದ್ದಾರೆ. ಅವರ ಶ್ರೇಷ್ಠ ಕೃತಿ ದಿ ರಿವೈವಲ್ ಆಫ್ ದಿ ರಿಲಿಜಿಯಸ್ ಸೈನ್ಸಸ್ ಇಸ್ಲಾಂ ವಿದ್ವತ್‌ಲೋಕದಲ್ಲಿ ಪ್ರಮುಖ ಪುಸ್ತಕಗಳಲ್ಲಿ ಒಂದಾಗಿದೆ. ಈ ಕೃತಿಯು ಮನುಷ್ಯನ ಮಾನಸಿಕ ಬೆಳವಣಿಗೆಗಳ ಬಗ್ಗೆ ಆಳವಾದ ಒಳನೋಟಗಳನ್ನು ಒದಗಿಸುತ್ತದೆ. ಅನೇಕ ಸಂದರ್ಭಗಳಲ್ಲಿ ಈ ವಿದ್ವಾಂಸರ ಕೃತಿಗಳು ಅನೇಕ ಆಧುನಿಕ ಮನೋವೈಜ್ಞಾನಿಕ ಸಿದ್ಧಾಂತಗಳು ಮತ್ತು ಅಭ್ಯಾಸಗಳಿಗೆ ಮೂಲ ಕಲ್ಪನೆಗಳಾಗಿವೆ.

ಇಸ್ಲಾಮಿಕ್ ಸೈಕಾಲಜಿ ಇಂಟರ್ನ್ಯಾಷನಲ್ ಅಸೋಸಿಯೇಷನ್ ಇಸ್ಲಾಮಿನ ಮನೋವಿಜ್ಞಾನವನ್ನು ವ್ಯಾಖ್ಯಾನಿಸುತ್ತದೆ, ಇದು ಇಸ್ಲಾಮಿನ ಸಂಪ್ರದಾಯದಿಂದ ಆತ್ಮದ ಜ್ಞಾನದಲ್ಲಿ ನೆಲೆಗೊಂಡಿರುವ ಮಾನವನ ಸಮಗ್ರ ತಿಳುವಳಿಕೆಯಾಗಿದೆ. ಇದು ಮನಸ್ಸಿಗಿಂತ ಹೆಚ್ಚಾಗಿ ಆತ್ಮದ ಕೇಂದ್ರವಾಗಿ ಹೃದಯವನ್ನು ಕೇಂದ್ರೀಕರಿಸುತ್ತದೆ.

ಇಸ್ಲಾಮಿನ ಮನೋವಿಜ್ಞಾನ ಸಮಕಾಲೀನ ಜಗತ್ತಿನಲ್ಲಿ ಬೆಳೆಯುತ್ತಿರುವ ಶಿಸ್ತು ಎಂದು ದಶಕಗಳಿಂದ ಪ್ರಕಟಣೆಗಳ ಸ್ಥಿರ ಬೆಳವಣಿಗೆಯಿಂದ ಒಂದು ಅನನ್ಯ ಚಿತ್ರಣವನ್ನು ಮಾಡಿದೆ. ಅಭಿವೃದ್ಧಿಶೀಲ ಹಂತದಲ್ಲಿದ್ದರೂ, ಇಸ್ಲಾಮಿನ ಮನೋವಿಜ್ಞಾನ ಮಾನವ ಸ್ವಭಾವ ಮತ್ತು ಅಭಿವೃದ್ಧಿಯನ್ನು ಅರ್ಥಮಾಡಿಕೊಳ್ಳಲು ಹೆಚ್ಚು ಸುಧಾರಿತ ಮತ್ತು ಸಮಗ್ರ ವಿಧಾನವನ್ನು ಒದಗಿಸಿದೆ. ಇಸ್ಲಾಮಿನ ಮನೋವಿಜ್ಞಾನ ಧರ್ಮ–ಆಧಾರಿತ ದೃಷ್ಟಿಕೋನಗಳಲ್ಲಿ ಒಂದಾಗಿದೆ. ಅದು ಅದನ್ನು ಒಪ್ಪಿಕೊಳ್ಳುತ್ತದೆ. ಇಸ್ಲಾಮಿನ ಮನೋವಿಜ್ಞಾನದ ಮುಖ್ಯ ಲಕ್ಷಣವೆಂದರೆ ಆಧ್ಯಾತ್ಮಿಕ ಆಯಾಮ ಮತ್ತು ಜನರ ಜೀವನದಲ್ಲಿ ಧರ್ಮದ ಪ್ರಾಮುಖ್ಯತೆಯನ್ನು ಕೇಂದ್ರೀಕರಿಸುತ್ತದೆ. ಇಸ್ಲಾಮಿನ ಮನೋವಿಜ್ಞಾನ ಅಲ್ಲಾಹನ ಅಸ್ತಿತ್ವ, ಮಾನವರ ಆಧ್ಯಾತ್ಮಿಕ ಸ್ವಭಾವ ಮತ್ತು ಇಸ್ಲಾಮಿಕ್ ಮೂಲಗಳ (ಕುರಾನ್ ಮತ್ತು ಹದೀಸ್) ಬೋಧನೆಗಳು ಮತ್ತು ಮಾರ್ಗದರ್ಶನದಲ್ಲಿ ನಂಬಿಕೆಯೊಂದಿಗೆ ಪ್ರಾರಂಭವಾಗುತ್ತದೆ ಎಂಬುದನ್ನು ಗಮನಿಸುವುದು ಆಸಕ್ತಿದಾಯಕವಾಗಿದೆ. ಇದು ಮಾನವನ ಆಲೋಚನೆಗಳನ್ನು ಮತ್ತು ನಡವಳಿಕೆಗಳನ್ನು ವಿವರಿಸಲು ಸಮಗ್ರ ಹಾಗೂ ನವೀಕೃತ ವಿಧಾನವನ್ನು ಒದಗಿಸುತ್ತದೆ. "ಮತ್ತು ನಾವು ಅವನ ಕಂಠನಾಡಿಗಿಂತಲೂ ಅವನಿಗೆ ಹತ್ತಿರವಾಗಿದ್ದೇವೆ." (ಪವಿತ್ರ–ಕುರ್‌ಆನ್ ೫೦:೧೬) ಅಲ್ಲಾಹನು ತನ್ನ ಕಂಠನಾಳದಿಂದ ಮನುಷ್ಯನಿಗೆ ಹತ್ತಿರವಾಗಿದ್ದಾನೆ, ಆದರೂ ನಾವು ಅಲ್ಲಾಹನಿಂದ ಪ್ರತ್ಯೇಕ ಅಸ್ತಿತ್ವವನ್ನು ಹೊಂದಿದ್ದೇವೆ ಆದರೆ ನಾವು ಅವನೊಂದಿಗೆ ಸಂಪರ್ಕ ಹೊಂದಿದ್ದೇವೆ. ಅಲ್ಲಾಹನೊಂದಿಗಿನ ಸಂಪರ್ಕವಿಲ್ಲದೆ ಮಾನವ ಸ್ವಭಾವ ಮತ್ತು ನಡವಳಿಕೆಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಮೇಲಿನ ಆಯತ್ ಸ್ಪಷ್ಟವಾಗಿ ತೋರಿಸುತ್ತದೆ. ಅಲ್ಲಾಹನೊಂದಿಗಿನ ಈ ಸಂಪರ್ಕವು ಒಬ್ಬರ ಆಲೋಚನೆಗಳು ಮತ್ತು ನಡವಳಿಕೆಯನ್ನು ಪ್ರಭಾವಿಸುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಆಧುನಿಕ ಮನೋವಿಜ್ಞಾನವು ಮನುಷ್ಯನೊಂದಿಗಿನ ದೇವರ ಸಂಪರ್ಕವನ್ನು ಅಥವಾ ಮನುಷ್ಯರ ಆಲೋಚನೆಗಳು, ಭಾವನೆಗಳು ಮತ್ತು ನಡವಳಿಕೆಯ ಮೇಲೆ ದೇವರ ಪ್ರಭಾವವನ್ನು ಸ್ವೀಕರಿಸುವುದಿಲ್ಲ. ಮನೋವಿಜ್ಞಾನದ ಯಾವುದೇ ಸಿದ್ಧಾಂತ ಅಥವಾ ಯಾವುದೇ ಮಾನಸಿಕ ವಿಧಾನಗಳು ಅದನ್ನು ಗುರುತಿಸಲು ಮತ್ತು ಅಧ್ಯಯನ ಮಾಡಲು ಸಾಧ್ಯವಿಲ್ಲ. ಮುಖ್ಯ ಕಾರಣವೆಂದರೆ ಆಧುನಿಕ ಮನೋವಿಜ್ಞಾನವು ಆತ್ಮವನ್ನು ಕಡೆಗಣಿಸುತ್ತದೆ ಮತ್ತು ಮಾನವನನ್ನು

ಭೌತಿಕ ಅಸ್ತಿತ್ವ ಮತ್ತು ಭೌತಿಕ ಜೀವಿಯಾಗಿ ನೋಡುತ್ತದೆ. ಅವರು ಮಾನವ ನಡವಳಿಕೆಯನ್ನು ಸಂಪೂರ್ಣವಾಗಿ ವಿವರಿಸುವುದಿಲ್ಲ. ಸಮಕಾಲೀನ ಕಾಲದಲ್ಲಿ ಧರ್ಮವು ಮಾನವ ನಡವಳಿಕೆಯ ಮೇಲೆ ಪ್ರಭಾವ ಬೀರುತ್ತದೆ. ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಆರೋಗ್ಯವನ್ನು ಸುಧಾರಿಸುತ್ತದೆ ಎಂದು ಸಂಶೋಧನೆ ಹೇಳುತ್ತದೆ. ಆಧ್ಯಾತ್ಮಿಕತೆಯ ಸಂಪೂರ್ಣ ನಿರಾಕರಣೆಯು ಅನಪೇಕ್ಷಿತ ಫಲಿತಾಂಶಗಳನ್ನು ಹೊಂದಿದೆ ಎಂದು ಸಂಶೋಧಕರು ಸೂಚಿಸಿದ್ದಾರೆ. ಅಮೇರಿಕನ್ ಸೈಕಲಾಜಿಕಲ್ ಅಸೋಸಿಯೇಷನ್ (APA) ವಿಭಾಗ ೩೬ರಲ್ಲಿ ಧರ್ಮ ಮತ್ತು ಆಧ್ಯಾತ್ಮಿಕತೆಯ ಮಾನಸಿಕ ಆಯಾಮಗಳಿಗೆ ಪ್ರಾಮುಖ್ಯತೆಯನ್ನು ನೀಡಿದೆ.

ಇಸ್ಲಾಮಿಕ್ ದೃಷ್ಟಿಕೋನದಿಂದ ಮನೋವಿಜ್ಞಾನವನ್ನು ಅರ್ಥಮಾಡಿಕೊಳ್ಳುವ ಮತ್ತು ಅಭಿವೃದ್ಧಿಪಡಿಸುವ ಪ್ರಾಮುಖ್ಯತೆಯು ಮನೋವಿಜ್ಞಾನವನ್ನು ಆಧ್ಯಾತ್ಮಿಕವಾಗಿ ಪ್ರಸ್ತುತಪಡಿಸುವ ಗುರಿಯನ್ನು ಹೊಂದಿದೆ. ಮಾನಸಿಕ ಸಮಾಲೋಚನೆ ಅಥವಾ ಸೈಕೋಥೆರಪಿ ಪ್ರಕ್ರಿಯೆಯಲ್ಲಿ ಧಾರ್ಮಿಕ ಪರಿಕಲ್ಪನೆಗಳ ಏಕೀಕರಣವು ವ್ಯಕ್ತಿಯ ಮಾನಸಿಕ, ದೈಹಿಕ ಮತ್ತು ಮಾನಸಿಕ ಸ್ಥಿತಿಯ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತದೆ ಎಂಬುದು ಹಲವಾರು ಅಧ್ಯಯನಗಳಿಂದ ಸ್ಪಷ್ಟವಾಗಿದೆ. ಇಸ್ಲಾಂ ಮನೋವಿಜ್ಞಾನದ ಬೆಳವಣಿಗೆಗೆ ಹಲವಾರು ವೇದಿಕೆಗಳು ಬಂದಿವೆ. ಉದಾಹರಣೆಗೆ, ಇಂಡಿಯನ್ ಕೌನ್ಸಿಲ್ ಆನ್ ದಿ ಇಸ್ಲಾಮಿಕ್ ಪರ್ಸ್ಪೆಕ್ಟಿವ್ ಇನ್ ಸೈಕಾಲಜಿ (ICIPP) ಅನ್ನು ಭಾರತದಲ್ಲಿ ೨೦೧೬ ರಲ್ಲಿ ಸ್ಥಾಪಿಸಲಾಯಿತು. ಇದಲ್ಲದೆ, ಇಸ್ಲಾಮಿಕ್ ಸೈಕಾಲಜಿಯ ಸ್ಥಾಪಕರಾದ ಮಲಿಕ್ ಬದ್ರಿ ೨೦೧೭ ರಲ್ಲಿ ಸ್ಥಾಪಿಸಿದ ಇಂಟರ್ನ್ಯಾಷನಲ್ ಅಸೋಸಿಯೇಷನ್ ಆಫ್ ಇಸ್ಲಾಮಿಕ್ ಸೈಕಾಲಜಿ (IAIP) ಇದೆ.

ಮೇಲಿನ ಚರ್ಚೆಯಿಂದ, ಇಸ್ಲಾಂ ಮನೋವಿಜ್ಞಾನವು ಇಸ್ಲಾಮಿನ ಸಂಪ್ರದಾಯದಿಂದ ಆತ್ಮದ ಜ್ಞಾನದಲ್ಲಿ ನೆಲೆಗೊಂಡಿರುವ ಮಾನವನ ಸಮಗ್ರ ತಿಳುವಳಿಕೆಯಾಗಿದೆ ಮತ್ತು ಮನಸ್ಸಿನ ಬದಲು ಆತ್ಮದ ಕೇಂದ್ರವಾಗಿ ಹೃದಯವನ್ನು ಕೇಂದ್ರೀಕರಿಸುತ್ತದೆ. ಆಧ್ಯಾತ್ಮಿಕತೆಯು ಮಾನವನ ಮನಸ್ಸಿನ ಅವಿಭಾಜ್ಯ ಅಂಗವಾಗಿದೆ ಮತ್ತು ಅದನ್ನು ತಿರಸ್ಕರಿಸುವುದು ಒತ್ತಡ, ಆತಂಕ, ಖಿನ್ನತೆ ಮುಂತಾದ ಮಾನಸಿಕ, ದೈಹಿಕ ಮತ್ತು ಮಾನಸಿಕ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಜಾಗತಿಕವಾಗಿ ನಾವು ಮಾನಸಿಕ ಮತ್ತು ಮಾನಸಿಕ ಸಮಸ್ಯೆಗಳನ್ನು ಎದುರಿಸುವ ಅಪಾಯದಲ್ಲಿದ್ದೇವೆ. ಈ ಸಮಸ್ಯೆಗಳನ್ನು ಇಸ್ಲಾಮಿಕ್ ಸೈಕಾಲಜಿಯಲ್ಲಿ ಈಗಾಗಲೇ ಉಲ್ಲೇಖಿಸಿರುವ ಸುಧಾರಿತ ಮತ್ತು ಸಮಗ್ರ ರೀತಿಯಲ್ಲಿ ಪರಿಹರಿಸಬೇಕು ಮತ್ತು ಚಿಕಿತ್ಸಕ ಬುದ್ಧಿಯಿಂದ ನೋಡಬೇಕು. ಇಸ್ಲಾಮಿನಲ್ಲಿ ಮನಃಶಾಸ್ತ್ರವನ್ನು ಪರಿಭಾಷೆ ಮುಕ್ತ ಮತ್ತು ಸರಳವಾಗಿ ಪ್ರವೇಶಿಸಬಹುದಾದ ಪರಿಚಿಕೆಯಾಗಿದೆ, ಇದರಲ್ಲಿ ಇಸ್ಲಾಮಿನ ದೃಷ್ಟಿಕೋನದಲ್ಲಿ ಮನಃಶಾಸ್ತ್ರವನ್ನು ಪರಿಶೋಧಿಸಲಾಗುತ್ತದೆ. ಇಸ್ಲಾಮಿನ ಮನೋವಿಜ್ಞಾನವು ಮೂಲಭೂತ ತತ್ವಗಳು ಮತ್ತು ಅಭ್ಯಾಸಗಳ ತಳಮಟ್ಟದ ಅವಲೋಕನವನ್ನು ಒದಗಿಸುತ್ತದೆ.

ಪರಾಮರ್ಶನ ಗ್ರಂಥಗಳು

೧. ಮುಂತಖಬ್ ಹದೀಸ್: ಮೌಲಾನ ಮುಹಮ್ಮದ್ ಯೂಸುಫ್ ಜಾಲಂಧರಿ, ದಾವತ್ ಎ ತಬ್ಲೀಘ್, ಬೆಂಗಳೂರು
೨. ಪ್ರವಾದಿ ಮುಹಮ್ಮದ್(ಸ)ಜೀವನ ಮತ್ತು ಸಂದೇಶ, ಇಬ್ರಾಹೀಂ ಸಈದ್, ಶಾಂತಿ ಪ್ರಕಾಶನ, ಮಂಗಳೂರು
೩. ಸಹೀಹುಲ್ ಬುಖಾರಿ, ಕನ್ನಡಕ್ಕೆ ಎಂ ಸಾದುಲ್ಲಾ, ಶಾಂತಿ ಪ್ರಕಾಶನ, ಮಂಗಳೂರು, ೨೦೧೪
೪. ಪವಿತ್ರ ಕುರ್‌ಆನ್: ಅಬ್ದುಲ್ ಗಫ್ಫಾರ್, ಶಾಂತಿ ಪ್ರಕಾಶನ, ಮಂಗಳೂರು, ೨೦೦೯

ಶಿವನ ಮೀಸುವ ಹಾಡು : ಮಹಿಳಾ ಸಂವೇದನೆ

ಡಾ. ಕಿರಣಕುಮಾರ್ ಹೆಚ್.ಜಿ.
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಕಾಲೇಜು, ಕೆ. ನಾರಾಯಣಪುರ
ಬೆಂಗಳೂರು – ೫೬೦೦೭೭

“

ಭಾರತೀಯ ಸಾಂಪ್ರದಾಯಿಕ ಸಮಾಜವು ಸಾವಿರಾರು ವರ್ಷಗಳಿಂದ ಮಹಿಳೆಯನ್ನು ಅತ್ಯಂತ ನಿಕೃಷ್ಟವಾಗಿ ನೆಡೆಸಿಕೊಂಡು ಬಂದಿದೆ. ಮಹಿಳೆ ಎಂದರೆ ಕೇವಲ ಸರಕು ಎಂಬಂತೆ ಭಾವಿಸಿಕೊಂಡು ಬಂದಿರುವುದನ್ನು ಚರಿತ್ರೆಯ ಹಲವು ಸಂಗತಿಗಳು ಸ್ಪಷ್ಟಪಡಿಸುತ್ತವೆ. ಮಹಿಳೆ ಎಂದರೆ ಕೇವಲ ನಾಲ್ಕು ಗೋಡೆಗಳ ನಡುವೆ ಇದ್ದು, ಕುಟುಂಬವನ್ನು ಮುನ್ನೆಡೆಸಿಕೊಂಡು ಹೋಗಬೇಕಾದ ಹೊಣೆಗಾರಿಕೆಯು ಅವಳದ್ದಾಗಿದೆ. ಪುರುಷ ಮನೆಯ ಹೊರಗಿನ ಆದಾಯವನ್ನು ತರುವ ಹಾಗೂ ಸಾಮಾಜಿಕವಾದ ಮನ್ನಣೆಯಿರುವ ಯಾಜಮಾನಿಕೆಯ ಕೆಲಸಗಳನ್ನು ಮಾಡಿದರೆ; ಮಹಿಳೆಯು ಮನೆಯಲ್ಲಿನ ಕೌಟುಂಬಿಕ ಕೆಲಸಗಳಿಗೆ ಮಾತ್ರ ಸೀಮಿತವಾಗಿರಬೇಕು ಎನ್ನುವ ಅಲಿಖಿತ ನಿಯಮಗಳೂ ಇದ್ದವು. ಮಹಿಳೆ ಎಂದರೆ ಕೆಲಸಕ್ಕೆ ಬಾರದವಳು, ಪುರುಷನ ಅಧೀನದಲ್ಲಿ ತನ್ನ ಜೀವನವನ್ನು ಕಂಡುಕೊಂಡವಳು ಎನ್ನುವಂತಹ ಹೀನಾಯ ಮಾತುಗಳನ್ನು ಕೇಳಬೇಕಾಯಿತು. ಹೀಗಾದ್ದರಿಂದಲೇ ಮಹಿಳೆ ಮತ್ತು ಪುರುಷನ ನಡುವಿನ ಈ ಅಸಮಾನತೆಯು ಇನ್ನೂ ಹೆಚ್ಚಾಯಿತು. ಇದನ್ನು ಪುಷ್ಟೀಕರಿಸುವಂತೆ ಮನುಸ್ಮೃತಿಯಲ್ಲಿ ತಿಳಿಸಿರುವಂತೆ ‘ಮಹಿಳೆಯು ಚಿಕ್ಕ ವಯಸ್ಸಿನಲ್ಲಿ ತಂದೆಯ ಆಶ್ರಯದಲ್ಲಿ, ಯೌವ್ವನದಲ್ಲಿ ಗಂಡನ ಆಶ್ರಯದಲ್ಲಿ ಮತ್ತು ವಯಸ್ಸಾದ ನಂತರದಲ್ಲಿ ಮಗನ ಆಶ್ರಯದಲ್ಲಿ ರಕ್ಷಣೆಯನ್ನು ಪಡೆಯಬೇಕು’ ಎನ್ನುವ ಮಾತುಗಳು ಮಹಿಳೆಯು ಸರ್ವಕಾಲಕ್ಕೂ ಪುರುಷನ ಅಧೀನದಲ್ಲಿಯೇ ಉಳಿಯಬೇಕೆನ್ನುವ ಇಂಗಿತವನ್ನು ವ್ಯಕ್ತಪಡಿಸುತ್ತಿದೆ.

ಮೇಲಿನ ಇಂತಹ ಸಾಂಸ್ಕೃತಿಕ ಚಹರೆಗಳನ್ನು ಇಟ್ಟುಕೊಂಡು

ಅವಲೋಕಿಸಿದಾಗ ಹೀಗೆ ಮಹಿಳೆಯನ್ನು ಅರ್ಥ ಮಾಡಿಕೊಂಡಿರುವ ನಮ್ಮ ಗ್ರಹಿಕೆಯನ್ನು ಮತ್ತೊಮ್ಮೆ ಪುನರ್ ಪ್ರಶ್ನಿಸಿಕೊಳ್ಳಬೇಕಾಗುತ್ತದೆ. ಮಹಿಳೆಯನ್ನು ಹೀಗೆ ನಾನಾ ವಿಧದಲ್ಲಿ ಅವಳನ್ನು ಹಾಗೂ ಅವಳ ವ್ಯಕ್ತಿತ್ವವನ್ನು ಸಂಕುಚಿತಗೊಳಿಸುವ ಕೆಲಸವು ಬಹಳ ನಾಜೂಕಾಗಿ ನೆಡೆದಿದೆ. ಮಹಿಳೆಯನ್ನು ಕೌಟುಂಬಿಕ ಸಾಮಾಜೀಕರಣದ ಆಚೆ ಅವಳನ್ನು ಅವಳು ಕಂಡುಕೊಳ್ಳಲು ಸಾಧ್ಯವೇ ಆಗದಿರುವಂತೆ ಈ ನಮ್ಮ ಪುರುಷಪ್ರಧಾನ ಸಮಾಜವು ನೋಡಿಕೊಂಡಿದೆ. ಈ ಹಿನ್ನೆಲೆಯಲ್ಲಿ ಭಾರತೀಯ ಸಮಾಜದಲ್ಲಿ ಮಹಿಳೆ ಎಂದರೆ ಕೇವಲ ಭೋಗದ ವಸ್ತು, ಮಕ್ಕಳನ್ನು ಹೆರುವ ಯಂತ್ರ ಇಲ್ಲವೇ ಸಾಮಾಜೀಕರಣದ ಭಾಗವೇ ಆಗಿದ್ದಾಳೆ. ಇಂತಹ ಅನೇಕ ನ್ಯೂನ್ಯತೆಗಳನ್ನು ಮೀರಿ ಮಹಿಳೆಗೂ ಅಸ್ತಿತ್ವವಿದೆ, ಅವಳಿಗೂ ಮನಸ್ಸಿದೆ, ಅವಳು ಕೂಡ ಸಮಾಜದಲ್ಲಿ ಪುರುಷನಷ್ಟೇ ಸರಿಸಮಾನಳು ಎಂದು ನಾವು ಇಂದು ತಿಳಿದಿದ್ದರೂ ಸಮಸ್ಯೆಗಳನ್ನು ಅವಳು ಅನುಭವಿಸುತ್ತಿರುವುದನ್ನು ನಾವು ಅಲ್ಲಗಳೆಯುವಂತಿಲ್ಲ. ಈ ಹಿನ್ನೆಲೆಯಲ್ಲಿ ಭಾರತೀಯ ಸಮಾಜವು ವೇದಗಳ ಕಾಲದಲ್ಲಿ ಮಹಿಳೆಗೆ ಇದ್ದ ಸ್ವಾತಂತ್ರ್ಯವು ಕಾಲಾನಂತರದಲ್ಲಿ ಅವರ ಸ್ವಾತಂತ್ರ್ಯವು ಕಡಿತಗೊಂಡು ಸೀಮಿತವಾದ ಕೆಲಸ–ಕಾರ್ಯಗಳಲ್ಲಿ ಮಾತ್ರ ಅವಳು ಭಾಗವಹಿಸಬೇಕೆಂಬ ಅನೇಕ ನಿರ್ಬಂಧಗಳನ್ನು ವಿಧಿಸಲಾಯಿತು. ಆದರೂ ವೇದಗಳ ಕಾಲದಲ್ಲಿ ಗಾರ್ಗೇಯಿ, ಮೈತ್ರೇಯಿ ಎಂಬ ಮಹಿಳೆಯರು ವೇದಗಳನ್ನು ಅಭ್ಯಾಸ ಮಾಡಿದ್ದರು ಎಂಬ ಉಲ್ಲೇಖಗಳು ದೊರೆಯುತ್ತವೆ. ಇದನ್ನೆಲ್ಲಾ ಗಮನಿಸಿದರೆ ಆನಂತರದಲ್ಲಿನ ಬೆಳವಣಿಗೆಗೆಗಳಲ್ಲಿ ಪುರುಷವಾದಿ ಸಮಾಜವು ತನ್ನ ಅಸ್ತಿತ್ವಕ್ಕಾಗಿ ಮಹಿಳೆಯರ ಹಕ್ಕನ್ನು ನಿರ್ಲಕ್ಷಿಸುವ ಅವಳನ್ನು ಮೂಲೆಗುಂಪು ಮಾಡಿರುವುದನ್ನು ಸೂಕ್ಷ್ಮವಾಗಿ ಗ್ರಹಿಸಬಹುದು.

ಭಾರತದಲ್ಲಿ ಇದ್ದ ಇಂತಹ ಸಾಂಪ್ರದಾಯಿಕ ಚೌಕಟ್ಟುಗಳ ಅಡಿಪಾಯದಲ್ಲಿ ನರಳುತ್ತಿದ್ದ ಅನೇಕ ಶೋಷಿತ, ದಮನಿತ ಹಾಗೂ ಅಸಹಾಯಕರಾಗಿದ್ದವರಿಗೆ ಬ್ರಿಟಿಷ್ ವಸಾಹತುಶಾಹಿ ನೀತಿಯು ಅನೇಕ ಬದಲಾವಣೆಗಳನ್ನು ತರುವಲ್ಲಿ ಯಶಸ್ವಿಯಾಯಿತು. ಬ್ರಿಟಿಷ್ ಶಿಕ್ಷಣದಿಂದ ಭಾರತೀಯರಲ್ಲಿ ವೈಚಾರಿಕ ಹಾಗೂ ವೈಜ್ಞಾನಿಕ ಪ್ರಜ್ಞೆಯನ್ನು ಮೂಡಿಸಿತು. ಈ ಹಿನ್ನೆಲೆಯಲ್ಲಿ ಇಂಗ್ಲಿಷ್ ಶಿಕ್ಷಣವನ್ನು ಕಲಿತ ಭಾರತೀಯರು ಇಲ್ಲಿನ ತಮ್ಮ ಸಾಂಪ್ರದಾಯಿಕ ನೀತಿ–ನಿಯಮಗಳನ್ನು, ಆಚಾರ–ವಿಚಾರಗಳನ್ನು, ಮೂಢನಂಬಿಕೆಗಳನ್ನು ಪ್ರಶ್ನಿಸುವುದನ್ನು ಅರಿತರು. ಇದರಿಂದ ಭಾರತೀಯ ಸಮಾಜದಲ್ಲಿ ಅನೇಕ ಬದಲಾವಣೆಗಳಾದವು. ಇದೇ ಸಂದರ್ಭದಲ್ಲಿ ಮಹಿಳೆಯರಿಗೂ ಕೂಡ ಶಿಕ್ಷಣವು ದೊರೆತದ್ದರಿಂದ ಅವರೂ ಕೂಡ ಸಮಾಜದ ಮುನ್ನೆಲೆಗೆ ಬರಲು ಸಾಧ್ಯವಾಯಿತು. ಇದರಿಂದ ಸಾಹಿತ್ಯದಲ್ಲೂ ಕೂಡ ಮಹಿಳೆಯು ಪ್ರವೇಶವನ್ನು ಪಡೆದು ಬರವಣಿಗೆಗೆ ತೊಡಗಿಕೊಂಡಳು. ಇದರಿಂದ ಸಾಹಿತ್ಯ ಕ್ರಮದಲ್ಲಿ ಅದರ ರಚನೆಯಲ್ಲಿ ಭಿನ್ನ ವಿಭಿನ್ನ ವಸ್ತುವೈವಿಧ್ಯತೆಯನ್ನು ಒಳಗೊಂಡ ಅನೇಕ ಸಂಗತಿಗಳು ಒಡಮೂಡಿದವು. ಏಕಪ್ರಕಾರವಾಗಿ ಪುರುಷ ರಚಿತ ಸಾಹಿತ್ಯವನ್ನು ಮಹಿಳಾ ಹಿನ್ನೆಲೆಯಿಂದ ತಮ್ಮ ನೋವು ನಲಿವು, ಆಸೆ ಆಕಾಂಕ್ಷೆಗಳನ್ನು ಮುಕ್ತವಾಗಿ ಅಭಿವ್ಯಕ್ತಿಸುವ ಮಾಧ್ಯಮವನ್ನಾಗಿ ಬಳಸಿಕೊಂಡರು. ಈ ಹಂತದಲ್ಲಿ ತಿರುಮಲಾಂಭ, ಕೊಡಗಿನ ಗೌರಮ್ಮ, ಟಿ. ಸುನಂದಮ್ಮ, ತ್ರಿವೇಣಿ, ಗೀತಾ ನಾಗಭೂಷಣ ಹೀಗೆ ಹಲವಾರು ಲೇಖಕಿಯರು ಸಾಹಿತ್ಯ ಸೃಷ್ಟಿಯನ್ನು ರಚಿಸಿಕೊಂಡು ಬಂದರು.

ವೈದೇಹಿ ಅವರು ಕೂಡ ತಮ್ಮ ಕೌಟುಂಬಿಕ ಜೀವನಕ್ಕೆ ಕಾಲಿಟ್ಟ ನಂತರದಲ್ಲಿ ಸಾಹಿತ್ಯ ಸೃಷ್ಟಿಗೆ ತೆರೆದುಕೊಂಡವರು. ಕೌಟುಂಬಿಕ ಜಗತ್ತಿನ ನಾಲ್ಕು ಗೋಡೆಗಳ ನಡುವೆ ಇರುವ ಹೆಂಗಸರ ನೋವು–ನಲಿವು, ಬವಣೆ, ಅವರ ತಣ್ಣಗಿನ ಕ್ರೌರ್ಯ, ಅಸಹಾಯಕತೆ, ಹಿಂಸೆ ಹೀಗೆ ನಾನಾ ವಿಧದ ಬದುಕಿನ ಹಲವಾರು ಮಗ್ಗಲುಗಳನ್ನು ತಮ್ಮ ಸಾಹಿತ್ಯ ಕೃತಿಗಳ ಮೂಲಕ ಶೋಧಿಸಹೊರಟವರು. ಈ ಮೂಲಕ ಸ್ತ್ರೀ ಲೋಕದ ಬದುಕಿನ ಹಲವು ಅರ್ಥಗಳನ್ನು ತಮ್ಮ ಸಾಹಿತ್ಯದಲ್ಲಿ ಚಿತ್ರಿಸುವ ಕೆಲಸ ಮಾಡಿದ್ದಾರೆ. ಪುರುಷಪ್ರಧಾನ ವ್ಯವಸ್ಥೆಯಲ್ಲಿ ಪುರುಷನೇ ಕೇಂದ್ರ. ಅವನೇ ಸರ್ವಶ್ರೇಷ್ಠ. ಮಹಿಳೆ ಅವನಿಗೆ ಅವನ ಉದ್ಧಾರಕ್ಕಾಗಿ ಇರುವವಳು ಎಂಬ ಸಮಾಜದಲ್ಲಿ ವೈದೇಹಿ ಸ್ತ್ರೀ ಪುರುಷರಿಬ್ಬರೂ ಸಮಾನರು ಎಂಬ ಅಂಶಗಳನ್ನು ಒತ್ತಿ ಹೇಳುತ್ತಿದ್ದಾರೆ. ವೈದೇಹಿ ಅವರು ಸಾವಿರಾರು ವರ್ಷಗಳಿಂದ ಪುರುಷನು ಮಹಿಳೆಯ ಮೇಲೆ ಮಾಡಿಕೊಂಡು ಬಂದಿರುವ ದೌರ್ಜನ್ಯಗಳನ್ನು, ಅನ್ಯಾಯಗಳನ್ನು, ಶೋಷಣೆಯನ್ನು ಪ್ರಬಲವಾಗಿ ವಿರೋಧಿಸಿದರೂ ಪುರುಷನನ್ನು ನಿರಾಕರಿಸುವ ಮನಸ್ಥಿತಿಯನ್ನು ಹೊಂದಿಲ್ಲ. ಪುರುಷನಲ್ಲಿರುವ ನ್ಯೂನ್ಯತೆಗಳನ್ನು ಚಿತ್ರಿಸುತ್ತಲೇ ಅವನೊಂದಿಗೆ ಹೊಂದಾಣಿಕೆ ಮಾಡಿಕೊಂಡು ಬದುಕಬೇಕೆನ್ನುವ ಚಿಂತನೆಯು ವೈದೇಹಿ ಅವರ ಸಾಹಿತ್ಯದಲ್ಲಿ ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ವೈದೇಹಿ ಅವರ ಶಿವನ ಮೀಸುವ ಹಾಡು ಎನ್ನುವ ಕವಿತೆಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಭಾರತೀಯ ಪುರಾಣಗಳಲ್ಲಿ ಶಿವನನ್ನು ದೇವರೆಂದು ಪೂಜಿಸುವುದರ ಜೊತೆಗೆ ಎಲ್ಲಕ್ಕೂ ಅವನೇ ಕಾರಣ ಎಂದು ತಿಳಿಯಲಾಗಿದೆ. ಶಿವನು ಲೋಕಸಂಚಾರಿ, ನೀಲಕಂಠ ಹಾಗೆಯೇ ಕಷ್ಟದಲ್ಲಿರುವವರನ್ನು ಕಾಪಾಡುವವನು ಎಂಬ ನಂಬಿಕೆಯು ಇದೆ. ಈ ಹಿನ್ನೆಲೆಯಲ್ಲಿ ಇಲ್ಲಿ ಶಿವನ ಮಡದಿಯಾದ ಗೌರಿ ಅಥವಾ ಪಾರ್ವತಿಯು ಶಿವನ ಬಗೆಗೆ ಇಟ್ಟುಕೊಂಡಿರಬಹುದಾದ ಭಾವನೆಗಳನ್ನು ವೈದೇಹಿ ಅವರು ಮಹಿಳಾ ಹಿನ್ನೆಲೆಯಲ್ಲಿ ನಿಂತು ಅಭಿವ್ಯಕ್ತಪಡಿಸುತ್ತಿದ್ದಾರೆ. ಶಿವನು ಲೋಕಕ್ಕೆ ಅಥವಾ ಜಗತ್ತಿಗೆ ಏನೆಲ್ಲಾ ಆಗಿದ್ದರೂ ಕೂಡ ಗೌರಿಗೆ ಅವನು

ಗಂಡ. ಅಲ್ಲದೇ ಶಿವ ತನ್ನನ್ನು ತಾನು ಅರ್ಧ ನಾರೀಶ್ವರ ಎಂದೆಲ್ಲಾ ಕರೆದುಕೊಳ್ಳುತ್ತಾನೆ. ಹೀಗಿರುವಾಗ ಮೂರು ಲೋಕಗಳನ್ನು ಕಾಪಾಡುವ ನೈತಿಕ ಹೊಣೆಯನ್ನು ಹೊತ್ತುಕೊಂಡಿರುವ ಅವನು ಗೌರಿಗೂ ಕೂಡ ಸಮಯವನ್ನು ನೀಡಬೇಕಲ್ಲವೇ? ಎಂಬ ಅಂಶವನ್ನು ಮುನ್ನೆಲೆಯಾಗಿ ಇಟ್ಟುಕೊಂಡು ವೈದೇಹಿ ಅವರು ಕವಿತೆಯನ್ನು ರಚಿಸಿದ್ದಾರೆ. ಪುರುಷ ಪ್ರಧಾನ ನೆಲೆಯು ಕೇವಲ ಮಾನವರನ್ನು ಮಾತ್ರ ಕಾಡದೇ ಅದು ದೇವತೆಗಳನ್ನು ಕೂಡ ಪ್ರಧಾನ ಧೋರಣೆಗೆ ತೆಗೆದುಕೊಂಡು ನಾನೇ ಶ್ರೇಷ್ಠ ಎನ್ನುವ ಮನೋಭಾವನೆಯನ್ನು ಉಂಟು ಮಾಡುವಂತೆ ಕಾಣುತ್ತದೆ ಎಂದು ಅರ್ಥೈಸುತ್ತಿದ್ದಾರೆ. ಶಿವನು ಮೂಲತಃ ವಿರಾಗಿ. ಅವನು ವಿವಾಹವನ್ನೇ ನಿರಾಕರಿಸಿ ಕೊನೆಗೆ ಗೌರಿಯ ಹಠಕ್ಕ ಕಟುಬಿದ್ದು ಅವಳನ್ನು ವಿವಾಹವನ್ನಾಗಿ ಸಂಸಾರವನ್ನು ರೂಪಿಸಿಕೊಂಡಿದ್ದಾನೆ. ಹೀಗಾಗಿ ಅವನ ವಿವಾಹದ ಮೇಲಾಗಲಿ ಅಥವಾ ಸಾಂಸಾರಿಕ ಜೀವನದ ಮೇಲೆ ಯಾವುದೇ ಮೋಹ ಇರಲಿಲ್ಲ. ಆದರೆ ಮದುವೆಯಾದ ನಂತರ ಅವನು ಶುದ್ಧ ಗೌರಿಯ ಪತಿಯಾಗಿ ಜೊತೆಜೊತೆಗೆ ಲೋಕ ಕಲ್ಯಾಣವನ್ನು ಮಾಡುವ ಸರ್ವಶಕ್ತನಾಗಿ ರೂಪುಗೊಂಡಿದ್ದಾನೆ. ಈ ಹಿನ್ನೆಲೆಯಲ್ಲಿ ಹೀಗೆ ತ್ರಿಲೋಕವನ್ನು ಸಂಚರಿಸಿಕೊಂಡು ಯಾವಾಗಲೋ ಒಮ್ಮೊಮ್ಮೆ ಮನೆಗೆ ಬರುವ ಶಿವನನ್ನು ಗೌರಿಯು ಆದರಿಸುವ ಪರಿಯನ್ನು ಈ ಕಾವ್ಯವು ಮನಃಪೂರ್ವಕವಾಗಿ ಕಟ್ಟಿಕೊಡುತ್ತದೆ. ಅಲ್ಲದೇ ಪೌರಾಣಿಕ ಪಾತ್ರವಾದ ಗೌರಿಗೆ ಆ ಕಾಲದಲ್ಲಿ ಮಹಿಳಾ ದೃಷ್ಟಿಕೋನದಿಂದ ಇಷ್ಟೆಲ್ಲಾ ಸಮಸ್ಯೆಗಳಿರುವಾಗ ಇಂದಿನ ಆಧುನಿಕ ಹೆಣ್ಣಿಗೆ ಇನ್ನೂ ನೂರಾರು ಸಮಸ್ಯೆಗಳು ಕಾಡದೆ ಇರದು ಎನ್ನುವುದನ್ನು ಸೂಚ್ಯವಾಗಿ ಕಟ್ಟಿಕೊಟ್ಟಿದ್ದಾರೆ.

ಶಿವನೆಂದರೆ ಪರಂಪರೆಯಲ್ಲಿ ಎಲ್ಲರಿಗೂ ಅಚ್ಚುಮೆಚ್ಚು. ಒಲಿದು ಬಂದವರನ್ನು, ಕಷ್ಟ ಎಂದವರನ್ನು ಹಾಗೂ ಭಕ್ತರನ್ನು ಎಂದೂ ತಿರಸ್ಕರಿಸಿದವನಲ್ಲ. ಹೀಗಾಗಿ ಅವನ ಮಡದಿಯಾದ ಗೌರಿಗೆ ಶಿವನನ್ನು ತನ್ನ ಬಳಿ ಉಳಿಸಿಕೊಳ್ಳಲು ಅವನನ್ನು ಸಂಭಾಳಿದಲು ನಿರಂತರವಾಗಿ ಹೋರಾಟ ನಡೆದೇ ಇರುತ್ತದೆ. ಈ ಸವಾಲು ಗೌರಿಯದ್ದು ಮಾತ್ರವಲ್ಲ; ಬದಲಾಗಿ ಆಧುನಿಕ ಹೆಣ್ಣಿನದ್ದು ಕೂಡ ಎನ್ನುವುದನ್ನು ಅಲ್ಲಗಳೆಯಲಾಗುವುದಿಲ್ಲ. ಕುಟುಂಬದ ನಿರ್ವಹಣೆಗೋ ಅಥವಾ ಅನಿವಾರ್ಯಕ್ಕೋ, ಅಗತ್ಯಕ್ಕೋ ಪುರುಷನನ್ನು ಸದಾ ಉಳಿಸಿಕೊಳ್ಳಲೂ ಹೆಣ್ಣು ಹೋರಾಡಲೇಬೇಕಾಗಿದೆ. ಕವಿತೆಯಲ್ಲಿ ಶಿವನ ಇಡೀ ವ್ಯಕ್ತಿತ್ವವನ್ನು ಹಾಗೂ ಅವನ ಬದುಕನ್ನು ಪ್ರಶ್ನೆ ಮಾಡುತ್ತಲೇ ಪೌರಾಣಿಕ ಹಾಗೂ ಆಧುನಿಕ ಹೆಣ್ಣಿನ ಜೀವನದ ಅಂತರಗಳನ್ನು ವಿವರಿಸುತ್ತಲೇ ಅದನ್ನು ವ್ಯಾಖ್ಯಾನಿಸುವ ಪ್ರಯತ್ನವನ್ನು ಮಾಡಲಾಗಿದೆ.

ಅಭಿಷೇಕ ಮಾಡಿದಳು ಗೌರಿ
ತ್ರಿಲೋಕ ಸಂಚಾರಿಗೆ
ಕರೆದೊಯ್ದಳು ಶಿವನ
ಶುಭ್ರಸ್ನಾನಕ್ಕೆ

ಕವಿತೆಯ ಮೊದಲನೇ ಭಾಗದಲ್ಲಿ ಈಗಾಗಲೇ ತಿಳಿಸಿರುವಂತೆ ಶಿವನು ತ್ರಿಲೋಕ ಸಂಚಾರಿ. ಮೂರು ಲೋಕಗಳನ್ನು ಕಾಪಾಡುವ ಹೊಣೆಗಾರಿಕೆ ಶಿವನ ಮೇಲಿದೆ. ಹೀಗಾಗಿ ಅವನು ಲೋಕಗಳನ್ನೆಲ್ಲ ಸುತ್ತಿಕೊಂಡು ಮನೆಗೆ ಬಂದಾಗ ಗೌರಿಯು ಅವನನ್ನು ತುಂಬ ಪ್ರೀತಿಯಿಂದ ಬರಮಾಡಿಕೊಳ್ಳುತ್ತಾಳೆ. ಹೀಗೆ ಬಂದಿರುವ ಶಿವ ಅಲ್ಲೆಲ್ಲ ಸುತ್ತಾಡಿದ್ದರಿಂದ ಅವನನ್ನು ಶುಭ್ರವಾಗಿಡಲೆಂದು ಸ್ನಾನವನ್ನೇ ಗೌರಿಯು ಅಭಿಷೇಕ ಮಾಡಿದಂತೆ ಮಾಡಲು ತಯಾರಾಗುತ್ತಾಳೆ.

ಮೂಗಾಲು ಮಣೆಯಲ್ಲಿ ಮೂಗಣ್ಣಿನವನ
ಕುಳ್ಳಿರಿಸಿ ಪ್ರೀತಿಯೊತ್ತಿ
ಮೂಜಗದಲೋಡಾಡಿ ಎಂತು ದಣಿದವೋ ಪಾದ
ಎಂಬ ನೆಪತುದಿಯಿಂದ ಧೂಳನೆತ್ತಿ
ಯಾರ ಮನೆ ಬೀದಿಯದು ಪತ್ತೆ ಹಚ್ಚಿ
ನಗುವ ನಟರಾಜನನು ಕರೆವಳೋ ಸ್ನಾನಕ್ಕೆ
ದುಃಖ ಹತ್ತಿಕ್ಕಿ
ಮುಗಿಯಿತೇ ಬೇಟೆ? ಪ್ರಶ್ನೆ ಚುಚ್ಚಿ

ಪದ್ಯದ ಎರಡನೇ ಭಾಗದಲ್ಲಿ ಮೂರು ಲೋಕಗಳನ್ನು ಓಡಾಡಿರುವ ಶಿವನಿಗೆ ಎಷ್ಟು ಕಾಲುಗಳು ಆಯಾಸವಾಗಿರುವವೋ ಎಂದು ಗೌರಿಯು ಅವನಿಗೆ ಪ್ರೀತಿಯಿಂದ ಕಾಲನ್ನು ಒತ್ತುತ್ತಾಳೆ. ಹೀಗೆ ಅವಳು ಕಾಲನ್ನು ಒತ್ತುತ್ತಿರುವಾಗಲೇ ಅವಳಿಗೆ ಶಿವನ ಬಗೆಗೆ ಸಣ್ಣ ಅನುಮಾನ ಇಲ್ಲವೇ ಸಂಶಯವೊಂದು ಅವಳನ್ನು ಕಾಡಲು ಶುರುವಾಗುತ್ತದೆ. ಶಿವ ಹೀಗೆಲ್ಲಾ ಓಡಾಡಿಕೊಂಡು ಬಂದ ನಂತರದಲ್ಲಿ ಅವನು ಯಾರ ಮನೆಯ ಬೀದಿಯನ್ನಾದರೂ ಹೊಕ್ಕಿರಬಹುದೇ? ಎಂಬ ಸಂಶಯದಿಂದಲೇ ಅವನ ಪಾದದಲ್ಲಿರುವ ಧೂಳನ್ನು

ತೆಗೆದುಕೊಂಡು ಅವನನ್ನು ಅನುಮಾನಿಸುತ್ತಾಳೆ. ಇಲ್ಲಿ ನಮಗೆ ಅರಿವಾಗುವುದು ಏನೆಂದರೆ ಶಿವ ಹಾಗೂ ಗೌರಿ ಈರ್ವರೂ ಕೂಡ ಪುರಾಣದಲ್ಲಿ ಕಂಡುಬರುವ ದೇವಾನುದೇವತೆಗಳು. ಇಂತಹ ದೇವತೆಗಳಲ್ಲೂ ಕೂಡ ಈ ರೀತಿಯಾದಂತಹ ಮನುಷ್ಯ ಸಹಜವಾದ ಅನುಮಾನಗಳು ಇವೆ ಎನ್ನುವುದೇ ಇಲ್ಲಿನ ಕವಿತೆಯ ವೈಶಿಷ್ಟ್ಯವಾಗಿದೆ. ಜೊತೆಗೆ ವೈದೇಹಿ ಇಲ್ಲಿ ಪ್ರತಿಪಾದಿಸಲು ಹೊರಟಿರುವುದು ಕೂಡ ಹೆಣ್ಣು ಆದಿಯಿಂದಲೂ ಕೂಡ ಪುರುಷನ ಅಧೀನದಲ್ಲಿಯೇ ಇರಬೇಕಾದ ಸ್ಥಿತಿಯನ್ನು ಕುರಿತು ವ್ಯಕ್ತಪಡಿಸಿದ್ದಾರೆ. ಇಲ್ಲಿ ಗೌರಿಗೆ ಶಿವನ ಮೇಲಿರುವ ಸಂಶಯವನ್ನು, ಅವಳ ಒಳಗಿನ ಸಂಕಟ–ನೋವುಗಳನ್ನು ಇಟ್ಟುಕೊಂಡಿದ್ದರೂ ಸಹ ಅವನನ್ನು ತುಂಬು ಪ್ರೀತಿಯಿಂದಲೇ ಮೂರು ಕಾಲಿನ ಮಣೆಯಲ್ಲಿ ಸ್ನಾನ ಮಾಡಿಸಲೆಂದು ಕರೆದೊಯ್ಯುತ್ತಾಳೆ. ಹಾಗೆಯೇ ಸ್ನಾನಕ್ಕೆ ಅಣಿಗೊಳಿಸಿ ಅವಳ ಮನಸ್ಸಿನಲ್ಲಿರುವ ಅನುಮಾನವನ್ನು ಪ್ರಶ್ನೆಗಳ ಮೂಲಕ ಅವನ ಮುಂದಿಡುತ್ತಾಳೆ. ಮುಗಿಯಿತೆ ಬೇಟೆ? ಎಂದು ಶಿವನಿಗೆ ಪ್ರಶ್ನೆಯನ್ನು ಕೇಳುತ್ತಲೇ ತನ್ನ ಒಳಗಿನ ನೋವು ಬೇಗುದಿಗಳನ್ನು ತನ್ನ ಪ್ರಶ್ನೆಯ ಮೂಲಕ ಹೊರಹಾಕುತ್ತಾಳೆ. ಇಲ್ಲಿ ಮುಗಿಯಿತೆ ಬೇಟೆ ಎನ್ನುವಲ್ಲಿ ಗೌರಿಯು ಶಿವನು ಯಾವಾಗಲೂ ಲೋಕ ಕಲ್ಯಾಣ ಎನ್ನುವ ನೆಪದಲ್ಲಿ ಗೌರಿಯಿಂದ ದೂರ ಹೋಗುತ್ತಿರುವುದನ್ನು ನೆನೆದು ಯಾರದೋ ಬೀದಿಯಲ್ಲಿ ಅವನು ಓಡಾಡಿಕೊಂಡು ಬಂದಿರಬಹುದೆಂಬ ಅನುಮಾನದಿಂದ ಇಂತಹ ಪ್ರಶ್ನೆಗಳನ್ನು ಕೇಳುತ್ತಾಳೆ.

ಇದೋ ಈ ತಂಬಿಗೆ ನೀರು ಗಂಗೆಯವತಾರಕ್ಕೆ
ಇದು ಇಗೋ ಆ ಮಣಿಕರ್ಣಿಕೆಗೆ
ಮಿಂದ ನದಿ ನೆನಪಿಗೆ ಒಂದೊಂದು ಬಿಂದಿಗೆ ನೀರು
ಕಡೆಯದಿಗೋ ನನ್ನ ಅನುದಿನದ ಬಡ ಕನಲು
ಎಂದಾಗ ನೀರೊಳಗೆ ಗೌರಿ ಕಂಬನಿ ಬಿಂದು
ಮಿಸಕ್ಕನೆ ಬೆರೆತು ಬಿಸಿಯಾಗಲು
'ಆಯ್' ಎಂದು ಶಿವ ಬೆವರಿ
'ನನ್ನನೇನೆಂದುಕೊಂಡೆ? ನಿನ್ನ ಬಿಟ್ಟರೆ ಶುದ್ಧ ಬೈರಾಗಿ'
'ಈ ಮಾತಿಗೆ ಶಿವನೇ ನಾನೆಷ್ಟನೆಯ ನಾರಿ?'
ಎನ್ನುತ್ತ ಮೃದು ಚಿವುಟಿ ಮೀಸುವಳು ನಮ್ಮ ಗೌರಿ.

ಇನ್ನೂ ಮೂರನೇ ಭಾಗದಲ್ಲಿ ಗೌರಿಯು ಶಿವನನ್ನು ಮಣೆಯ ಮೇಲಿನ ಕುಳ್ಳಿರಿಸಿ ಅಭ್ಯಂಜನವನ್ನು ಮಾಡಿಸಲು ಅಣಿಯಾಗುತ್ತಿದ್ದಾಳೆ. ತನ್ನೊಳಗಿನ ಶಿವನ ಬಗೆಗಿನ ಅನುಮಾನ, ನೋವು, ಸಂಕಟಗಳನ್ನು ಒಳಗೆ ಇಟ್ಟುಕೊಂಡು ಅವನಿಗೆ ನೀರನ್ನು ಹಾಕುತ್ತಾಳೆ. ಹೀಗೆ ನೀರನ್ನು ಅವನ ಮೇಲೆ ಹಾಕುವಾಗ ಮೊದಲನೆಯ ತಂಬಿಗೆ ನೀರು ಗಂಗೆಯ ಅವತಾರಕ್ಕೆ ಎನ್ನುತ್ತಾಳೆ. ಪುರಾಣದಲ್ಲಿ ತಿಳಿಸಿರುವಂತೆ ಭಗೀರಥನು ಗಂಗಾ ಮಾತೆಯನ್ನು ಸ್ವರ್ಗದಿಂದ ಇಳಿಸಲು ತುಂಬಾ ಕಷ್ಟಗಳನ್ನು ಪಡುತ್ತಾನೆ. ಆಗ ಗಂಗೆಯು ಅವನಿಗೆ ಒಲಿದು ಸ್ವರ್ಗದಿಂದ ಭೂಮಿಗೆ ಇಳಿಯುತ್ತಾಳೆ. ಅವಳ ಬಲವನ್ನು ತಡೆಯಲಾಗದಿದ್ದಾಗ ಭಗೀರಥನಿಗೆ ಇದು ಶಿವನಿಂದ ಮಾತ್ರ ಇದನ್ನು ತಡೆಯಲು ಸಾಧ್ಯ. ಅವನ ಕೂದಲಿನ ಮೂಲಕ ನೀರು ಹರಿದಾಗ ಪ್ರವಾಹವು ಕಡಿಮೆಯಾಗುತ್ತದೆ ಎಂದು ಗಂಗೆಯು ತಿಳಿಸುತ್ತಾಳೆ. ಆನಂತರ ಶಿವನು ಗಂಗೆಯನ್ನು ತನ್ನ ಜಟೆಯಲ್ಲಿಯೇ ಕಟ್ಟಿಕೊಳ್ಳುತ್ತಾಳೆ. ಈ ಹಿನ್ನಲೆಯಿಂದ ಗೌರಿಯು ಶಿವನಿಗೆ ಮೊದಲನೇ ತಂಬಿಗೆ ನೀರನ್ನು ಅತ್ಯಂತ ದುಃಖತಪ್ತತೆಯಿಂದ ಭಾರವಾದ ಹೃದಯದಿಂದ ಹಾಕಿದ್ದಾಳೆ.

ಇನ್ನು ಎರಡನೆಯ ತಂಬಿಗೆಯ ನೀರನ್ನು ಮಣಿಕರ್ಣಿಕೆಗೆ ಎಂದು ಹಾಕುತ್ತಾಳೆ. ಮಹಾದೇವನು ಶಿವನಾಗಿ ಪರಿಗಣಿಸಲ್ಪಟ್ಟ ಮಹತ್ವದ ತತ್ತ್ವ ಮಣಿಕರ್ಣಿಕಾವತಾರದಲ್ಲಿ ಪ್ರತಿಬಿಂಬಿಸುತ್ತಾನೆ. ಒಂದು ದಿನ, ಶಿವನು ತಾನು ಭೂಮಿಯಲ್ಲಿ ತನ್ನ ಪತ್ನಿ ಪಾರ್ವತಿಯನ್ನು ಜೊತೆಗೂಡಿ ಸುತ್ತಿಕೊಂಡು ವಿವಿಧ ಪವಿತ್ರ ಸ್ಥಳಗಳನ್ನು ಭೇಟಿ ಮಾಡಲು ನಿರ್ಧರಿಸಿದರು. ಅವರು ತಮ್ಮ ಧರ್ಮಪಥವನ್ನು ಅನುಸರಿಸಿ, ಶಿವ ಭಕ್ತರಿಗೆ ಆಧ್ಯಾತ್ಮಿಕ ಮಾರ್ಗದರ್ಶನವನ್ನು ನೀಡಲು ನಿರ್ಧರಿಸಿದರು. ಶಿವ ಮತ್ತು ಪಾರ್ವತಿ ಕಾಶಿಯ ಪ್ರಮುಖ ತೀರ್ಥಸ್ಥಾನವಾದ ಮಣಿಕರ್ಣಿಕಾ ಮೇಲೆ ಆಗಮಿಸಿದಾಗ, ಅವರು ಒಂದು ದಿವ್ಯ ಮಹತ್ವದ ಪರಿಶುದ್ಧ ಜಲದಲ್ಲಿ ತೋರುತ್ತಿದ್ದಾರೆ. ಈ ಪವಿತ್ರ ಸ್ಥಳದಲ್ಲಿ, ಶಿವನು ಒಂದು ಮಹತ್ವಪೂರ್ಣ ತೀರ್ಥಸ್ಥಾನವನ್ನು ಹೊಂದಿದ ಸಮಯದಲ್ಲಿ, ಪಾರ್ವತಿ ತನ್ನ ಶಕ್ತಿಯನ್ನು ಆಶೀರ್ವದಿಸಲು ಪ್ರಾರ್ಥಿಸುತ್ತಿದ್ದಾಳೆ. ಹೀಗೆ ನೀರನ್ನು ಶಿವನಿಗೆ ಹಾಕುತ್ತಾ ಒಂದೊಂದು ನದಿ ನೆನಪಿಗೆ ಇಗೋ ಒಂದೊಂದು ತಂಬಿಗೆ ನೀರು ಎಂದು ಹಾಕುತ್ತಾಳೆ.

ಕೊನೆಯದಾಗಿ ಇಷ್ಟು ದಿನಗಳ ಕಾಲ ಅವಳು ಕನವರಿಸುತ್ತಿದ್ದ ಪ್ರತಿ ದಿನದ ಕನಸೆಂದರೆ ಅದು ನಿನಗೆ ಹೀಗೆ ಸ್ನಾನ ಮಾಡಿಸಬೇಕು ಎಂಬುದು ಎನ್ನುತ್ತಾ, ಕೊನೆಯ ತಂಬಿಗೆ ನೀರನ್ನು ಕೈಯಲ್ಲಿ ಹಿಡಿದಾಗ ಅವಳ ಒಳಗಿನ ಶಿವನ ಬಗೆಗಿನ ಅಸಹನೆಯು ಒಡೆದು

ದುಃಖವನ್ನು ತಡೆದಳಾದರೂ ಒಂದು ಕಣ್ಣೀರ ಹನಿಯು ಆ ತಂಬಿಗೆ ನೀರಿಗೆ ಬೀಳುತ್ತದೆ. ಹೀಗೆ ಬಿದ್ದಾಗ ಅಲ್ಲಿದ್ದ ನೀರು ಸುಡುವ ಬಿಸಿನೀರಾಗಿ ಶಿವನ ಮೇಲೆ ಬಿದ್ದಾಗ ಅವನು ಇದರಿಂದ ಬೆವತುಕೊಂಡನು. ಹೀಗೆ ಬೆದರಿದ ಶಿವನು ಗೌರಿಯು ಶಿವನ ಮೇಲೆ ಹೇರಿದ ಆಪಾದನೆಗಳನ್ನು ಸಾರಾಸಗಟಾಗಿ ತಳ್ಳಿಹಾಕುವ ಪ್ರಯತ್ನವನ್ನು ಮಾಡುತ್ತಾನೆ. ಗೌರಿಗೆ ಮತ್ತೆ ಶಿವನೇ ಪ್ರಶ್ನೆಯನ್ನು ಕೇಳುತ್ತಾ ನನ್ನನ್ನು ಈ ರೀತಿ ಆಪಾದಿಸುತ್ತಿರುವೆಯೆಲ್ಲಾ? ನನ್ನನ್ನು ಏನೆಂದು ತಿಳಿದಿರುವೆ ಎನ್ನುತ್ತಾ ನಾನು ನಿನ್ನನ್ನು ಬಿಟ್ಟರೆ ನಿಜವಾಗಿಯೂ ಶುದ್ಧ ಸಂನ್ಯಾಸಿ ಎಂಬುದಾಗಿ ವಿವರಣೆಯನ್ನು ನೀಡುತ್ತಾನೆ. ಈ ಹಂತದಲ್ಲಿ ಗೌರಿಯು ಇದಕ್ಕೆ ಪ್ರತ್ಯುತ್ತರವನ್ನು ನೀಡುತ್ತಾ ಶಿವನಿಗೆ ಬಂದಿರುವ ಕೋಪವನ್ನು ಪರಿಗಣಿಸಿ ಅವಳ ಒಳಗಿನ ನೋವನ್ನು ಮತ್ತೆ ಹೊರಹಾಕುವ ಪ್ರಯತ್ನವನ್ನು ಮಾಡುತ್ತಾಳೆ. ಅಂದರೆ ಗೌರಿಯು ತನ್ನೊಳಗಿನ ನೋವನ್ನು ಈ ಮೂಲಕ ಶಿವನ ಮುಂದೆ ಪ್ರತಿಪಾದಿಸುವ ಧೈರ್ಯವನ್ನು ವೈದೇಹಿ ಅವರು ಕವಿತೆಯಲ್ಲಿ ಮೂಡಿಸಿದ್ದಾರೆ. ಶಿವನ ಉತ್ತರದಿಂದ ಗೌರಿಯು ನಾನು ನಿನಗೆ ಎಷ್ಟನೆಯ ನಾರಿ? ಎಂದು ಮತ್ತೊಮ್ಮೆ ಶಿವನ ನಡವಳಿಕೆಯನ್ನು ವ್ಯಂಗ್ಯದ ಮೂಲಕ ಪ್ರಶ್ನಿಸುತ್ತಾಳೆ. ಆದರೆ ಅದನ್ನು ಗಟ್ಟಿಯಾಗಿ ನಿಂತು ಶಿವನಿಗೆ ಪ್ರಶ್ನಿಸದೆ ಆ ಪ್ರಶ್ನೆಯನ್ನು ತಮಾಷೆಯಾಗಿ ಕೇಳಿದೆ ಎನ್ನುವಂತೆ ಅವನನು ಚಿವುಟುತ್ತಾ ಮಾತನ್ನು ನಿಲ್ಲಿಸುತ್ತಾಳೆ. ಇಲ್ಲಿ ವೈದೇಹಿ ಅವರು ಮಹಿಳಾ ಪರವಾದ ಸಹಜ ಪ್ರಶ್ನೆಯನ್ನು ಎತ್ತಿದರೂ ಕೂಡ ಇಲ್ಲಿ ಅವರಿಗೆ ಆ ಸಮಸ್ಯೆಯನ್ನು ಇನ್ನು ಮುಂದುವರೆಸಿದರೆ ಸಂಬಂಧವು ಹಾಳಾಗಬಹುದು ಎನ್ನುವ ಅಂಶವಿದ್ದಂತೆ ಕಾಣುತ್ತದೆ.

ಬೈರಾಗಿ ಬೂದಿ ತೊಳೆಯುತ್ತ ಹಚ್ಚಗೆ ನೋಡುವಳು
ಮೆತ್ತಗೆ ಮೈ ಒರೆಸಿ ತಂಬಾಲು ಕುಡಿಸಿ
ತೊಡೆ ಮೆತ್ತೆಯನು ನೀಡಿ ಕೋರುವಳು
ಶಿವ ಶಿವಾ!
ಎಲ್ಲ ನದಿಗಳ ನೆನೆದು ಮಲಗು ದೇವ!

ಹೀಗೆ ಶಿವನ ಬಗೆಗಿನ ಅಸಹನೆಗಳನ್ನು ಗೌರಿಯು ತನ್ನ ಇಡೀ ಸ್ನಾನವನ್ನು ಮಾಡಿಸುವ ಪ್ರಕ್ರಿಯೆಯಲ್ಲಿ ತೋರಿಸುತ್ತಾ ಮುಂದಿನ ಭಾಗದಲ್ಲಿ ಮೂರು ಲೋಕಗಳನ್ನು ತಿರುಗಾಡಿ ಬಂದಿರುವ ಅವನ ಅಶುಭ್ರವಾದ ದೇಹವನ್ನು ಸ್ನಾನ ಮಾಡಿಸಿದ ನಂತರ ಹಾಗೆಯೇ ನೋಡುತ್ತಾ ಅವಳು ನಿಲ್ಲುತ್ತಾಳೆ. ಸ್ಮಶಾನ ವಾಸಿಯಾದ ಅವನ ಬೂದಿಯಾಗಿದ್ದ ಮೈಯನ್ನು ಚೆನ್ನಾಗಿ ತೊಳೆದು ಅವನಿಗೆ ದೇಹಕ್ಕೆ ಆಯಾಸವಾಗಿದೆಯೇನೋ ಎಂಬಂತೆ ಮೆತ್ತನೆ ಅವನ ಮೈಯನ್ನು ಒರೆಸುತ್ತಾಳೆ. ನಂತರ ದಣಿದು ಬಂದಿರುವ ಅವನಿಗೆ ತಂಪಾದ ಹಾಲನ್ನು ಕುಡಿಸಿ ಅವಳ ತೊಡೆಮೆತ್ತೆಯನು ಮಲಗಲು ನೀಡುತ್ತಾಳೆ. ಹೀಗೆ ನೀಡುತ್ತಾ ಶಿವನನ್ನು ಆರೈಕೆ ಮಾಡಿದರೂ ಕೂಡ ತನ್ನ ಗಂಡ ತನ್ನನ್ನು ಬಿಟ್ಟು ಬೇರೆ ನದಿಗಳನ್ನೆಲ್ಲಾ ನೆಚ್ಚಿಕೊಂಡಿದ್ದಾನೆ ಎನ್ನುವ ಅನುಮಾನ ಮಾತ್ರ ಅವಳನ್ನು ಕಾಡುತ್ತಿದೆ. ಹೀಗಾಗಿ ಅವನಿಗೆ ಮತ್ತೆ ತನ್ನ ಬೇಡಿಕೆಯನ್ನು ವಿನಂತಿಸಿಕೊಳ್ಳುತ್ತಾಳೆ. ಅದೇನೆಂದರೆ ಎಲ್ಲ ನದಿಗಳನ್ನು ಮಲಗಿ ನೀನು ನೆನಪು ಮಾಡಿಕೋ ಎಂದು ಬೇಡಿಕೊಳ್ಳುವ ವಿನಂತಿಯನ್ನು ನೋಡಿದಾಗ ಗೌರಿಗೆ ಇಲ್ಲಿ ಅಸಹಾಯಕತೆ ಇದೆ. ಏಕೆಂದರೆ ಅವಳ ಪರಿಸ್ಥಿತಿ ಇಂದು, ನಿನ್ನೆಯದಲ್ಲ. ತನಗಂತೂ ಈ ರೀತಿ ಏಕಾಂತತೆ ಇದೆ. ತನ್ನಂತೆ ಇತರೆ ನದಿಗಳಿಗೂ ಆಗಬಾರದು ಎನ್ನುವ ಅವಳ ಆಲೋಚನೆಯು ಎಲ್ಲಾ ಹೆಣ್ಣುಗಳ ಪರಿಸ್ಥಿತಿಯನ್ನು ಕುರಿತು ತಿಳಿಸುತ್ತಿದೆ.

ನುಡಿ ರೇಶಿಮೆಯಡಿ ನಂಜು ನುಂಗಿದ ಕಿರಾತ
ಹೃದಯದಲಿ ಕಚಗುಳಿಯ ಹೂವು ಹರಿಗೋಲು
ಕಚಗುಳಿಯ ಹರಿಗೋಲು ಹರನ ಹತ್ತಿಸಿಕೊಂಡು
ಮತ್ತೆ ಸಾಗಿತು ಗೌರಿಯಿಂದ ದೂರ

ಹೀಗೆ ಶಿವನ ಬಗೆಗೆ ಗೌರಿಗೆ ಏನೆಲ್ಲಾ ಅಸಮಾಧಾನಗಳಿದ್ದಾಗಲೂ ಕೂಡ ಅವನ ಬಗೆಗೆ ಅವಳಿಗೆ ಗೌರವವಿದೆ. ಮಾತಿನಲ್ಲಿ ಮೋಡಿ ಮಾಡುವ ಶಕ್ತಿ ಇರುವ ಶಿವ ಸಾಮಾನ್ಯವಾದವನಲ್ಲ. ಅವನು ಲೋಕದ ಕಾರಣಕ್ಕಾಗಿ ವಿಷವನ್ನು ಕುಡಿದವ ಎನ್ನುತ್ತಾ ಅವನು ಹೀಗೆ ಯಾವಾಗಲೋ ಒಮ್ಮೆ ಬರುತ್ತಾನೆ ಎಂದಾಗ ಹೃದಯದಲ್ಲಿ ಸಂತೋಷವುಂಟಾಗುತ್ತದೆ. ಈ ರೀತಿಯ ಸಂತೋಷದಿಂದ ಇರುವಾಗಲೇ ಆ ಆನಂದವನ್ನು ಕಿತ್ತುಕೊಂಡು ಹೋಗಲು ಮತ್ತಾವುದೋ ಸಮಸ್ಯೆಗಳು, ಜನರ ಸಂಕಷ್ಟಗಳು ಶಿವಾ ಶಿವಾ ಎಂದು ಕೇಳಿಕೊಂಡೊಡನೆ ಶಿವನು ಗೌರಿಯವನ್ನು ಏಕಾಂಗಿಯಾಗಿ ಬಿಟ್ಟು ಮತ್ತೆ ಲೋಕಕಲ್ಯಾಣಕ್ಕಾಗಿ ಇಲ್ಲವೇ ಜನರ ಕಷ್ಟಗಳಿಗೆ ಸ್ಪಂದಿಸುವುದಕ್ಕಾಗಿ ಹೊರಡುತ್ತಾನೆ.

ಶಿವನಿದ್ದೂ ಶಿವನಿಲ್ಲದಂಥ ಚೋದ್ಯಗಳೆಲ್ಲ
ಹೊಸತೇನು ಶಿವಕಾಮಿಗೆ?

ಮಿಸುಕಾಡದೇ ಕುಳಿತು ತಲ್ಲಣವ ತಡೆಯುವ
ಆರ್ದ್ರ ಗರ್ವದ ಹುಡುಗಿ ನಮ್ಮ ಗೌರಿ

ಹೀಗೆಲ್ಲಾ ಶಿವ ಯಾವಾಗಲೋ ಒಮ್ಮೆ ಬರುತ್ತಾನೆ ಮತ್ತು ಇನ್ನಾವುದೋ ಲೋಕದಲ್ಲಿ ಯಾರೋ ಜನರಿಗೆ ಕಷ್ಟವಾಗಿದೆ ಇಲ್ಲವೇ ಭಕ್ತರು ಪ್ರಾರ್ಥನೆ ಮಾಡುತ್ತಿದ್ದಾರೆ ಎಂದಾದರೆ ಮತ್ತೆ ಗೌರಿಯನ್ನು ಬಿಟ್ಟು ಹೊರಡುತ್ತಾನೆ. ಈ ರೀತಿಯ ವಿಸ್ಮಯಗಳೆಲ್ಲಾ ಗೌರಿಗೆ ಹೊಸದಲ್ಲ. ಏಕೆಂದರೆ ನಾವು ಪುರಾಣ ಕತೆಗಳಲ್ಲಿ ಕೇಳಿದಂತೆ ಶಿವ ಮೋಡಿಯನ್ನು ಮಾಡಬಲ್ಲವನು. ಹಾಗೆಯೇ ಅವನಿಗೆ ಅಸಾಧ್ಯವಾದುದು ಯಾವುದು ಇಲ್ಲ ಎನ್ನುವ ಕತೆಗಳೆಲ್ಲ ಇದನ್ನೇ ಹೇಳುತ್ತವೆ. ಅಂತೆಯೇ ಈ ರೀತಿ ಗೌರಿಯನ್ನು ಒಬ್ಬಳನ್ನೇ ಶಿವ ಬಿಟ್ಟು ಹೊರಟಾಗ ಗೌರಿಗೆ ತಾನು ಮಹಿಳೆ ಒಬ್ಬಂಟಿಯಾಗಿ ಇರಬಲ್ಲನೆ? ಎಂಬ ಯಾವುದೇ ಅಂಜಿಕೆ ಮತ್ತು ಆತಂಕಗಳಿಲ್ಲ. ಏಕೆಂದರೆ ಶಿವನ ಈ ವಿಸ್ಮಯಗಳನ್ನು ಗೌರಿಯು ಅನಾದಿ ಕಾಲದಿಂದಲೂ ನೋಡಿಕೊಂಡು ಅದರ ಜೊತೆಯಲ್ಲೆ ಹೆಣಗಾಡುತ್ತಾ ಬಂದಿದ್ದಾಳೆ. ಈ ನೆಲೆಯಲ್ಲಿ ಅವಳಿಗೆ ಶಿವ ಇದ್ದರೂ ಇಲ್ಲದಿದ್ದರೂ ತನ್ನ ಬದುಕನ್ನು ತಾನು ಹೇಗೆ ಬದುಕಬೇಕು ಎಂಬ ಆತ್ಮಸ್ಥೈರ್ಯ ಬಂದಾಗಿದೆ. ಇಂತಹ ಗಾಂಭೀರ್ಯವಾದ ಸ್ವಾಭಿಮಾನದ ಬದುಕನ್ನು ಗೌರಿಯು ಬದುಕುವುದನ್ನು ಗೌರಿಯು ಕಲಿತಿದ್ದಾಳೆ ಎಂದು ವೈದೇಹಿ ತಿಳಿಸುತ್ತಿದ್ದಾರೆ. ಇದು ಕೇವಲ ಗೌರಿಗೆ ಮಾತ್ರ ಸೀಮಿತವಾಗಿದೇ ಆಧುನಿಕ ಸಮಾಜದಲ್ಲಿ ಮಹಿಳೆಯರು ಕೂಡ ಹೀಗೆ ಏನೆಲ್ಲಾ ಕಷ್ಟಗಳನ್ನು ಅನುಭವಿಸಿದಾಗಲೂ ಕೂಡ ಪುರುಷನನ್ನು ಮೀರಿ ಅವನಿದ್ದರೂ, ಇಲ್ಲದಿದ್ದರೂ ತಮ್ಮ ಬದುಕನ್ನು ಸ್ವಚ್ಛಂದವಾಗಿ ಕಟ್ಟಿಕೊಳ್ಳುವ ಸಬಲತೆ ಅವರಿಗೆ ಬಂದಿದೆ ಎನ್ನುವುದನ್ನು ಕವಿತೆಯು ವಿಶ್ಲೇಷಿಸುತ್ತದೆ.

ಸಂಚಾರ ಮುಗಿಸಿ ಬರುವ ಈಶ್ವರ ಜೋಗಿ
ಗೌರಿ ಕರೆವಳು ಅವನ ಸ್ನಾನಕಾಗಿ
ಮದ್ದಿನೆಣ್ಣೆಯ ಪೂಸಿ, ಬಿದ್ದ ಕಂಗಳ ಒರೆಸಿ
ಜ್ವರ ಹಿಡಿಸಿಕೊಂಡಿರುವ ಲೋಕ ಸಂಚಾರಿಗೆ
ಕಿರಾತ ಕಡ್ಡಿಯ ಕಷಾಯ ಕುಡಿಸಿ

ಹೀಗೆಲ್ಲಾ ಆದ ನಂತರವೂ ಕೂಡ ಗೌರಿಯು ಮತ್ತೆ ಶಿವನ ಬರುವಿಕೆಗಾಗಿ ಕಾಯುತ್ತಾಳೆ. ತನ್ನ ಸಂಚಾರವನ್ನು ಮುಗಿಸಿ ಲೋಕಗಳನ್ನೆಲ್ಲಾ ಸುತ್ತಿ ಬರುವ ಶಿವನನ್ನು ಗೌರಿಯು ಮತ್ತೆ ಯಥಾಪ್ರಕಾರ ಸ್ನಾನಕ್ಕಾಗಿ ಕರೆಯುತ್ತಾಳೆ. ದಣಿವಿನಿಂದ ಬರುವ ಈಶ್ವರ ಜೋಗಿಯ ದಣಿವನ್ನು ನೀಗಿಸಲು ಅವನಿಗೆ ಎಣ್ಣೆಯಿಂದ ಮೈಯನ್ನು ಸವರಿ, ಲೋಕವನ್ನೆಲ್ಲಾ ಸುತ್ತಾಡಿ ಬಂದ ಆಯಾಸದಲ್ಲಿ ಅವನಿಗೆ ಜ್ವರ ಬಂದು ಕಣ್ಣನ್ನು ಬಿಟ್ಟು ನೋಡುವಷ್ಟು ಶಕ್ತಿ ಇಲ್ಲದಿರುವಷ್ಟು ಆಯಾಸಗೊಂಡಿರುತ್ತಾನೆ. ಅವನ ರೋಗಕ್ಕೆ ಗೌರಿಯು ಕಷಾಯದ ಔಷಧಿಯನ್ನು ನೀಡಿ ಅವನನ್ನು ಸಂತೈಸುತ್ತಾಳೆ. ಹೀಗೆ ಹೆಣ್ಣು ತನ್ನ ಕುಟುಂಬ, ಗಂಡ ಎನ್ನುವ ನೆಲೆಯಿಂದ ಅವನನ್ನು ನೋಡಿಕೊಳ್ಳುವ ಆ ಮೂಲಕ ಸಂಸಾರವನ್ನು ತೂಗಿಸುವ ಕೆಲಸವನ್ನು ಮಾಡುತ್ತಿದ್ದಾಳೆ ಎನ್ನುವುದನ್ನು ಸೂಚ್ಯವಾಗಿ ತಿಳಿಸುತ್ತದೆ. ಅಲ್ಲದೇ ಇದು ಕೇವಲ ಪುರಾಣದಲ್ಲಿ ಬರುವ ಗೌರಿಯ ಸಂಕಟವಲ್ಲ; ಬದಲಾಗಿ ಇದು ಆಧುನಿಕ ಸಮಾಜದಲ್ಲಿ ಬದುಕುತ್ತಿರುವ ಪ್ರತಿಯೊಂದು ಹೆಣ್ಣಿಗೆ ಇರಬಹುದಾದ ಸಂಕಟಗಳು ಎಂದು ವ್ಯಾಖ್ಯಾನಿಸಬಹುದಾಗಿದೆ.

ಆಕರ :

೧. ವೈದೇಹಿ, ದೀಪದೊಳಗಿನ ದೀಪ, ವಿಕಾಸ ಪ್ರಕಾಶನ, ಬೆಂಗಳೂರು, ೨೦೨೦

“

ಬಹುಮುಖ ಪ್ರತಿಭೆಯ ಅಭಿನೇತ್ರಿ 'ಬಿ.ಜಯಶ್ರೀ'ಯ ಕಥನ

ಶ್ಯಾಮಣ್ಣ ಮಡ್ಡೇರ್
ಪಿಎಚ್.ಡಿ. ಸಂಶೋಧನಾರ್ಥಿ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕಲಾಭಿಮಾನಿಗಳ ಮಾತೃಭೂಮಿ, ಕನ್ನಡ ಕಲಾರಂಗಕ್ಕೆ ದಿಗ್ಗಜರನ್ನು ಪರಿಚಯಿಸಿದ ನಾಡಿನ ಪ್ರತಿಷ್ಠಿತ ನಾಟಕ ಕಂಪನಿಗಳಲ್ಲೊಂದಾದ 'ಗುಬ್ಬಿ ಕಂಪನಿ'ಯಲ್ಲಿ ಬಾಲ್ಯವನ್ನು ಕಳೆದಂತಹ ಬಿ. ಜಯುಶ್ರೀಯವರು ಶ್ರೇಷ್ಠ ನಟಿಯಾಗಿ, ರಂಗಕಲಾವಿದೆಯಾಗಿ, ಸಂಗೀತಗಾರ್ತಿಯಾಗಿ, ನಿರ್ದೇಶಕಿಯಾಗಿ, ಕಂಠದಾನ ಕಲಾವಿದರಾಗಿ, ರಾಜ್ಯಸಭಾ ಸದಸ್ಯರಾಗಿ ದೇಶದಾದ್ಯಂತ ಚಿರಪರಿಚಿತರಾದವರು. ಕದಡಿದರೂ ಕವುರದ ಜೀವನಪ್ರೀತಿಯಿಂದಾಗಿ ವಿಶಿಷ್ಟವಾಗಿ ಗುರುತಿಸಿಕೊಂಡವರು. ರಂಗಭೂಮಿಯನ್ನೇ ಉಸಿರಾಗಿಸಿಕೊಂಡು, ಅದನ್ನೇ ಜೀವನದ ಅವಿಭಾಜ್ಯ ಅಂಗವಾಗಿ ಸ್ವೀಕರಿಸಿ, ರಂಗಭೂಮಿಯ ಮೂಲಕ ಅಸ್ತಿತ್ವವನ್ನು ಕಂಡುಕೊಂಡಂತಹ, ಧೀಮಂತ ಸೃಜನಶೀಲ ಮಹಿಳಾ ಕಲಾವಿದೆಯರಲ್ಲಿ ಬಿ. ಜಯಶ್ರೀ ಅವರು ಮೊದಲಿಗರಾಗುತ್ತಾರೆ.

ಜಯಶ್ರೀ ಅವರು ನಾಲ್ಕು ವರ್ಷದ ಬಾಲಕಿಯಾಗಿದ್ದಾಗಲೇ 'ವೇದಶಿಶು' ಪಾತ್ರದ ಮುಖಾಂತರ ರಂಗಭೂಮಿಯನ್ನು ಪ್ರವೇಶ ಮಾಡಿದ ಅಭಿನೇತ್ರಿ. ಮುಂದೆ, ಕೃಷ್ಣಲೀಲೆ, ದಶಾವತಾರ, ಲವಕುಶ, ಪ್ರಭಾಮಣಿ, ವಿಭಾಯ ಹಲವಾರು ನಾಟಕಗಳಲ್ಲಿ ಬಾಲನಟಿಯಾಗಿ ಅಭಿನಯಿಸುತ್ತಾರೆ. ಕೌಟುಂಬಿಕ ಬದುಕಿನಲ್ಲಿ ಮಾನಸಿಕವಾಗಿ ಬಹಳಷ್ಟು ನೋವನ್ನು ಅನುಭವಿಸಿದ ಇವರು, ತಮ್ಮ ಜನ್ಮದಾತರಾದ 'ರಾಜಣ್ಣ'ರವರಿಂದ ತಿರಸ್ಕಾರಕ್ಕೆ ಒಳಗಾಗುತ್ತಾರೆ. ನಂತರ ಮಲತಂದೆಯುವರಾದ 'ಬಸವರಾಜ'ರವರಿಂದ ಲೈಂಗಿಕ ಕ್ರೌರ್ಯವನ್ನು ಮೌನವಾಗಿ ಅನುಭವಿಸುತ್ತಾರೆ. ಏಕೆಂದರೆ

ತಾಯಿಯಾದ ಮಾಲತಮ್ಮನವರು ಮಲತಂದೆಯನ್ನು ಪ್ರೀತಿಪೂರ್ವಕ ವಿವಾಹವಾಗಿದ್ದರು. ಅತ್ಯಾಚಾರಕ್ಕೆ ಒಳಗಾಗುತ್ತಿರುವ ಸಂಗತಿಯನ್ನು ತಾಯಿಗೂ ತಿಳಿಸದೆ, ಇತ್ತ ತಾತನ ಬಳಿಯೂ ಹೇಳದೆ ಮೌನವಾಗಿಯೇ ಎದುರಿಸುತ್ತಿರುತ್ತಾರೆ. "ಇದ್ದ ಮನೆಯಲ್ಲದೆ ನನಗೆ ಬೇರೆ ಆಸರೆ ಇಲ್ಲ. ಏನು ಮಾಡುವುದೆಂದು ತೋಚದೆ, ಆ ಮನುಷ್ಯ ಇದ್ದ ಕಡೆ ನಾನು ನಿಲ್ಲದ ಹಾಗೆ ಅತ್ತಿತ್ತ ಹೋಗುತ್ತಿದ್ದೆ. ಈ ದೌರ್ಜನ್ಯವನ್ನು ಮೀರಲಾಗದಂಥ ಅಸಹಾಯಕತೆ ಬಲವಾಗಿತ್ತು. ಬಹಳ ದುಃಖವಾಗುತ್ತಿತ್ತು."(ಪು-೬೦, ಕಣ್ಣಾ ಮುಚ್ಚೇ ಕಾಡೇ ಗೂಡೆ) ಎಂಬ ನೋವನ್ನು ಹೊರಹಾಕುತ್ತಾರೆ. ತನ್ನ ಮಗಳಿಗೆ ಮಾತ್ರ ಪಿತೃ ಸ್ಥಾನ ನೀಡಿ, ಜಯಶ್ರಿಯನ್ನು ಭೋಗದ ವಸ್ತುವೆಂದು ಅರಿತ ಅವನ ಪುರುಷಹಂಕಾರಕ್ಕೆ ದೈಹಿಕವಾಗಿ, ಮಾನಸಿಕವಾಗಿ, ಜರ್ಜರಿತರಾಗುತ್ತಾರೆ.

ಶ್ರೀರಂಗರರ ಸೂಚನೆಯ ಮೇರೆಗೆ ಜಯಶ್ರೀಯವರು ದೆಹಲಿಯಲ್ಲಿರುವ ಎನ್.ಎಸ್.ಡಿ. (ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ) ನಾಟಕ ಶಾಲೆಗೆ ಸೇರಿಕೊಂಡರು. ಇಲ್ಲಿನ ಹೆಸರಾಂತ ರಂಗಕರ್ಮಿಗಳ ಒಡನಾಟ, ನಿರ್ದೇಶಕರ, ಕಲಾವಿದರ ಪರಿಚಯದಿಂದ ಇವರ ಜೀವನವೇ ವಿಸ್ತರಿಸಿತು. ನಂತರ ಸಾಕಷ್ಟು ನಾಟಕಗಳಲ್ಲಿ ಅಭಿನಯಿಸಲು ಅವಕಾಶ ದೊರತು, ನಟನಾ ಕೌಶಲ್ಯವನ್ನು ತಿದ್ದಿಕೊಳ್ಳಲು ನೆರವಾಗುತ್ತದೆ. ಇಲ್ಲಿನ ಹಲವಾರು ಸ್ನೇಹಿತರ ಪರಿಚಯ ಆಧುನಿಕ ನಾಟಕಗಳ ಎಲ್ಲಾ ಮಗ್ಗುಲುಗಳನ್ನು ಮತ್ತು ವೈವಿಧ್ಯಮಯ ಪ್ರಯೋಗಗಳನ್ನು ಮಾಡಲು ಅನುವು ಮಾಡಿ ಕೊಡುತ್ತದೆ. ಶಾಲೆಗೆ ಹೋಗದೆ, ವಿದ್ಯೆಯ ಮಹತ್ವವೇ ಗೊತ್ತಿಲ್ಲದ, ಯಾವುದೋ ಸಂದರ್ಭದಲ್ಲಿ ಇಂಗ್ಲೀಷ್ ಕಲಿಯಲು ಕಾನ್ವೆಂಟ್ ಶಾಲೆಗೆ ಸೇರಿ, ಕನ್ನಡದಲ್ಲಿ ನಪಾಸಾದ ಹುಡುಗಿ, ಮುಂದೆ ರಂಗಭೂಮಿ ಹಾಗೂ ಸಿನಿಮಾ ಕ್ಷೇತ್ರದಲ್ಲಿ ಸಾಧಿಸಿರುವ ಯಶಸ್ಸಿನ ಮೆಟ್ಟಿಲನ್ನು ನೋಡಿದರೆ ಯಾರಿಗಾದರೂ ಅಚ್ಚರಿಯಾಗದೆ ಇರದು.

ಜಯಶ್ರೀಯು ಸಿ.ರಾಜಣ್ಣ ಎಂಬುವವರನ್ನು ಪ್ರೀತಿಸಿಯೇ ವಿವಾಹವಾಗುತ್ತಾರೆ. ಆದರೆ ವಿಧಿಯಾಟ ಬೇರೆಯಾಗಿತ್ತು. ಮದುವೆಯ ನಂತರ ಪತಿಯ ಕಟ್ಟುಪಾಡುಗಳಿಗೆ ಸಿಲುಕಿದರು. ಪತಿಗೆ ನಾಟಕ, ನಟನೆ, ರಂಗಭೂಮಿಯ ಕೆಲಸ ಇಷ್ಟವಿಲ್ಲದ ಕಾರಣ ಅನಿವಾರ್ಯವಾಗಿ ಈ ಕ್ಷೇತ್ರಗಳಿಂದ ದೂರ ಸರಿಯುತ್ತಾರೆ. ಮದುವೆಯಾದ ಒಂದೇ ವರ್ಷಕ್ಕೆ ಹೆಣ್ಣು ಮಗುವಿಗೆ ತಾಯಿಯಾದರು. ಮಧ್ಯವ್ಯಸನಿಯಾದ ಪತಿಯು ಶಿಕ್ಷಿಸುವುದನ್ನು ಹೊರತುಪಡಿಸಿದರೆ ಬೇರಾವ ಜವಾಬ್ದಾರಿಯನ್ನೂ ಹೊರಲಿಲ್ಲ. ಮನೆಯಲ್ಲಿ ಬಂಧಿಸಿ ಹೊರಗಡೆಯಿಂದ ಬಾಗಿಲನ್ನು ಹಾಕಿಕೊಂಡು ಹೋಗುವಂತಹ ಅನುಮಾನಾಸ್ಪದ ವ್ಯಕ್ತಿಯಾಗಿದ್ದನು. ಇವನ ಅತಿಯಾದ ಮಧ್ಯಸೇವನೆ, ಜೂಜಾಟದೊಂದಿಗಿನ ವಿಕೃತ ಮನೋಭಾವ, ಹೊಣೆಗೇಡಿತನ, ಕ್ರೂರವಾದ ನಡವಳಿಕೆಗಳು ಜಯಶ್ರೀಯವರ ಮನಸ್ಸಿನಲ್ಲಿ ಪತಿಯ ಸ್ಥಾನದ ಗೌರವವನ್ನು ಅಳಿಸಿ ಹಾಕಿತು. ಇವನ ಬೇಜವಾಬ್ದಾರಿತನ, ಸಂಶಯದ ನಡತೆಯಿಂದ, ದೈಹಿಕವಾಗಿ ಮತ್ತು ಮಾನಸಿಕವಾಗಿ ನೊಂದುಕೊಂಡು ಒಂದು ವರ್ಷದ ಮಗಳು ಸುಷ್ಮಳೊಂದಿಗೆ, ತಾಯಿ ಮಾಲತಮ್ಮನವರೊಡನೆ ಪತಿಯ ಮನೆಯಿಂದ ಹೊರನಡೆದು ಬಿಡುಗಡೆಯ ಹಾದಿಯನ್ನು ಕಂಡುಕೊಂಡರು.

ಯಾವುದೇ ಜೀವನಾಂಶವನ್ನು ಬಯಸದೆ ಪತಿಯಿಂದ ವಿಚ್ಛೇಧನವನ್ನು ಪಡೆದುಕೊಂಡರು. ಪುಟ್ಟ ಮಗು, ವಯಸ್ಸಾದ ತಾಯಿಯನ್ನು ಸಾಕುವುದು ಜಯಶ್ರೀಯವರಿಗೆ ಸುಲಭವಾಗಿರಲಿಲ್ಲ. ಅವರೆ ಹೇಳುವಂತೆ "ಅಮ್ಮ ವೈಯರ್ ಬ್ಯಾಗ್ ಹಾಕುತ್ತಿದ್ದರು. ಅದನ್ನು ಹೋಗಿ ನಾನು ರಾಜಾ ಮಾರ್ಕೆಟ್ಟಿನ ಅಂಗಡಿಯೊಂದಕ್ಕೆ ಮಾರಿ ದುಡ್ಡು ತೆಗೆದುಕೊಂಡು ಬರುತ್ತಿದ್ದೆ. ಒಂದು ಬ್ಯಾಗಿಗೆ ೧೫-೨೦ ರೂಪಾಯಿಗೆ ಕೊಳ್ಳುತ್ತಿದ್ದ ಅಂತ ನೆನಪು. ಪೈಸೆಗೆ ಪೈಸೆ ಕೂಡಿಟ್ಟು ಮಗುವನ್ನು ಮುಚ್ಚಟೆಯಾಗಿ ಸಾಕಿದೆವು."(ಪು-೧೦೪, ಕಣ್ಣಾ ಮುಚ್ಚೇ ಕಾಡೇ ಗೂಡೆ) ಎಂಬ ಇವರ ಮಾತಿನಲ್ಲಿ ಅನುಭವಿಸಿದ ಸಂಕಷ್ಟದ ಹಾದಿಯ ಚಿತ್ರಣವು ಕಣ್ಣೆದುರಿಗೆ ಬರುತ್ತದೆ.

"ಖಾತ್ರಿಯಾದ ಆದಾಯ ಮೂಲವಿಲ್ಲದ ನಾನು ಖರ್ಚಿಗೆ ದುಡ್ಡನ್ನು ಹೊಂದಿಸಲು ಅಭಿನಯ, ಡಬ್ಬಿಂಗ್, ಥಿಯೇಟರ್ ವರ್ಕ್‌ಶಾಪ್, ಕಾಸ್ಟಮ್ ಇತ್ಯಾದಿ ಕೆಲಸಗಳನ್ನು ಮೇಲಿಂದ ಮೇಲೆ ಒಪ್ಪಿಕೊಂಡುಬಿಡುತ್ತಿದ್ದೆ. ಒಪ್ಪಿಕೊಂಡ ಕೆಲಸಗಳನ್ನು ನನಗೆಷ್ಟೇ ಕಷ್ಟ ಆದರೂ ಬಹಳ ಶ್ರದ್ಧೆಯಿಂದ, ಆತ್ಮವಂಚನೆಯಿಲ್ಲದೆ, ಸಮಯಕ್ಕೆ ಸರಿಯಾಗಿ ಮುಗಿಸಲು ಶತಾಯ ಗತಾಯ ಪ್ರಯತ್ನ ಮಾಡುತ್ತಿದ್ದೆ."(ಪು-೮೨, ಕಣ್ಣಾ ಮುಚ್ಚೇ ಕಾಡೇ ಗೂಡೆ) ಎನ್ನುವ ಮಾತಿನಲ್ಲಿ ಕಾಯಕದಲ್ಲಿ ತಲ್ಲೀನರಾಗುತ್ತಿದ್ದ ಮುತುವರ್ಜಿಯನ್ನು ಅರಿಯಬಹುದು. ದಾಂಪತ್ಯ ಜೀವನ ದುರಂತ ಕಾಣುತ್ತಲೇ, ರಂಗ ಪಯಣದ ಪ್ರಗತಿಯ ದಿನಗಳು ನಿಧಾನವಾಗಿ ಪ್ರಾರಂಭವಾಗುತ್ತವೆ. ಇವರ ಬದುಕಿನ ಎಲ್ಲಾ ಕ್ಷಣದ ಅನುಭವಗಳು ಕೇವಲ ಸಂಘರ್ಷದಿಂದಲೇ ಕೂಡಿದ್ದವು. ತಂದೆ-ಮಲತಂದೆ-ಗಂಡ ಈ ತ್ರಿ-ಪುರುಷರ ಜೊತೆ ಜಯಶ್ರೀ ಅವರು ಮಿಂದು ಹೊಸ ಜೀವನಧ್ಯಾಯ ಆರಂಭಿಸಿದ್ದು ನಿಜಕ್ಕೂ ದೊಡ್ಡ ಸಂಘರ್ಷವಾಗಿದೆ. ಕಡು-ಕಷ್ಟದ ಬದುಕನ್ನು ಅನುಭವಿಸಿದರೂ, ಜಯಶ್ರೀಯವರು ತಮ್ಮ ಕಲೆಯೊಂದಿಗಿನ ಒಡನಾಟವನ್ನು ಎಂದಿಗೂ ತ್ಯಜಿಸಲಿಲ್ಲ.

ಶ್ರೀಮತಿ ವಿಮಲಾ ರಂಗಾಚಾರ್‌ರವರು ಜಯಶ್ರೀಯವರಿಗೆ ಬಾಲಭವನದಲ್ಲಿ ಉದ್ಯೋಗ ಪಡೆದುಕೊಳ್ಳಲು ನೆರವಾದರು. ಉದ್ಯೋಗಕ್ಕೆ ಸೇರಿದ ಮೇಲೆ ಮೊದಲ ವೇತನ ಏಳು ಸಾವಿರ ರೂ. ಸ್ವೀಕರಿಸಿ ಆನಂದಭಾಷ್ಪಿತರಾದರು. ಕೆಲದಿನಗಳ ನಂತರ ಪುನಃ ರಂಗಭೂಮಿಯತ್ತ ಮುಖ ಮಾಡಿದರು. ಪಾರಂಪರಿಕವಾಗಿ ಬಂದ ನಟನಾ ಕೌಶಲಕ್ಕೆ ಇವರ ತಾತ, ತಾಯಿ ಮತ್ತು ಗುಬ್ಬಿ ಕಂಪನಿಯ ಮಹಾನ್ ಕಲಾವಿದರ ಒಡನಾಟ ಜಯಶ್ರೀಯವರ ಕಲಾಪ್ರತಿಭೆಯನ್ನು ಚೆನ್ನಾಗಿಯೇ ಪೋಷಿಸಿತು. ರಂಗಭೂಮಿಯನ್ನು ಪ್ರವೇಶಿಸಿದ ಜಯಶ್ರೀಯವರು ಹಿಂದೆ ತಿರುಗಲೇ ಇಲ್ಲ. ಅಗಾಧವಾಗಿ ಬಾನೆತ್ತರಕ್ಕೆ ತಮ್ಮ ಕಲೆಯನ್ನು ವಿಸ್ತರಿಸುತ್ತಾ ಮುನ್ನಡೆದರು. ತಮ್ಮ ಪ್ರತಿಭೆಯಿಂದಲೇ ದುಡಿಮೆಗೆ ಹಾದಿಯನ್ನು ಕಂಡುಕೊಂಡು ಸ್ವಾಯತ್ತತೆಯ ಜೀವನ ಸಾಗಿಸಿದ್ದು ಪ್ರೇರಣಾದಾಯಕ ಸಂಗತಿಯಾಗಿದೆ.

ಜಯಶ್ರೀ ಅವರ ಜೀವನದ ಪ್ರಭಾವಶಾಲಿ ವ್ಯಕ್ತಿ ತಾಯಿ ಮಾಲತಮ್ಮನವರು. ಮಗಳ ಕಲಾ ಜೀವನದ ಶ್ರೇಯಸ್ಸಿಗೆ ಸ್ಫೂರ್ತಿಯಾದವರು. 'ಸಂಬಂಧದಲ್ಲಿ ದೊಡ್ಡಪ್ಪನನ್ನೇ ವಿವಾಹವಾಗಿ ಸಂಸಾರದ ಕಷ್ಟಕಾರ್ಪಣ್ಯಗಳ ನಡುವೆಯೇ ಗಟ್ಟಿಗಿತ್ತಿಯಾಗಿ ನೆಲೆಯೂರಿದವರು. ಒಮ್ಮೆ ವೇದಿಕೆಯ ಮೇಲೆ ಅಭಿನಯಿಸುವಾಗ ವಿದ್ಯುತ್‌ಶಾಕ್‌ನಿಂದ ಘಟಿಸಿದ ಅವಾಂತರಕ್ಕೆ ಕಾಲುಗಳು ಸ್ವಾಧೀನ ಕಳೆದುಕೊಂಡವು. ಜಯಶ್ರೀ ಅವರಿಗೆ ಧೈರ್ಯ, ನಟನಾ ಕೌಶಲ್ಯ, ಮುನ್ನುಗ್ಗುವ ಗುಣ, ರಂಗ ತಾಲೀಮಿನ ಶಿಸ್ತು ಎಲ್ಲದಕ್ಕೂ ಅಮ್ಮ ಮಾಲತಮ್ಮನವರೇ ಪ್ರೇರಕ ಶಕ್ತಿಯಾಗಿದ್ದರು.

ಜೋಕುಮಾರ ಸ್ವಾಮಿಯ–ಶಾರಿ, ಬ್ಯಾರಿಸ್ಟರ್‌ನ–ಚಿಕ್ಕಮ್ಮ, ಬಸವಕಲ್ಯಾಣದ–ಅಕ್ಕಮಹಾದೇವಿ ಮೊದಲಾದ ಪಾತ್ರಗಳಲ್ಲಿ ಅತ್ಯಂತ ಜನಪ್ರಿಯರಾಗಿದ್ದಾರೆ. ಕೊಟ್ರೇಶಿ ಕನಸು, ನಾಯಿ ನೆರಳು, ಕಿರಗೂರಿನ ಗಯ್ಯಾಳಿಗಳು, ಎಮ್ಮೆ ತಮ್ಮಣ್ಣ, ದುರ್ಗಿ, ಕೌರವ, ಗಳಿಗೆ, ಜೀವನ ಚಕ್ರ, ನಾಗಮಂಡಲ, ಜೇನಿನ ಹೊಳೆ, ಭಾವ–ಭಾಮೈದ, ಕದಂಬ, ಇಷ್ಟಕಾಮ್ಯ, ಕೌದಿ, ಮಾಸ್ತಿಗುಡಿ, ಮೂಕಜ್ಜಿಯ ಕನಸುಗಳು ಮೊದಲಾದ ಸಿನಿಮಾಗಳಲ್ಲಿ ಹಾಗೂ ಧಾರಾವಾಹಿಗಳಲ್ಲಿ ನಟಿಸಿದ್ದಾರೆ. ಸುಮಾರು ೩೦ಕ್ಕೂ ಸಿನಿಮಾದಲ್ಲಿ ಪ್ರಖ್ಯಾತಿ ಗಳಿಸಿದವರಾಗಿದ್ದಾರೆ. ನಾಗಮಂಡಲ ಚಿತ್ರದಲ್ಲಿನ ಕುರುಡವ್ವನ ಪಾತ್ರಕ್ಕೆ 'ಪೋಷಕ ನಟಿ' ರಾಜ್ಯ ಪ್ರಶಸ್ತಿಯನ್ನು ಪಡೆದಿದ್ದಾರೆ. ಚೆ–ಗುವೇರಾ, ಕಲ್ಯಾಣ ದರ್ಶನ, ಕುರುಡು ಕಾಂಚಾಣ, ಅಂತಿಮ ಯಾತ್ರೆ, ಬ್ಲಡ್ ವೆಡಿಂಗ್ ಮುಂತಾದ ನಾಟಕಗಳಲ್ಲಿ ಅಭಿನಯಿಸಿ ಆ ಅನುಭವದಲ್ಲಿ ಅನೇಕ ಪ್ರಸಿದ್ಧ ಲೇಖಕರ ನಾಟಕಗಳನ್ನು ರಂಗಭೂಮಿಗೆ ಪರಿಚಯಿಸುವಲ್ಲಿ ಯಶಸ್ವಿಯಾದರು.

ಬಬ್ರುವಾಹನ ಸಿನಿಮಾಕ್ಕೆ ಮೊದಲ ಬಾರಿಗೆ ಕಾಂಚನ ಅವರಿಗೆ ಕಂಠದಾನ ಮಾಡಿದರು. ಸೊಸೆ ತಂದ ಸೌಭಾಗ್ಯ, ರವಿಚಂದ್ರ, ಪರಸಂಗದ ಗೆಂಡೆ ತಿಮ್ಮ, ಸನಾದಿ ಅಪ್ಪಣ್ಣ, ವಸಂತಗೀತ, ಗುರುಶಿಷ್ಯರು, ಹಾವಿನ ಹೆಡೆ, ಹಾಲುಜೇನು, ಚಲಿಸುವ ಮೋಡಗಳು, ಕವಿರತ್ನ ಕಾಳಿದಾಸ, ಎರಡು ನಕ್ಷತ್ರಗಳು, ಮೂರುಜನ್ಮ, ಅದೇ ಕಣ್ಣು, ಜ್ವಾಲಮುಖಿ, ಅನುರಾಗ ಅರಳಿತು, ಸಂಯುಕ್ತ, ಶೃತಿ ಸೇರಿದಾಗ, ಶಬ್ದವೇದಿ ಮುಂತಾದ ಚಿತ್ರಗಳಲ್ಲಿ ನಾಯಕಿಯರಾಗಿ ಅಭಿನಯಿಸಿದ ಮಾಧವಿ, ಅಂಬಿಕಾ, ಸುಮಲತಾ, ಜಯಮಾಲಿನಿ, ಜಯಪ್ರಧಾರವರಿಗೆ ಹಾಗೂ ಆಲ್ ಇಂಡಿಯಾ ರೇಡಿಯಾಗೂ ಕಂಠದಾನ ನೀಡಿದ್ದಾರೆ. ನಾಗದೇವತೆ, ದುರ್ಗಿ, ನನ್ನ ಪ್ರೀತಿಯ ಹುಡುಗಿ, ಪ್ರೀತಿ ಪ್ರೇಮ ಪ್ರಣಯ, ಭಗವಾನ್, ಜೋಗಿ, ಮಠ, ಮಾತಾಡ್ ಮಾತಾಡ್ ಮಲ್ಲಿಗೆ ಮುಂತಾದ ೫೦ಚಲನಚಿತ್ರಗಳಲ್ಲಿ ಹಿನ್ನೆಲೆ ಗಾಯಕರಾಗಿ, ಕಾರ್ಯ ನಿರ್ವಹಿಸಿ, ತಮ್ಮ ಅದ್ಭುತ ಕಂಠಸಿರಿಯಿಂದ ಕನ್ನಡಿಗರ ಮನ–ಮನೆಗಳಲ್ಲಿ ನೆಲೆಸಿದವರಾಗಿದ್ದಾರೆ. ಪ್ರಸ್ತುತ ಸ್ಪಂದನ ನಾಟಕ ತಂಡದ ಸೃಜನಶೀಲ ನಿರ್ದೇಶಕರಾದ ಇವರು 'ಆನಂದ' ಎಂಬುವವರನ್ನು ಬಾಳಸಂಗಾತಿಯಾಗಿ ಆಯ್ಕೆ ಮಾಡಿಕೊಂಡು, ಇರ್ವರೂ ರಂಗಸೇವೆಗೆ ತಮ್ಮ ಬದುಕನ್ನು ಮುಡಿಪಾಗಿಟ್ಟಿದ್ದಾರೆ.

೧೯೭೭ರಲ್ಲಿ 'ಸಮುದಾಯ' ತಂಡದಿಂದ 'ಪ್ರಸನ್ನ' ಅವರು ನಿರ್ದೇಶಿಸಿದ 'ತಾಯಿ' ನಾಟಕದ ಮುಖ್ಯಪಾತ್ರದಲ್ಲಿ ಜಯಶ್ರೀ ಅವರ ಅಭಿನಯ ಕನ್ನಡ ರಂಗಭೂಮಿಯ ಅದ್ಭುತ ನೆನಪುಗಳಲ್ಲೊಂದಾಗಿ ಉಳಿದಿದೆ. ಸ್ಪಂದನದ ಮೂಲಕ ಜಯಶ್ರೀ ಅವರು ರಂಗಕ್ಕೆ ತಂದ 'ಕರಿಮಾಯಿ' ಹಾಗೂ 'ಲಕ್ಷಾಪತಿ ರಾಜನ ಕಥೆ' ಜಯಶ್ರೀ ಅವರಿಗೆ ಅತ್ಯಂತ ಹೆಸರನ್ನು ತಂದುಕೊಟ್ಟ ನಾಟಕಗಳು. 'ಸುಧಾರಮೆ' ನಾಟಕದಲ್ಲಿ ಕಳ್ಳನ ಪಾತ್ರವನ್ನು ಕಲಾಜಗತ್ತೆ ಕೊಂಡಾಡುವಂತೆ ಅಭಿನಯಿಸಿದರು. ಇಡೀ ಆಪ್ತಬಳಗಕ್ಕೆಲ್ಲಾ ಗುಬ್ಬೀ ವೀರಣ್ಣನವರ ಅಭಿನಯದ ನೆನಪು ಭಾಸವಾಗುವಂತೆ ಮಾಡಿದರು. ಇವರು ನಿರ್ದೇಶಿಸಿದ ಘಾಶೀರಾವರ್ ಕೊತ್ವಾಲ್, ಜಸ್ಮಾಓಡನ್, ಸೇಲ್ಸ್ ಮ್ಯಾನ್, ಬ್ಯಾರಿಸ್ಟರ್, ಉರಿಯ ಉಯ್ಯಾಲೆ, ಯಕ್ಷನಗರಿ, ವೈಶಾಖ, ನಾಗಮಂಡಲ, ನೀಲಿಕುದುರೆ ಮೊದಲಾದ ನಾಟಕಗಳು ಜನಮನ್ನಣೆ ಪಡೆದವು. ಸುಮಾರು ೩೦ಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶಿಸಿ ಹಾಗೂ ೩೦ಕ್ಕೂ ಹೆಚ್ಚು ಹವ್ಯಾಸಿ ನಾಟಕಗಳಲ್ಲಿ ಅಭಿನಯಿಸಿದ ಇವರು ಕನ್ನಡ ರಂಗಭೂಮಿಗೆ ಬಹುದೊಡ್ಡ ಕೊಡುಗೆ ನೀಡಿದ್ದಾರೆ. ಅಮೇರಿಕಾದಲ್ಲಿ 'ಹೂವಿ' ನಾಟಕವನ್ನು ನಿರ್ದೇಶಿಸಿ ವಿದೇಶದಲ್ಲಿಯೂ ಖ್ಯಾತಿ ಪಡೆದರು. ಇವರು ನಟಿಸಿದ 'ಕಿನ್ನರಿ' ನಾಟಕ ವಿದೇಶದಲ್ಲಿ ಪ್ರದರ್ಶನಗೊಂಡು ಜನಮೆಚ್ಚುಗೆ ಗಳಿಸಿತು. ನಾಟಕಗಳ ನಿರ್ದೇಶನದಲ್ಲಿ ಅನೇಕಾನೇಕ ಪ್ರಯೋಗಗಳನ್ನು ನಡೆಸಿ; ನಾಟಕ ಕಲೆಯ ಪರಿಧಿಗಳನ್ನು ವಿಸ್ತರಿಸುವ ಮೂಲಕ ಪ್ರೇಕ್ಷಕರಿಗೆ ಹೊಸ ಹೊಸ ಅನುಭವವನ್ನುಂಟು ಮಾಡಿದರು. ಕಂಚಿನ

ಕಂಠದಿಂದ ಸೊಗಸಾಗಿ ಹಾಡುತ್ತಾ, ನರ್ತಿಸುತ್ತಾ, ಅಭಿನಯ ಮಾಡುವ ಅಭಿನೇತ್ರಿಯೂ ಆಗಿರುವದರಿಂದಾಗಿ 'ಗುಬ್ಬಿ ವೀರಣ್ಣನವರ ಮೊಮ್ಮಗಳು' ಎಂಬ ವಿಶೇಷಣದ ಆಚೆಗೆ ಗುರುತಿಸಿಕೊಳ್ಳುವವರಾಗುತ್ತಾರೆ.

ಭಾರತ ಸರ್ಕಾರವು 'ಕೈರೋ, ಸ್ವೀಡನ್ ಮತ್ತು ತಾಷ್ಕೆಂಟ್' ವಿದೇಶಗಳಿಗೆ ಭಾರತವನ್ನು ಪ್ರತಿನಿಧಿಸಲು 'ಸ್ಪಂದನ' ತಂಡವನ್ನು ಆಯ್ಕೆ ಮಾಡಿತು. ಇಪ್ಪತ್ತಮೂರು ದೇಶಗಳ ಯಾದಿಯಲ್ಲಿ ಇವರ 'ಲಕ್ಷಾಪತಿ ರಾಜನ ಕಥೆ' ನಾಟಕ ಜಯಭೇರಿಯನ್ನು ಬಾರಿಸಿತು. ಇಂಥದೊಂದು ಘಳಿಗೆಯನ್ನು ಜಯಶ್ರೀ ಅವರು, 'ತಮ್ಮ ಜೀವನದ ಸಾರ್ಥಕ ಘಳಿಗೆ' ಎಂದು ನೆನೆಯುತ್ತಾರೆ. ವಿದೇಶದಲ್ಲಿಯೂ ಜಾನಪದದ ಸೊಗಡನ್ನು ಪರಿಚಯಿಸಿ, ಭಾರತದ ಖ್ಯಾತಿ ಹೆಚ್ಚಿಸಿದ ಕರ್ನಾಟಕದ ಹೆಮ್ಮೆಯ ಪುತ್ರಿಯಾಗಿದ್ದಾರೆ.

ಇವರ ಸೃಜನಶೀಲ ಸೇವೆಗೆ ೨೦೧೩ರಲ್ಲಿ ಭಾರತ ಸರ್ಕಾರದ ನಾಲ್ಕನೇ ಅತ್ಯುನ್ನತ ಪ್ರಶಸ್ತಿಯಾದ 'ಪದ್ಮಶ್ರೀ' ಪ್ರಶಸ್ತಿ ಲಭಿಸಿದೆ. ಹಾಗೆ ಕೇಂದ್ರ ಸಂಗೀತ ನಾಟಕ ಅಕಾಡಮಿ ಪ್ರಶಸ್ತಿ, ಅತ್ಯುತ್ತಮ ಹಿನ್ನೆಲೆ ಗಾಯಕಿ ಪ್ರಶಸ್ತಿ, ಸಂದೇಶ ಕಲಾ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಉತ್ತರ ಕರ್ನಾಟಕದ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ, ಬಸವ ಭೂಷಣ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, ಸಫ್ದಾರ್ ಹಷ್ಮಿ ಪ್ರಶಸ್ತಿ, ಬಿ. ವಿ. ಕಾರಂತ ಪುರಸ್ಕಾರ ಅಲ್ಲದೆ ಮೈಸೂರು ಮುಕ್ತ ವಿಶ್ವವಿದ್ಯಾನಿಲಯದಿಂದ 'ಗೌರವ ಡಾಕ್ಟರೇಟ್' ಸಂದಿದೆ. ೨೦೧೧ರ ಅಬುದಾಬಿ ಸ್ಮರಣೋತ್ಸವದಲ್ಲಿ ಇವರು ನಟಿಸಿದ 'ಸೌತ್ ಆಫ್ರಿಕನ್' ಚಿತ್ರಕ್ಕೆ 'ಬ್ಲಾಕ್‌ಫಲ್ ಅತ್ಯುತ್ತಮ ನಟಿ ಪ್ರಶಸ್ತಿ' ದೊರೆತಿದೆ. ಈ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡ ಏಕೈಕ ಭಾರತೀಯರು ಇವರಾಗಿದ್ದಾರೆ.

೨೦೧೦ ಮಾರ್ಚ್ ೧೦ ರಂದು ಆರು ವರ್ಷಗಳ ಅವಧಿಗೆ ರಾಜ್ಯಸಭಾ ಸದಸ್ಯರಾಗಿ ನಾಮನಿರ್ದೇಶನಗೊಂಡರು. ಈ ಅವಧಿಯಲ್ಲಿ ರಾಜ್ಯಸಭಾ ಸದಸ್ಯತ್ವ ಸ್ಥಾನದ ಅವಕಾಶ, ಪ್ರಭಾವ ಬಳಸಿಕೊಂಡು ಕನ್ನಡ ರಂಗಭೂಮಿಗೆ ಹಲವು ರೀತಿಯಲ್ಲಿ ಸೇವೆಯನ್ನು ನೀಡಿದ್ದಾರೆ. "ಮಂಡ್ಯ ರಮೇಶ್ ಅವರ ಮೈಸೂರಿನ ನಟನ ರಂಗಮಂದಿರ ನಿರ್ಮಾಣಕ್ಕೆ ೨೪ಲಕ್ಷ ರೂ. ಗುಬ್ಬಿಯಲ್ಲಿ ರಂಗಮಂದಿರ ನಿರ್ಮಾಣಕ್ಕೆ ೨೫ಲಕ್ಷರೂ. ಮೇಲುಕೋಟೆ ಪು.ತಿ.ನ. ಕಲಾಮಂದಿರ ನಿರ್ಮಾಣಕ್ಕೆ ೫ಲಕ್ಷ ರೂ. ಉತ್ತರಕನ್ನಡ ಜಿಲ್ಲೆ ಇಡಗುಂಜಿಯ ಕೆರೆಮನೆ ಶಂಭು ಹೆಗಡೆ ಬಯಲು ರಂಗಮಂದಿರ ನಿರ್ಮಾಣಕ್ಕೆ ೧೪ಲಕ್ಷ ೧೯ಸಾವಿರ ರೂ. ಕಾರ್ಕಳ ತಾಲ್ಲೂಕಿನ ಮುದ್ರಾಡಿಯ ನಮ್ ತುಳುವರ್ ಕಲಾ ಸಂಘಟನೆ ನಿರ್ಮಿಸುತ್ತಿರುವ ಕಲಾಕ್ಷೇತ್ರಕ್ಕೆ ೧೦ಲಕ್ಷ ರೂ. ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ನಾಗೂರಿನ ಹೇರಂಜಾಲು ಯಕ್ಷಗಾನ ಪ್ರತಿಷ್ಠಾನದ ಸಾಂಸ್ಕೃತಿಕ ಸಭಾಂಗಣ ನಿರ್ಮಾಣಕ್ಕಾಗಿ ೫ಲಕ್ಷ ರೂ. ಸೇರಿದಂತೆ ಶಿಕ್ಷಣ, ಆರೋಗ್ಯ ಮತ್ತು ಇತರೆ ಅನುದಾನವನ್ನು ರಾಜ್ಯಸಭಾ ಸದಸ್ಯರ ನಿಧಿಯಿಂದ ನೀಡಲಾಗಿದೆ."(ಪು–೩೬೨, ರಂಗಭೂಮಿ ಮತ್ತು ಮಹಿಳೆ) ಇದು ಇವರ ಸಾರ್ಥಿಕ ಬದುಕಿಗೆ ಕೈಗನ್ನಡಿಯಾಗಿದೆ.

"ನಮ್ಮಲ್ಲಿರುವ ನ್ಯೂನತೆಯನ್ನು ಒಂದು ವರವಾಗಿ ತೆಗೆದುಕೊಂಡು ಅದರೊಡನೆ ಆಟವಾಡೋದನ್ನ ನಾನು ಬಾಲಣ್ಣನವರಿಂದ ಕಲಿತೆ. ಹಾಡುಗಳ ಸಾಹಿತ್ಯ ಅರ್ಥಮಾಡಿಕೊಳ್ಳುವುದೊಂದೇ ಅಲ್ಲ, ಅದರ ವ್ಯಕ್ತಿತ್ವ, ಬಣ್ಣ, ಭಾವ ಇವೆಲ್ಲವನ್ನೂ ಕಣ್ಣಿನಿಂದ ನೋಡಿ ಅನುಭವಿಸುತ್ತಾ ಹಾಡುವುದನ್ನು ಕಾಳಿಂಗರಾಯರಿಂದ ಕಲಿತೆ. ಕಂಪನಿಯಲ್ಲಿ ತಾತನಿಂದ ಪ್ರಾಕ್ಟಿಕಲ್ಸ್ ಕಲಿತರೆ, ಎನ್.ಎಸ್.ಡಿ.ಯಲ್ಲಿ ಅಲ್‌ಕಾಜಿ ಅವರಿಂದ ಥಿಯರಿ ಕಲಿತೆ. ಅಮ್ಮನಿಂದ ತೆರೆದ ಧ್ವನಿಯಲ್ಲಿ ಹಾಡುವುದನ್ನು ಮುಖ್ಯವಾಗಿ ಕಲಿತೆ. ಹೀಗೆ ಒಬ್ಬೊಬ್ಬರಿಂದಲೂ ಒಂದೊಂದು ಕಲಿತು ಜಯಶ್ರೀ, ಈಗ ಬಿ. ಜಯಶ್ರೀ ಆಗಿ ನಿಂತಿದ್ದೇನೆ."(ಪು–೧೬, ಕಣ್ಣಾ ಮುಚ್ಚೇ ಕಾಡೇ ಗೂಡೆ) ಎನ್ನುವ ಇವರ ಮಾತು ಸರ್ವಜ್ಞರ ತ್ರಿಪದಿಯಾದ 'ಸರ್ವರೊಳು ಒಂದೊಂದು ನುಡಿಗಲಿತು ವಿದ್ಯೆಯ ಪರ್ವತವೆ ಆದ ಸರ್ವಜ್ಞ' ಮಾತನ್ನು ಮರುಕಳಿಸುತ್ತದೆ. ವೈಯಕ್ತಿಕ ಬದುಕಿನ ತೂಗುಯ್ಯಾಲೆಯಲ್ಲಿ ಸಮತೋಲನ ಸಾಧಿಸುತ್ತಲೇ ಸವಾಲುಗಳನ್ನು ಬದುಕಿನ ಯಶಸ್ವಿ ದಾರಿಗಳನ್ನಾಗಿ ಮಾಡಿಕೊಂಡು ದೇಶ ವಿದೇಶಗಳಲ್ಲಿ ಜನಪ್ರಿಯತೆ ಪಡೆದ ಅಪರೂಪದ ಕಲಾವಿದೆ ಬಿ.ಜಯಶ್ರೀಯವರಾಗಿದ್ದಾರೆ.

ಪರಾಮರ್ಶನ ಗ್ರಂಥಗಳು:

೧. ಪ್ರೀತಿ ನಾಗರಾಜ್(ನಿರೂಪಣೆ), ಕಣ್ಣಾಮುಚ್ಚೇ ಕಾಡೇಗೂಡೇ, ೨೦೧೬, ಮನೋಹರ ಗ್ರಂಥಮಾಲಾ, ಧಾರವಾಡ.

೨. ಗುಡಿಹಳ್ಳಿ ನಾಗರಾಜ್, ಮಹಿಳಾ ರಂಗಭೂಮಿ ಪ್ರತ್ಯೇಕತೆ ಬೇಕಿಲ್ಲ, ಎಚ್. ಎಲ್. ಪುಷ್ಪಾ(ಸಂ), ರಂಗಭೂಮಿ ಮತ್ತು ಮಹಿಳೆ, ೨೦೧೫, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು.

೩. ನಿರ್ಮಲ ಸಿ. ಎಲಿಗಾರ್, ಕಿರಣ್ ಪ್ರಸಾದ್ ರಾಜನಹಳ್ಳಿ (ಸಂ), ಗರಿ ಅನನ್ಯ ಸಾಧಕಿಯರು, ೨೦೧೨, ಸ್ನೇಹ ಬುಕ್ ಹೌಸ್

ಬೆಂಗಳೂರು.

“

ಡಾ. ಸಿದ್ದಲಿಂಗಯ್ಯ ಅವರ ಏಕಲವ್ಯ ನಾಟಕ: ಮರುಚಿಂತನೆ

ಶ್ರೀಮತಿ ರಾಧಾ ಆರ್. ನಾಡಿಗ್
ಮುಖ್ಯಸ್ಥರು ಕನ್ನಡ ವಿಭಾಗ
ಬಿ.ಎಂ.ಎಸ್. ಮಹಿಳಾ
ಮಹಾವಿದ್ಯಾಲಯ(ಸ್ವಾಯತ್ತ)
ಬಸವನಗುಡಿ
ಬೆಂಗಳೂರು – ೫೬೦ ೦೦೪
radhanadig71@gmail.com

ಸಿದ್ದಲಿಂಗಯ್ಯನವರು ಕನ್ನಡದ ಖ್ಯಾತ ದಲಿತ ಕವಿ. ಅವರ ‘ಹೊಲೆಮಾದಿಗರ ಹಾಡು’, ‘ಸಾವಿರಾರು ನದಿಗಳು’, ‘ಕಪ್ಪುಕಾಡಿನ ಹಾಡು’, ‘ಮೆರವಣಿಗೆ’ ಮುಂತಾದ ಕವನ ಸಂಕಲನಗಳ ಜೊತೆಗೆ ಅವರ ಆತ್ಮಚರಿತ್ರೆ ‘ಊರುಕೇರಿ’ ಇವುಗಳ ಮೂಲಕ ಅವರು ಕನ್ನಡನಾಡಿನ ಜನರಿಗೆ ನೀಡಿದ ಸಾಹಿತ್ಯದ ಸವಿ ಮತ್ತು ಕಿಚ್ಚು ಅವಿಸ್ಮರಣೀಯ. ಇವುಗಳ ಜೊತೆಗೆ ಸಿದ್ದಲಿಂಗಯ್ಯ ಅವರು ನಾಟಕಕಾರರಾಗಿ ಕೂಡ ಪ್ರಸಿದ್ಧರು. ‘ಪಂಚಮ’, ‘ನೆಲಸಮ’ ಮತ್ತು ‘ಏಕಲವ್ಯ’ ಎಂಬ ನಾಟಕಗಳನ್ನು ಅವರು ರಚಿಸಿರುತ್ತಾರೆ. ಈ ನಾಟಕಗಳು ಪರಂಪರೆಯನ್ನು ಪ್ರಶ್ನಿಸುವ, ತಪ್ಪುಗಳನ್ನು, ಅವಮಾನಗಳನ್ನು ಒತ್ತಿ ಹೇಳುತ್ತವೆ. ಅದರಲ್ಲೂ ‘ಏಕಲವ್ಯ’ ನಾಟಕ ಬಹುಶಃ ಪುರಾಣ ಕಾಲದಿಂದಲೂ ವರ್ತಮಾನದ ವರೆಗಿನ ಕೆಲವು ಸಂಗತಿಗಳನ್ನು ನೋಡಿದರೆ, ಪುರಾಣ ಲೋಕದ ನಮ್ಮ ಏಕಲವ್ಯನಷ್ಟು ಚರ್ಚಿತವಾದ ವ್ಯಕ್ತಿ ಅಥವಾ ವ್ಯಕ್ತಿತ್ವ ಮತ್ತೊಂದಿಲ್ಲವೆಂದೇ ಹೇಳಬೇಕಾಗುತ್ತದೆ. ಪುರಾಣದಲ್ಲಿ ಏಕಲವ್ಯನನ್ನು ಬೇಡರ ಹುಡುಗನೆಂದು ಪ್ರಾಸಂಗಿಕವಾಗಿ ಕರೆತಂದು ಕುರುಕ್ಷೇತ್ರ ಯುದ್ಧದಲ್ಲಿ ಭಾಗವಹಿಸುವಂತೆ ಮಾಡಿ ಪರಾಕ್ರಮದಿಂದ ಹೋರಾಡಿ ವೀರಮರಣವನ್ನಪ್ಪಿದನೆಂದು ಅವನನ್ನು ಮುಗಿಸಿಬಿಡುತ್ತಾರೆ. ಆತನಿಗೆ ಉಳಿದ ಪಾತ್ರಗಳಷ್ಟು ಹೆಚ್ಚಿನ ಮಹತ್ವ ಕೊಡುವುದಿಲ್ಲ.

ಆದರೆ ಮಂಜೇಶ್ವರ ಗೋವಿಂದ ಪೈ ಅವರು ಅನಂತರ ಕುವೆಂಪು ಅವರು ಏಕಲವ್ಯನನ್ನು ಕಟ್ಟಿಕೊಟ್ಟ ರೀತಿ ಅತ್ಯಂತ ಅನನ್ಯ. ಗೋವಿಂದ ಪೈ ಅವರ ‘ಹೆಬ್ಬೆರಳು’, ಕುವೆಂಪು ಅವರ ‘ಬೆರಳ್‌ಗೆ

ಕೊರಳ್', ಸಿದ್ದಲಿಂಗಯ್ಯನವರ 'ಏಕಲವ್ಯ' ಈ ಮೂರೂ ನಮಗೆ ಒಂದು ಹೊಸ ಬಗೆಯ ನಾಟಕದ ಓದನ್ನು ತಿಳಿಸಿಕೊಡುತ್ತವೆ. ಕುವೆಂಪು, ಗೋವಿಂದ ಪೈ ಇವರುಗಳು ಪುರಾಣವನ್ನು ವರ್ತಮಾನದ ಕಣ್ಣಿನಿಂದ ನೋಡುವ ಕ್ರಮ ಕಂಡುಬರುತ್ತದೆ. ಅಲ್ಲಿ ಏಕಲವ್ಯನ ಆಕಾಂಕ್ಷೆ ಕಾಡಿನ ಜನರ ರಕ್ಷಣೆ, ಕಾಡಿನ ಸಿರಿ–ಸಂಪತ್ತು, ಕಾಡು ಪ್ರಾಣಿಗಳನ್ನು ಸಂರಕ್ಷಿಸಬೇಕು ಎಂಬ ಕಾರಣಕ್ಕಾಗಿ ತಾನು ಹೆಚ್ಚಿನ ಬಿಲ್ವಿದ್ಯೆಯನ್ನು ಕಲಿಯಬೇಕು ಎಂದು ನಗರದ ಅರಮನೆಯ ಬಿಲ್ವಿದ್ಯಾ ಗುರು ದ್ರೋಣಾಚಾರ್ಯರ ಬಳಿಗೆ ಬಂದು ವಿದ್ಯೆಗಾಗಿ ವಿನಂತಿಸಿದಾಗ 'ತನ್ನ ಹುಟ್ಟಿನ ಕಾರಣಕ್ಕಾಗಿ' ಭೀಮಾರ್ಜುನರಾದಿಯಾಗಿ ದ್ರೋಣಾಚಾರ್ಯರಿಂದಲೂ ತಿರಸ್ಕೃತಗೊಳ್ಳುತ್ತಾನೆ. ಆನಂತರ ತನ್ನದೇ ಹೆಸರನ್ನೇ ಹೊತ್ತ ಹೊಸದೊಂದು ಪದವನ್ನೇ ಟಂಕಿಸಿಬಿಡುತ್ತಾನೆ. ತಾನೇ ಸ್ವತಃ ಗುರುವಿನ ಮೂರ್ತಿಯನ್ನು ಮಾಡಿಕೊಂಡು, ವಿದ್ಯೆ ಕಲಿತು 'ಏಕಲವ್ಯನ ವಿದ್ಯೆ ಅಂದರೆ ಸ್ವಯಂ ವಿದ್ಯೆ ಕಲಿಯುವುದು' ಎಂದು ಅದರಲ್ಲೂ ಶಬ್ದವೇಧಿ ವಿದ್ಯೆಯಂತಹ ಅಸಾಧಾರಣ ವಿದ್ಯೆಯನ್ನು ಕಲಿತು ಅರ್ಜುನನ ಮಾತ್ಸರ್ಯಕ್ಕೆ ಕಾರಣನಾಗುತ್ತಾನೆ. ತನಗಿಂತ ಒಬ್ಬ ಶ್ರೇಷ್ಠ ಬಿಲ್ವಿದ್ಯಾಗಾರ ಜಗತ್ತಿನಲ್ಲಿರುವುದು ಅರ್ಜುನನಿಗೆ ಅಸಮ್ಮತ ಹಾಗೂ ಸಹನೆಯಾಗುವುದಿಲ್ಲ. ಅದನ್ನು ನಾಶಪಡಿಸುವ ಬಗ್ಗೆ ಚಿಂತಿಸುವುದು ಒಂದು ಬಹು ದೊಡ್ಡ ದುರಂತವೆನಿಸುತ್ತದೆ.

ಮಹತ್ವಾಕಾಂಕ್ಷೆ ಎನ್ನುವುದು ಪ್ರತಿಯೊಬ್ಬ ಮಾನವನಿಗೂ ಇರಬೇಕು. ನಾನೇ ಜಗತ್ತಿನ ಸರ್ವಶ್ರೇಷ್ಠ ಬಿಲ್ವಿದ್ಯಾಗಾರನಾಗಬೇಕೆಂಬ ಅರ್ಜುನನ ಬಯಕೆ ತಪ್ಪೇನಲ್ಲ–ಸಹಜವೇ, ಆದರೆ ಮತ್ತೊಬ್ಬ ಬಿಲ್ವಿದ್ಯಾ ಪ್ರವೀಣನನ್ನು, ಅವನ ವಿದ್ಯೆಯನ್ನು ನಾಶಪಡಿಸುವುದು ಅತ್ಯಂತ ಕನಿಷ್ಠ ಮಟ್ಟದ ಯೋಚನೆ. ಅರ್ಜುನನ ಮಾತ್ಸರ್ಯದ ಪರಮಾವಧಿ ಎಂದರೆ ಅಷ್ಟೆಲ್ಲ ವಿದ್ಯೆ ಕಲಿಸಿದ ಗುರುಗಳನ್ನೇ ನೀವು ಜಗತ್ತಿನ ಶ್ರೇಷ್ಠ ಬಿಲ್ವಿದ್ಯಗಾರನನ್ನಾಗಿ ಮಾಡುತ್ತೇನೆಂದು ನನಗೆ ವಚನವಿತ್ತಿದ್ದಿರಿ. ಆದರೀಗ ಏಕಲವ್ಯನಿಗೆ ಬಿಲ್ವಿದ್ಯೆ ಕಲಿಸಿ ವಚನಭ್ರಷ್ಟರಾದಿರೆಂದು ಹೀಯಾಳಿಸುವ ಮಟ್ಟಕ್ಕೆ ಇಳಿಯುತ್ತಾನೆ. ಅರಮನೆಯ ಹಂಗಿನ ಅನ್ನದ ಋಣದಿಂದಾಗಿ ದ್ರೋಣರು (ಏಕಲವ್ಯ ಸ್ವತಂತ್ರವಾಗಿ ಕಲಿತ ಅವನ ಸಾಮರ್ಥ್ಯದ ಬಗ್ಗೆ ಗೌರವ, ಹೆಮ್ಮೆ ಇದ್ದರೂ) ಏಕಲವ್ಯ ಕಲಿತು ಸಾಧಿಸಿದ ವಿದ್ಯೆಯನ್ನು ನೇರವಾಗಿ ಸಮರ್ಥಿಸುವುದಿಲ್ಲ. ಭೀಮಾರ್ಜುನರಿಂದ ನಿಂದನೆಗೊಳಗಾಗುತ್ತಾರೆ. ಅವರು ಹೇಳಬಹುದಾಗಿತ್ತು. ಏಕಲವ್ಯ ಕೇವಲ ತನ್ನ ಮೂರ್ತಿಯನ್ನಷ್ಟೇ ಗುರುವನ್ನಾಗಿಸಿ ಮನದಾಳದಿಂದ ಗೌರವಿಸಿ, ವಿದ್ಯೆಗಾಗಿ ಸಂಕಲ್ಪಿಸಿ ಸ್ವಸಾಮರ್ಥ್ಯದಿಂದ ಶಬ್ದವೇಧಿಯಂತಹ ವಿದ್ಯೆಯನ್ನು ಕರಗತ ಮಾಡಿಕೊಂಡು ಯಶಸ್ವೀ ಬಿಲ್ವಿದ್ಯಾ ಪಾರಂಗತನಾಗಿ ಬೆಳೆದಿದ್ದಾನೆ. ನಾನು ನೇರವಾದ ಗುರುವಲ್ಲವೆಂದು ನಿರಾಕರಿಸದೆ, ಅರ್ಜುನನ ಮನದಿಚ್ಛೆಯನ್ನು ಪೂರೈಸುವ ಮನಸ್ಥಿತಿಯನ್ನು ಕಾಣುತ್ತೇವೆ. ಅರ್ಜುನ ದ್ರೋಣರನ್ನು ನೀವು ಏನೇ ಆದರೂ ಈ ಏಕಲವ್ಯನಿಂದ ವಚನಭ್ರಷ್ಟರಾದಿರಿ ಎಂದಾಗ, ಗುರುವಿನ ಗೌರವ ಉಳಿಯುವಂತೆ ತಾನೇನು ಮಾಡಬೇಕು? ತನ್ನ ಪ್ರಾಣ ಕೊಟ್ಟಾದರೂ ಗುರುವಿನ ಗೌರವ ಕಾಪಾಡುವೆನೆಂದ ಏಕಲವ್ಯನನ್ನು ದ್ರೋಣರು ನೀನು ಗುರುಕಾಣಿಕೆಯಾಗಿ ನಿನ್ನ ಬಲಗೈ ಹೆಬ್ಬೆರಳನ್ನು ನೀಡೆನ್ನುತ್ತಾರೆ. ಆಗ ಏಕಲವ್ಯ ಭೀಮನನ್ನು ಕುರಿತು ಈ ಹಿಂದೆ ನಾನು ವಿದ್ಯಾಕಾಂಕ್ಷಿಯಾಗಿ ಬಂದಾಗ ಗುರುದಕ್ಷಿಣೆ ನೀಡಲು ನಿನ್ನ ಬಳಿ ಏನಿದೆಯೋ ಬೇಡ ಎಂದು ಅಪಹಾಸ್ಯ ಮಾಡಿದ್ದೆ ಅಲ್ಲವೇ? ನೋಡು ಇಂದು ಗುರು ಬಯಸಿದ ಕಾಣಿಕೆಯನ್ನು ನೀಡುತ್ತಿದ್ದೇನೆ ಎಂದು ಹಿಂದೆ–ಮುಂದೆ ಆಲೋಚಿಸದೆ ತನ್ನ ಬಲಗೈ ಹೆಬ್ಬೆರಳನ್ನು ಕತ್ತರಿಸಿ ಗುರುಗಳಿಗೆ ಕಾಣಿಕೆಯಾಗಿ ನೀಡಿಬಿಡುತ್ತಾನೆ. ಹಿನ್ನೆಲೆಯಲ್ಲಿ ಕಾಡುಜನರು 'ಏಕಲವ್ಯಾ ಕ್ರೂರಮೃಗಗಳು ನಮ್ಮನ್ನು ಅಟ್ಟಿಸಿಕೊಂಡು ಬರುತ್ತಿವೆ, ನಮ್ಮನ್ನು ರಕ್ಷಿಸು. ರಕ್ಷಿಸು ಎಂದು ಬೇಡಿಕೊಳ್ಳುತ್ತಿದ್ದರೂ ಬಾಣ ಪ್ರಯೋಗಕ್ಕೆ ಹೆಬ್ಬೆರಳಿನ ಸಹಕಾರ ದೊರೆಯದೆ ಯಾರನ್ನೂ ರಕ್ಷಿಸಲಾಗದೆ ಅಸಹಾಯಕನಾಗುತ್ತಾನೆ. ಆಗ ಅರ್ಜುನ ಕ್ಷಮಿಸು ಏಕಲವ್ಯ ಎಂದು ಹೇಳಿ ದ್ರೋಣರೊಂದಿಗೆ ಅಲ್ಲಿಂದ ಅವರೆಲ್ಲ ನಿರ್ಗಮಿಸುತ್ತಾರೆ. ಬಿಲ್ಲು ಎಳೆದು ಬಾಣ ಬಿಡಲು ಅವನ ಬಲಗೈ ಹೆಬ್ಬೆರಳು ಅತ್ಯವಶ್ಯಕ. ಅದನ್ನೇ ಕಳೆದುಕೊಂಡ ಅವನ ಬದುಕು ಅಲ್ಲಿಗೇ ಮುಕ್ತಾಯವಾಗುತ್ತದೆ. ಚೆಲ್ಲಿದ ರಕ್ತದಲ್ಲಿ ಏಕಲವ್ಯನ ತಾಯಿಗೆ ದ್ರೋಣರ ಕತ್ತರಿಸಿದ ಕುತ್ತಿಗೆ ಕಾಣುತ್ತದೆಯಂತೆ ಏಕಲವ್ಯನ ಬೆರಳಿಗೆ ದ್ರೋಣರ ಕೊರಳ್ ಅಂತ ಕುವೆಂಪು ಅವರು ಹೇಳಿದರೆ, ಮಹಾಭಾರತದಲ್ಲಿ ದ್ರೋಣರ ಕತ್ತು ಕತ್ತರಿಸುವುದರ ಮುಖೇನ ಮುಯ್ಯಿ ತೀರುತ್ತದೆ ಎಂದು ಗೋವಿಂದ ಪೈ ಹೇಳಿದ್ದಾರೆ. ಆದರೆ ಸಿದ್ದಲಿಂಗಯ್ಯನವರು ತಮ್ಮ ಏಕಲವ್ಯ ನಾಟಕವನ್ನು ಬೇರೆ ದೃಷ್ಟಿಕೋನದಿಂದ ನೋಡುತ್ತಾರೆ. ಪಟ್ಟಣ ಮತ್ತು ಕಾಡಿನ ನಡುವೆ ಒಂದು ನೇರವಾದ ಗೆರೆ ಎಳೆದುಬಿಡುತ್ತಾರೆ. ಇದು ನಗರ, ಇದು ಕಾಡು ಎಂದು ಆ ನಾಟಕದ ಆರಂಭದಲ್ಲೇ ಸೂತ್ರಧಾರನ ಒಂದು ಹಾಡು ಬರುತ್ತದೆ. ನಾಡಿಗೆ ಹೋರಾಡಿ ಪ್ರಾಣವ ಕೊಟ್ಟಂತ ವೀರರ ಕಥೆಯೂ ಅನವರತ. ಆದರಿಲ್ಲಿ ನಾಡಿಗಾಗಿ ಹೋರಾಡಿ ಪ್ರಾಣಬಿಟ್ಟವರ ಕತೆ ಅಳವಡಿಸಲಾಗಿದೆ. ಆದರೆ ಕಾಡಿಗಾಗಿ ಹೋರಾಡಿ ಪ್ರಾಣತೆತ್ತವರ ಕತೆಯನ್ನು, ಅದರ ಮಹತ್ವವನ್ನು ಯಾರೂ ಹೇಳುತ್ತಿಲ್ಲ. ಮುಂದೆ ನಾಡಿಗಾಗಿ ಹೋರಾಡಿದವರ ವಿಷಯದಲ್ಲಿ ಧೃತರಾಷ್ಟ್ರನ ಪ್ರಶ್ನೆಗೆ ಸಂಜಯ ಉತ್ತರ ಕೊಡುತ್ತಾನೆ. ಏನಾಯ್ತು ಎಂದರೆ, ಮಹಾಭಾರತ ಯುದ್ಧದಲ್ಲಿ ಪಾಂಡವರು–ಕೌರವರು ಒಂದಾಗಿದ್ದರು. ಆದರೆ ಏನಾಯ್ತು ಎಂದಾಗ ಮೇಳದವರು ಉತ್ತರ ಕೊಡುತ್ತಾರೆ.

ಹೆಣ್ಣಿನ ಹುಚ್ಚಿನ ಜೂಜಿನ ಮೋಹದಲ್ಲಿ ಮನುಷ್ಯನ ಬದುಕು ಕಾಲಿಗಿಂತ ಕಸವಾಯ್ತು. ಆದರೆ ಕಾಡಿನವರದ್ದೇನು ಎಂದಾಗ ಪ್ರಾರಂಭದಲ್ಲಿ ಕಾಡಿನ ಮರ ಕಡಿಯಲು ಬಂದ ಪಟ್ಟಣದವರನ್ನು ಪ್ರತಿಭಟಿಸಿದ ಕಾಡಿನ ಜನರು ಏಕಲವ್ಯನನ್ನು ಹಾಡಿ ಹೊಗಳಿದಾಗ,

ನಿಮ್ಮ ಏಕಲವ್ಯ ಯಾವ ಸಾಹಸಗಳನ್ನು ಮಾಡಿದ್ದಾನೆ? ಎಷ್ಟು ಯುದ್ಧ ಗೆದ್ದಿದ್ದಾನೆ ಎಂಬ ಪ್ರಶ್ನೆಗೆ ಮೇಳದವರು ಸೊಕ್ಕಿದವರ ಸುಟ್ಟುಹಾಕಿದ ಮುದಿ ಹಕ್ಕಿ ಮರಿ ಮಾಡಿ ಸತ್ತು ಹೋದಾಗ ತನ್ನ ಮಕ್ಕಳಂತೆ ಸಾಕಿ ಸಲಹಿದ, ಅಶಕ್ತ ಜಿಂಕೆಯನ್ನು ಕಾಪಾಡಿದ, ಬಂಡೆಗೆ ಬಾಣ ಬಿಟ್ಟು ನೀರು ಚಿಮ್ಮಿಸಿದ, ದುಷ್ಟ ಪ್ರಾಣಿಗಳನ್ನು ಸಾಕು ಪ್ರಾಣಿಗಳನ್ನಾಗಿಸಿದ, ಹೀಗೆ ಹೇಳುತ್ತಾ ಹೋಗುತ್ತಾನೆ. ನೋಡಿ ಇದು ಮಾನವೀಯತೆ, ಆಗಬೇಕಾಗಿರುವ ಪರಿವರ್ತನೆ. ಪರಾಕ್ರಮವೆನ್ನುವುದು ಬರಿಯ ನಾಶ ಮಾಡುವುದಷ್ಟೇ ಅಲ್ಲ ಎಂದಾಗ, ಪಟ್ಟಣದವರು ನಮ್ಮನ್ನು ಆಳುವ ರಾಜರು ಪಾಂಡವರು, ಕೌರವರು. ನಿಮ್ಮ ರಾಜ ಯಾರು? ಎಷ್ಟು ಯುದ್ಧ ಗೆದ್ದವನೆ? ಎಷ್ಟು ಜನಗಳನ್ನು ಕೊಂದವನೆ? ಎಷ್ಟು ಊರನ್ನು ಸುಟ್ಟು ಹಾಕಿದ್ದಾನೆ? ಎನ್ನುವುದರಲ್ಲಿ ಪಟ್ಟಣದವರ ಪರಾಕ್ರಮವೆಂದರೆ, ನಾಶಮಾಡುವುದು ಎಂಬ ಭ್ರಮೆಯಿರುವುದು ಕಾಣುತ್ತದೆ. ಆದರೆ ಕಾಡಿನವರ ದೃಷ್ಟಿಯಲ್ಲಿ ಪರಾಕ್ರಮವೆಂದರೆ, ಊರು, ಕೇರಿ, ಪಟ್ಟಣವನ್ನು ಧ್ವಂಸ ಮಾಡಿ ಸುಡುವುದು, ಕಡಿಯುವುದು, ಹಿಂಸೆಯಾಗಿರುವುದಿಲ್ಲ. ಬದಲಿಗೆ, ಮನಸ್ಸನ್ನು ಕಟ್ಟುವಂತದ್ದಾಗಿರುತ್ತದೆ. ಈ ಮಾತಿನ ಚಕಮಕಿಯಿಂದ ಹೆದರಿದ ಪಟ್ಟಣದವರು ನಾಡಿಗೆ ಹೋಗಿ ಸೈನಿಕರನ್ನು ಕರೆದುಕೊಂಡು ಬಂದು ಕಾಡಿನ ಜನಗಳು, ಏಕಲವ್ಯ ಹಾಗೂ ಇಡೀ ಕಾಡಿನ ಮೇಲೆ ಆಕ್ರಮಣ ಮಾಡಿ ಕಾಡನ್ನು ಧ್ವಂಸ ಮಾಡಿಬಿಡುತ್ತಾರೆ. ಆಗ ಆ ಎಲ್ಲ ಸೈನಿಕರನ್ನು ಪ್ರತಿಭಟಿಸಲಾಗದ ದುಃಖ, ಅಸಹಾಯಕತೆ ಏಕಲವ್ಯನನ್ನು ಕಾಡುತ್ತದೆ. ತನ್ನ ಹಾಗೂ ತನ್ನ ಕಾಡಿನ ಜನಗಳ ರಕ್ಷಣೆ ಮಾಡಲಸಾಧ್ಯವಾದಾಗ ತನ್ನನ್ನು ಕಂಡು ತನ್ನನ್ನು ಕಂಡು ಹೆದರಿ ಓಡುತ್ತಿದ್ದ ಹುಲಿ, ಸಿಂಹಗಳು ನನ್ನನ್ನು ಕಂಡು ಗುರುಗುಟ್ಟುವಂತೆ ಭಾಸವಾಗುತ್ತಿದೆ. ಹತ್ತಲಾಗದ ಪರ್ವತ, ಬೆಟ್ಟ ಗುಡ್ಡಗಳಿರಲಿಲ್ಲ. ಆದರೆ ಇಂದು ಆ ಸಾಹಸಗಳೆಲ್ಲ ಚಿಕ್ಕದಾಗಿ ಕಾಣಿಸುತ್ತಿದೆ. ತಾನು ಕಲಿತಿರುವ ಬೇಡವಿದ್ಯೆ ಪಟ್ಟಣದವರ ಬಿಲ್ವಿದ್ಯೆಯನ್ನು ಮೀರಿಸಲಾಗಲಿಲ್ಲ. ತನ್ನ ವಿದ್ಯೆಗೆ ಮಿತಿಯಿದೆ ಎಂದರಿತ ಏಕಲವ್ಯ ತನ್ನ ಕಾಡಿನ ಜನಗಳ, ಪ್ರಾಣಿಗಳ, ಕಾಡಿನ ಸಿರಿಸಂಪತ್ತುಗಳನ್ನು ರಕ್ಷಿಸಲು ತಾನು ನಾಡಿನವರ ಬಿಲ್ವಿದ್ಯೆ ಕಲಿಯಬೇಕು ಎಂದು ನಿರ್ಧರಿಸುತ್ತಾನೆ. ತನ್ನ ಈ ನಿರ್ಧಾರವನ್ನು ತಾಯಿ ಮತ್ತು ಮಾವನ ಬಳಿ ಹೇಳಿದಾಗ ತಾಯಿ ಈ ಕಾಡಿನಿಂದ ಮೂರು ಹಗಲು, ಮೂರು ರಾತ್ರಿ ನಡೆದರೆ ಹಸ್ತಿನಾವತಿ ಎಂಬ ರಾಜ್ಯವಿದೆ. ಅಲ್ಲಿ ದ್ರೋಣರೆಂಬ ಗುರು ಅರಸು ಮಕ್ಕಳಿಗೆ ಬಿಲ್ವಿದ್ಯೆ ಕಲಿಸ್ತಾವ್ರೆ. ನೀನು ಅಲ್ಲಿಗೆ ಓಗು, ಇದ್ಯೆ ಕಲಿತು ಬಾ ಎನ್ನುತ್ತಾಳೆ. ಆಗ ಮಾವ ಪಟ್ಟಣದ ಜನ ಒಳ್ಳೆಯವರಲ್ಲ. ಮೋಸ, ವಂಚನೆ, ಕಪಟಿಗಳಾಗಿರುತ್ತಾರೆ. ನಿನ್ನನ್ನು ಹೀಯಾಳಿಸಿ ಅವಮಾನಿಸುತ್ತಾರೆ. ಹೋಗಬೇಡವೆಂದು ತಡೆದರೂ ಕೇಳದೆ ವಿದ್ಯೆಯ ಮಹತ್ವಾಕಾಂಕ್ಷೆಯುಳ್ಳ ಏಕಲವ್ಯ ಪಟ್ಟಣಕ್ಕೆ ಬರುತ್ತಾನೆ. 'ಕಾಡಿನ ತೊರೆಯು ಕಡಲು ಸೇರುವಂತೆ' ಗುರುವನ್ನರಸಿಕೊಂಡು ಏಕಲವ್ಯ ಹೊರಟಿರುತ್ತಾನೆ. ಪಾಂಡವರಿಗೆ ವಿದ್ಯೆ ಕಲಿಸುತ್ತಿರುವ ದ್ರೋಣರನ್ನು ಕೌತುಕದಿಂದ ನೋಡುತ್ತಾ ಇವರು ನನ್ನ ಗುರುಗಳಾದರೆ ನಾನೆಷ್ಟು ಪುಣ್ಯವಂತನೆಂದೂ ನನ್ನ ಕನಸು ನನಸಾಗಲೆಂದು ಬಂದು ದ್ರೋಣರಿಗೆ ನಮಸ್ಕರಿಸಿದಾಗ ಏಕಲವ್ಯನ ಕುಲ, ಮಾತು, ವೇಷಭೂಷಣಗಳು ಅವನ ಮನವಿಯನ್ನು ತಿರಸ್ಕರಿಸುವಂತೆ ಮಾಡುತ್ತದೆ. ಅವನ ಆಸಕ್ತಿಗೆ ಬೆರಗು ಹಾಗೂ ಮೆಚ್ಚುಗೆ ಮೂಡಿದರೂ ನಿಸರ್ಗದ ಅಸಮಾನತೆಯನ್ನು ಉದಾಹರಿಸಿ ಅವನ ಹುಟ್ಟಿನ ಜಾತಿ ಕಾರಣವನ್ನು ಮುಂದೊಡ್ಡಿ ನಿರಾಕರಿಸಿಬಿಡುತ್ತಾರೆ. ನಂತರ ಗುರುಪುತ್ರ ಅಶ್ವತ್ಥಾಮನ ಸಹಕಾರದಿಂದ ಮರದ ಮರೆಯಲ್ಲಿ ಅಡಗಿ ವಿದ್ಯೆ ಕಲಿಯುತ್ತಿದ್ದ ಏಕಲವ್ಯನನ್ನು ಗಮನಿಸಿದ ದ್ರೋಣರು ತನಗೆ ಕಲಿಸಬೇಕೆಂಬ ಮಹದಾಸೆ ಇದ್ದರೂ ಶೂದ್ರರಿಗೆ ವಿದ್ಯೆ ನಿಷಿದ್ಧವೆಂಬ ಕಾರಣದಿಂದ ಕಲಿಸಲಾಗುತ್ತಿಲ್ಲವೆಂಬ ಅಸಹಾಯಕತೆ ವ್ಯಕ್ತಪಡಿಸುತ್ತಾರೆ.

ಆಗ ಏಕಲವ್ಯ 'ನಿಮಗೆ ಕಲಿಸಬೇಕೆಂಬ ಮನಸ್ಸಿದ್ದರೆ ಸಾಕು ಅದೇ ನನಗೆ ಆಶೀರ್ವಾದ' ಎಂದು ಕಾಡಿಗೆ ತೆರಳುತ್ತಾನೆ. ಮುಂದೊಂದು ದಿನ ದ್ರೋಣರು ಶಿಷ್ಯರೊಂದಿಗೆ ಕಾಡಿನಲ್ಲಿ ಬರುತ್ತಿರುವಾಗ ಅಗೋಚರವಾದ ಬಾಣವೊಂದು ಬೇಟೆನಾಯಿಯ ಬಾಯಿ ಮುಚ್ಚಿಸಿದ್ದನ್ನು ಕಂಡು ಅರ್ಜುನ ದಿಗ್ಭ್ರಾಂತನಾದರೂ ದ್ರೋಣರು ಆಶ್ಚರ್ಯಚಕಿತರಾಗುತ್ತಾರೆ. ಮುಂದೆ ಬಲಗೈ ಹೆಬ್ಬೆರಳನ್ನು ಗುರುಕಾಣಿಕೆ ಪಡೆದ ಸಂದರ್ಭ ಇಡೀ ಜಗತ್ತಿಗೇ ತಿಳಿದಿರುವುದಾಗಿದೆ. ಅನಂತರ ಏಕಲವ್ಯ ತನ್ನ ಕಾಡುಜನರ ರಕ್ಷಣೆಗೋಸ್ಕರ ಬಲಗೈನಲ್ಲಿ ಹಿಂದೆ ಸಾಧಿಸಿದ್ದನ್ನು ಅಂದರೆ ಬಿಲ್ವಿದ್ಯೆಯನ್ನು ಪುನಃ ಎಡಗೈಯಲ್ಲಿ ಸಾಧಿಸಿ ಮೊದಲಿನಂತೆ ಹೆಚ್ಚಿನ ಸಾಧನೆ ಮಾಡಿ ಶೌರ್ಯವಂತನಾಗುತ್ತಾನೆ. ಮುಂದೆ ಕುರುಕ್ಷೇತ್ರವೆಂಬ ಧರ್ಮಯುದ್ಧ ಬಂದೊದಗುತ್ತದೆ. ಆ ಸಂದರ್ಭದಲ್ಲಿ ಯುದ್ಧ ಆರಂಭವಾಗುವ ಪೂರ್ವದಲ್ಲಿ ಪಾಂಡವರು ಮತ್ತು ಕೌರವರು ಹಲವಾರು ತಂತ್ರಗಳನ್ನು ಬಳಸಿ ಏಕಲವ್ಯನನ್ನು ತಮ್ಮ ತಮ್ಮ ಪಾಳಯಕ್ಕೆ ಸೇರಿಸಿಕೊಳ್ಳಲು ಬಯಸುತ್ತಾರೆ. ಕೌರವರಿಗೆ ಮಹಾನ್ ವೀರನಾದ ಏಕಲವ್ಯನನ್ನು ತಮ್ಮ ಕಡೆ ಸೇರಿಸಿಕೊಂಡರೆ ಪಾಂಡವರು ನಿದ್ದೆಗೆಡುವುದು ಖಾತ್ರಿ ಎಂಬ ಆಲೋಚನೆ. ಏಕಲವ್ಯ ಬಲಗೈ ಹೆಬ್ಬೆರಳು ಕಳೆದುಕೊಂಡಿರುವ ಪ್ರಕರಣದಲ್ಲಿ ದ್ರೋಣರ ಪಾಲಿರುವುದರಿಂದ ತಮ್ಮ ಪಕ್ಷಕ್ಕೆ ಸೆಳೆದುಕೊಳ್ಳಲು ಕರ್ಣನೇ ಸರಿಯೆಂದು ಕೌರವ ನಿರ್ಧರಿಸುತ್ತಾನೆ. ಈ ಆತಂಕವನ್ನು ಅರಿತ ಪಾಂಡವರು ಏಕಲವ್ಯನನ್ನು ತಮ್ಮ ಪಕ್ಷಕ್ಕೆ ಸೆಳೆದುಕೊಳ್ಳಬೇಕು. ಇಲ್ಲವಾದರೆ ತಟಸ್ಥನಾಗಿರುವಂತೆ ಏನಾದರೂ ಉಪಾಯ ಮಾಡಬೇಕು ಎನ್ನುವ ಧರ್ಮರಾಯನ ಮಾತಿಗೆ ಕೃಷ್ಣ ಒಪ್ಪುತ್ತಾನೆ. ಮಹಾ ತಂತ್ರಗಾರನಾದ ಕೃಷ್ಣ ಏಕಲವ್ಯನೊಂದಿಗೆ ಒಪ್ಪಂದ ಮಾಡಿಕೊಳ್ಳಲು ಅಜುನನನ್ನೇ ಮುಂದೆ ತರುವ ಅವರ ತಂತ್ರಗಾರಿಕೆ ಮತ್ತಷ್ಟು ನಿಚ್ಚಳವಾಗುತ್ತದೆ. ಮುಂದೆ ಅರ್ಜುನ, ಕೃಷ್ಣ ಮತ್ತು ದುರ್ಯೋಧನ–ಕರ್ಣರು ಒಂದೇ ಏಕಕಾಲದಲ್ಲಿ ಏಕಲವ್ಯನ ಬಳಿ ಬಂದ ಅರ್ಜುನ ಮೆಚ್ಚುಗೆ ಮಾತನಾಡುವುದು ಹೃದಯಾಂತರಾಳದಿಂದ ಬಂದುದಾಗಿರದೆ ಒಪ್ಪಂದಕ್ಕಾಗಿ ತನ್ನನ್ನು ತಾನೇ ದೀನನಾಗಿಸಿಕೊಂಡಿದ್ದಾನೆ ಎನಿಸುತ್ತದೆ. ಅರ್ಜುನ ಬಂದು ತನ್ನ ಗುರುತು ಸಿಕ್ಕಿತೇ

ಏಕಲವ್ಯ ಎಂದಾಗ, ಓಹ್! ಅರ್ಜುನ. ನಿನ್ನನ್ನು ಮರೆಯಲು ಸಾಧ್ಯವೇ? ನನ್ನ ಗುರು ದ್ರೋಣಾಚಾರ್ಯರನ್ನು ನೆನೆದಾಗಲೆಲ್ಲ ಮೊದಲು ನೆನಪಾಗುವುದು ನೀನು ಮತ್ತು ನಿನ್ನ ಅಕಾರ್ಯಗಳು ಎಂದು ನೆನಪಿಸುತ್ತಾನೆ. ಆಗ ಅರ್ಜುನ ಹಿಂದಿನದನ್ನು ಮರೆತು ನಮ್ಮ ಧರ್ಮಯುದ್ಧಕ್ಕಾಗಿ ನಿನ್ನನ್ನು ನಿನ್ನ ಸಹಾಯ ಬೇಡಲು ಬಂದೆನೆಂದಾಗ ಏಕಲವ್ಯ 'ಒಬ್ಬ ಯಕಶ್ಚಿತ್ ಬೇಡನನ್ನು ಬೇಡಲು ನಿಮ್ಮ ಶಾಸ್ತ್ರ ಸಮ್ಮತಿಸುತ್ತದೆಯೇ ಗಾಂಢೀವಿ? ಸಾಧ್ಯವಿಲ್ಲ ಅರ್ಜುನ. ಹಿಂದಿನ ಘಟನೆಯನ್ನು ಮರೆಯಲಾಗುತ್ತಿಲ್ಲ. ಆ ನೆನಪು ನನ್ನನ್ನು ಹಿಂಸಿಸುತ್ತಿದೆ. ಅರ್ಜುನ ನೀನು ಶಾಸ್ತ್ರಸಮ್ಮತವಾಗಿ ಮಾತನಾಡಿದೆಯಲ್ಲವೇ? ಶಾಸ್ತ್ರ ನಿನಗೆ ಬದುಕಿನ ದಾರಿಯ ಸೂತ್ರ. ಆದರೆ ನಿನ್ನ ಶಾಸ್ತ್ರಕ್ಕೆ ನನ್ನ ಸಮ್ಮತಿಯಿಲ್ಲ. ನಾನು ಬಿಲ್ವಿದ್ಯೆ ಕಲಿಯುವುದನ್ನು ನೀನು ವಿರೋಧಿಸಿದೆ. ಕಲಿತ ನಂತರ ಅದನ್ನು ಇಲ್ಲವಾಗಿಸಲು ಯತ್ನಿಸಿದೆ. ಹೆಬ್ಬೆರಳು ಕತ್ತರಿಸಿದಾಗ ಆದ ಗಾಯ ಮಾಗಿದ್ದರೂ ಹೃದಯದಲ್ಲಾದ ಗಾಯ ಮಾಗಲು ಯುಗಯುಗಗಳೇ ಬೇಕೆನಿಸುತ್ತದೆ. ಈಗ ಬೆಂಬಲ ಯಾಚಿಸಲು ಬಂದಿರುವೆಯಲ್ಲಾ. ಆಕಸ್ಮಿಕಗಳಲ್ಲಿ ನನಗೆ ನಂಬಿಕೆಯಿಲ್ಲ. ಎಲ್ಲ ಬೇಡ ಹಾಗೂ ಕೆಳವರ್ಗದವರು ಗುರುಮುಖೇನ ವಿದ್ಯೆ ಕಲಿತು ಶ್ರೇಷ್ಠ ಬಿಲ್ವಿದ್ಯಾಗಾರರಾಗುವ ವಿಚಾರ ಸಾಮಾನ್ಯ ಸಂಗತಿಯಾಗಬೇಕು. ಹಾಗೆ ನೀವು ಯೋಚಿಸಲೂ ಹಿಂಜರಿಯುವಿರಿ. ಹೀಗಿರುವಾಗ ನಿಮಗೆ ನನ್ನ ಬೆಂಬಲದ ಪ್ರಶ್ನೆಯೇ ಬರುವುದಿಲ್ಲವೆಂದಾಗ ಕೃಷ್ಣನೂ ಅಧರ್ಮವನ್ನು ಅಳಿಸಿಹಾಕಲು ನೀನು ಪಾಂಡವರ ಪಕ್ಷ ವಹಿಸು. ನಿನ್ನ ಕೀರ್ತಿ ಹೆಚ್ಚುತ್ತದೆ ಎಂದ ಕೃಷ್ಣನ ಮಾತನ್ನೂ ನಿರಾಕರಿಸಿಬಿಡುತ್ತಾನೆ.

ಪಾಂಡವರ ಕುಲಮದವನ್ನು ಹಾಗೂ ಅರ್ಜುನನ ಅಹಂಕಾರವನ್ನೇ ಅಳಿಸುವುದು ನಿನ್ನ ಗುರಿಯಾಗಿದ್ದರೆ, ನಮ್ಮನ್ನು ಬೆಂಬಲಿಸು ಎಂದ ದುರ್ಯೋಧನನಿಗೆ – ನಿನಗೆ ಅರ್ಜುನನ ಕುಲಮದ ಮಾತ್ರ ಅಡಗಬೇಕು. ಇದರಿಂದ ಈ ಲೋಕದ ಮೇಲು-ಕೀಳು ನಾಶವಾಗಲಿ ಎಂದಲ್ಲ. ನಿನಗೆ ನಿನ್ನ ಸ್ವಾರ್ಥವೇ ಮುಖ್ಯ. ಕುಲಪ್ರತಿಷ್ಠೆಯ ವಿನಾಶ ಅಲ್ಲವೆಂದಾಗ ಕರ್ಣನು ನಿನ್ನ ಹಾಗೆ ನನ್ನನ್ನೂ ಸೂತಪುತ್ರನೆಂದು ಜರಿದರೆಂದು ಹತ್ತಿರವಾಗಲು ಬಯಸಿದ ಕರ್ಣನಿಗೆ, ನನ್ನನ್ನು ನಿಷಾದನೆಂದು ಯಾರೇ ನೋಯಿಸಿದ್ದರೂ ನಿನ್ನ ಹಾಗೆ ನಾನು ಯಾರ ಹಂಗಿಗೂ ಒಳಗಾಗಿಲ್ಲ. ಆದರೂ ನನಗೂ-ನಿನಗೂ ಹೋಲಿಕೆಯೆಲ್ಲಿ? ನೀನೀಗ ಸೂತಪುತ್ರನಲ್ಲ ಅದನ್ನು ಮೀರಿ ಬೆಳೆದಿದ್ದೀಯ. ನೀನೀಗ ಅಂಗಾಧಿಪತಿ. ಆದರೆ ನಾನಿನ್ನೂ ಬೇಡ. ಅದಕ್ಕಾಗಿಯೇ ನನಗೆ ಇವರೀರ್ವರ ಹಿತಾಸಕ್ತಿ ಗಳು ಬೇರೆಬೇರೆಯಾಗಿ ಕಾಣುತ್ತಿಲ್ಲ. ಸುಯೋಧನ ನಿನ್ನೊಬ್ಬನನ್ನು ಒಪ್ಪಿಕೊಂಡಿದ್ದಾನೆ. ಇಡೀ ಸೂತಕುಲವನ್ನಲ್ಲ. ಅದು ಹಿಂದೆ ಇದ್ದ ಸ್ಥಿತಿಯಲ್ಲೇ ಇದೆ. ನೀನೂ ಅಷ್ಟೆ ನೀನೊಬ್ಬ ಬೆಳೆದೆ. ನೀನು ನಿನ್ನ ಕುಲದವರನ್ನು ನೋಡದೆ, ಒಡನಾಟ ಮಾಡದೆ ಹಲವು ಕಾಲವಾದವು. ಬೆಸ್ತನ ಮೈವಾಸನೆಗೆ ಕುಲಸ್ಥರಿಂದ ಜನರು ಹತ್ತು ಗಾವುದ ದೂರ ಓಡಿದರೆ ನೀನು ನೂರು ಗಾವುದ ದೂರ ಓಡುವ ಸ್ಥಿತಿಯಲ್ಲಿದ್ದೀಯ. ನನ್ನ ಮಾತು ಸುಳ್ಳೇ ದಾನಶೂರ? ನನಗೆ ಎರಡೂ ಪಕ್ಷಗಳೂ ಒಂದೇ. ಅವರವರ ಸ್ವಾರ್ಥ ಸಾಧನೆಗಾಗಿ ಬಡಿದಾಡುತ್ತಿದ್ದಾರೆ. ಇವರಿಬ್ಬರ ಕಚ್ಚಾಟದಲ್ಲಿ ನಾವೇಕೆ ಬಲಿಪಶುವಾಗಬೇಕು? ಇವರಿಬ್ಬರಲ್ಲಿ ಒಂದು ಪಕ್ಷ ವಹಿಸಿ ಯಾರೊಬ್ಬರ ದಾಳ ನಾನಾಗಲಾರೆ. ಎಲ್ಲೆಲ್ಲಿಯೂ ಇರುವ ಅನ್ಯಾಯದ ವಿರುದ್ಧ ನನ್ನ ಯುದ್ಧ. ಮೇಲು-ಕೀಳೆಂಬ ವಂಚನೆಯನ್ನ ಅಳಿಸಲು ನನ್ನ ಸಮರ. 'ಕುರುಕ್ಷೇತ್ರ ಕೇವಲ ಉಳ್ಳವರ ನಡುವಿನ ಕಚ್ಚಾಟ'. ನನ್ನದು ಇಲ್ಲದವರ ಪರವಾದ ಹೋರಾಟ. ಈ ಸಂಘರ್ಷ ಕುರು-ಪಾಂಡವರಿಬ್ಬರ ವಿರುದ್ಧವೂ ಸಾಗಬೇಕು. ಆಗ ಮಾತ್ರ ತುಳಿತಕ್ಕೆ ಸಿಕ್ಕವರ ಬಾಳಿನಲ್ಲಿ ಬೆಳಕು ಮೂಡುತ್ತದೆ' ಎನ್ನುತ್ತಾನೆ.

ಏಕಲವ್ಯನ ಈ ಮಾತುಗಳು ಶತಶತಮಾನಗಳಿಂದಲೂ ಇಂತಹ ಅಸಹಾಯಕತೆ, ಅವಮಾನ, ತಿರಸ್ಕಾರ, ಅನ್ಯಾಯ, ಶೋಷಣೆ, ಬಹಿಷ್ಕಾರ, ದಬ್ಬಾಳಿಕೆ, ದೌರ್ಜನ್ಯಗಳಿಂದ ನರಳುತ್ತಿರುವ ದಲಿತರ ಮೂಕ ಸಂಕಟಕ್ಕೆ ದನಿಯಾಗುತ್ತದೆ. ಕುರು-ಪಾಂಡವರ ಹೊಗಳಿಕೆಗೆ, ಪುಸಲಾವಣೆಗೆ, ಚಿತಾವಣೆಗೆ, ಧರ್ಮ-ಶಾಸ್ತ್ರಗಳಿಗೆ ಮರುಳಾಗದೆ ಅವರವರ ಸ್ವಾರ್ಥಕ್ಕಾಗಿ ಬಡಿದಾಡುವ ಅವರ ಕಚ್ಚಾಟದಲ್ಲಿ ನಾವೇಕೆ ಬಲಿಪಶುವಾಗಬೇಕೆಂದು ವಿವೇಕವಂತನಾಗಿ ಚಿಂತಿಸಿ ತಟಸ್ಥ ಧೋರಣೆ ತಾಳುತ್ತಾನೆ. ಏಕಲವ್ಯ ಈ ಸಂದರ್ಭ ದಲ್ಲಿ ಅರ್ಜುನ ಹಿಂದೆ ಮಾಡಿದ ಅನ್ಯಾಯವನ್ನು ಖಂಡಿಸಿ, 'ಆಸಕ್ತಿಯಿರುವ ಯಾರು ಬೇಕಾದರೂ ಗುರುಮುಖದಿಂದ ವಿದ್ಯೆ ಕಲಿತು ಶ್ರೇಷ್ಠ ಬಿಲ್ವಿದ್ಯಾಗಾರರಾಗುವುದು ಸಾಮಾನ್ಯ ಸಂಗತಿಯಾಗಬೇಕು' ಎಂಬ ವಿವೇಕವನ್ನು ಪ್ರತಿಪಾದಿಸುತ್ತಾನೆ. ಅಧಿಕಾರಶಾಹಿ, ಪುರೋಹಿತಶಾಹಿಗಳು ತಮ್ಮ ಸ್ವಾರ್ಥಕ್ಕಾಗಿ ಸಾಮಾಜಿಕ ತಾರತಮ್ಯಗಳನ್ನು ಹುಟ್ಟುಹಾಕಿ ಮೆರೆಯುತ್ತಿರುವುದನ್ನು ಖಂಡಿಸುತ್ತಾನೆ.

ಹೀಗಾಗಿ ಏಕಲವ್ಯ ನಾಟಕವು ಸಮಕಾಲೀನ ಸಂವೇದನೆಯನ್ನು ಬಿಂಬಿಸುವಲ್ಲಿ ಸಫಲವಾಗಿದೆ. ಮಹಾಭಾರತದ ಕತೆಗಿಂತಲೂ ಭಿನ್ನವಾಗಿರುವುದಲ್ಲದೆ, ಪುರಾಣ ಕತೆಯೊಂದನ್ನು ವರ್ತಮಾನ ಸಂದರ್ಭಕ್ಕೆ ಎಳೆದುತಂದು ನಗರ ನಾಗರಿಕತೆಯ ಸ್ವಾರ್ಥ, ಅಹಂಕಾರ, ಕ್ರೌರ್ಯಗಳಿಗೆ ಬಲಿಯಾಗಿಯೂ ಅದರಿಂದ ಪಾಠ ಕಲಿತು ದುಷ್ಟ ಶಕ್ತಿಗಳ ದಮನಕ್ಕೆ ವೀರ ಸಂಕಲ್ಪ ಕೈಗೊಳ್ಳುವ ದಲಿತ ತರುಣನ ಎಚ್ಚೆತ್ತ ವಿವೇಕ ಹಾಗೂ ಜಾಗೃತ ಚೈತನ್ಯಕ್ಕೆ ಪ್ರತಿಮೆಯಾಗುವಂತೆ ಡಾ. ಸಿದ್ದಲಿಂಗಯ್ಯನವರು ವ್ಯಾಖ್ಯಾನಿಸಿರುವ ರೀತಿ ಸಾಂಸ್ಕೃತಿಕ ಕುತೂಹಲವನ್ನು ಕೆರಳಿಸಿ ಓದುಗರನ್ನು ಬಡಿದೆಬ್ಬಿಸುವಂತಿದೆ.

ಉಳ್ಳವರ ಕಚ್ಚಾಟದಲ್ಲಿ ಪಾಲ್ಗೊಳ್ಳದೆ ತಟಸ್ಥ ಧೋರಣೆ ತಳೆಯುವ ನಿಲುವು, ಕಾಡಿನ ಸಂಪನ್ಮೂಲ, ಪ್ರಾಣಿಗಳ–ಕಾಡುಜನರ ರಕ್ಷಣೆ, ಗುರುಮುಖೇನ ವಿದ್ಯೆ ಕಲಿಯಲು ಸರ್ವರಿಗೂ ಸಮಾನತೆಯ ಅವಕಾಶವಾಗಬೇಕೆಂಬ ಧೋರಣೆ, ಅನ್ಯಾಯದ ವಿರುದ್ಧದ ಪ್ರತಿಭಟನೆ ಇವೆಲ್ಲವೂ ಪ್ರಸಿದ್ಧ ಬರಹಗಾರರಾದ ಡಾ. ಸಿದ್ದಲಿಂಗಯ್ಯನವರ ಈ 'ಏಕಲವ್ಯ' ನಾಟಕ ಸಾಹಿತ್ಯ ಕ್ಷೇತ್ರದಲ್ಲಿ ಉನ್ನತ ಸ್ಥಾನದಲ್ಲಿ ಗುರುತಿಸಿಕೊಂಡಿದೆ.

ಗ್ರಂಥ ಋಣ:

೧. ಕುವೆಂಪು (ಕೆ.ವಿ. ಪುಟ್ಟಪ್ಪ): ಬೆರಳ್ಗೆ ಕೊರಳ್ –೨೦೧೩
ಉದಯರವಿ ಪ್ರಕಾಶನ, ಕೃಷ್ಣಮೂರ್ತಿಪುರಂ, ಮೈಸೂರು–೫೭೦೦೦೪
೨. ಸಿದ್ಧಲಿಂಗಯ್ಯ: ಏಕಲವ್ಯ, ಅಂಕಿತ ಪುಸ್ತಕ, – ೮೨೦೧೬
ಶ್ಯಾಮ್ಸಿಂಗ್ ಕಾಂಪ್ಲೆಕ್ಸ್, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು–೫೬೦೦೦೪

ನೇಮಿಚಂದ್ರರ ಪ್ರಬಂಧಗಳಲ್ಲಿ ಜೀವನದರ್ಶನ

ದಾಕ್ಷಾಯಣಮ್ಮ ಎಸ್.
ಸಂಶೋಧನಾರ್ಥಿ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

"

ಸಾಹಿತ್ಯ ಜೀವನದ ಪ್ರತಿಬಿಂಬ ಎಂದು ಹೇಳುವಂತೆ ಸಾಹಿತ್ಯದಲ್ಲಿಯೂ ಬದುಕಿನ ಪ್ರೀತಿಯ ಸೆಲೆ ಇದೆ. ಬದುಕು ಹೇಗಿರಬಹುದು, ಮತ್ತು ಹೇಗಿರಬೇಕು ಎನ್ನುವುದರ ಆಶಾವಾದಿ ಕಲ್ಪನೆ ಇದೆ. ಇವು ನಾವು ಸಾಹಿತ್ಯದಲ್ಲಿ ನಿರೀಕ್ಷಿಸುವ ವಿಶಾಲ ಅರ್ಥದ ಅಂಶಗಳು, ಆಧುನಿಕ ಸಾಹಿತ್ಯ ಘಟ್ಟದಲ್ಲಿ ಬಂದಂತಹ ಅನೇಕ ಸಾಹಿತ್ಯ ಪ್ರಕಾರಗಳು ಮನುಷ್ಯ ಜೀವನದ ಚಹರೆಗಳ ಶೋಧನೆಗೆ ಒಡ್ಡಿಕೊಳ್ಳುವ ಮೂಲಕ ಅದರ ಹಿಂದಿನ ಪ್ರಧಾನ ವಾಸ್ತವದ ಅಂಶಗಳನ್ನು ಗುರುತಿಸುತ್ತಲೇ ಬಂದಿದೆ. ಈ ಹಿನ್ನೆಲೆಯಲ್ಲಿ ಬಂದಂತಹ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ ಪ್ರಬಂಧ.

ಕನ್ನಡ ಸಾಹಿತ್ಯ ಜಗತ್ತು ಬೆಳೆದು ತನ್ನ ವಿಶಾಲ ಅಸ್ತಿತ್ವವನ್ನು ರೂಪಿಸಿಕೊಳ್ಳುವ ಸಂದರ್ಭದಲ್ಲಿ ಪ್ರಬಂಧವನ್ನು ಒಂದು ಸಾಹಿತ್ಯ ಪ್ರಕಾರವಾಗಿ ಗುರುತಿಸಿತು. ಇಂದಿನ ಆಧುನಿಕ ಯುಗದಲ್ಲಿ ಪ್ರಬಂಧ ವಸ್ತುವಿನ ಮಾನದಂಡ ಹಿತಾಸಕ್ತಿಗಳನ್ನು ಗಮನಿಸಿದಾಗ ಮನುಷ್ಯ ಜೀವನವನ್ನು ಬದಲಾಯಿಸುತ್ತಿರುವ ವಾಸ್ತವ ಬೆಳವಣಿಗೆಗಳು ವಿದ್ಯಮಾನಗಳಾದ ಜಾಗತೀಕರಣ, ಉದಾರೀಕರಣ, ಮುಕ್ತಮಾರುಕಟ್ಟೆಯ ಮೌಲ್ಯಗಳು ಬದುಕಿನ ಆಯ್ಕೆಗಳನ್ನು ಕ್ರಮಬದ್ದವಾಗಿ ನಿರ್ಧರಿಸುವ ಇಂದಿನ ದಿನಗಳಲ್ಲಿ ಪ್ರಬಂಧಗಳ ಲೇಖನಗಳು ಮನುಷ್ಯನ ಬದುಕನ್ನು ಪುನರ್ ಮೌಲ್ಯೀಕರಣಕ್ಕೊಳಪಡಿಸುತ್ತವೆ. ಈ ಹಿನ್ನೆಲೆಯಲ್ಲಿ ಬಂದಂತಹ ಪ್ರಮುಖವಾದ ಪ್ರಬಂಧಗಳು ನೇಮಿಚಂದ್ರರ ಬದುಕು ಬದಲಿಸಬಹುದು, ಸಾವೆ ಬರುವುದಿದ್ದರೆ ನಾಳೆ ಬಾ: ಸೋಲೆಂಬುದು ಅಲ್ಪವಿರಾಮ

ಇವುಗಳಾಗಿವೆ.

ಅಪ್ಪಟ ಆಶಾವಾದಿಯಾದ ನೇಮಿಚಂದ್ರ ಮೂಲತಃ ವಿಜ್ಞಾನಿ ವೃತ್ತಿಯಿಂದ ಏರೋನಾಟಿಕಲ್ ಎಂಜಿನಿಯರ್ ಆಗಿದ್ದವರು. ಆದರೆ ಇವರ ಆಸಕ್ತಿಗಳ ವಿಸ್ತಾರ ಬಹಳ ವೈವಿಧ್ಯವಾದದ್ದು. ಬದುಕಿನ ಹಲವು ಮುಖಗಳನ್ನು ಪರಿಚಯ ಮಾಡಲು ಹೊರಟ ಲೇಖಕಿ ಬದುಕಿನ ಸೂಕ್ಷ್ಮತೆಗಳನ್ನು, ಗಂಭೀರ ಸಮಸ್ಯೆಗಳನ್ನು ವಿವರಿಸುತ್ತ ಒಂದು ಭಿನ್ನವಾದ ಅನುಭವ ಲೋಕವನ್ನು ಕಟ್ಟಿಕೊಡುವ ಮೂಲಕ ಸಾಂಪ್ರದಾಯಿಕ ನೆಲೆಗಳನ್ನು ಮೀರುವ ಪ್ರಯತ್ನ ಮಾಡುತ್ತಾರೆ.ಇವರ ಅನೇಕಾನೇಕ ಪ್ರಬಂದ ಸಂಕಲನಗಳು ಮಾನವ ಜೀವನವನ್ನು ಕುರಿತಾಗಿದ್ದು ಒಬ್ಬ ಸಾಮಾನ್ಯ ಮನುಷ್ಯನಿಂದ ಹಿಡಿದು ವಿಶ್ವದ ಅತ್ಯಂತ ಶ್ರೀಮಂತನ ಜೀವನದ ಪಯಣದವರೆಗೆ ಮತ್ತು ವಿಶೇಷ ಚೇತನರಿಂದ ಹಿಡಿದು ಸಾವಿನ ಅಂಚಿನಲ್ಲಿ ಕುಳಿತಿರುವ ಅನೇಕ ಸಾಧಕರವರೆಗಿನ ಜೀವನ ದರ್ಶನದೊಳಗೆ ತಮ್ಮ ಜೀವನದಲ್ಲಿ ಕಂಡ ಅನುಭವ ಮಾದರಿಗಳನ್ನು ಪ್ರತ್ಯಕ್ಷ ಉದಾಹರಣೆಗಳನ್ನು ಕೊಡುತ್ತಾ ಅದಕ್ಕೆ ಇತ್ತೀಚಿನ ವೈಜ್ಞಾನಿಕ ವಿಧಾನದಿಂದ ಬಂದೆರಗಿರುವ ಕಾರಣ ಪರಿಣಾಮಗಳನ್ನು ಕೊಡುತ್ತಾರೆ. ಈ ಹಿನ್ನೆಲೆಯಲ್ಲಿ ಬಂದಂತಹ ನೇಮಿಚಂದ್ರರ ಪ್ರಬಂಧ ಸಂಕಲನ ನವಕರ್ನಾಟಕ ಪ್ರಕಾಶನದಿಂದ ೨೦೦೫ ರಲ್ಲಿ ಪ್ರಕಟವಾದ 'ಬದುಕು ಬದಲಿಸಬಹುದು' ಪ್ರಬಂಧಸಂಕಲನವಾಗಿದೆ. ಈ ಪ್ರಬಂಧದ ಒಂದೊಂದು ಲೇಖನವು ಪ್ರಸ್ತುತ ಆಧುನಿಕ ಧಾವಂತದ ಬದುಕಿನ ವಿವಿಧ ರೂಪಗಳ ಜೀವನದರ್ಶನವನ್ನು ಒಂದೊಂದು ನೆಲೆಯಲ್ಲಿ ಕಟ್ಟಿಕೊಡುತ್ತವೆ. ಜಗತ್ತು ಬದಲಾಗಬಹುದು, ಬದುಕು ಮುಗಿಯುವುದಿಲ್ಲ ಅಲ್ಲಿಗೆ..., ಬದುಕು ಬರಿದಾಗದಿರಲಿ, ಮರಳಿ ಬದುಕಿಗೆ ಈ ಪಯಣ, ಇನ್ನೂ ಅನೇಕಾನೇಕ ಲೇಖನಗಳು ಬದುಕಿನ ಕಷ್ಟ–ಸುಖಗಳಿಗೆ ಹೆದರದೆ ಬದುಕನ್ನು ಪುನರ್ ನಿರ್ಮಿಸಿಕೊಳ್ಳಲು ಹೇಳುತ್ತವೆ. "ಎಷ್ಟೋ ಬಾರಿ ಅಂದುಕೊಳ್ಳುತ್ತೇವೆ: 'ನನ್ನೊಬ್ಬನಿಂದ ಏನಾಗುತ್ತದೆ? ನನ್ನೊಬ್ಬಳಿಂದ ಜಗತ್ತು ಬದಲಾಗಿಬಿಡುತ್ತದೆಯೇ? ಇಂತಹ ಸಿನಿಕತನದಲ್ಲೇ ನಮ್ಮಿಂದಾಗುವುದನ್ನು ಮಾಡದೆ ಮಲಗುತ್ತೇವೆ. ದಿಟವಾಗಿ ನೋಡಿದರೆ ಒಬ್ಬನೇ ಒಬ್ಬ ವ್ಯಕ್ತಿಯಿಂದ ಏನಾದರೂ ಆಗಲು ಸಾಧ್ಯವಿದೆಯೇ?"[೧] ಇದೆ ಎಂದು ಹೇಳರುವ ಮೂಲಕ ಅಮೇರಿಕಾದ ಇಡೀ ವರ್ಣಭೇದ ನೀತಿಯ ವಿರುದ್ಧ ಹೋರಾಡಿದ ರೋಸಾ ಪಾರ್ಕ್‌ಳನ್ನು ರೂಪಕವಾಗಿ ತೆಗೆದುಕೊಳ್ಳುತ್ತಾರೆ. ಅಮೆರಿಕಾದ ಬಸ್ಸುಗಳಲ್ಲಿ ಕಪ್ಪು ಜನರಿಗೆ ಮುಂದಿನ ಸಾಲಿನಲ್ಲಿ ಕುಳಿತುಕೊಳ್ಳುವ ಹಕ್ಕಿರಲಿಲ್ಲ. ಡಿಸೆಂಬರ್ ೧, ೧೯೫೫ ದುಡಿದು ದಣಿದ ಕಪ್ಪು ಮಹಿಳೆ ರೋಸಾಪಾರ್ಕ್ ಬಸ್ಸಿನೊಳಗೆ ಹತ್ತಿದಾಗ ಮುಂದಿನ ಸೀಟುಗಳು ಖಾಲಿ ಇದ್ದದ್ದರಿಂದ ಅಲ್ಲಿಯೇ ಕುಳಿತಳು. ಮುಂದಿನ ನಿಲ್ದಾಣದ ಬಳಿ ಹತ್ತಿದ ಬಿಳಿಯರು ಹಿಂದೆ ಹೋಗುವಂತೆ ಹೇಳಿದರೂ ರೋಸಾ ಕದಲದೇ ಕುಳಿತಿದ್ದಳು ಅವಳು ನಿಶ್ಚಯ ಮಾಡಿಯಾಗಿತ್ತು ಕರಿಯರ ಹಕ್ಕುಗಳನ್ನು ಪಡೆಯಲು ಹೋರಾಡಬೇಕೆಂಬುದಾಗಿ ಈಕೆಯ ಹೋರಾಟದ ಪ್ರತಿಫಲವಾಗಿ ಕಡೆಗೂ ಅಮೆರಿಕಾದ ಸುಪ್ರಿಂಕೋರ್ಟ್ ಕರಿಯರ ಹಕ್ಕುಗಳಿಗೆ ನ್ಯಾಯ ಒದಗಿಸಿತು.

ಶೋಷಣೆಯಿಂದ ಹೊರಬರಲು ದಿಟ್ಟ ಧೈರ್ಯ ಮಾರ್ಗವನ್ನು ನಾವೇ ಕಂಡುಕೊಳ್ಳಬೇಕು ಇದರಿಂದ ಶೋಷಣೆಯ ಬದುಕು ಬದಲಾಗಬಹುದು ಆ ಮೂಲಕ ಬದುಕಿಗೊಂದು ಹೊಸತನ ಸಿಗುತ್ತದೆ. ನನ್ನೊಬ್ಬಳಿಂದ ಏನೂ ಸಾಧ್ಯವಿಲ್ಲ ಎನ್ನುವ ನಕಾರಾತ್ಮಕ ಮನೋಭಾವದ ಸಂಕುಲಕ್ಕೆ ನೇಮಿಚಂದ್ರರ ಲೇಖನದ ರೋಸಾಪಾರ್ಕ್ ದಿಟ್ಟ ಉದಾಹರಣೆಯಾಗಿ ನಿಲ್ಲುತ್ತಾಳೆ.

ಜೀವನವೇ ಬೇಸರವೆನಿಸಿದಾಗ ಅದನ್ನು ಮರುನಿರ್ಮಿಸಿಕೊಳ್ಳಲು ಹೊರಟ ಹಲವಾರು ಸಾಧಕರ ಜೀವನ ಕಥೆಗಳನ್ನು ಬದುಕಿಗೆ ಹೊಸತನ ಕಂಡುಕೊಳ್ಳಲು ಪ್ರೇರೇಪಿಸುವ ನೇಮಿಚಂದ್ರರ ಅನೇಕ ಪ್ರಬಂಧ ಲೇಖನಗಳಲ್ಲಿ ಜಾನ್ ಗೊಡಾರ್ಡ್ ಬಗೆಗಿನ ಬರವಣಿಗೆಯೂ ನನಗೆ ಪ್ರಮುಖವೆನಿಸುತ್ತದೆ. ಜಾನ್ ಗೊಡಾರ್ಡ್ ತಾನು ಹದಿನೈದು ವರ್ಷದವನಿರುವಾಗ ತನ್ನ ಕನಸುಗಳ ಪಟ್ಟಿಯನ್ನು "My life list" ಮಾಡಲು ಪ್ರಾರಂಭಿಸುತ್ತಾನೆ. ಆತ ಬೆಳೆದಂತೆ ಕನಸುಗಳ ಪಟ್ಟಿಯೂ ದೊಡ್ಡದಾಗುತ್ತದೆ. ಆ ಪಟ್ಟಿಯಲ್ಲಿ ೧೨೭ ಅಂಶಗಳು ಸೇರಿದ್ದವು. ಆತ ತನ್ನ ಕನಸುಗಳ ಪಟ್ಟಿಯನ್ನು ಕಡಿಮೆ ಮಾಡಬಹುದಿತ್ತು. ಆದರೆ ಹಾಗೆ ಮಾಡದೆ ಎದ್ದು ಹೊರನಡೆದು ಅಷ್ಟು ಕನಸುಗಳನ್ನು ವಾಸ್ತವವಾಗಿಸಿದ ಆ ನಂತರವೂ ಗೊಡಾರ್ಡ್ ಕನಸು ಕಾಣುವುದನ್ನು ನಿಲ್ಲಿಸಲಿಲ್ಲ. ಬದುಕಿಗೆ ಹೊಚ್ಚ ಹೊಸ ಕನಸುಗಳು ಬೇಕು, ಸದಾ ಹೊಸತನ್ನು ಬಯಸುವ ಜೀವನಕ್ಕೆ ಸಾರ್ಥಕ ಶ್ರಮದ ಅಗತ್ಯವಿದೆ. ಈ ಲೇಖನದ ಬಗೆಗೆ ಸ್ವತಃ ನೇಮಿಚಂದ್ರರ ಅಭಿಪ್ರಾಯ ಹೀಗಿದೆ, "ನಮ್ಮ ಕನಸುಗಳಿಗೆ ಎಂಥ ಶಕ್ತಿ ಇದೆ! ಕನಸು ಕಂಡರೆ ಸಾಕು ರೆಕ್ಕೆ ಮೊಳೆಯುತ್ತವೆ ಹಾರಲು, ಕನಸುಗಳು ನಮ್ಮನ್ನು ಕೊಂಡೊಯ್ಯುತ್ತವೆ ಸಪ್ತಸಾಗರದಾಚೆಗೆ"[೨]

ಮಾನವ ಬದುಕಿನಲ್ಲಿ ಎಲ್ಲವನ್ನು ಕಳೆದುಕೊಂಡರೂ ಆಶಾವಾದವನ್ನು ಕಳೆದುಕೊಳ್ಳಬಾರದು. 'ಆಸೆಯ ಮೇಲೆ ಆಕಾಶ ನಿಂತಿದೆ' ಎಂಬ ಗಾದೆ ಪ್ರಚಲಿತದಲ್ಲಿದೆ. ನಾಳೆ ಎಂಬ ಭರವಸೆ ಕಳೆದ ನೆನ್ನೆಗಳನ್ನು ಹಾಗೂ ಅನುಭವಿಸುತ್ತಿರುವ ಇಂದನ್ನು ಸಹ್ಯವಾಗಿಸುವುದು. ನಾಳೆಯ ಭವಿಷ್ಯವನ್ನು ನಿಖರವಾಗಿ ಕಂಡವರಿಲ್ಲ, ಅರಿತವರಿಲ್ಲ. ಆದರೂ ಆಶಾವಾದದ ಎಳೆ ಬದುಕನ್ನು ಬದುಕಲು, ಬದುಕನ್ನು ಆಸ್ವಾದಿಸಲು ಅನುವುಮಾಡಿಕೊಡುತ್ತದೆ. ಇದಕ್ಕೆ ಉತ್ತಮ ಉದಾಹರಣೆ ನೇಮಿಚಂದ್ರರ 'ಸಾವೇ ಬರುವುದಿದ್ದರೆ ನಾಳೆ ಬಾ' ಪ್ರಬಂಧದ

ಲೇಖನದಲ್ಲಿ ಬರುವ ಅನುಪಮ ನಿರಂಜನರ ಜೀವನ, ಈಕೆ ಕ್ಯಾನ್ಸರ್ ಕಾಯಿಲೆಗೆ ಬಲಿಯಾಗಿದ್ದರೂ ವೇದನೆ ಅನುಭವಿಸುತ್ತಿದ್ದರೂ ಅನೇಕಾನೇಕ ಕಾದಂಬರಿಗಳನ್ನು ಬರೆದು ಸಹೃದಯರ ಮನಸ್ಸಿನಲ್ಲಿ ಆಶಾವಾದದ ಜೀವನೋತ್ಸಾಹ ತುಂಬಿದರು.

ಈ ಮಾದರಿ ಹೇಳುವುದು ಜೀವನವನ್ನು ಹೊಸ ಹೊಸ ದೃಷ್ಟಿಕೋನದಿಂದ ಪರಿಶೀಲಿಸಬೇಕು. ಆದರೆ ಆಶಾವಾದಿಯಾಗಿ ಪರಿಶೀಲಿಸಬೇಕು ಇದು ನಮ್ಮ ಮಾನಸಿಕ ಸ್ಥಿತಿಯನ್ನು ಅವಲಂಭಿಸಿರುತ್ತದೆ. "The mind is its own place and in itself can make a heaven of hell a hell of heaven"[3] ಎಂದು ಮಿಲ್ಟನ್ ಹೇಳುತ್ತಾನೆ, ಮನಸ್ಸು ಸ್ವರ್ಗವನ್ನು ನರಕವಾಗಿಸಬಹುದು, ನರಕವನ್ನೂ ಸ್ವರ್ಗವಾಗಿಸಬಹುದು.

ಮನುಷ್ಯ ಸಾಮಾನ್ಯವಾಗಿ ಸೋಲು ಅನುಭವಿಸಿದಾಗ ನಿರಾಶನಾಗುತ್ತಾನೆ, ಬಯಕೆಗಳು ಈಡೇರದಾಗ ಭ್ರಮನಿರಸನಕ್ಕೊಳಗಾಗುತ್ತಾನೆ, ಆಸೆಪಟ್ಟಿದ್ದೆಲ್ಲ ನೆರವೇರುವುದು ಮಾತ್ರ ಬದುಕಲ್ಲ ನೆರವೇರದಿರುವುದರಲ್ಲೂ ಬದುಕಿದೆ. ಬದುಕು ಒಂದು ಸರಳ ರೇಖೆಯಲ್ಲ. ಅದು ಅಂಕುಡೊಂಕುಗಳಿಂದ ಕೂಡಿದ ವಕ್ರರೇಖೆ, ಬದುಕು ಯಾವತ್ತೂ ನಮ್ಮ ಮೂಗಿನ ನೇರಕ್ಕೆ ಸಾಗುವುದಿಲ್ಲ ಅದೊಂದು ಅನಿರೀಕ್ಷಿತ ಘಟನೆಗಳ ಮೂಟೆ. ಆದ್ದರಿಂದ ಬದುಕನ್ನು ಸವಾಲಾಗಿ ಸ್ವೀಕರಿಸಬೇಕು ಸಮಸ್ಯೆಗಳನ್ನು ಎದುರಿಸಿ ಗೆಲ್ಲಬೇಕು, ಆಗ ಮಾತ್ರ ಬದುಕು ಬದಲಾಗುತ್ತದೆ ಹೊಸತನ ಮೂಡುತ್ತದೆ ಜೀವನೋತ್ಸಾಹ ಚಿಮ್ಮುತ್ತದೆ ಇದೇ ವಾಸ್ತವ ಮಾನವ ಸಮೂಹ ಅಳವಡಿಸಿಕೊಳ್ಳಬೇಕಾದ ಬದುಕಿನ ಹೊಸತನ ಎಂಬುದನ್ನು ನೇಮಿಚಂದ್ರ ಸಾರವತ್ತಾಗಿ ತಮ್ಮ ಮೊದಲನೆ ಪ್ರಬಂಧ 'ಬದುಕು ಬದಲಿಸಬಹುದು' ಬರಹದಲ್ಲಿ ತಿಳಿಸುತ್ತಾರೆ.

ತಾನಿನ್ನೂ ಬದುಕಿರಬೇಕೆಂಬ ಉತ್ಕಟ ಆಸೆಯನ್ನು ಧ್ವನಿಸುವ ಶೀರ್ಷಿಕೆಯುಳ್ಳ ಕೃತಿ ನೇಮಿಚಂದ್ರರ 'ಸಾವೇ ಬರುವುದಿದ್ದರೆ ನಾಳೆ ಬಾ' ತನ್ನ ವಿಸ್ತಾರದೊಳಗೆ ಮೂವತ್ತೊಂದು ಲೇಖನಗಳನ್ನೊಳಗೊಂಡ ಈ ಕೃತಿ ಸಾವನ್ನು ಗೆಲ್ಲಲು ಸಾದ್ಯವಿಲ್ಲದಿದ್ದರೂ ಅದನ್ನು ಮುಂದೂಡಿ ಆರೋಗ್ಯವಾಗಿ ಬದುಕಬಹುದಲ್ಲವೇ? ಆರೋಗ್ಯವಂತರ ಬಳಿ ಸಾವು ಸುಳಿಯುವುದು ಅಪರೂಪ, ಸದಾ ರೋಗಿಯಾಗಿದ್ದರೆ ಅದು ನಾಳೆ ಬರುವ ಬದಲು ಇಂದೇ ಬರಬಹುದು, ಆದರೆ ಆತ್ಮವಿಶ್ವಾಸ, ಹುಮ್ಮಸ್ಸು, ಸರಳ–ಸಹಜ ನಡವಳಿಕೆ ವ್ಯಕ್ತಿಯ ಆಯಸ್ಸನ್ನು ಹೆಚ್ಚಿಸಬಹುದು. ಹಲವು ಗಿಡಮೂಲಿಕೆಗಳ ಔಷದೀಯ ಗುಣಗಳನ್ನು ತಿಳಿಸಿ ಹೇಳುವ ಲೇಖಕಿ ತನ್ನ ವೈಯಕ್ತಿಕ ಪ್ರವಾಸಾನುಭವದ ದೇಶ ವಿದೇಶಗಳಲ್ಲಿನ ನೂರಾರು ಅನುಭವಗಳನ್ನು ತಮ್ಮ ಪ್ರಬಂಧದಲ್ಲಿ ಹಂಚಿಕೊಂಡಿದ್ದಾರೆ. ತಾವು ಭೇಟಿಯಾದ ಮಹಾನೀಯರ ದೀರ್ಘಾಯುಷ್ಯದ ಗುಟ್ಟನ್ನು ಅಚ್ಚರಿಯ ಸಂಗತಿಗಳ ಮೂಲಕ ವ್ಯಕ್ತಪಡಿಸುತ್ತಾರೆ,

ಆರೋಗ್ಯಕ್ಕಾಗಿ ನಾವು ಎಷ್ಟೆಲ್ಲಾ ಪರದಾಡುತ್ತೇವೆ, ಎಷ್ಟು ದೂರಕ್ಕೆ ಹುಡುಕಿ ಹೋಗುತ್ತೇವೆ ಗುಣವಾಗುವ ಪ್ರಕ್ರಿಯೆ ನಮ್ಮೊಳಗೆ ನಮ್ಮಲ್ಲಿಯೇ ಇದೆ ಎಂಬಂತಹ ಆತ್ಮವಿಶ್ವಾಸವನ್ನು ನೇಮಿಚಂದ್ರ ತಮ್ಮ ಪ್ರಬಂಧ ಸಂಕಲನಗಳಲ್ಲಿ ತಿಳಿಸಿಕೊಡುತ್ತಾರೆ. ಖಾಯಿಲೆ ಬರುವುದು ದೇಹಕ್ಕೆ ಹೊರತು ಮನಸ್ಸಿಗಲ್ಲ. ಆಶಾದಾಯಕ ಮನಸ್ಸಿನ ಮುಂದೆ ಎಂತಹ ರೋಗಗಳನ್ನು ಗೆಲ್ಲಬಹುದು ಎಂಬುದಕ್ಕೆ ಮಾದರಿಯಾಗಿ ೧೯೭೦ರ ದಶಕದಲ್ಲಿ ಟಾಪ್ ಅಮೇರಿಕನ್ ಫ್ಯಾಷನ್ ಡಿಸೈನರ್ ಎಂದು ಗುರುತಿಸಲ್ಪಟ್ಟ ಮಾಯಾ ತಿವಾರಿ ತಮ್ಮ ಇಪ್ಪತ್ತಮೂರನೆ ವಯಸ್ಸಿನಲ್ಲಿ ಕ್ಯಾನ್ಸರ್‌ಗೆ ಬಲಿಯಾಗಿ ಹನ್ನೆರಡು ಬಾರಿ ಶಸ್ತ್ರಚಿಕಿತ್ಸೆ ಲೆಕ್ಕವಿಲ್ಲದಷ್ಟು ರೇಡಿಯೇಶನ್ ಥೆರಪಿ ಎಲ್ಲವೂ ಮುಗಿದ ಮೇಲೂ ವೈಧ್ಯರು ಹೇಳುವುದು 'ನಿಮಗಿರುವುದು ಎರಡೇ ತಿಂಗಳು' ಆ ಎರಡು ತಿಂಗಳನ್ನು ಏಕಾಂತದಲ್ಲಿ ಅಂತರಂಗದ ಆಳಕ್ಕಿಳಿದು ಧ್ಯಾನದಲ್ಲಿ ಕಳೆಯಲು ಮಾಯಾ ತಿವಾರಿ ಬಯಸಿದರು ವೆರ್ ವೆಕಾಂಟ್ ಎಂಬ ಹಿಮಶಿಖರದ ನಡುವಿನ ಪರಿಸರಕ್ಕೆ ಹೋದರು. ಆ ಪರಿಸರ ಆಕೆಯ ಮನದ ಆಳಕ್ಕಿಳಿಯಲು ಧ್ಯಾನದಲ್ಲಿ ತೊಡಗಲು ಸಹಾಯಕವಾಗಿತ್ತು. ಬದುಕಿನಂಚಿನಲ್ಲಿ ಕುಳಿತ ಮಾಯಾ ಅಂತರಂಗವನ್ನು ಶೋಧಿಸಿ ಧಾರಾಕಾರವಾಗಿ ಅತ್ತರು ತಮ್ಮ ನೋವನ್ನು ಬರಹರೂಪಕ್ಕಿಳಿಸಿದರು. ಯೋಗ ಪ್ರಾಣಾಯಾಮ ಆಹಾರವೇ ದೇಹಕ್ಕೆ ಔಷಧಿ ಎಂಬುದನ್ನು ಅರಿತರು. ಆರು ತಿಂಗಳು ಕಳೆದಿತ್ತು ಕ್ಯಾನ್ಸರ್ ಸುಳಿವಿಲ್ಲ. ಈಗ ಬದುಕಿನ ಮುಂದುವರಿದ ಪಯಣ ಮಾಯಾ ತಿವಾರಿಯದ್ದಾಗಿತ್ತು. ಇದೇ ರೀತಿಯ ಮತ್ತೊಂದು ಮಾದರಿಯನ್ನು ನೇಮಿಚಂದ್ರ ನಮ್ಮ ಮುಂದಿಡುತ್ತಾರೆ, ಮೋಟಾರ್ ನ್ಯೂರಾನ್ ರೋಗಕ್ಕೆ ತುತ್ತಾಗಿ ಗಾಲಿಕುರ್ಚಿಯಲ್ಲಿ ಬದುಕೆಲ್ಲ ಮುದುಡಿ ಕುಳಿತ ದೇಹದ ಯಾವ ಭಾಗವೂ ಸ್ವಾಧೀನವಿಲ್ಲದ, ಧ್ವನಿಪೆಟ್ಟಿಗೆಯಿಂದಲೂ ವಂಚಿತನಾಗಿ ಕೇವಲ ಎರಡೇ ಎರಡು ಬೆರಳುಗಳ ಮೂಲಕ ಕಂಪ್ಯೂಟರ್ ಬಳಸಿ ಹೊರಜಗತ್ತನ್ನು ಸಂಪರ್ಕಿಸಿದ ವಿಜ್ಞಾನಿ ಸ್ಟೀಫನ್ ಹಾಕಿಂಗ್, ಅರವತ್ತು ವರ್ಷದ ನಂತರ ಇದ್ದ ಎರಡೂ ಬೆರಳಿನ ಸ್ವಾಧೀನ ಕಳೆದುಕೊಂಡರೂ ಇನ್ಫಾ ರೆಡ್ ಬ್ಲಿಂಕ್ ಸ್ವಿಚ್ ಮೂಲಕ ಕಂಪ್ಯೂಟರ್ ಬಳಸುತ್ತಾರೆ.

ಈ ಮೂಲಕ ಬದುಕಿನ ದರ್ಶನವನ್ನು ಮಾಡಿಸಲು ಹೊರಡ ನೇಮಿಚಂದ್ರರ ಲೇಖನಗಳು ತಿಳಿಸುವ ಮುಖ್ಯಅಂಶಗಳು ಎಂತಹ ಹತಾಶೆ ಪರಿಸ್ಥಿತಿಯಲ್ಲಿಯೂ ಬದುಕನ್ನು ಒಗೆದು ಸಾಗದೆ ಜೀವನದಲ್ಲಿ ಆಸಕ್ತಿಯನ್ನು ಕಳೆದುಕೊಳ್ಳದೆ ಬದುಕುವವರು ನಮ್ಮ ನಡುವಯೇ ಇದ್ದಾರೆ. ಎಲ್ಲವೂ ಸ್ವಸ್ಥವಿದ್ದಾಗ, ಎಲ್ಲವೂ ನೇರವಾಗಿದ್ದಾಗ ಮಾತ್ರ ನಾನು ಬದುಕನ್ನು ಬದುಕುತ್ತೇನೆ. ಅಂಗವಿಕಲತೆ ಅಸಾಧ್ಯ ರೋಗದೊಡನೆ ಬದುಕನ್ನು ಸವಿಯಲು ಹೇಗೆ ಸಾಧ್ಯ? ಅನೇಕರ ಪ್ರಶ್ನೆ ಇದೇ ಆಗಿದೆ. ಬದುಕು ಮುಗಿಯದ ಪಯಣ ನೋವಿನೊಡನೆಯ ಹೋರಾಟದಲ್ಲಿ ಬದುಕನ್ನು ಮರೆಯಬೇಕಿಲ್ಲ.

ಸೋಲೆಂಬುದು ಏನಿದ್ದರೂ ಅಲ್ಪವಿರಾಮವಷ್ಟೆ, ಬದುಕು ಕಾದಿದೆ ಸೋಲಿನಾಚೆಗೂ ನೂರು ಬಣ್ಣಗಳಲ್ಲಿ, ನಮ್ಮ ಬದುಕಿನ ನಿಘಂಟಿನಿಂದ 'ಸೋಲು' ಪದವನ್ನು ಹೊರಗೆ ಎಸೆಯೋಣ. ಯಾವುದೂ ಸೋಲಲ್ಲ, ಎಲ್ಲವೂ ಸವಾಲು ಎಂದು ಹೇಳುತ್ತಾ ಲೇಖಕಿ ನೇಮಿಚಂದ್ರ ಸೋಲಿನ ಸರಪಳಿಯಲ್ಲಿ ಬಂದಿಯಾದ ನೂರಾರು ಜನರ ನೋವಿನ ನಿಜಸಂಗತಿಗಳನ್ನು ಬರಹರೂಪಕ್ಕಿಳಿಸುತ್ತಲೇ ಸೋಲು ಶಾಶ್ವತವಲ್ಲ, ತಾಳ್ಮೆಯಿಂದ ಕಾದರೆ ಗೆಲುವು ನಿಶ್ಚಿತವೆಂದು ತಮ್ಮ ಸೋಲೆಂಬುದು ಅಲ್ಪವಿರಾಮ ಪ್ರಬಂಧದಲ್ಲಿ ಮನವರಿಕೆ ಮಾಡಿಕೊಡುತ್ತಾರೆ. ಲೇಖಕಿಯ ಈ ಬರಹಗಳಿಗೆ ಸಾಕಷ್ಟು ಸಹೃದಯ ಒಡನಾಡಿಗಳ ಅನುಭವದ ಸಾರವೂ ಲಭಿಸಿದೆ. ಎಲ್ಲರ ಬದುಕನ್ನು ಹತ್ತಿರದಿಂದ ಕಂಡು ಏಳುಬೀಳುಗಳನ್ನು ಗುರುತಿಸಿ ಜನರಲ್ಲಿ ಧೈರ್ಯ ತುಂಬುವ ಕೆಲಸವನ್ನು ಪ್ರಬಂಧಗಳು ಒಳಗೊಂಡಿವೆ. ಬದುಕು ದುರ್ಬರವಾದಾಗ ಪೂರ್ಣವಿರಾಮ ಬೇಡ, ಸಕಾರಾತ್ಮಕ ಭಾವನೆ ಪ್ರಯತ್ನಗಳಿಂದ ಪುನಶ್ಚೇತನಗೊಳಿಸುವುದು ಅಗತ್ಯವೆಂಬ ಧ್ವನಿ ಇಲ್ಲಿದೆ. ಕೆಲವು ವರ್ಷಗಳ ಹಿಂದೆ ಎಂ.ಬಿ.ಬಿ.ಎಸ್ ಮಾಡಿದ ಹುಡುಗಿ ಎಂ.ಡಿ ಪದವಿಗೆ ಸೀಟು ಸಿಗಲಿಲ್ಲ ಎಂಬ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಳು ಶೇಕಡಾ ೯೦ ಕ್ಕೂ ಮೀರಿ ಅಂಕಗಳನ್ನು ಗಳಿಸಿದ್ದ ದೆಹಲಿಯ ಹುಡುಗಿ ಪ್ರತಿಷ್ಠಿತ ಲೇಡಿ ಶ್ರೀರಾಮ್ ಕಾಲೇಜಿಗೆ ಪ್ರವೇಶ ಸಿಗಲಿಲ್ಲ ಎಂಬ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಳು. ಬುದ್ಧಿವಂತ ವಿದ್ಯಾವಂತ ಮಕ್ಕಳು ಈ ರೀತಿಯ ವ್ಯಸನಕ್ಕೆ ಒಳಗಾಗುತ್ತಿರುವುದಕ್ಕೆ ಕಾರಣ, ಇಂದಿನ ಯುವಪೀಳಿಗೆ ಭವಿಷ್ಯದ ತಮ್ಮ ಮಕ್ಕಳಿಗೆ ಗೆಲ್ಲುವುದು ಹೇಗೆ? ಎಂಬುದನ್ನು ಹೇಳಿಕೊಡುತ್ತಿದ್ದಾರೆಯೇ ಹೊರೆತು ಬದುಕುವುದು ಹೇಗೆ ಎಂಬುದನಲ್ಲ ಬದುಕಿನ ಬೆಲೆಯನ್ನು ತಿಳಿಸದ ನಮ್ಮ ವಿದ್ಯೆ ವಿದ್ಯೆಯಲ್ಲ, ಜೀವನ ಮೌಲ್ಯಗಳನ್ನು ಅರಿಯದ ಜಾಣತನದಿಂದ ನಮಗೆ ಉಪಯೋಗವಿಲ್ಲ. ಎಂಬ ಅಂಶಗಳನ್ನು ಬಹುತೇಕ ಪ್ರಬಂಧಗಳುದ್ದಕ್ಕೂ ಪ್ರತ್ಯಕ್ಷ ನಿದರ್ಶನಗಳ ಮೂಲಕ ಲೇಖಕಿ ದಾಖಲಿಸಿದ್ದಾರೆ.

ಇಂದಿನ ವೇಗದ ಜೀವನದಲ್ಲಿ ನಾವು ರೇಸಿನ ಕುದುರೆಗಳಾಗಿದ್ದೇವೆ. ಪಾಸಾಗದಿದ್ದರೆ, ಫಸ್ಟ್ ಬಾರದಿದ್ದರೆ ಬದುಕೇ ಮುಗಿಯಿತೆಂದು ನೇಣು ಹಾಕಿಕೊಳ್ಳುತ್ತಿದ್ದೇವೆ. ಇಂದು ನಮಗೆ ನಾವೇ ಮತ್ತೆ ಮತ್ತೆ ಹೇಳಿಕೊಳ್ಳಬೇಕಾಗಿದೆ "ಸೋಲಿನಾಚೆಗೂ ಬದುಕಿದೆ, ಸೋಲು ಶಾಶ್ವತವಲ್ಲ ಅದರ ಮುಂದೆ ಯಶಸ್ಸು ಇರುತ್ತದೆ. ಇವರ ಜೀವನ ದರ್ಶನಕ್ಕೆ ಸಂಬಂದಿಸಿದ ಅನೇಕಾನೇಕ ಪ್ರಬಂಧಗಳಲ್ಲಿ ನಾನು ಕೇವಲ ಈ ಲೇಖನದಲ್ಲಿ ಎರಡು ಮೂರು ಪ್ರಬಂಧಗಳನ್ನು ಮಾತ್ರ ಚರ್ಚೆಗೊಳಪಡಿಸಿದ್ದೇನೆ. ಲೇಖಕಿಯೇ ತಮ್ಮ ಜೀವನದ ಕೆಲವು ಕ್ಷಣಗಳನ್ನು ಹಂಚಿಕೊಳ್ಳುವಾಗ ಹೇಳುವ ಒಂದು ಮಾತು "ಒಂದು ಕೃತಿ, ಕೃತಿಕಾರಗಳ ಜೀವನದರ್ಶನ, ಧೋರಣೆ, ಚಿಂತನೆಗಳನ್ನು ಪ್ರತಿಬಿಂಬಿಸಬೇಕು. ನನ್ನ ವಿಚಾರಗಳು ಬಹಳಷ್ಟು ನಾ ಕಂಡ ಬದುಕು, ನಾ ಭೇಟಿಯಾದ ಪರಿಚಿತರು, ಆತ್ಮೀಯರು, ನಾನು ಓದಿದ ಪುಸ್ತಕಗಳಿಂದ ಪ್ರಭಾವಿಸಲ್ಪಟ್ಟ ವ್ಯಕ್ತಿಗಳು ಎಂದು"೩ ಎಂದು ಹೇಳಿದ್ದಾರೆ. ಒಟ್ಟಾರೆಯಾಗಿ ಲೇಖಕಿ ನೇಮಿಚಂದ್ರರ ಪ್ರಬಂಧಗಳ ಜೀವನ ದರ್ಶನದ ಬರವಣಿಗೆಯ ನಿರೂಪಣೆ ಮನುಷ್ಯ ತನ್ನನ್ನು ತಾನು ಮತ್ತೊಂದು ಬಗೆಯಲ್ಲಿ ಅರ್ಥೈಸಿಕೊಳ್ಳಲು, ಎಂತಹ ಸೋಲು ಸವಾಲು, ದುಃಖ ಕಷ್ಟಗಳ ಸಂದರ್ಭಗಳಲ್ಲೂ ಬದುಕನ್ನು ದ್ವೇಶಿಸಬಾರದು. ಅದನ್ನು ಪ್ರೀತಿಸಬೇಕು. ಅದರೊಂದಿಗೆ ಹೋರಾಡಿ ಗೆಲುವು ಸಾಧಿಸಬೇಕು. ಇದೇ ಜೀವನದ ಅರ್ಥ. ಆದ್ದರಿಂದಲೇ ಟಾಲ್ ಸ್ಟಾಯ್ ಒಂದು ಕಡೆ ಹೇಳುತ್ತಾರೆ: "ಮನುಷ್ಯನ ಸಂತೋಷ ಜೀವನದಲ್ಲಿದೆ. ಜೀವನ ಶ್ರಮದಲ್ಲಿದೆ ಆದ್ದರಿಂದ ನಮ್ಮ ಜೀವನದಲ್ಲಿ ಸೋಲಲ್ಲೂ ಗೆಲುವನ್ನು ಹುಡುಕೋಣ. ಏಕೆಂದರೆ 'ಸೋಲೆಂಬುದು ಅಲ್ಪವಿರಾಮ' ಕಷ್ಟ ದುಃಖದ ಆಗರದಲ್ಲೂ ನೆಮ್ಮದಿಯನ್ನು ಬಯಸೋಣ. ಏಕೆಂದರೆ ಬದುಕು ಮುಗಿಯದ ಪಯಣ. ಲೇಖಕಿಯ ಪ್ರಬಂಧಗಳ ಸಾರ ಅಡಗಿರುವುದೇ ಸಕಾರಾತ್ಮಕ ಬದುಕನ್ನು ಬದುಕುವ ಪರಿ ಎಂತಹದ್ದು ಎಂಬುದನ್ನು ಮನನ ಮಾಡುತ್ತದೆ.

ಅಡಿಟಿಪ್ಪಣಿ

೧. ಬದುಕು ಬದಲಿಸಬಹುದು – ನೇಮಿಚಂದ್ರ ಪು.ಸಂ ೧೭೦
೨. ಬದುಕು ಬದಲಿಸಬಹುದು – ನೇಮಿಚಂದ್ರ ಪು.ಸಂ.೧೧
೩. ಸೋಲೆಂಬುದು ಅಲ್ಪವಿರಾಮ – ನೇಮಿಚಂದ್ರ ಪು,ಸಂ ೧೮೧

ಆಧಾರ ಗ್ರಂಥಗಳು

೧. ಸೋಲೆಂಬುದು ಅಲ್ಪವಿರಾಮ, ಸಂಪಾದಕರು–ನೇಮಿಚಂದ್ರ, ನವಕರ್ನಾಟಕ ಪಬ್ಲಿಕೇಷನ್ಸ್ ಬೆಂಗಳೂರು–ಮುದ್ರಣ ೨೦೧೫
೨. ಬದುಕು ಬದಲಿಸಬಹುದು, ಸಂಪಾದಕರು–ನೇಮಿಚಂದ್ರ, ನವಕರ್ನಾಟಕ ಪಬ್ಲಿಕೇಷನ್ಸ್ ಬೆಂಗಳೂರು–ಮುದ್ರಣ ೨೦೦೫

೩. ಸಾವೇ ಬರುವುದಿದ್ದರೆ ನಾಳೆ ಬಾ!, ಸಂಪಾದಕರು–ನೇಮಿಚಂದ್ರ, ನವಕರ್ನಾಟಕ ಪಬ್ಲಿಕೇಷನ್ಸ್ ಬೆಂಗಳೂರು–ಮುದ್ರಣ ೨೦೧೫

'ಅಂತಃಕರಣದ ಮೌನ'ಕ್ಕೆ ಧ್ವನಿಯಾದ : ಪು.ತಿ.ನ. ಅವರ 'ಕಣಿವೆಯ ಮುದುಕ' ಕವನ

ಡಾ. ರಂಗಸ್ವಾಮಿ ಹೆಚ್.
ಕನ್ನಡ ಅಧ್ಯಾಪಕರು,
ವಿಶ್ವವಿದ್ಯಾನಿಲಯ ಕಲಾ ಕಾಲೇಜು,
ತುಮಕೂರು ವಿಶ್ವವಿದ್ಯಾನಿಲಯ,
ತುಮಕೂರು–೫೭೨೧೦೩.
ranguhosur@gmail.com

"

ಕನ್ನಡ ಸಾಹಿತ್ಯ ಚರಿತ್ರೆಯ ಪುಟಗಳಲ್ಲಿ ಇಪ್ಪತ್ತನೆಯ ಶತಮಾನದ ಆರಂಭದ ಕಾಲಘಟ್ಟವನ್ನು 'ನವೋದಯ ಕನ್ನಡ ಸಾಹಿತ್ಯ' ಎಂದು ಗುರುತಿಸಿದ್ದಾರೆ. ಈ ಸಂದರ್ಭದಲ್ಲಿ ಕಾವ್ಯ, ಕಥನಕವನ, ಕಥೆ, ಕಾದಂಬರಿ, ಪ್ರಬಂಧ, ಲಲಿತಪ್ರಬಂಧ, ಭಾವಗೀತೆ, ಸುನೀತ, ನಾಟಕ, ಗೀತನಾಟಕ, ವಿಮರ್ಶೆ ಮುಂತಾದ ಹತ್ತು–ಹಲವು ಹೊಸಬಗೆಯ ಸಾಹಿತ್ಯ ಪ್ರಕಾರಗಳ ಉಗಮ ಮತ್ತು ವಿಕಾಸಕ್ಕೆ ನಾಂದಿಯಾಗಿರುವುದು ಹೆಗ್ಗಳಿಕೆ ಮತ್ತು ವಿಶೇಷತೆಯಾಗಿದೆ. ಈ ಪ್ರಕಾರಗಳಲ್ಲಿ 'ಕಥನಕವನ'ವೂ ಒಂದು ಅತ್ಯುತ್ತಮವಾದ, ವೈವಿಧ್ಯ ಪೂರ್ಣವಾದ ರಚನೆಯಾಗಿದೆ. ಮೊಟ್ಟಮೊದಲಿಗೆ ಕಥನಕವನ ಪರಂಪರೆಯನ್ನು ಪ್ರಾರಂಭಿಸಿದವರು– ಪಂಜೆ ಮಂಗೇಶರಾಯ, ಎಂ. ಗೋವಿಂದ ಪೈ, ಕಡೆಂಗೋಡ್ಲು ಶಂಕರಭಟ್ಟ, ಕುವೆಂಪು, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮೊದಲಾದ ಪ್ರಮುಖರಲ್ಲಿ ಪು.ತಿ.ನ. ಅವರು ಒಬ್ಬರಾಗಿದ್ದಾರೆ. ಕಥನಕವನಗಳಲ್ಲಿ ಪ್ರಕೃತಿ, ಪ್ರೇಮ, ಮನುಷ್ಯ, ಹಸಿವು, ಬಡತನ, ದೇವರು, ಸೂರ್ಯೋದಯ, ಚಂದ್ರೋದಯ, ಹಗಲಿರುಳು, ಶೃಂಗಾರ, ನೀತಿ, ಮಾನವೀಯತೆ, ಸಾಹಸ, ವೀರಚರಿತೆಗಳು, ಕನಸುಗಾರಿಕೆ, ಆದರ್ಶ, ದೇವರು, ಭಕ್ತಿ ಮತ್ತು ಆಧ್ಯಾತ್ಮ, ಮೊದಲಾದ ವಸ್ತು–ವಿಷಯಗಳನ್ನು ಒಳಗೊಂಡಂತೆ ರಚನೆಯಾಗಿರುತ್ತವೆ. 'ಚಿಂತನಾಶೀಲ ಕವಿ', 'ಯದುಗಿರಿಯ ಸಂತಕವಿ' 'ಭಕ್ತಕವಿ', 'ದಾರ್ಶನಿಕ ಕವಿ', 'ಭಾಗವತ ಪ್ರಜ್ಞೆಯ ಕವಿ', 'ಕನ್ನಡ ಭಾಗವತ ಕವಿ' ಎಂಬಿತ್ಯಾದಿ ಬಿರುದುಗಳನ್ನು ಪಡೆದಿರುವ ಪುರೋಹಿತ ತಿರುನಾರಾಯಣ ನರಸಿಂಹಾಚಾರ್ ಅವರು ಪು.ತಿ.ನ. ಎಂಬ ಕಾವ್ಯನಾಮದಿಂದಲೇ

ಪ್ರಸಿದ್ಧಿಯನ್ನು ಪಡೆದು ಕನ್ನಡನಾಡಿನಾದ್ಯಂತ, ಕನ್ನಡ ಸಾಹಿತ್ಯ ಜಗತ್ತಿಗೆ ಚಿರಪರಿಚಿತರಾದವರು. ಕನ್ನಡ ನವೋದಯ ಸಾಹಿತ್ಯ ಕಾಲದ ರತ್ನತ್ರಯ ಕವಿಗಳಲ್ಲೊಬ್ಬರು (ಉಳಿದಿಬ್ಬರು– ಕುವೆಂಪು ಮತ್ತು ದ. ರಾ. ಬೇಂದ್ರೆ). ನವೋದಯ ಸಾಹಿತ್ಯದ ಬಹುತೇಕ ಎಲ್ಲಾ ಪ್ರಕಾರಗಳಲ್ಲೂ ಸಾಹಿತ್ಯಕೃಷಿ ಮಾಡಿರುವ ಇವರು ಎಂದೆಂದಿಗೂ ನೆನಪಿಸಿಕೊಳ್ಳುವಂತಹ, ಮರೆಯಲಾಗದಂತಹ ಕಥನಕವನಗಳನ್ನೂ ರಚಿಸಿದ್ದಾರೆ. ಮೊಟ್ಟಮೊದಲಿಗೆ ೧೯೩೩ರಲ್ಲಿ ಪ್ರಕಟವಾದ 'ಹಣತೆ' ಕವನ ಸಂಕಲನದಿಂದ ಪ್ರಸ್ತುತ 'ಕಣಿವೆಯ ಮುದುಕ' ಕಥನಕವನವನ್ನು ಆರಿಸಿಕೊಂಡಿದ್ದು, ಅವರ ಶ್ರೇಷ್ಠ ಕಥನ ಕವನಗಳಲ್ಲೊಂದಾಗಿದೆ. ಇದು ಪ್ರಕಟಗೊಂಡು ೯೧ ವರ್ಷಗಳು ಕಳೆದರೂ, ತನ್ನ ಶ್ರೇಷ್ಠತೆಯ 'ಅಂತಃಸತ್ತ್ವ'ವನ್ನು ಇಂದಿನವರೆಗೂ ಕಾಪಿಟ್ಟುಕೊಂಡಿರುವುದು ವಿಶೇಷವಾಗಿದೆ. ಮುದುಕನೊಬ್ಬನ ಅಂದರೆ ವೃದ್ಧಮಾನವನ 'ಅಂತಃಸತ್ತ್ವ'ದಿಂದ ಕೂಡಿದ 'ಅಂತಃಕರಣ'ದ ದುಗುಡದ ಸ್ಥಿತಿ–ಗತಿಗಳು ಮೃದುಧ್ವನಿಯಾಗಿ ಮೂಡಿ ಬಂದಿರುವ ಬಗೆ ಮತ್ತು ಸಾಂತ್ವಾನದ ಆಪ್ತತೆಯ ಮಧುರ ಭಾವವನ್ನು ಪ್ರಸ್ತುತ ಲೇಖನದಲ್ಲಿ ಗುರುತಿಸಲಾಗಿದೆ.

ಪು.ತಿ.ನ. ಅವರ 'ಕಣಿವೆಯ ಮುದುಕ' ಕಥನಕವನವು ವಸ್ತುವಿನ ವಿಶಿಷ್ಟತೆಯ ದೃಷ್ಟಿಯಿಂದ ನೋಡಿದರೆ ನವೋದಯದ ಕಾಲಘಟ್ಟದ ಮಹತ್ವದ ವಸ್ತುವನ್ನೊಳಗೊಂಡ ಕಥನಕವನಗಳಲ್ಲೊಂದು. ಸೌಂದರ್ಯ ಪ್ರಜ್ಞೆಯ ಒಂದು ಪ್ರಮುಖ ಭಾಗವಾದ ನಿಸರ್ಗೋಪಾಸನೆ ಇವರ ಕಾವ್ಯ ಧರ್ಮಗಳಲ್ಲಿ ಒಂದಾಗಿದೆ. ಅನೇಕ ಸಂದರ್ಭಗಳಲ್ಲಿ ಜಡ ಪ್ರಪಂಚವನ್ನೂ ಸಹ ಸ–ಚೇತನವನ್ನಾಗಿಸುವ ಕೌಶಲ ಇವರ ಸಾಹಿತ್ಯಕ್ಕಿದೆ. ಭಾಷೆಯಲ್ಲಿ, ಭಾವದಲ್ಲಿ, ಲಯದಲ್ಲಿ, ವೈವಿಧ್ಯತೆಯನ್ನು ತನ್ನಂತರಂಗದಲ್ಲಿ ಬೆಚ್ಚಗಿರಿಸಿಕೊಂಡಿದೆ. ಕವಿ ಇಲ್ಲಿ ವಸ್ತುನಿಷ್ಠತೆಗಿಂತ, ವ್ಯಕ್ತಿನಿಷ್ಠವಾದ ರಚನೆಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿದ್ದಾರೆ. ಅತಿ ಸಾಮಾನ್ಯತೆಯಲ್ಲೂ ಅ–ಸಾಮಾನ್ಯತೆಯನ್ನು ಕಾಣುವ ದೃಷ್ಟಿಕೋನ ಪು.ತಿ.ನ. ಅವರ ಜಾಯಮಾನಕ್ಕೆ ಸಿದ್ಧಿಸಿರುವ ಒಂದು ವೈಶಿಷ್ಟ್ಯವಾಗಿದೆ. ವೈವಿಧ್ಯಪೂರ್ಣವಾದ ವಸ್ತು, ಸಮರ್ಥವಾದ ಅಭಿವ್ಯಕ್ತಿ ಕಾವ್ಯಗುಣಗಳ ಮಿಶ್ರಣ– ಈ ಮೂರೂ ಕವನದಲ್ಲಿ ಉತ್ತಮವಾಗಿ ಮೂಡಿಬಂದಿದೆ. ಇಲ್ಲಿ ಮೌನವಾದ ಸಂಭಾಷಣೆ, ಪ್ರಕೃತಿಯ ಚಿತ್ರಣ, ಮಾನವತೆ, ಅನುಕಂಪ, ಸಹಾನುಭೂತಿ, ಭಾವನಾತ್ಮಕವಾಗಿ ಸೂಕ್ಷ್ಮವಾಗಿ ಅಭಿವ್ಯಕ್ತವಾಗಿದೆ. ಸುಸಂಸ್ಕೃತರೂ, ಸಂಯಮಿಗಳೂ, ಶಿಸ್ತು ಪ್ರೀತಿಗಳಿಗೆ ಆದರ್ಶರಾದವರೂ ಆದ ಪು.ತಿ.ನ. ಅವರ ಕಾವ್ಯದಲ್ಲಿ ಸಂಪ್ರದಾಯ ನಿಷ್ಠೆ, ನಿಷ್ಕಲ್ಮಷ ಸರಳ ಪ್ರೀತಿ ಭಾವಗಳು ಚಿರಸ್ಥಾಯಿಯಾಗಿ, ನಿರಂತರವಾಗಿ ಹರಿದಿವೆ. ಇವರ ರಚನೆಗಳಲ್ಲಿ ವ್ಯವಸ್ಥೆಯನ್ನು ಒಪ್ಪಿಕೊಂಡೇ ಅಲ್ಲಿನ ಒರೆ–ಕೋರೆಗಳನ್ನು ಮತ್ತು ಹುಳುಕುಗಳನ್ನು ಗುರುತಿಸುವುದು, ಪ್ರಶ್ನಿಸುವುದು ಇವರ ಚಿಂತನಾಶೀಲತೆಯ ಪ್ರಖರತೆಗೆ ಅಕ್ಷರಸಹ ಸಾಕ್ಷಿಯಾಗಿದೆ.

ಪ್ರಸ್ತುತ ಕವನ ಪ್ರಾರಂಭವಾಗುವುದು ಪ್ರಕೃತಿಯ ಮಡಿಲಿನಲ್ಲಿ, ಕಣಿವೆಯ ತಪ್ಪಲಿನ ಪ್ರದೇಶವನ್ನು ಇರುಳು (ಕತ್ತಲೆ) ನಿಧಾನವಾಗಿ ಆವರಿತ್ತಾ, ಇರುಳು ವಿಕಾಸವಾಗುತ್ತದೆ. ಬೆಳಕು ಮೌನವಾಗಿ ಕರಗಿ ಮಾಯವಾಗುತ್ತದೆ. ಆ ಸಂದರ್ಭದಲ್ಲಿ ನಿಸರ್ಗದತ್ತವಾದ ಗುಡುಗು–ಮಿಂಚುಗಳಿಂದ ಕೂಡಿದ ಆಗಸ ಮಳೆ ಬರುವ ಮುನ್ಸೂಚನೆಯನ್ನು ನೀಡುತ್ತಿವೆ. ಕತ್ತಲ ವೇಳೆಯಲ್ಲಿ ಕಣಿವೆಯಲ್ಲಿ ಪಯಣಿಸುತ್ತಿದ್ದ ಪಯಣಿಗನನ್ನು ಕಂಡು ಮುದುಕ ಕಳೆದುಹೋದ ತನ್ನ ಮಗನನ್ನು ಮನದಲ್ಲಿ ನೆನೆದು ತನ್ನ ಸ್ಮೃತಿಪಟಲದಿಂದ ಸ್ಮರಿಸುವ ಚಿತ್ರಣ ಈ ಕವನದಲ್ಲಿ ಮನೋಜ್ಞವಾಗಿ ವ್ಯಕ್ತವಾಗುತ್ತದೆ. ಇಲ್ಲಿ ಎರಡು ಮಾನವೀಯ ಅಭಿವ್ಯಕ್ತಿಯ ಕನಿಕರದ ಅಂತಃಕರಣದ ಸಹಜವಾದ ಭಾವನೆಗಳಿವೆ. ಮೊದಲನೆಯದು– ಮುದುಕನಿಗೆ ನಿರೂಪಕನ ಮೇಲಿನ ಪ್ರೀತಿ–ವಾತ್ಸಲ್ಯ ತುಂಬಿದ ಭಾವನೆ ಉತ್ಕಟವಾಗಿರುವುದನ್ನು ಕಾಣಬಹುದು. ಎರಡನೆಯದು– ದಾರಿಹೋಕ ಅಥವಾ ನಿರೂಪಕನು ಮುದುಕನ ಹೃದಯಾಂತರಾಳದ ದುಃಖವನ್ನು ಮನಗಂಡು ಅನುಕಂಪ ತೋರಿಸುವ ಮನುಷ್ಯತ್ವವು ಮೌನವಾಗಿಯೇ ಅಭಿವ್ಯಕ್ತಗೊಂಡಿದೆ. ಮುದುಕನ ಹೃದಯದಲ್ಲಿ ಬತ್ತಿಹೋಗಿದ್ದ ಮಮತೆಯನ್ನು ಮತ್ತೆ ಜಿನುಗುವಂತೆ ಮಾಡಿದ್ದು ನಿರೂಪಕನೇ. ಇಲ್ಲಿ ಎರಡು ಮನಸ್ಸುಗಳ ಮೌನದ ಹೊಂದಾಣಿಕೆ ಸಮ್ಮಿಳಿತವಾಗಿವೆ. ಬದುಕಿಗೆ ಸಂತೋಷದ ಹೊಳಪಿನ ಕಾಂತಿಯು ಮೂಡಿ ಮನಸ್ಸು ಭಾರವಳಿದು ನಿರಾಳವಾಗುವುದಕ್ಕೆ ಒಂದು ಸೊಗಸಾದ ಸನ್ನಿವೇಶವನ್ನು ಕವಿ ನಿರ್ಮಿಸಿದ್ದಾರೆ.

ಮನುಷ್ಯನ ಬದುಕಿನಲ್ಲಿ ಬಂದೆರಗುವ ಹಲವು ಸಹಜ ಸ್ಥಿತಿಗಳಲ್ಲಿ ಮುಪ್ಪು (ವೃದ್ಧಾಪ್ಯ) ಕೂಡ ಒಂದಾಗಿದೆ. ಈ ಮುಪ್ಪಿನ ದಿನಗಳಲ್ಲಿ ನಿಸ್ಸಹಾಯಕನಾಗಿ, ಅನಾಥವಾಗಿ ಬದುಕನ್ನು ಸವೆಸುವ ಸ್ಥಿತಿಯು ಎದುರಾದಾಗ ಅವನ ಬದುಕು ಹೇಗೆ ಕಣ್ಣೀರಮಯವಾಗುತ್ತದೆ ಎಂಬ ಸನ್ನಿವೇಶವನ್ನು ಕವಿ ಸೂಕ್ಷ್ಮವಾಗಿ ಕಟ್ಟಿದ್ದಾರೆ. ವೃದ್ಧಾಪ್ಯದಲ್ಲಿ ತಮ್ಮ ಮಕ್ಕಳು ಜೊತೆಗಿದ್ದು ಸಹಾಯಕರಾಗುತ್ತಾರೆಂಬುದು ಎಲ್ಲ ತಂದೆ–ತಾಯಿಗಳ ಭಾವನೆ. ಆದರೆ ಮಕ್ಕಳು ಸನಿಹವಿಲ್ಲದೆ, ಅವರ ಆಸರೆಯಿಲ್ಲದೆ, ಸಹವಾಸವಿಲ್ಲದ ಬದುಕನ್ನು ಅವರು ನಿರೀಕ್ಷೆಯನ್ನೂ ಮಾಡಿರುವುದಿಲ್ಲ. ಅಂತಹ ವಿಷಯಸ್ಥಿತಿ ಅವರ ನಿಜಜೀವನದಲ್ಲಿ ಎದುರಾದಾಗ ಅವರ ಮಾನಸಿಕ ಸಂವೇದನೆಯನ್ನು ಊಹಿಸಲೂ ಸಾಧ್ಯವಿಲ್ಲ. ಅಂತಹ ಸ್ಥಿತಿಯಲ್ಲಿರುವ ಮುದುಕನಿಗೆ ಸಹಾಯಕನಾಗಿ ನಿಲ್ಲುವುದು ವಿಸ್ಮಯ ಜೀವನದ ಅದ್ಭುತವೆಂಬುದು ಕವಿಯ ಮನೋಧರ್ಮದ ಅಭಿಲಾಷೆಯಾಗಿದೆ. ಇಲ್ಲಿ ಭಾಗವತ ಸಂಪ್ರದಾಯದಲ್ಲಿ ಮತ್ತು ಶ್ರೀರಾಮಾನುಜಾಚಾರ್ಯರ ಶ್ರೀವೈಷ್ಣವ ಸಂಪ್ರದಾಯದಲ್ಲಿ ಶ್ರದ್ಧಾಭಕ್ತಿ ಮತ್ತು ಗಾಢ ನಂಬಿಕೆಯನ್ನು ಇಟ್ಟುಕೊಂಡಿರುವ ಪು.ತಿ.ನ. ಅವರಿಗೆ ಈ ರೀತಿಯ ವರ್ಣನೆ ಸಹಜವೇ ಅನ್ನಿಸುತ್ತದೆ. ಆದರೆ,

ಆಡು ಮಾತಿನಲ್ಲಿ ನಮ್ಮ ಜನಪದರು ಹೇಳುವಂತೆ– 'ಸಂಬಂಧಗಳ ಸಂತೆಯಲ್ಲಿ, ಸತ್ಯ ಹೇಳುವವನು ಏಕಾಂಗಿ', 'ಅನಾಥಗೆ ಆಕಾಶವೇ ಕಾವಲು–ಆಸರೆ', 'ದಿಕ್ಕಿಲ್ಲದವರಿಗೆ ದೇವರೇ ದಿಕ್ಕು', 'ಬಂದದ್ದೆಲ್ಲಾ ಬರಲಿ, ಗೋವಿಂದನ ದಯೆಯೊಂದಿರಲಿ', 'ಸಂಕಟ ಬಂದಾಗ, ವೆಂಕಟ ರಮಣ' ಮೊದಲಾದ ಗಾದೆ ಮಾತುಗಳ ಆಶಯದಂತೆ ಕವಿ ಮನಸ್ಸು ದೃಢವಾದ ದೈವತ್ವದಲ್ಲಿ ಸ್ಥಿರವಾಗಿ ನೆಲೆನಿಂತಿರುವುದನ್ನು ಮನಗಾಣಬಹುದು.

ಆದರೆ ಪ್ರಸ್ತುತ ಸಂದರ್ಭದಲ್ಲಿ ಕೌಟುಂಬಿಕ ಸಂಬಂಧಗಳು ತೆಳುವಾಗುತ್ತಿವೆ. ಕೂಡು ಕುಟುಂಬಗಳು ಕಣ್ಮರೆಯಾಗಿ ವಿಘಟಿತ ಕುಟುಂಬಗಳು ಹೆಚ್ಚಾಗುತ್ತಿವೆ. ತಂದೆ–ತಾಯಿ, ಗಂಡ–ಹೆಂಡತಿ–ಮಕ್ಕಳು, ನೆರೆ–ಹೊರೆಯವರು, ಸಂಬಂಧಿಕರ ನಡುವಿನ ಪರಸ್ಪರ ಸಂಬಂಧಗಳು ಕೊಡು–ಕೊಳ್ಳುವಿಕೆಯ ಆಧಾರದ ಮೇಲೆ ನಿಂತಿವೆಯೆಂದೇ ಹೇಳಬಹುದು. ಪ್ರೀತಿ, ಗೌರವ, ನಂಬಿಕೆ, ವಿಶ್ವಾಸ ಮೊದಲಾದ ಮೌಲ್ಯಗಳು ಅಪಮೌಲ್ಯಗೊಳ್ಳುತ್ತಿವೆ. ಈ ಮೇಲಿನ ಮಾತುಗಳಿಗೆ ಪೂರಕವೆಂಬಂತೆ–

"ಅರಿ ಮಿತ್ರ ಸತಿ ಪುತ್ರ ಬಂಧುಬಳಗದವರೆಲ್ಲ ।
ಕರುಮದವತಾರಗಳೊ, ಋಣಲತೆ ಚಿಗುರೋ ॥
ಕುರಿಯನಾಗಿಸಿ ನಿನ್ನ ಕಾಪಿಡುವ ಸಂಸಾರ ।
ವುರಿಮಾರಿಯಾದೀತೊ – ಮಂಕುತಿಮ್ಮ ॥" ॥೧೭೨॥[೮]

ಈ ಮೇಲಿನ ಮಂಕುತಿಮ್ಮನ ಕಗ್ಗದಲ್ಲಿ ಡಿ. ವಿ. ಗುಂಡಪ್ಪ ಅವರು ಹೇಳುತ್ತಿರುವುದು –ನಿನ್ನ ಅರಿ (ಅರಿ ಅಂದರೆ ಶತ್ರು), ಸ್ನೇಹಿತ, ಹೆಂಡತಿ, ಮಕ್ಕಳು ಮತ್ತು ಸಂಬಂಧಿಕರೆಲ್ಲರುಗಳೂ ನಿನ್ನ ಪೂರ್ವಾರ್ಜಿತದ ಕರ್ಮದ ಅವತಾರಗಳೋ? ಅಥವಾ ಈಗ ಹುಟ್ಟುತ್ತಿರುವ ಸಾಲದ ಬಳ್ಳಿಗಳ ಚಿಗುರುಗಳೋ? ನಿನ್ನನ್ನು ಕುರಿಯನ್ನಾಗಿ ಮಾಡಿ, ಕಾಯುತ್ತಿರುವ ಸಂಸಾರವೇ, ನಿನಗೆ ಉರಿಯುವ ಮೃತ್ಯು ದೇವತೆಯಾಗಬಹುದು ಹುಷಾರಾಗಿರು ಎಂದು ಎಚ್ಚರಿಸುತ್ತಿದ್ದಾರೆ. ಈ ಭೂಮಿಯ ಮೇಲೆ ಹುಟ್ಟಿದ ಪ್ರತಿಯೊಬ್ಬರು ಅವರವರ ಕರ್ಮಗಳನ್ನು ಅವರೇ ಮಾಡಿ ತೀರಿಸಬೇಕೆ ಹೊರತು ಬೇರೆ ಯಾರನ್ನೂ ನಂಬಿ ಕೂರುವಂತಿಲ್ಲ. ನಮ್ಮ ಜೀವನಕ್ಕೆ ನಾವೇ ಹೊಣೆಯೇ ಹೊರತು ಬೇರೆಯಾರನ್ನೂ ದೂಷಿಸುವಂತಿಲ್ಲ ಎಂಬ ಅರ್ಥವನ್ನು ಧ್ವನಿಸುತ್ತದೆ. ತನ್ನ ಮಗನ ಮೇಲೆ ಅತಿಯಾದ ಪ್ರೀತಿ–ವಾತ್ಸಲ್ಯ, ಮಮತೆ ಮತ್ತು ವ್ಯಾಮೋಹವನ್ನು ಇಟ್ಟುಕೊಂಡಿದ್ದ ವ್ಯಕ್ತಿ ಅವನನ್ನು ಕಳೆದುಕೊಂಡ ಮೇಲೆ ಹೇಗೆ ಒಂಟಿತನದ ಖಿನ್ನತೆಗೆ ಒಳಗಾಗಿ, ಮಾನಸಿಕ ತೊಳಲಾಟದಿಂದ ತನ್ನ ಮಗನ ಪ್ರೀತಿಗಾಗಿ ಗಾಢವಾಗಿ ಹಂಬಲಿಸುತ್ತಿದ್ದಾನೆ ಎಂಬುದನ್ನು ಈ ಕವನದಲ್ಲಿ ನೋಡಬಹುದು.

"ಪಯಣ ಬೆಳೆಸಿತು ಸಂಜೆ; ಬಾನು
ಭಯವ ಬೀರಿತು ಮಿಂಚು ಮೊಳಗಿ;
ಬಯಲುದಿಣ್ಣೆಯನೊಂದುಮಾಡಿತು
ಕಣಿವೆ ತುಂಬುವ ಕತ್ತಲು."

ದುರ್ಗಮವಾದ ಬೃಹತ್ ಕಣಿವೆಯಲ್ಲಿ ಪ್ರಕೃತಿ ಸಹಜವಾಗಿ ಸೂರ್ಯನು ತನ್ನ ದೈನಂದಿನ ಕಾರ್ಯವನ್ನು ಮುಗಿಸಿ ಪಡುವಣ (ಪಶ್ಚಿಮ) ದಿಕ್ಕಿನಲ್ಲಿ ಮುಳುಗಿದಾಗ, ಅಂದರೆ ಆ ದಿನವನ್ನು ಅಂತ್ಯಗೊಳಿಸಿದಾಗ, ಲೋಕಕ್ಕೆ ಸಂಜೆಯ ಮೋಡ ಆವರಿಸುವುದು, ಕತ್ತಲೆಯಾಗುವುದು, ರಾತ್ರಿಯಾಗುವುದು ಸಹಜವಾದ ಪ್ರಕ್ರಿಯೆಯಾಗಿದೆ. ತನ್ನ ಎಲ್ಲೆಯನ್ನು ಮೀರಿ ಬೆಟ್ಟ–ಗುಡ್ಡ–ಕಣಿವೆ–ಬಯಲನ್ನು ಗುರುತಿಸಲಾಗದಂತೆ ಕತ್ತಲು ಆವರಿಸುತ್ತಿದೆ. ಆಗ ಮುದುಕನೊಬ್ಬ ಒಬ್ಬೊಂಟಿಯಾಗಿ ಕಣಿವೆಯ ನೆಲದ ಮೇಲೆ ಕುಳಿತಾಗ, ನಿರೂಪಕ (ಕವಿ ಅಥವಾ ಪಯಣಿಗ) ಕಣಿವೆಯ ಮಾರ್ಗದಲ್ಲಿ ಬರುತ್ತಾ, ಆವರಿಸುತ್ತಿದ್ದ ಮೋಡ, ಮಿಂಚುಗಳಿಗೆ ಭಯಭೀತನಾಗಿ ಅವಸರದಲ್ಲಿ ಮನೆ ಸೇರಬೇಕೆಂಬ ತುಡಿತದಲ್ಲಿ ಓಡುವ ಚಿತ್ರಣ 'ಮನುಷ್ಯನ ಪ್ರಾಣದ ಮಹತ್ವ ಮತ್ತು ಬದುಕಬೇಕೆಂಬ ಹಂಬಲಗಳು ಇದ್ದಂತಿವೆ'. ಅಂಥ ಕಣಿವೆಯಲ್ಲಿ ಯಾವ ಗಿಡ–ಮರ–ಬಳ್ಳಿ–ಕಲ್ಲು–ಮುಳ್ಳುಗಳೂ ಕಾಣದಂತಹ ಪ್ರಕೃತಿಯ ಸಹಜ ಕತ್ತಲು ಮನುಷ್ಯರು ಬದುಕುವುದಕ್ಕೆ, ಮನುಷ್ಯರ ಜೀವಕ್ಕೆ ಆಸರೆಯೇ ಇಲ್ಲವೇನೋ ಎನ್ನುವಂಥಹ ಸಂದಿಗ್ಧಸ್ಥಿತಿಯನ್ನು ಮುಟ್ಟಿದೆ. ಇಲ್ಲಿ ಚಿತ್ರಣಗೊಂಡಿರುವ 'ಮಿಂಚು ಮತ್ತು ಕಾರ್ಮೋಡ' ಮನುಷ್ಯನ ಜೀವನದಲ್ಲಿ ಸಂಭವಿಸುವವುಗಳೇ ಆಗಿವೆ. ವಯೋಸಹಜವಾದ ವೃದ್ಧಾಪ್ಯವು ಕೂಡ ಯೌವ್ವನ ಕಳೆದು ಮುಪ್ಪಿನೆಡೆಗೆ ಸಾಗುವುದು ಮನುಷ್ಯನ ಬದುಕಿನಲ್ಲಿ ಇಳಿಸಂಜೆಯ ಕಾರ್ಮೋಡ ಆವರಿಸಿದಂತೆಯೇ ಸರಿ. 'ಮಿಂಚುಗಳು' ಬದುಕಿನಲ್ಲಿ ಅಪರೂಪಕ್ಕೆ ಕಾಣುವ ಸಂತಸದ ಕ್ಷಣಗಳಿರಬಹುದೇ? 'ಗುಡುಗು'ಗಳು ಜೀವನವೆಂಬ ನೌಕೆಯನ್ನು ಸಾಗಿಸುವಾಗ ಆಗಾಗ ಎದುರಾಗುವ ದುಃಖ ಸಂಕಷ್ಟಗಳಂತೆಯೇ? ಸರಿ. ಹೀಗೆ ವೃದ್ಧಾಪ್ಯದ ಜೀವನವನ್ನು ಪ್ರಕೃತಿಯೊಂದಿಗೆ ತುಲನಾತ್ಮಕವಾಗಿ ಸಮೀಕರಿಸಿದಂತಿದೆ.

"ಕಾಡಿನೊಳಗೆ ನಾನೆ ಒಂಟಿ;
ಓಡುತ್ತಿದ್ದೆನು ಹನಿಗೆ ಬೆದರಿ,
ಮೋಡ ಮಿಂಚಲು ಹಾದಿ ಹಿಡಿದು
ಮೆಟ್ಟಿಲೇರುವ ತಾಣಕೆ."

ಕತ್ತಲಿನಲ್ಲಿ ಕಾಡಿನ ಗಂಭೀರ ದೃಶ್ಯವನ್ನು ನೋಡಿ, ಬಾನಂಗಳದಲ್ಲಿ ಮಳೆಯ ಮೋಡದ ಮಿಂಚು ಮಳೆಯಾಗಿ ಬರುವುದರಲ್ಲಿತ್ತು. ನನ್ನನ್ನು ಉಳಿದು ಬೇರಾರೂ ಇಲ್ಲವಲ್ಲ ಎಂಬ ಭಯದಿಂದ ಒಂಟಿಯಾಗಿದ್ದ ನಿರೂಪಕ ಕಾಡಿನ ಕಣಿವೆಯಿಂದ ಮೇಲೇರುವ ಕಡೆ ವೇಗವಾಗಿ ಓಡುವುದಕ್ಕೆ ಮುಂದಾಗುತ್ತಾನೆ. ಮನುಷ್ಯ ಯಾರಿಗೆ ಹೆದರುತ್ತಾನೋ ಇಲ್ಲವೋ ಗೊತ್ತಿಲ್ಲ. ಆದರೆ, ಈ ಪ್ರಕೃತಿಯ ಎದುರು ಎಲ್ಲರೂ ಸಮಾನರೇ, ಎಲ್ಲರೂ ಹೆದರುವವರೇ ಆಗಿರುತ್ತಾರೆ ಎಂಬುದನ್ನು ಮನಗಾಣಬಹುದು.

"ಏನನೆಡಹಿದೆ? ಸುಯ್ಯಲೇನು?
ಏನು ನರಳಿಕೆ? – ಮನುಜನೇನು!
"ಕಾಣದೇನೋ ದಾರಿಹೋಕನೇ!?"
ಎಂದು ಗದರಿತು ವ್ಯಕ್ತಿಯು."

ಕಪ್ಪಾದ ಕಾರ್ಗತ್ತಲಲ್ಲಿ ಓಡುತ್ತಿರುವ ನಿರೂಪಕ ಎನನ್ನೊ ಎಡವಿದಂತಾಗಿ ಕ್ಷಣಾರ್ಧದಲ್ಲಿ ನಿಡಿದಾಗ ಉಸಿರಿನ ನರಲಾಟದ ಧ್ವನಿ ಕೇಳಿಸಿತು. ಮುದುಕ ಪಯಣಿಗನನ್ನು "ಕಾಣದೇನೋ ದಾರಿಹೋಕನೆ!?" ಎಂದು ಗದರಿಸುವ ಗಡಸು ಧ್ವನಿಯಲ್ಲಿ ಭಯ-ಆತಂಕದ ಕರಿನೆರಳು ಆವರಿಸಿರುವುದು ಅರಿವಿಗೆ ಬರುತ್ತದೆ. ಆಗ ಕಥಾನಾಯಕ ನಾನು ಏನನೆಡಹಿದೆ? ಸುಯ್ಯಲೇನು? ಏನು ನರಳಿಕೆ? ಮನುಜನೇನು? ಎಂದು ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಾನೆ. ಎಡವಿದ ವಸ್ತು ಏನೆಂಬುದು ಅರಿವಿಗೆ ಬಂದಾಗ ಭಯಭೀತನಾಗದೆ ಹೆದರಿ ಅಲ್ಲೇ ನಿಲ್ಲುತ್ತಾನೆ.

"ಹೆದರಿ ನಿಂತೆನು–ಮಿಂಚು ಬೆಳಕೊಳು
ಮುದುಕನೊಬ್ಬನ ಕಂಡೆನಲ್ಲಿ;
ಬದಿಯ ಬಂಡೆಯನೊರಗಿ ಕುಳಿತ
ಹೊಸಿಲಸಾವಿನ ಮುದುಕನು"

ಹೆದರಿನಿಂತ ಪಯಣಿಗ ಸಾವಿನ ದವಡೆಯಲ್ಲಿದ್ದ ಮುದುಕನೊಬ್ಬನನ್ನು, ಬಾನಲ್ಲಿ ಮಿಂಚಿದ ಮಿಂಚಿನ ಬೆಳಕಿನಿಂದ ಅಸ್ಪಷ್ಟವಾಗಿ ನೋಡಿದಾಗ, 'ಬದಿಯ ಬಂಡೆಯನೊರಗಿ ಕುಳಿತ ಹೊಸಿಲಸಾವಿನ' ಮುದುಕನೊಬ್ಬ ಕಾಣುತ್ತಾನೆ. ದಾರಿಹೋಕನಿಗೆ ಆ ಮುದುಕನ ಮೇಲೆ ಕವಿಕರ ಉಂಟಾಯಿತು. ಅಲ್ಲದೆ ತಾನು ಅರಿಯದೇ ಮಾಡಿದ ತಪ್ಪಿಗೆ ತನ್ನಲ್ಲೇ ಪಶ್ಚಾತ್ತಾಪ ಪಟ್ಟುಕೊಂಡು ಮನದಲ್ಲೇ ಕರಗಿ, ಮನದಲ್ಲೇ ಮರುಗುತ್ತಾನೆ.

" 'ಗೌಡ, ಕ್ಷಮಿಸೈ; ಇರುಳು, ಕಾಣದು,
ಮೋಡ ಮುಸುಕಿದೆ– ಕಾಡಿಗೊಬ್ಬನೆ!
ಮೇಡ ಹತ್ತಲು ಕಷ್ಟವಹುದೈ;
ಜೊತೆಗೆ ನಿಲ್ಲುವೆ' ನೆಂದೆನು."

ಪಯಣಿಗನು ತನ್ನ ತಪ್ಪಿನಿಂದ, ಅಜಾಗರೂಕತೆಯಿಂದಾದ ನೋವನ್ನು ನಿವಾರಣೆ ಮಾಡಿಕೊಳ್ಳುವ ನಿಟ್ಟಿನಲ್ಲಿ 'ಗೌಡ ನನ್ನನ್ನು ಕ್ಷಮಿಸು, ನಾನೊಬ್ಬನೇ ಎಂಬ ಭಯದಲ್ಲಿ ರಾತ್ರಿಯ ಕಗ್ಗತ್ತಲಿನಲ್ಲಿ ಕಣ್ಣುಕಾಣದೆ ಎಡವಿದೆ' ಎಂದು ಭಿನ್ನವಿಸುತ್ತಾನೆ. 'ನಿನಗೆ ಮೇಡು ಹತ್ತಲು ಕಷ್ಟವೆ?, ನಾನು ನಿಮಗೆ ಸಹಾಯ ಮಾಡಲೆ? ಎನ್ನುವ ನಿರೂಪಕನ ಮಾತುಗಳಲ್ಲಿ 'ಕರುಣರಸ' ವ್ಯಕ್ತವಾಗುತ್ತಿರುವುದನ್ನು ಗುರುತಿಸಬಹುದು. ಈ ಮೇಲಿನ ಸಾಲುಗಳಲ್ಲಿ ಪಯಣಿಗನಲ್ಲಿ ಉಂಟಾದ ಮಾನವೀಯತ್ವದ ಸೆಲೆಯೊಡೆದು ಕಠಿಣ ಹೃದಯದ ಮುದುಕನ ಮನಸ್ಸಿಗೆ ಸಾಂತ್ವನವನ್ನು ಹೇಳಿದಂತೆ ಪ್ರತಿಧ್ವನಿಸುತ್ತಿದೆ.

"ಮೊದಲು ಕೋಪಿಸಿ, ಬಳಿಕ ನಕ್ಕನು
ಮುದುಕ ಮರುಕವ ಹಳಿವ ನಗೆಯ–
'ಮುದಿಗೆ ಚಳಿಯೆ, ಇರುಳೆ, ಮಳೆಯೆ,

ಕಾಡೆ ಮೇಡೆ? ನಡೆಯೋ ನೀ.' "

ಮುಂದುವರೆದು– ಪಯಣಿಗ ಹೇಳಿದಾಗ ಮುದುಕನಿಗೆ ಆರಂಭದಲ್ಲಿ ಕೋಪ ತಾರಕಕ್ಕೇರಿ, ಬಳಿಕ ನಗುತ್ತಾ, ಈ ಮುದುಕನ ಮರುಕವನ್ನು ಹಳಿವೆಯಾ ಎಂದು ಜೀವನುತ್ಸಾಹ ಕಡಿಮೆಯಾಗಿ, ಈ ಮುದುಕನಿಗೆ ಚಳಿಯೇನು? ಕತ್ತಲೆಯಾದರೇನು? ಮಳೆಯಾದರೇನು? ಕಾಡಾದರೇನು? ಮೇಡಾದರೇನು? ಎನ್ನುವ ಮುದುಕನ ಧ್ವನಿಯಲ್ಲಿ ಬದುಕಿನ ಭಯಂಕರತೆ ವ್ಯಕ್ತವಾಗುತ್ತದೆ. ಅಲ್ಲದೆ ಪಯಣಿಗನ ಸಹಾಯವನ್ನು ತಿರಸ್ಕರಿಸಿ 'ನಡೆಯೋ ನೀ' ಎನ್ನುವಲ್ಲಿ ನಿನ್ನ ಕರುಣೆಯಿಂದ ಕೂಡಿದ ಸಹಾಯ ನನಗೆ ಬೇಕಿಲ್ಲ, ತಿರಸ್ಕಾರದ ಮನೋಭಾವ ಮೊದಲಿಗೆ ವ್ಯಕ್ತವಾದರೂ ಒಬ್ಬೊಂಟಿಯಾದ ಮುದುಕನಿಗೆ ಆಸರೆ ಬೇಕು ಎನ್ನುವ ಧ್ವನಿ ಇಂಗಿತವಾಗಿದೆ. ಜೀವನವೆಲ್ಲಾ ಕಷ್ಟಪಟ್ಟು ದುಡಿದು ತನ್ನ ಮಡದಿ ಮಕ್ಕಳಿಗಾಗಿ ಜೀವವನ್ನೇ ಮುಡಿಪಾಗಿ ಇಟ್ಟಿರುತ್ತಾರೆ. ಮಕ್ಕಳಿಗಾಗಿ ಸರ್ವಸ್ವವನ್ನೂ ತ್ಯಾಗಮಾಡಿ, ಬೇಕು–ಬೇಡಗಳನ್ನೆಲ್ಲಾ ಪೂರೈಸಿ ಒಳ್ಳೆಯ ಶಿಕ್ಷಣ ಕೊಡಿಸುತ್ತಾರೆ. ಶಿಕ್ಷಣ ಪಡೆದು ವಯಸ್ಕರಾಗಿ ನಂತರ ಉದ್ಯೋಗವನ್ನು ಪಡೆದೋ, ಮದುವೆಯಾಗಿಯೋ ವಯಸ್ಸಾದ ವೃದ್ಧ ತಂದೆ–ತಾಯಿಗಳಿಂದ ದೂರವಾಗುತ್ತಾರೆ. ತಮಗಾಗಿ ಇಡೀ 'ಜೀವನ' ಮತ್ತು 'ಜೀವ'ವನ್ನೇ ತ್ಯಾಗಮಾಡಿದ ತಂದೆ–ತಾಯಿಗಳನ್ನು ದೂರಮಾಡಿ ಅವರನ್ನು ಒಬ್ಬೊಂಟಿಯಾಗಿ ಅನಾಥರನ್ನಾಗಿ ಮಾಡಿಬಿಡುತ್ತಾರೆ. ಇಲ್ಲಿ ಆ ಒಂಟಿತನ, ಬೇಸರ, ಜಿಗುಪ್ಸೆಗಳು ಕೋಪ–ತಾಪಗಳ ಮೂಲಕ ವ್ಯಕ್ತವಾಗುತ್ತಿದೆ. ಇಲ್ಲಿ ಶಿಕ್ಷಣ ಎಷ್ಟು ಮುಖ್ಯವೋ, ಅಷ್ಟೇ ಒಳ್ಳೆಯ 'ಸಂಸ್ಕಾರ'ವೂ ಮುಖ್ಯವಾಗುತ್ತದೆ. ಒಬ್ಬ ವ್ಯಕ್ತಿಯ ಜೀವನದಲ್ಲಿ ಶಿಕ್ಷಣ ಮತ್ತು ಸಂಸ್ಕಾರಗಳು ತುಂಬಾ ಮುಖ್ಯವಾಗುತ್ತವೆ.

"ಹಳುವಿನೊಳಗೂ ಮರುಕ ಬೇಡವೆ!
ಇಳೆಯ ಬವಣೆಗೆ ಜಡ್ಡು ಬಿದ್ದನೆ?
ಕಳೆದ ಬಾಳೊಳು ದಯೆಯ ಕಾಣದೆ
ಇಂದು ಕಾಣಲು ಹಳಿವನೆ?"

ಹೀಗೆ ಬಂಡೆಯನೊರಗಿ ಕುಳಿತಿರುವ ಮುದುಕನಿಗೆ ಕಾಡು, ಮಳೆ, ಚಳಿ, ಕತ್ತಲೆಗೆ ಹೆದರದಿರಲು ಕಾರಣಗಳೇನು? ಇಳೆಯ ಬವಣೆಗೆ ಜಡ್ಡು ಬಿದ್ದನೆ? ಕಳೆದ ಬಾಳೊಳು ದಯೆಯ ಕಾಣದೆ ಇಂದು ಕಾಣಲು ಹಳಿವನೆ? ಜೀವನವೇ ಬೇಡ ಅನ್ನುವಷ್ಟು ದೃಢ ನಿರ್ಧಾರ ಮಾಡಲು ಕಾರಣಗಳೇನು? ಮುದುಕ ಇಷ್ಟೊಂದು ಕಠಿಣ ಮನಸ್ಸಿನವನಾಗಲು ಕಾರಣಗಳೇನು? ಎನ್ನುವ ಪ್ರಶ್ನೆಗಳು ನಮ್ಮನ್ನು ಕಾಡುತ್ತವೆ. ಈ ಜೀವನದಲ್ಲಿ ಹಿಂದೆ ನಾನು ಯಾರ ದಾಕ್ಷಿಣ್ಯಕ್ಕೂ, ಕನಿಕರಕ್ಕೂ, ಮರ್ಜಿಗೂ ಒಳಗಾಗದೆ ಬದುಕಿನಲ್ಲಿ ಬಂದ ಕಡು ಕಷ್ಟಗಳನ್ನೆಲ್ಲವನ್ನು ಅನುಭವಿಸಿದ್ದೇನೆ ಎನ್ನುವಂತಿದೆ ಮುದುಕನ ಮಾತುಗಳು. ಈಗ ನನ್ನ ಮರುಕದ ಸಹಾಯವನ್ನು ಪಡೆಯಲು ನಿರಾಕರಿಸುತ್ತಿರಬಹುದು ಎನ್ನುವ ಆಲೋಚನೆಗಳು ಕಥಾನಾಯಕನಲ್ಲಿ ಕಾಡಿದಂತಿದೆ.

"ಹಿತದ ಮಾತುಗಳನಾಡುತಾತನ
ಖತಿಯನಿಳುಹಿದೆ; ಹೆಜ್ಜೆಹೆಜ್ಜೆಗು
ಜೊತೆಯೊಳೊಯ್ದೆನು ಹೆಜ್ಜೆಹೆಜ್ಜೆಗು
ನಿಂತು ಮುದುಕನ ನಡೆಸುತ"

ಮುದುಕನ ಮನಸ್ಸಿಗೆ ಹಿತವಾಗುವ ಮಾತುಗಳನ್ನಾಡುತ್ತಾ ನಿರೂಪಕ ಆತನ ಕೋಪವನ್ನು, ನಿರಾಸಕ್ತಿಯನ್ನು ಶಮನಗೊಳಿಸುತ್ತಾನೆ. ಸಹಾಯವನ್ನು ಪಡೆಯಲು ನಿರಾಕರಿಸಿದರೂ ಮುದುಕನ ಕೈ–ಹಿಡಿದು ನಡೆಸಿಕೊಂಡು ಬರುವ ಪಯಣಿಗನ ಮೇಲೆ ಮುದುಕನ ಹೃದಯ ಕರಗಿತು. ಇಲ್ಲಿ ಪಯಣಿಗನ ಅನುಕಂಪ, ತಾಳ್ಮೆ, ಸಹಾನುಭೂತಿ, ಮನುಷ್ಯತ್ವದ ಪರಾಕಾಷ್ಠತೆಯನ್ನು ತಲುಪಿದೆ. ಕೊನೆಗೂ ಮುದುಕನ ಮನಸ್ಸನ್ನು ಒಲಿಸುವುದರಲ್ಲಿ ನಿರೂಪಕ ಯಶಸ್ವಿಯಾಗುತ್ತಾನೆ.

"ಮೇಡ ಹತ್ತುತಲಿದ್ದೆವಿಂತು–
ಗೌಡ ಕರಗಿದ, ಕರವ ನೆಮ್ಮಿದ
ಮೋಡ ಮಿಂಚಿನ ಬಾನ ಹೋಲಿತು
ಎನ್ನ ಮನದಾ ಭಾವವು."

ಈಗ ಕಥಾನಾಯಕನ ಮನಸ್ಸು ಮೋಡ ಮಿಂಚುಗಳನ್ನು ತುಂಬಿಕೊಂಡು ಆಕಾಶದಂತಾಗಿ, ತಾನು ಆತ್ಮೀಯವಾಗಿ ತೋರಿದ ಅಂತಃಕರಣದ ಪ್ರೀತಿ ಮತ್ತು ಒಲುಮೆಗೆ ಮನಸೋತ ಮುದುಕನನ್ನು ಗಮನಿಸಿ ಮನಸ್ಸಿನ ಒಳಗೊಳಗೇ ಸಂತಸಪಟ್ಟನು. ಆದರೆ ಮುದುಕನ ದುರ್ಬಲತೆಯನ್ನು ಕಂಡು ದುಃಖಿಸುವುದು ಕಾಣುತ್ತದೆ. ಇಲ್ಲಿ ಮುದುಕನ ಮನಸ್ಸನ್ನು ಪರಿವರ್ತಿಸಿ ಯಶಸ್ವಿಯಾದೆನೆಂಬ ಸಂತೋಷಕ್ಕಿಂತ, ಮುದುಕನ ದುರ್ಬಲತೆಯೆನ್ನು ಕಂಡು ಚಿಂತಿಸುವ, ದುಃಖಿಸುವ ನಿರೂಪಕನ ಮನಸ್ಸು ಮೇಲ್ಮಟ್ಟದ್ದಾಗಿದೆ.

"ಗಗನವಳೆಯುವ ಮಿಂಚು ಮುದುಕನ
ಮೊಗದಿ ಬಿಂಬಿಸಿಂದು–ಕಂಡೆನು
ಉಗುವ ಕಂಬನಿ ಹೊನಲ, ಸೋಜಿಗ!
ಅಳುವನೇನೀ ಮುದುಕನು!"

ಇಡೀ ಆಕಾಶವನ್ನೇ ವ್ಯಾಪಿಸಿದ ಮಿಂಚಿನ ಬೆಳಕಿನಲ್ಲಿ ವೃದ್ಧಮುದುಕನ ಮುಖವನ್ನು ಕಂಡ ನಿರೂಪಕನಿಗೆ, ಆತನ ಕಣ್ಣಂಚಿನಲ್ಲಿ ನೀರು ಜಿನುಗುವುದು ಕಾಣಿಸುತ್ತದೆ. ಮುದುಕನ ಕಣ್ಣಲ್ಲಿ ಸಂತಸದ ಕಣ್ಣೀರೆ? ಅಥವಾ ದುಃಖದ ಕಣ್ಣೀರೆ? ಮುದುಕನಲ್ಲಿ ಉಂಟಾದದ್ದು ಆನಂದಭಾಷ್ಪವಾದರೆ ಅದು ಮನುಷ್ಯ ಸಂಕುಲದ ಸಹಾಯಕ್ಕೆ ನೀಡಿದ ಕಾಣಿಕೆ, ಇಲ್ಲದಿದ್ದರೆ ತಿರಸ್ಕಾರದ ದಿವ್ಯವ್ಯಾಕುಲತೆ? ಎಂದು ಅರ್ಥೈಸಬಹುದಾಗಿದೆ.

"ದುಗುಡವೇತಕೆ, ಗೌಡ? ಪೇಳೈ
ದಿಗಿಲು ಬಿದ್ದೆಯ? ಮುಪ್ಪು ಹಳಿವೆಯ?
ಬಗೆಯೊಳಾವುದು ನೋವು? ಕೋಪವೆ?
ನಿನ್ನ ಅಬಲತೆಗಳುವಿಯಾ?"

ನಿರೂಪಕ ಮುದುಕನನ್ನು ಮತ್ತೊಮ್ಮೆ ವಿನಮ್ರವಾಗಿ ಪ್ರಶ್ನಿಸುತ್ತಾ ದುಃಖವೇತಕ್ಕೆ ಗೌಡ? ಹೇಳು ದಿಗಿಲು ಬಿದ್ದೆಯ? ಅಥವಾ ಏನಾದರೂ ಚಿಂತಿಯೇ? ಅಥವಾ ಏನಾದರೂ ಭಯವೇ? ನಿನ್ನ ಮುಪ್ಪನ್ನು ನಿಂದಿಸುತ್ತಿದ್ದೀಯೇ? ನಿನ್ನ ಮನದ ವ್ಯಾಕುಲತೆ ಏನು? ನಿನ್ನ ನಿಶ್ಶಕ್ತಿಗಾಗಿ ಕಂಬನಿ ಸುರಿಸುವೆಯಾ? ಅಥವಾ ಕೋಪವೇ? ಎಂಬೆಲ್ಲಾ ಪ್ರಶ್ನೆಗಳ ಸರಮಾಲೆಯನ್ನು ಮುದುಕನಿಗೆ ಸುರಿಸುತ್ತಾನೆ. ಅದಕ್ಕೆ ಮುದುಕನ ಮನಸ್ಸಿನಲ್ಲಿ ಉಂಟಾದ ಬದಲಾವಣೆಗಳನ್ನು ಗಮನಿಸಬಹುದಾಗಿದೆ.

"ಎನ್ನ ಮತಿಗೆ ಗೌಡನಂದನು,
ಎನ್ನ ಕರಗಳನಮುಕಿ, ಮೆಲ್ಲನೆ;
'ನಿನ್ನ ಈ ಬಗೆ ಮರುಕ ತಂದಿತು
ಮರೆತ ಕಂದನ ನೆನಪನು'."

ಮುದುಕ ಗೌಡನು ನಿರೂಪನ ಸೂಕ್ಷ್ಮಬುದ್ಧಿಮತೆ ಮತ್ತು ಸಹೃದಯಿ ಮನೋಭಾವವನ್ನು ಗಮನಿಸಿ, ಅವನ ಕೈಗಳನ್ನು ಹಿಡಿದುಕೊಂಡು ಮೃದುವಾಗಿ ಅಮುಕಿ ಮೆಲ್ಲನೆ ಹೇಳುತ್ತಾನೆ– 'ನಿನ್ನ ಈ ಬಗೆ ಮರುಕ ತಂದಿತು ಮರೆತ ಕಂದನ ನೆನಪನು'. ನಿನ್ನ ಈ ಕನಿಕರ ತುಂಬಿದ ಮೃದು ಧೋರಣೆ ನನ್ನೊಂದಿಗೆ ಇಲ್ಲವಾಗಿರುವ ನನ್ನ ಮಗನ ನೆನಪನ್ನು ತಂದಿತೆಂದು. ಅಂದರೆ ಮುದುಕನಿಗೆ ತನ್ನ ಮಗನ ಮೇಲೆ ಇದ್ದಂತಹ ಅಗಾಧವಾದ ಮಮತೆ–ಪ್ರೀತಿ–ವಾತ್ಸಲ್ಯಗಳು ಅವನನ್ನು ಕಳೆದುಕೊಂಡ ಮೇಲೆ ಆ ನೆನಪುಗಳಿಂದ ಎಷ್ಟು ಆಳವಾಗಿ ಕಾಡಿರಬಹುದು, ಆ ಸುಮಧುರ ಕ್ಷಣಗಳಿಂದ ವಂಚಿತರಾಗಿ ಮಾನಸಿಕವಾಗಿ ಸ್ಥಿಮಿತತೆಯನ್ನು ಕಳೆದುಕೊಂಡು ಕಠೋರವಾಗಿರುವುದನ್ನು ತಿಳಿಯಬಹುದಾಗಿದೆ.

"ನಡೆದೆವಿಬ್ಬರು ಮೌನದಿಂದ
ಅಡವಿಯೊಳಗೆ ನಾನು ಮುದುಕನು
ನುಡಿಯು ತಿಳುಹಲು ಬಲ್ಲುದೇನ
ಮೌನ ನುಡಿದಾ ದುಗುಡವ?"

ಹೀಗೆ, ಪಯಣಿಗ ಮತ್ತು ಮುದುಕನಲ್ಲಿ ಉಂಟಾದ ಆತ್ಮೀಯತೆಯಿಂದ 'ಮುದುಕನು ಕಥಾನಾಯಕನ ಕೈಯನ್ನು ಬಿಗಿಯಾಗಿ ಒತ್ತಿ ಹಿಡಿದು' ನಿನ್ನ ಈ ಸನ್ನಡತೆಯಿಂದ ನನ್ನಲ್ಲಿ ಮಮತೆ ಹುಟ್ಟಿದೆ. ಈ ಅನುಕಂಪ ನನ್ನ ಕಳೆದು ಹೋದ ಮಗನ ನೆನಪನ್ನು ತರುತ್ತಿದೆ. ನನ್ನ ಮಗ ತೋರಬೇಕಾದ ಪ್ರೀತಿ–ವಾತ್ಸಲ್ಯವನ್ನು ನೀನು ತೋರುತ್ತಿರುವೆ ಎಂದಾಗ ಇಬ್ಬರಲ್ಲೂ ಪರಸ್ಪರ ಅಂತಃಕರಣಗಳು ಸಮ್ಮಿಲನವಾದಂತೆ ಭಾಸವಾಗುತ್ತವೆ. ಹೀಗೆ ಆಡಿದ ಮಾತುಗಳನ್ನು ಕೇಳಿ ಕಥಾನಾಯಕ ಮತ್ತು ಮುದುಕ ಕಣಿವೆಯಲ್ಲಿ ಮೌನದಿಂದ ಸಾಗುತ್ತಿರುವುದನ್ನು ಕಾಣುತ್ತೇವೆ. ಈ ಆನಂದ ತುಂದಿಲತೆಯಿಂದ ಯಾರೊಬ್ಬರೂ ಮಾತನಾಡುವ ಸ್ಥಿತಿಯಲ್ಲಿಲ್ಲ ಎನ್ನುವುದನ್ನು ಸಹೃದಯರಾದ ಓದುಗರಾದ

ನಾವುಗಳು ಮನಗಾಣಬೇಕು.

'ಕಣಿವೆಯ ಮುದುಕ' ಕವನದಲ್ಲಿ ಪ್ರಮುಖವಾಗಿ 'ಮಾನವೀಯತೆಯ ಅಂತಃಕರಣ'ವನ್ನು ತನ್ನ ಒಡಲಿನಲ್ಲಿ ಅಡಗಿಸಿಟ್ಟುಕೊಂಡಿರುವುದನ್ನು, ಭಾವನೆಗಳ ಮೂಲಕ ಅಭಿವ್ಯಕ್ತಿಗೊಳ್ಳುವ ಮಹತ್ವಪೂರ್ಣವಾದ ಸನ್ನಿವೇಶಗಳು 'ದಾರಿಹೋಕ' ('ಪಯಣಿಗ', 'ನಿರೂಪಕ', 'ಕಥಾನಾಯಕ') ಮತ್ತು 'ಮುದುಕ' ಇವರಿಬ್ಬರ ನಡುವೆ ಪ್ರತಿಬಿಂಬಿತವಾಗಿದೆ. ಹೃದಯಾಂತರಾಳದ ದುಃಖವನ್ನರಿತು ಅನುಕಂಪ ತೋರಿಸುವ ಮನುಷ್ಯತ್ವವು ಮೌನವಾಗಿಯೇ ವ್ಯಕ್ತವಾಗಿದೆ. ತನ್ನ ಜೀವನದಲ್ಲಿ ಏನೂ ಉಳಿದಿಲ್ಲ ಎಂಬ ಬೇಸರದಿಂದ ಬದುಕುವ ಆಸೆಯನ್ನೇ ಕಳೆದುಕೊಂಡಿದ್ದ, ಜೀವನ ಉತ್ಸಾಹವೆಲ್ಲಾ ಬತ್ತಿಹೋಗಿದ್ದ ಮುದುಕನ ಹೃದಯದಲ್ಲಿ ಮಮತೆಯ ಕಾರಂಜಿಯನ್ನು ಹುಟ್ಟಿಸಿದವನು ದಾರಿಹೋಕನೇ ಆಗಿದ್ದಾನೆ. ಇಲ್ಲಿ ಎರಡು ಮನಸ್ಸುಗಳ ಮೌನದ ಹೊಂದಾಣಿಕೆ ಮಿಳಿತವಾಗಿದೆ. ಬದುಕಿಗೆ ಸಂತೋಷದ, ಉತ್ಸಾಹದ ಹೊಳಪು ಮೂಡಿ ಮನಸ್ಸು ನಿರಾಳವಾಗಿರುವುದಕ್ಕೆ ಒಂದು ಸುಂದರವಾದ ಸನ್ನಿವೇಷವನ್ನು ಕವಿ ಸೃಜಿಸಿದ್ದಾರೆ.

ಈ ಹಿನ್ನೆಲೆಯಲ್ಲಿ 'ಕಣಿವೆಯ ಮುದುಕ' ಕವನವು ಮನಕಲಕುವಂತಿದೆ. ಬಾಳಿನಲ್ಲಿ ಮುಪ್ಪು ಆವರಿಸಿದಾಗ ಮಕ್ಕಳ ವರ್ತನೆಯ ಬಗೆಗೆ ಅಸಂತೋಷದಿಂದ ಮುದುಕನೊಬ್ಬ ಕಾಡಿನ ಕತ್ತಲದಾರಿಯಲ್ಲಿದ್ದಾನೆ. ಜೀವನದ ಕಷ್ಟಗಳ ಜೊತೆ ಪ್ರಕೃತಿಯಿಂದ ಬಂದೊದಗಿದ ಕಷ್ಟ, ಗುಡುಗು-ಮಿಂಚು-ಮಳೆಸುರಿಯುವ ಸೂಚನೆಯಿಂದ ಕಂಗೆಟ್ಟಸ್ಥಿತಿ. ಆ ಸಮಯದಲ್ಲಿ ಕವಿತೆಯ ನಿರೂಪಕ ಧಾವಂತದಲ್ಲಿದ್ದಾಗ ಮುದುಕನನ್ನು ಎಡವುತ್ತಾನೆ. ಅದರಿಂದ ಕುಪಿತನಾದ ಮುದುಕನ ಈ ವರ್ತನೆಯಿಂದ ತನ್ನ ಬದುಕಿನಲ್ಲಿ ಸಿಗದ ಪ್ರೀತಿ, ವಾತ್ಸಲ್ಯ ಮತ್ತು ಅನುಕಂಪ ಅಪರಿಚಿತನಿಂದ ದೊರಕಿದಾಗ ಮುದುಕ ಮೂಕವಿಸ್ಮಿತನಾಗಿ ಚಿಂತನೆಗೆ ತೊಡಗುತ್ತಾನೆ. ಹೀಗೆ ಈ ಕವನವು ಮಾನವೀಯ ಅಂತಃಕರಣ ಬದುಕಿನೊಳಗೆ ಸ್ಥಾಯಿಯಾಗಿ ಕಾಪಾಡಬೇಕಾದ ಗುಣ ಎನ್ನುವುದನ್ನು ಒತ್ತಿ ಹೇಳುತ್ತದೆ.

ಕುಟುಂಬ ಜೀವನದಲ್ಲಿ ಹೆಂಡತಿ ಗಂಡನನ್ನು, ತಂದೆ-ತಾಯಿಗಳು ಮಕ್ಕಳನ್ನು ಪರಸ್ಪರ ಅವಲಂಬಿಸುವುದು ಸಹಜ. ಜೀವನ ಪದ್ಧತಿಯಲ್ಲಿ ಕುಟುಂಬದ ನಿರ್ವಹಣೆ ಮತ್ತು ಮೌಲ್ಯಗಳೇ ಶ್ರೇಷ್ಠವಾದವುಗಳು. ಹಿರಿಯ ಜೀವಗಳು ಮನೆಯಲ್ಲಿ ಮುತ್ತು-ರತ್ನ-ಚಿನ್ನದ ಆಭರಣಗಳಿದ್ದಂತೆ, ಎನ್ನುವ ಜೀವನ ದೃಷ್ಟಿಹೊಂದಿದ ಸಮಾಜ ನಮ್ಮದು. ಆದರೆ ಆಧುನಿಕತೆಯ ಪ್ರವೇಶವಾದನಂತರ ಧಾವಂತದ ಬದುಕು, ಪೈಪೋಟಿಯ ಜೀವನ ಒಬ್ಬರು ಇನ್ನೊಬ್ಬರನ್ನು ಸಾವಧಾನದಿಂದ ಕೇಳಿಸಿಕೊಳ್ಳದ ಮನಃಸ್ಥಿತಿ ಉಂಟಾಗಿದೆ. ಹೀಗಿರುವಾಗ ಮೌಲ್ಯಗಳ ಪಲ್ಲಟವೂ ಅಷ್ಟೇ ವೇಗವಾಗಿ, ಅದೇ ಪ್ರಮಾಣದಲ್ಲಿ ಉಂಟಾಗಿದೆ. ಮುಪ್ಪಿನ ತಂದೆ-ತಾಯಿಗಳು ಹೊರೆ ಎನ್ನಿಸತೊಡಗಿದ್ದು ಅವರಿಗೆ ವೃದ್ಧಾಶ್ರಮಗಳಲ್ಲಿ ವ್ಯವಸ್ಥೆ ಮಾಡುತ್ತಿರುವ ನಿದರ್ಶನಗಳು ಹೆಚ್ಚುತ್ತಿವೆ.

ಜೀವನದಲ್ಲಿ ಪ್ರತಿಯೊಂದು ಜೀವಿಯೂ ಸಹ ಒಂದಲ್ಲಾ ಒಂದು ಹಂತದಲ್ಲಿ, ಒಂದಲ್ಲಾ ಒಂದು ರೀತಿಯ ಕಷ್ಟ, ಹಿಂಸೆಯನ್ನು ಅನುಭವಿಸಿ, ಜಿಗುಪ್ಸೆಹೊಂದಿ ತೊಳಲಾಡುವವರೇ. ಅಂತಹ ಸಂದರ್ಭಗಳಲ್ಲಿ ಯಾರಾದರೂ ಅವರ ಮನಸ್ಸಿನ ದುಗುಡ, ಬೇಸರಿಕೆಯನ್ನು ಹೋಗಲಾಡಿಸಿ, ಜೀವನ ಉತ್ಸಾಹವನ್ನು ಪುನಃ ಚಿಗುರೊಡೆಯುವಂತೆ ಮಾಡುವ ಆಪ್ತವಾದ ಆಸರೆಯನ್ನು ಸಹಜವಾಗಿಯೇ ಬಯಸುತ್ತಾರೆ. 'ಪ್ರವಾಹದಲ್ಲಿ ಕೊಚ್ಚಿ ಹೋಗುವವರಿಗೆ ಒಂದು ಹುಲ್ಲು ಕಡ್ಡಿಯು ಆಸರೆಯಾಗುವಂತೆ', 'ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡರೆ ನೂರು ವರ್ಷ ಆಯಸ್ಸು' ಎಂಬ ಗಾದೆ ಮಾತುಗಳಂತೆ, ಅಂತಹ ಸಂದರ್ಭದಲ್ಲಿ ಆಸರೆಯಾಗಿ ಬಂದವರು ದೇವರಿಗೆ ಸಮಾನರಾಗಿ ಬಿಡುತ್ತಾರೆ. ಮುಂದೆ ಅಂತಹ ಯಾವುದೇ ಸಂದರ್ಭಗಳು ಎದುರಾದರೂ ಅವುಗಳನ್ನು ಸಮರ್ಥವಾಗಿ ನಿಬಾಯಿಸಲು ಮಾನಸಿಕವಾಗಿ ಸಿದ್ಧರಾಗುತ್ತಾರೆ. ಪು.ತಿ.ನ. ಅವರ ಸಾಂಸಾರಿಕ ಜೀವನವನ್ನು ಕುರಿತು ದೇ. ಜವರೇಗೌಡ ಅವರು ಹೀಗೆ ಹೇಳಿದ್ದಾರೆ- "ಅವರು ನಿರಾಸೆಗೊಂಡವರಂತೆ, ಧೈರ್ಯಹೀನರಾದವರಂತೆ ಕಾಣುವುದಿಲ್ಲ. ಒಂದು ರೀತಿಯ ದಿವ್ಯನಿರ್ಲಿಪ್ತತೆ ಅವರದು. ಸಂಸಾರದ ಶ್ರೇಯಸ್ಸಿಗೆ ಪುರುಷ ಎಷ್ಟು ಕಾರಣನೋ, ಸ್ತ್ರೀ ಅದಕ್ಕಿಂತಲೂ ಹೆಚ್ಚು ಜವಾಬ್ದಾರಳು. ಗಂಡನಲ್ಲಿಲ್ಲದ ಗುಣಗಳನ್ನು ಹೆಂಡತಿಯೂ, ಹೆಂಡತಿಯಲ್ಲಿಲ್ಲದ ಗುಣಗಳನ್ನು ಗಂಡನೂ ತುಂಬಿಕೊಂಡು ಪರಸ್ಪರ ಪೂರಕವಾಗಿ, ತಾತ್ಕಾಲಿಕ ವಿರಸಗಳನ್ನು ಮರೆತು, ಮಧುರ ಕ್ಷಣಗಳನ್ನು ಮಾತ್ರ ಸದಾ ನೆನಪಿಗೆ ತಂದುಕೊಳ್ಳುತ್ತಾ, ಇಬ್ಬರೂ ಏಕಮುಖವಾಗಿ ನಡೆ-ನುಡಿಗಳೊಂದಾಗಿ, ಹೃದಯವೊಂದಾಗಿ ವ್ಯವಹರಿಸಿದ್ದಾದರೆ ಸಂಸಾರದಲ್ಲಿ ಜೇನು ಹೊಳೆ ಹರಿಯುತ್ತದೆ; ಪ್ರಳಯ ಸಹ ಅಂಥವರಿಗೆ ಭೀಕರವಾಗಿ ತೋರುವುದಿಲ್ಲ. ಪುತಿನ ಅವರು ಕಾವ್ಯ ಪ್ರಭೆಯಿಂದಾಗಿ ಮಾತ್ರವಲ್ಲ, ಅನುಕೂಲ ದಾಂಪತ್ಯದಿಂದಾಗಿ ಅಸೀಮ ಪುಣ್ಯಶಾಲಿಗಳು".೨ ಪು.ತಿ.ನ. ಅವರಿಗೆ ತಮ್ಮ ಜೀವನದ ಸಮೃದ್ಧ ಕ್ಷಣಗಳನ್ನು, ತುಂಬು ಜೀವನವನ್ನು ಅನುಭವಿಸಿದ್ದರೂ ಸಹ ವೃದ್ಧಾಪ್ಯದ ಸಂದರ್ಭದಲ್ಲಿ ಮನುಷ್ಯನಿಗೆ ಯಾವೆಲ್ಲಾ ನೋವು-ನಲಿವುಗಳು, ಕಷ್ಟ-ಸುಖಗಳು ಎದುರಾಗುತ್ತವೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿ ಇಲ್ಲಿ ಚಿತ್ರಿಸುವಂತಹ ಪ್ರಯತ್ನ ಮಾಡಿದ್ದಾರೆ.

ಪು.ತಿ.ನ. ಅವರನ್ನು ದೊಡ್ಡ ರಂಗೇಗೌಡರು ಹೀಗೆ ಸ್ಮರಿಸಿದ್ದಾರೆ- "ಅಸೀಮ ಕಲ್ಪನೆ, ಅನನ್ಯ ಚಿಂತನೆ, ಪರಿಶುದ್ಧ ಭಾಗವತ

ಪ್ರಜ್ಞೆ, ಮೌಲ್ಯಗಳ ಆರಾಧನೆ, ನಿಸರ್ಗದ ಬಗೆಗೆ ಅಪೂರ್ವ ದೈವ ಭಾವನೆ, ಪುರಾಣ ಪುಣ್ಯ ಕಥೆಗಳ ಬಗೆಗೆ ಇತ್ಯಾತ್ಮಕ ಧೋರಣೆ, ಸದಾ ಕಾವ್ಯಾರ್ಥ ಮಂಥನ, ಕನಸು ಮನಸಿನಲ್ಲೂ ಸಾಹಿತ್ಯ ಸಂಗೀತದ ರಸಾಸ್ವಾದನ, ಬುದ್ಧಿ ಬಂದಾಗಿನಿಂದಲೂ ಇಹಲೋಕ ತ್ಯಜಿಸುವ ತನಕ ನಂಬಿದ ನೆಚ್ಚಿನ ಶ್ರೀಕೃಷ್ಣ ಸಂಕೀರ್ತನ... ಇವುಗಳು ಪು.ತಿ.ನ. ಬದುಕು ಮತ್ತು ಬರಹದ ವಿಶಿಷ್ಟ ಲಕ್ಷಣ".[೩] ಮುಂದುವರಿದು, ಎಚ್. ಎಸ್. ರಾಘವೇಂದ್ರರಾವ್ ಅವರ ಮಾತುಗಳು ಇಲ್ಲಿ ಪೂರಕವಾಗಿವೆ "ಇವರ ಕಾವ್ಯ ವ್ಯಕ್ತಿತ್ವಕ್ಕೆ ನಿಸರ್ಗ, ಪ್ರೀತಿ ಮತ್ತು ತತ್ವಜಿಜ್ಞಾಸೆಗಳ ಜೊತೆಗೆ ಸೌಂದರ್ಯಾನ್ವೇಷಣೆಯ ಮತ್ತೊಂದು ಅಂಶವನ್ನು ಸೇರಿಸಿದಂತೆ ಕಾಣುತ್ತದೆ".[೪] ಆಧುನಿಕತೆ ಬೆಳೆದಂತೆ ವರ್ತಮಾನದ ಮಾನವನ ಬದುಕಿನಲ್ಲಿ ಸಂಭವಿಸುವ, ಎದುರಾಗುವ ಸಮಸ್ಯೆಗಳನ್ನು ಕೇಂದ್ರೀಕರಿಸಿದಂತೆ ತಮ್ಮ ತತ್ತ್ವಜಿಜ್ಞಾಸೆಯ ಹಿನ್ನೆಲೆಯಲ್ಲಿ ಶೋಧನೆ ನಡೆಸಿರುವುದು ಅವರ ಬುದ್ಧಿಪೂರ್ವಕ ಆಯ್ಕೆಯಾಗಿದೆ ಎಂಬುದು ತಿಳಿಯುತ್ತದೆ. ಮುಂದುವರಿದು, ಪುತಿನ ಅವರ ಆತ್ಮೀಯತೆಯನ್ನು ಕುರಿತು ಎಸ್. ಮಂಜುನಾಥ್ ಅವರ ಮಾತುಗಳು –"ಅವರ ಆತ್ಮೀಯತೆ ಎಂಥದ್ದೆಂದರೆ ಅದು ಪರಿಚಿತ ಅಪರಿಚಿತ ಎಂಬ ಭೇದ ಎಣಿಸದೆ ಎಲ್ಲರನ್ನೂ ಆವರಿಸುವಂಥದ್ದು"[೫] ಎಂಬ ಮಾತುಗಳು ಸರಿಯಾಗಿಯೇ ಇವೆ.

ಒಟ್ಟಾರೆಯಾಗಿ, ಪು.ತಿ.ನ. ಅವರು 'ಕಣಿವೆಯ ಮುದುಕ'[೬] ಕವನದಲ್ಲಿ ಮುದುಕ ಮತ್ತು ಕವಿಯ ಆಪ್ತವಾದ ನಿಕಟ ಸಂಭಾಷಣೆಯಿಂದ ಮುದುಕನ ಮನಸ್ಸಿನ ದುಗುಡದ ಹಂಬಲವನ್ನು ನಿವಾರಿಸುವಂತೆ ಕೇಳುತ್ತಾನೆ. ಅವನ ದುಃಖಕ್ಕೆ ಕಾರಣ ಕೇಳಿದಾಗ 'ನಿನ್ನ ಈ ಬಗೆ ಮರುಕ ತಂದಿತು ಮರೆತ ಕಂದನ ನೆನಪನು' ಎನ್ನುತ್ತಾನೆ. ಮುದುಕನ ಮನಸ್ಸು ಮನಃಪರಿವರ್ತನೆಯಾಗಿ ಮುಂದೆ ಇಬ್ಬರೂ ಮೌನವಾಗಿ ನಡೆಯುತ್ತಾರೆ. ಮುದುಕನಿಗೆ ಕವಿಯ (ನಿರೂಪಕನ) ಬಗ್ಗೆ ವಾತ್ಸಲ್ಯದ ಭಾವನೆ, ಕವಿಗೆ ಮುದುಕನ ಬಗ್ಗೆ ಕನಿಕರದ ಭಾವನೆ ಮೂಡುತ್ತದೆ. ಇವರಿಬ್ಬರ ನಡುವೆ ಅಂತಃಕರಣದಲ್ಲಿ ಮಾನವತೆಯ ಭಾವನೆಗಳು ಅಭಿವ್ಯಕ್ತವಾಗುತ್ತವೆ. ಭಾವನಾ ಲೋಕದ ಸಾಮ್ರಾಜ್ಯದಲ್ಲಿ ಮೌನವೇ ಸಂಯಮವಾಗಿ ಪ್ರತಿಬಿಂಬಿತವಾಗಿ ನಿರಾಳತೆಯ ಸಾರ್ಥಕತೆ ಧ್ವನಿತವಾಗಿರುವುದು ಈ ಕವನದ ವೈಶಿಷ್ಟ್ಯವಾಗಿದೆ. ಹಾಗೆ ಇಲ್ಲಿ ಮೂಡಿಬಂದಿರುವ ನಿಸರ್ಗಪ್ರೇಮ, ಸೌಂದರ್ಯಪ್ರಜ್ಞೆ, ಧರ್ಮಶ್ರದ್ಧೆ, ಅಂತಃಕರಣ, ಅನುಭಾವ, ಚಿಂತನಪರತೆ, ತಾತ್ತ್ವಿಕಾಂಶ, ಗೇಯತೆಗಳನೊಳಗೊಂಡಂತೆ ಒಂದು ರೀತಿಯ ಅನನ್ಯತೆ ಗೋಚರಿಸುತ್ತದೆ.

ಕೊನೆಯ ಟಿಪ್ಪಣಿಗಳು:

೧. ಹೆಚ್. ವಿ. ಶ್ರೀಕಾಂತ್, ಮಂಕುತಿಮ್ಮನ ಕಗ್ಗ –ತಾತ್ಪರ್ಯ, ಪುಟ–೫೮.
೨. ಕಮಲಾ ನರಸಿಂಹ (ಸಂ), ಪುತಿನ ನೂರರ ನೆನಪು, ಪುಟ–೩೭.
೩. ಕಮಲಾ ನರಸಿಂಹ (ಸಂ), ಪು.ತಿ.ನ. ನೂರರ ನೆನಪು, ಪುಟ–೨೭೫.
೪. ಎಚ್. ಎಸ್. ರಾಘವೇಂದ್ರರಾವ್ (ಸಂ), ಭೃಂಗಮಾರ್ಗ, ಪುಟ–೫೭.
೫. ಎಚ್. ಎಸ್. ರಾಘವೇಂದ್ರರಾವ್ (ಸಂ), ಭೃಂಗಮಾರ್ಗ, ಪುಟ–೭೩.
೬. 'ಕಣಿವೆಯ ಮುದುಕ' ಕವನವನ್ನು 'ಪುತಿನ : ಸಮಗ್ರ ಕಾವ್ಯ' ಸಂಪುಟದಿಂದ ಆರಿಸಿಕೊಳ್ಳಲಾಗಿದೆ, ಪುಟ–೪೨ ರಿಂದ ೪೪.

ಪರಾಮರ್ಶನ ಗ್ರಂಥಗಳು:

೧. ಎ. ಎಸ್. ವೇಣುಗೋಪಾಲ ರಾವ್, ೧೯೯೧, ಪು. ತಿ. ನರಸಿಂಹಾಚಾರ್ಯರ ಕಾವ್ಯ: ಒಂದು ಅಧ್ಯಯನ ಭಾಗ–೧ ಮತ್ತು ಭಾಗ–೨, ಸಹ್ಯಾದ್ರಿ ಪ್ರಕಾಶನ, ಮೈಸೂರು.
೨. ಎ. ಎಸ್. ವೇಣುಗೋಪಾಲ ರಾವ್, ೧೯೭೭, ಪದ್ಮಶ್ರೀ ಡಾ. ಪು. ತಿ. ನರಸಿಂಹಾಚಾರ್ (ಕವಿ–ಕೃತಿ), ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.
೩. ಚಿಂತಾಮಣಿ ಕೊಡ್ಲೆಕೆರೆ, ೨೦೨೪, ಕವಿಯ ಕನ್ನಡಿ (ಪುತಿನ ಪ್ರಬಂಧಗಳು ಮತ್ತು ಕಾವ್ಯಮೀಮಾಮಸೆಯ ಒಂದು ಓದು), ಡಾ. ಪು.ತಿ.ನ. ಟ್ರಸ್ಟ್ (ರಿ), ಬೆಂಗಳೂರು.
೪. ಡಿ. ಆರ್. ನಾಗರಾಜ್, ೨೦೧೩, ಶಕ್ತಿ ಶಾರದೆಯ ಮೇಳ (ಆಧುನಿಕ ಕನ್ನಡ ಕಾವ್ಯಗಳ ಅಧ್ಯಯನ), ಅಕ್ಷರ ಪ್ರಕಾಶನ, ಹೆಗ್ಗೋಡು (ಸಾಗರ), ಕರ್ನಾಟಕ ರಾಜ್ಯ.
೫. ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ (ಸಂ), ೨೦೧೫, ಪ್ರಾಯೋಗಿಕ ವಿಮರ್ಶೆ, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ.
೬. ಡಾ. ಡಿ. ಡಿ. ರಾಮಕೃಷ್ಣ (ಸಂ), ೨೦೧೮, ಪ್ರಾಯೋಗಿಕ ವಿಮರ್ಶೆ ಕಾವ್ಯಾನುಸಂಧಾನ, ಪ್ರಕೀರ್ಣ ಪ್ರಕಾಶನ, ಮೈಸೂರು.
೭. ಡಾ. ಜಿ. ಎಸ್. ಶಿವರುದ್ರಪ್ಪ ಮತ್ತು ಡಾ. ಎಚ್. ಎಸ್. ವೆಂಕಟೇಶ ಮೂರ್ತಿ (ಸಂ), ೨೦೦೨, ಪು.ತಿ.ನ. ಅವರ ಸಮಗ್ರ ಗದ್ಯ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
೮. ಜಿ. ಎಸ್. ಶಿವರುದ್ರಪ್ಪ, ೨೦೧೯, ಜಿ. ಎಸ್. ಶಿವರುದ್ರಪ್ಪ ಅವರ ಸಮಗ್ರ ಗದ್ಯ ಭಾಗ–೩, ಕನ್ನಡ ಮತ್ತು ಸಂಸ್ಕೃತಿ ಇಲಾಖೆ,

ಬೆಂಗಳೂರು.

೯. ಜಿ. ಎಸ್. ಅವಧಾನಿ ಸುಬ್ರಾಯ ಚೊಕ್ಕಾಡಿ (ಸಂ), ೨೦೨೧, ಕಾವ್ಯ ಸೃಷ್ಟಿಯ ಸ್ವರೂಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೦. ಎಚ್. ಎಸ್. ರಾಘವೇಂದ್ರರಾವ್ (ಸಂ), ೨೦೦೫, ಭೃಂಗಮಾರ್ಗ (ಡಾ. ಪು.ತಿ.ನ. ಅವರನ್ನು ಕುರಿತ ವಿಮರ್ಶೆಯ ಪ್ರಾತಿನಿಧಿಕ ಲೇಖನಗಳ ಸಂಗ್ರಹ), ಡಾ. ಪುತಿನ ಟ್ರಸ್ಟ್ (ರಿ), ಬೆಂಗಳೂರು.

೧೧. ಎಚ್. ಎಸ್. ರಾಘವೇಂದ್ರರಾವ್, ೧೯೯೫, ಹಾಡೆ ಹಾದಿಯ ತೋರಿತು (ದ.ರಾ.ಬೇಂದ್ರೆ – ಕುವೆಂಪು – ಪು.ತಿ.ನ. ಕವಿತೆಗಳ ವಿಶಿಷ್ಟತೆಯ ಅಧ್ಯಯನ), ಕನ್ನಡ ಸಂಘ, ಬೆಂಗಳೂರು.

೧೨. ಎಚ್. ಎಸ್. ವೆಂಕಟೇಶಮೂರ್ತಿ, ೨೦೨೨, ಅಂತಃಕರಣದ ಪು.ತಿ.ನ., ಡಾ.ಪು.ತಿ.ನ ಟ್ರಸ್ಟ್, ಬೆಂಗಳೂರು.

೧೩. ಎಚ್. ಎಸ್. ವೆಂಕಟೇಶಮೂರ್ತಿ, ೨೦೧೧, ಪು.ತಿ.ನ ಪರಿಕ್ರಮ, ಸಪ್ನ ಬುಕ್ ಹೌಸ್, ಬೆಂಗಳೂರು.

೧೪. ಹೆಚ್. ವಿ. ಶ್ರೀಕಾಂತ್, ೨೦೧೨, ಮಾನ್ಯ ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗ – ತಾತ್ಪರ್ಯ, ಪ್ರಕಾಶಕರು (ಲೇಖಕರು), ಬೆಂಗಳೂರು.

೧೫. ಜವರೇಗೌಡ ದೇ (ಸಂ), ೧೯೮೧, ಯದುಗಿರಿ (ಪು.ತಿ.ನ ಅವರ ಅಭಿನಂದನಾ ಗ್ರಂಥ), ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು.

೧೬. ಕಮಲಾ ನರಸಿಂಹ (ಸಂ), ೨೦೦೫, ಪು.ತಿ.ನ. ನೂರರ ನೆನಪು, ಸುಮುಖ ಪ್ರಕಾಶನ, ಬೆಂಗಳೂರು.

೧೭. ಎಂ. ಆರ್. ಕಮಲ, ೨೦೧೯, ಕೊಳದ ಮೇಲಿನ ಗಾಳಿ (ಪುತಿನ ಅವರ ಕವಿತೆಗಳ ಓದಿನ ಪರಿಣಾಮ ಪ್ರಬಂಧಗಳು), ಡಾ. ಪು.ತಿ.ನ. ಟ್ರಸ್ಟ್ (ರಿ), ಬೆಂಗಳೂರು.

೧೮. ಪು. ತಿ. ನರಸಿಂಹಾಚಾರ್, ೨೦೦೪, ಪು.ತಿ.ನ. : ಸಮಗ್ರ ಕಾವ್ಯ (ಡಾ. ಪು.ತಿ.ನ. ಶತಮಾನೋತ್ಸವ ಪ್ರಕಟಣೆ), ಡಾ. ಪು.ತಿ.ನ. ಟ್ರಸ್ಟ್ (ರಿ), ಬೆಂಗಳೂರು.

ವಚನ ಸಾಹಿತ್ಯ ಮತ್ತು ಸಾಮಾಜಿಕ ಚಲನಶೀಲತೆ

ಡಾ. ಪಿ. ನಾಗರಾಜ
ಸಹಾಯಕ ಪ್ರಾಧ್ಯಾಪಕರು
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

"

ಕನ್ನಡ ಸಾಂಸ್ಕೃತಿಕ ಚರಿತ್ರೆಯ ಬಹುಮುಖ್ಯವಾದ ಅಧ್ಯಾಯಗಳಲ್ಲಿ ವಚನಚಳವಳಿ ಹಾಗೂ ಅದಕ್ಕೆ ಮೂಲಮಾತೃಕೆಯಾದ ಶರಣಕ್ರಾಂತಿಯು ಮುಂಚೂಣಿಯಲ್ಲಿ ನಿಲ್ಲುತ್ತವೆ. ಶರಣಕ್ರಾಂತಿಯ ಮಹತ್ವವು ಅದು ಮೂಡಿಸಹೊರಟು ಸಮಕಾಲೀನ ನೆಲೆಯಲ್ಲಿ ಅದು ಯಶಸ್ವಿಯಾಗಿ ಸಾಧಿಸಿದ ಧಾರ್ಮಿಕ ಜಾಗೃತಿಯ ನೆಲೆಯಲ್ಲಿ ಮಾತ್ರವಲ್ಲದೆ ಅದು ಸಮಾಜದಲ್ಲಿ ಸೃಷ್ಟಿಸಿದ ಚಲನಶೀಲತೆಯ ವಿವಿಧ ಆಯಾಮಗಳಲ್ಲಿಯೂ ಇದೆ. ಇಂದಿಗೂ ಶರಣಕ್ರಾಂತಿಯ ಅನುರಣನಗಳು ನಮಗೆ ಕೇಳುತ್ತಿರುವುದು ಅದರ ಸಾರ್ವಕಾಲಿಕ ಪ್ರಸ್ತುತತೆಗೆ ಹಿಡಿದ ಕನ್ನಡಿಯಾಗಿದೆ. ಶರಣಕ್ರಾಂತಿಯು ವೀರಶೈವ ಧರ್ಮದ ಉತ್ಥಾನದ ನೆಲೆಯಲ್ಲಿ ಒಂದು ಸಶಕ್ತವಾದ ಧಾರ್ಮಿಕ ಅಭಿವ್ಯಕ್ತಿಯಾಗಿತ್ತು. ಅದರ ಮುಖವಾಣಿಯಾಗಿ ಅನನ್ಯವಾದ ಪರಿಣಾಮವನ್ನು ಉಂಟುಮಾಡಿದ ವಚನಸಾಹಿತ್ಯವು ವಿಶಿಷ್ಟವಾದ ಸಾಹಿತ್ಯಿಕ ಅಭಿವ್ಯಕ್ತಿಯಾಗಿತ್ತು. ಸುಮಾರು ಇನ್ನೂರು – ಇನ್ನೂರೈವತ್ತು ವರ್ಷಗಳ ಇತಿಹಾಸವನ್ನು ಆ ಕಾಲಕ್ಕೆ ಹೊಂದಿದ್ದ ಕನ್ನಡಸಾಹಿತ್ಯವನ್ನು ಹೊಸ ದಿಕ್ಕಿನತ್ತ ತಿರುಗಿಸುವ ಮೂಲಕ ವಚನಕಾರರು ಸಾಹಿತ್ಯಿಕ ಕ್ರಾಂತಿಗೆ ಕಾರಣರಾದರು. ರಾಜಾಶ್ರಯದ ಬಂಧನದಿಂದ ಸಾಹಿತ್ಯವನ್ನು ಮುಕ್ತಗೊಳಿಸಿ ಅದನ್ನು ಸಾಮಾನ್ಯಜನರ ಆಂತರ್ಯದ ಅಭಿವ್ಯಕ್ತಿಯ ವೇದಿಕೆಯಾಗಿಸಿದರು. ವಚನಚಳವಳಿಯ ಮಹತ್ತವಿರುವುದೇ ಅದರ ಸಾಮಾಜಿಕ ಮುಖದಲ್ಲಿ. ಧರ್ಮವೊಂದರ ತತ್ತ್ವ–ಸಿದ್ಧಾಂತಗಳನ್ನು ಭೂಮಿಕೆಯಾಗಿಸಿ ಅರಳಿದ ಶರಣಕ್ರಾಂತಿಯ ಕಾರ್ಯರಂಗ ಸಮಾಜವೇ ಆಗಿತ್ತು. ಅಂತೆಯೇ ಶರಣಕ್ರಾಂತಿಯ ಮಹತ್ವ ನಿರ್ಧಾರವಾಗುವುದು ಅದು ಸೃಷ್ಟಿಸಿದ ಸಾಮಾಜಿಕ

ಚಲನಶೀಲತೆಯಲ್ಲಿದೆ. ಈ ನಿಟ್ಟಿನಲ್ಲಿ ಶರಣಕ್ರಾಂತಿಯು ಸಾಧಿಸಿದ ಯಶಸ್ಸಿನತ್ತ ಒಂದು ನೋಟವನ್ನು ಹರಿಸುವುದು ಈ ಲೇಖನದ ಉದ್ದೇಶವಾಗಿದೆ.

ಹನ್ನೆರಡನೆಯ ಶತಮಾನದ ಕರ್ನಾಟಕವು ಸಾಮಾಜಿಕ ನೆಲೆಗಳಲ್ಲಿ ಒಂದೆಡೆಗೆ ಜಡತೆಯ ಸ್ಥಿತಿಯಲ್ಲಿ ಮುಳುಗಿಹೋಗಿದ್ದರೆ ಮತ್ತೊಂದೆಡೆಯಲ್ಲಿ ಶೋಷಣೆಯ ಬಹುದೊಡ್ಡ ವೇದಿಕೆಯಾಗಿದ್ದಿತು. ಸ್ಥಾಪಿತ ವ್ಯವಸ್ಥೆಯ ಒಡೆಯರಾಗಿ ಮೇಲ್ವರ್ಗದವರು ಸಮಾಜದ ಕೆಳವರ್ಗಗಳನ್ನು, ಅಸಹಾಯಕರನ್ನು ನಿಯಂತ್ರಿಸುತ್ತಿದ್ದರು. ಇದಕ್ಕೆ ಪ್ರಭುತ್ವದ ಒಪ್ಪಿಗೆಯ ಮುದ್ರೆಯೂ ಇದ್ದ ಕಾರಣ ಈ ಪರಿಸ್ಥಿತಿಯು ಅಬಾಧಿತವಾಗಿ ಮುಂದುವರೆದಿತ್ತು. ವಾಸ್ತವವಾಗಿ ಇದು ಶತಮಾನಗಳ ಕಾಲದಿಂದ ನಡೆಯುತ್ತ ಬಂದು ಬಹು ಭದ್ರವಾಗಿ ಸ್ಥಾಪಿತವಾಗಿದ್ದ ವ್ಯವಸ್ಥೆಯಾಗಿತ್ತು. ಇಂತಹ ಸಂದರ್ಭದಲ್ಲಿ ಪ್ರವರ್ಧಮಾನಕ್ಕೆ ಬಂದ ವೀರಶೈವಧರ್ಮವು ಜಾತಿಪದ್ಧತಿಯ ನಾಶ, ಸರ್ವಜನ ಸಮಾನತೆ, ಕಾಯಕತತ್ತ್ವ, ದಾಸೋಹ, ಇಹದ ಬದುಕಿಗೆ ಮಹತ್ವ ಮೊದಲಾದ ಕ್ರಾಂತಿಕಾರಕವೂ ಜೀವಪರವೂ ಆದ ವಿಚಾರಗಳನ್ನು ಮುಂದಿಟ್ಟು ಸಮಾಜದ ಉದ್ಧಾರಕ್ಕೆ ಪಣತೊಟ್ಟಿತು. ಜಾತಿ, ಕುಲ, ವರ್ಗ, ಲಿಂಗ ಮುಂತಾದ ನೆಲೆಗಳಲ್ಲಿ ಅಸ್ತಿತ್ವದಲ್ಲಿದ್ದ ಮೇಲುಕೀಳಿನ ಮೂಲ ವಿನ್ಯಾಸವನ್ನೇ ಪ್ರಶ್ನಿಸಿ ಸರ್ವಸಮನ್ವಯದ ಹೊಸ ಸಮಾಜವನ್ನು ನಿರ್ಮಿಸಲು ಈ ನಿಟ್ಟಿನಲ್ಲಿ ಉದ್ಯುಕ್ತರಾದ ಹಾಗೂ ವೀರಶೈವ ಧರ್ಮದ ಆಶ್ರಯದಲ್ಲಿ ಒಟ್ಟುಗೂಡಿದ ಸಮೂಹವು ಉದ್ದೇಶಿಸಿತು. ಇದುವೇ ಶರಣಸಮೂಹ. ಭಕ್ತಿಭಂಡಾರಿ ಬಸವಣ್ಣ, ಅನುಪಮಜ್ಞಾನಿ ಅಲ್ಲಮಪ್ರಭು, ಷಟ್‌ಸ್ಥಲಬ್ರಹ್ಮ ಚೆನ್ನಬಸವಣ್ಣ, ಮಹಾಶರಣೆ ಅಕ್ಕಮಹಾದೇವಿ ಮೊದಲಾದ ಘನ ಶರಣರು ಈ ಸಮೂಹವನ್ನು ನಡೆಸಿದ್ದರು. ಶರಣರು ತಮ್ಮ ಈ ಪ್ರಯತ್ನದಲ್ಲಿ ಅನುಸರಿಸಿದ ಹಾದಿ ವಿಶಿಷ್ಟವಾದುದಾಗಿತ್ತು. ಅವರ ಪ್ರಯತ್ನಗಳು ಮತ್ತು ಉದ್ದೇಶಗಳ ಮೂಲ ಮತ್ತು ಆಧಾರ ವೀರಶೈವಧರ್ಮದ ತತ್ತ್ವ–ಸಿದ್ಧಾಂತಗಳೇ ಆಗಿದ್ದರೂ ಅವರ ಪ್ರಧಾನವಾದ ಕಾಳಜಿ ಹಾಗೂ ಕಾರ್ಯಕ್ಷೇತ್ರವು ಸಮಾಜವಾಗಿತ್ತು. ಅಂತೆಯೇ ವೈಚಾರಿಕತೆಯ ಬೀಜವನ್ನು ಬಿತ್ತುವ ಮೂಲಕ ಸಮಾಜದ ಹುಳುಕುಗಳನ್ನು ತೆಗೆದು ಪುರೋಗಾಮಿಯಾದ ಸಮಾಜವನ್ನು ಕಟ್ಟಲು ಅವರು ಮುಂದಾದರು.

ಶರಣ ಮತ್ತು ಶರಣತ್ವ

ಈ ದಿಸೆಯಲ್ಲಿ ಶರಣರ ಮೊದಲ ಗಮನ ಹರಿದದ್ದು ಸಮಾಜದ ಸ್ಥಿತಿಯನ್ನು ಸುಧಾರಿಸುವತ್ತ. ಶತಮಾನಗಳ ಕಾಲ ವರ್ಣಪದ್ಧತಿಯ ಅನಿಷ್ಟಗಳಿಂದ ಜಡ್ಡುಗಟ್ಟಿ ಹೋಗಿದ್ದ ಸಮಾಜವು ಸಂಪೂರ್ಣವಾಗಿ ಮೇಲ್ವರ್ಗದ ಹಿಡಿತದಲ್ಲಿತ್ತು. ಕೆಳವರ್ಗಗಳನ್ನು ಜ್ಞಾನಾರ್ಜನೆಯ ಅವಕಾಶಗಳಿಂದ ಹಾಗೂ ಮೂಲಭೂತ ಶಿಕ್ಷಣದಿಂದ ವಂಚಿತವಾಗಿಸಿ ಸಮಾಜದಿಂದ ಪ್ರಾಪ್ತವಾಗುವ ಎಲ್ಲ ಸವಲತ್ತುಗಳನ್ನೂ ತನ್ನ ಹಿಡಿತದಲ್ಲಿ ಇರಿಸಿಕೊಂಡಿದ್ದ ಮೇಲ್ವರ್ಗವು ಭದ್ರವಾಗಿ ತನ್ನನ್ನು ಪ್ರತಿಷ್ಠಾಪಿಸಿಕೊಂಡಿತ್ತು. ಇತ್ತ ಕೆಳವರ್ಗಗಳು ಶತಮಾನಗಳ ಕಾಲದ ಅಧೀನ ಬದುಕಿಗೇ ಹೊಂದಿಕೊಂಡು ಕುಸಿದುಹೋಗಿದ್ದುದಲ್ಲದೆ ಮತ್ತೆ ತಮ್ಮಲ್ಲೇ ಜಾತಿ, ಉಪಜಾತಿಗಳಾಗಿ ವಿಭಾಗಗೊಂಡು ಗೊಡ್ಡು ಸಂಪ್ರದಾಯ, ಮೂಢನಂಬಿಕೆಗಳಲ್ಲಿ ಮುಳುಗಿ ತಮ್ಮ ಅಸ್ತಿತ್ವದ ಅರ್ಥವನ್ನೇ ಗುರುತಿಸದ ಸ್ಥಿತಿಗೆ ತಲುಪಿಬಿಟ್ಟಿದ್ದವು. ಶರಣರ ಮೊದಲ ಪ್ರಯತ್ನ ಕೆಳವರ್ಗಗಳನ್ನು ಅವುಗಳ ದೀರ್ಘಕಾಲದ ವಿಸ್ಮೃತಿಯಿಂದ ಆಚೆತಂದು ಅವುಗಳ ಬದುಕಿನ ದೃಷ್ಟಿಯನ್ನು ಬದಲಿಸುವ ಕಡೆಗೆ ಇದ್ದಿತು. ಭದ್ರವಾಗಿ ಬೇರೂರಿದ್ದ ಜಾತಿ ಭಾವನೆಯ ಹೊರತಾಗಿ ಸಮಾಜವನ್ನು ಆಗ ಊಹಿಸಿಕೊಳ್ಳುವುದೂ ಸಾಧ್ಯವಿರಲಿಲ್ಲ. ಅಸ್ತಿತ್ವದ ಮೂಲ ಆಧಾರವೇ ಜಾತಿಯಾಗಿತ್ತು. ಸ್ವತಃ ಕೆಳವರ್ಗಗಳೂ ಜಾತಿಯ ಕಬಂಧಬಾಹುಗಳಲ್ಲಿ ಸಿಲುಕಿಹೋಗಿದ್ದವು. ಈ ಬಂಧನದಿಂದ ಕೆಳವರ್ಗಗಳನ್ನು ಆಚೆತರಲು ಸಮಾಜವನ್ನು ಸುಧಾರಿಸಲು ಹೊರಟವರಿಗೆ ಒದಗಿದ್ದು ಎಲ್ಲ ಬಗೆಯ ಭೇದಗಳನ್ನೂ ಮೀರಿದ ಮೌಲಿಕತೆಯ ಪರಮರೂಪವಾದ ಶರಣತ್ವದ ಪರಿಕಲ್ಪನೆ. ಸರ್ವಸಮಾನತೆಯ ಸಮಾಜದ ಸಾಕಾರದ ನಿಟ್ಟಿನಲ್ಲಿ ಮೂಡಿದ ಈ ಶರಣತ್ವದ ಪರಿಕಲ್ಪನೆಯು ಅನನ್ಯವಾದ ಮಾನವಪರತೆಯು ಒಂದು ಸಮುದಾಯಕ್ಕೆ ಜನ್ಮನೀಡಿತು. ಎಲ್ಲ ಬಗೆಯ ಮೇಲುಕೀಳಿನ ಭಾವನೆಗಳಿಂದ ಈ ಸರ್ವಸಮಾನತೆಯ ಸಮೂಹ ದೂರವಿದ್ದಿತು.

ಶರಣತ್ವದ ಪರಿಕಲ್ಪನೆಯ ಪರಿಚಯದ ಹೊರತಾಗಿಯೂ ಏಕಾಏಕಿ ಎಲ್ಲವೂ ಬದಲಾಗುವ ಪರಿಸ್ಥಿಯೇನೂ ಇರಲಿಲ್ಲ. ಶತಮಾನಗಳ ಕಾಲ ಮನದಲ್ಲಿ ಭದ್ರವಾಗಿ ಬೇರೂರಿದ್ದ ಜಾತಿವ್ಯವಸ್ಥೆಯ ಅನಿಷ್ಟಗಳು ಸಮಾಜದ ಕೆಳವರ್ಗಗಳನ್ನು ಅದರಾಚೆಗೆ ಚಿಂತಿಸದಂತೆ ಮಾಡಿದ್ದವು. ಅವರಲ್ಲಿ ಕೀಳರಿಮೆ, ಭಯ, ಹಿಂಜರಿಕೆ ಮತ್ತು ಅಸಹಾಯಕತೆಯ ಭಾವಗಳು ಗಟ್ಟಿಯಾಗಿ ನೆಲೆನಿಂತು ದಯನೀಯತೆಯೇ ತಮ್ಮ ಬದುಕು ಎನ್ನುವುದನ್ನು ಅವರು ಒಪ್ಪಿ ನಡೆಯುವಂತೆ ಮಾಡಿಬಿಟ್ಟಿದ್ದವು. ಅವರಿಗೆ ಅವರ ಜಾತಿ–ಕುಲಗಳೇ ಮುಳುವಾಗಿದ್ದವು. ಜಾತಿಯ ನೆಲೆಯು ಅವರಲ್ಲಿ ಮನೆಮಾಡಿದ್ದ ಈ ಬಗೆಯ ಭಾವನೆಗಳನ್ನು ತೊಡೆದುಹಾಕುವ ನಿಟ್ಟಿನಲ್ಲಿ ಸ್ಥಾಪಿತ ವ್ಯವಸ್ಥೆಯಲ್ಲಿ ಭದ್ರವಾಗಿ ಬೇರೂರಿದ್ದ ಉಚ್ಚಕುಲದ ನಿರ್ವಚನವನ್ನು ಬದಲಿಸಬೇಕಾಗಿತ್ತು. ಇಂತಹ ಪ್ರಯತ್ನದ ಅಭಿವ್ಯಕ್ತಿರೂಪವಾಗಿ ಅನೇಕ ವಚನಗಳು ಸೃಷ್ಟಿಯಾದವು. ಒಂದು ಉದಾಹರಣೆಯಾಗಿ ಕೆಳಗಿನ ವಚನವನ್ನು ಗಮನಿಸಬಹುದಾಗಿದೆ:

ಕೊಲ್ಲುವವನೇ ಮಾದಿಗ, ಹೊಲಸು ತಿಂಬವನೇ ಹೊಲೆಯ.
ಕುಲವೇನೋ ಅವಂದಿರ ಕುಲವೇನೋ?
ಸಕಲ ಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲಸಂಗನ ಶರಣರೆಲ್ಲ ಕುಲಜರು
(951, ಬಸವಣ್ಣನವರ ವಚನ ಸಂಪುಟ)

ಮನುಷ್ಯನೋರ್ವನ ಘನತೆಯು ನಿರ್ಧಾರವಾಗುವುದು ಅವನ ಹುಟ್ಟಿನಿಂದಲ್ಲ, ಅವನಲ್ಲಿ ಮೂಡುವ ವಿಚಾರಗಳಿಂದ, ಆ ವಿಚಾರಗಳಿಂದ ಪ್ರೇರಿತನಾಗಿ ಅವನು ತನ್ನನ್ನು ತೊಡಗಿಸಿಕೊಳ್ಳುವ ಆಚಾರಗಳಲ್ಲಿ ಎನ್ನುವ ಸತ್ಯವನ್ನು ಈ ವಚನವು ಸಾರುತ್ತದೆ.

ಕಾಯಕತತ್ತ್ವ

ಶರಣತ್ವದ ಪರಿಧಿಯಲ್ಲಿ ಸಮಾಜದ ಕೆಳವರ್ಗಗಳನ್ನು ತಂದು ಅವುಗಳಿಗೆ ಹೊಸದೊಂದು ಅಸ್ಮಿತೆಯನ್ನು ನೀಡುವ ಪ್ರಯತ್ನದ ಜೊತೆಜೊತೆಗೇ ಉದಿಸಿದ್ದು ಕಾಯಕದ ಪರಿಕಲ್ಪನೆ. ಮೇಲ್ವರ್ಗವಾಗಲೀ ಕೆಳವರ್ಗವಾಗಲೀ ಸಾಂಪ್ರದಾಯಿಕವಾಗಿ ಅವುಗಳಿಗೆ ದತ್ತವಾಗಿದ್ದ ಕುಲಕಸುಬುಗಳನ್ನು ಆಶ್ರಯಿಸಿದ್ದು ಸಹಜವೇ ಆದರೂ ಶರಣರು ಜೀವನೋಪಾಯಕ್ಕಾಗಿ ಆಶ್ರಯಿಸಿದ ಕೆಲಸವನ್ನು ಕಾಯಕವೆಂದು ಕರೆದರು. ಅದಕ್ಕೆ ಮೌಲಿಕತೆಯ ಆಯಾಮಗಳನ್ನು ನೀಡಿದರು. ಎಲ್ಲ ಕೆಲಸಗಳೂ ಕಾಯಕವೆಂದು ಪರಿಗಣಿತವಾಗುತ್ತಿರಲಿಲ್ಲ. ಕಾಯಕಕ್ಕೆ ಮೇಲುಕೀಳುಗಳಿರಲಿಲ್ಲ, ಅದು ನವಸಮಾಜದ ನಿರ್ಮಾಣದಲ್ಲಿ ಶರಣರು ಇಟ್ಟ ಬಹುದೊಡ್ಡ ಹೆಜ್ಜೆಯಾಗಿತ್ತು. ಕಾಯಕವಿಲ್ಲದೆ ಬದುಕಿಲ್ಲ, ಕಾಯಕ ನಡೆಸಿಯೇ ಜೀವನವನ್ನು ನಡೆಸಬೇಕು, ದೇಹವನ್ನು ದಂಡಿಸಿ ದುಡಿದು ಅದರಿಂದಲೇ ಬದುಕನ್ನು ನಡೆಸಬೇಕು ಎನ್ನುವ ತತ್ತ್ವವನ್ನು ಶರಣರು ಜನಮಾನಸದಲ್ಲಿ ಗಟ್ಟಿಯಾಗಿ ಬಿತ್ತಿದರು. ಹೀಗೆ ಕಾಯಕಪಡೆಯೊಂದು ಸಿದ್ಧವಾಯಿತು.

ಕಾಯಕವು ಇಂತಹುದೇ ಆಗಬೇಕೆಂಬ ನಿಯಮವೇನೂ ಇರಲಿಲ್ಲ. ಆದರೆ ಕಾಯಕದಲ್ಲಿ ನಿರತರಾಗಿ ಸಾಧನೆಯನ್ನು ಮಾಡದಿದ್ದರೆ ಕೈವಲ್ಯವಿಲ್ಲ ಎಂಬ ಭಾವನೆ ಬಲಿಯಿತು. ನುಲಿಯ ಚಂದಯ್ಯ ಹಗ್ಗ ಹೊಸೆಯುವ ಕಾಯಕವನ್ನು ಕೈಗೊಂಡಿದ್ದನು. ಅಂಬಿಗರ ಚೌಡಯ್ಯನದು ದೋಣಿ ನಡೆಸುವ ಕಾಯಕ. ಹೀಗೆಯೇ ಮಡಿವಾಳ ಮಾಚಯ್ಯ, ಮೇದಾರ ಕೇತಯ್ಯ, ಹಡಪದ ಅಪ್ಪಣ್ಣ, ತುರುಗಾಹಿ ರಾಮಣ್ಣ, ಸುಂಕದ ಬಂಕಣ್ಣ, ಮಾದಾರ ಚೆನ್ನಯ್ಯ, ತಳವಾರ ರಾಮಿದೇವ, ಗಾಣದ ಕನ್ನಪ್ಪ, ವೈದ್ಯ ಸಂಗಣ್ಣ, ಸೂಜಿ ಕಾಯಕದ ರಾಮಿತಂದೆ, ಬಾಚಿ ಕಾಯಕದ ಬಸಪ್ಪ, ಮೋಳಿಗೆ ಮಾರಯ್ಯ – ಈ ರೀತಿಯಾಗಿ ದನಕಾಯವುದು, ದೋಣಿ ನಡೆಸುವುದು, ಬಟ್ಟೆ ಒಗೆಯುವುದು, ಗಾಣ ನಡೆಸುವುದು, ಚಪ್ಪಲಿ ಹೊಲೆಯುವುದು ಎಲ್ಲವೂ ಕಾಯಕವೇ ಆಗಿ ಘನತೆಯ ಲೇಪವನ್ನು ಹೊಂದಿದವು. ಕಾಯಕಕ್ಕೆ ದಕ್ಕಿದ್ದ ಘನತೆಯ ಸ್ಥಾನವನ್ನು ಕೆಳಗಿನ ವಚನವು ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ:

ಕಾಯಕದಲ್ಲಿ ನಿರತನಾದಡೆ ಗುರುದರ್ಶನವಾದರೂ ಮರೆಯಬೇಕು
ಲಿಂಗಪೂಜೆಯಾದರೂ ಮರೆಯಬೇಕು
ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು
ಕಾಯಕವೆ ಕೈಲಾಸವಾದ ಕಾರಣ
ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು (ಸಂಕೀರ್ಣ ವಚನಸಂಪುಟ 1, 1070)

ಕಾಯಕವು ಗುರು, ಲಿಂಗ ಮತ್ತು ಜಂಗಮ – ಈ ತ್ರಿವಿಧಗಳನ್ನು ಮೀರಿದ್ದು ಮಾತ್ರವಲ್ಲ, ಮಾರಯ್ಯ ಹೇಳುವಂತೆ ಅಮರೇಶ್ವರ ಲಿಂಗವೂ ಸ್ವತಃ ಅಮಲೇಶ್ವರ ಲಿಂಗವನ್ನೂ ತನ್ನಲ್ಲಿ ಒಳಗುಮಾಡಿಕೊಳ್ಳುವಷ್ಟು ಹಿರಿದಾದ, ಘನವಾದ ಸ್ಥಾನವನ್ನು ಕಾಯಕವು ಹೊಂದಿದೆ. ಅಂತೆಯೇ ಶರಣನ ಜೀವನದಲ್ಲಿ ಎಲ್ಲಕ್ಕೂ ಮಿಗಿಲಾದುದು ಕಾಯಕ. ಕಾಯಕವು ಹೀಗೆ ಶರಣರಿಗೆ ಕೈಲಾಸವೇ ಆಗಿತ್ತು, ಗುರು–ಲಿಂಗ–ಜಂಗಮವನ್ನೂ ಮೀರಿ ಘನತೆಯ ನಿಜನೆಲೆಯೇ ಆಗಿದ್ದ ಕಾಯಕತತ್ತ್ವವು ಶರಣಕ್ರಾಂತಿಗೆ ವಿಶಿಷ್ಟವಾದ ರೀತಿಯಲ್ಲಿ ಅರ್ಥವಂತಿಕೆಯನ್ನು ನೀಡಿತ್ತು.

ದಾಸೋಹ

ನಿಷ್ಠೆಯಿಂದ ಕಾಯಕವನ್ನು ನಡೆಸುತ್ತ ಸಾಗುವ ಬದುಕಿಗೆ ಸಾರ್ಥಕತೆಯನ್ನು ತಂದುಕೊಳ್ಳುವ ದಿಸೆಯಲ್ಲಿ ಶರಣರಿಗೆ ಕಂಡದ್ದು

ದಾಸೋಹದ ಮಾರ್ಗ. ಶುದ್ಧವಾದ ಕಾಯಕದಿಂದ ಆರ್ಜಿಸಿದ ಧನದಲ್ಲಿ ತನ್ನ ಜೀವನಕ್ಕೆ ಅವಶ್ಯವಾದಷ್ಟನ್ನು ಮಾತ್ರ ತನ್ನಲ್ಲಿ ಉಳಿಸಿ ಉಳಿದುದಷ್ಟನ್ನೂ ಶರಣರಿಗೆ ವಿನಿಯೋಗಿಸುವುದನ್ನು ಶರಣರು ಪ್ರತಿಪಾದಿಸಿದರು. ಈ ಪರಿಕಲ್ಪನೆಯೇ ದಾಸೋಹ. ಈ ರೀತಿಯಾಗಿ ಕಾಯಕದ ಯುಕ್ತವಾದ ಪರ್ಯವಸಾನ ದಾಸೋಹದಲ್ಲಿತ್ತು. ಸತ್ಯಶುದ್ಧವಾದ ರೀತಿಯಲ್ಲಿ ಹಾಗೂ ನಿಷ್ಠೆಯಿಂದ ಕೂಡಿದ ಮಾರ್ಗದಲ್ಲಿ ಕಾಯಕವನ್ನು ನಡೆಸಿ ತನ್ನ ಜೀವನಾಧಾರವನ್ನು ಕಂಡುಕೊಂಡು ಅದೇ ಕಾಯಕದಿಂದ ಪರಹಿತವನ್ನೂ ಸಾಧಿಸಲು ಆಸ್ಪದ ದೊರೆತದ್ದು ದಾಸೋಹದಿಂದ. ಬಸವಣ್ಣನೇ ತನ್ನ ಮಹಾಮನೆಯಲ್ಲಿ ಪ್ರತಿದಿನವೂ ನೂರಾರು ಶರಣರಿಗೆ ದಾಸೋಹವನ್ನು ನಡೆಸಿ ಈ ಪರಂಪರೆಗೆ ಮುನ್ನುಡಿಯನ್ನು ಬರೆದಿದ್ದ. ಕಾಯಕ ಮತ್ತು ದಾಸೋಹದ ಭಾವಗಳು ಎಷ್ಟರ ಮಟ್ಟಿಗೆ ಶರಣರ ಮನೋಧರ್ಮದ ಭಾಗವಾಗಿದ್ದವು ಎನ್ನುವುದಕ್ಕೆ ಕೆಳಗಿನ ವಚನವು ಕನ್ನಡಿಹಿಡಿಯುತ್ತದೆ:

ಆಸೆಯೆಂಬುದು ಅರಸಿಂಗಲ್ಲದೆ
ಶಿಭಕ್ತರಿಗೆ ಉಂಟೆ ಎಲೆ ಅಯ್ಯ?
ರೋಷವೆಂಬುದು ಯಮದೂತರಿಗಲ್ಲದೆ
ಅಜಾತರಿಗುಂಟೆ ಎಲೆ ಅಯ್ಯ?
ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ
ಮಾರಯ್ಯಪ್ರಿಯ ಅಮಲೇಶ್ವರಲಿಂಗಕ್ಕೆ ದೂರ ಮಾರಯ್ಯ (ಶಿವಶರಣೆಯರ ವಚನ ಸಂಪುಟ, 710)

ಆಸೆ ಅರಸರಿಗೆ ಸಹಜ, ಅವರು ಆಸೆಯ ಮೂರ್ತರೂಪವೇ ಆಗಿರುತ್ತಾರೆ. ಅಂತೆಯೇ ರೋಷವು ಯಮದೂತರ ಸಹಜವಾದ ಗುಣ. ಹುಟ್ಟೇ ಇಲ್ಲದವರಿಗೆ ರೋಷವೆಲ್ಲಿಂದ ಬರಲು ಸಾಧ್ಯ? ಶರಣರಾದವರಿಗೆ ಆಸೆಯೂ ರೋಷವೂ ವರ್ಜ್ಯ. ತನ್ನ ಪತಿಯ ಮನದಲ್ಲಿ ಮೂಡಿದ ಆಸೆಯ ಭಾವವನ್ನು ಲಕ್ಕಮ್ಮ ಖಂಡಿಸುವ ಬಗೆಯಿದು. ಕಾಯಕದ ಪರಿಕಲ್ಪನೆಯು ಹೀಗೆ ಕೆಳವರ್ಗಗಳನ್ನು ಸತ್ಯನಿಷ್ಠವಾದ ದುಡಿತದತ್ತ ಮುಖಮಾಡುವಂತೆ ಪ್ರೇರೇಪಿಸಿದರೆ ದಾಸೋಹವು ಕಾಯಕಕ್ಕೆ ಸಾರ್ಥಕತೆಯನ್ನು ತಂದಿತ್ತಿತು.

ದೇವರು ಮತ್ತು ದೇವಾಲಯ

ದೇವರು ಮನುಷ್ಯನ ಬದುಕಿನ ಕೇಂದ್ರ, ಅವನ ಒಟ್ಟು ಅಸ್ತಿತ್ವದ ಪ್ರೇರಕ ಹಾಗೂ ಕಾರಕಶಕ್ತಿ. ಎಲ್ಲವೂ ಅವನಿಂದಲೇ ನಡೆಯುತ್ತದೆ ಎನ್ನುವ, ಎಲ್ಲವೂ ಅವನಿಗೇ ಸಮರ್ಪಿತ ಎನ್ನುವ ಬಲವಾದ ನಂಬಿಕೆಗಳ ನಡುವೆ ಮಾನವ ಅಸ್ತಿತ್ವವನ್ನು ಪ್ರಭಾವಿಸುವ ನಿರ್ಣಾಯಕ ಶಕ್ತಿಯಾಗಿದೆ. ದೇವರನ್ನು ಕುರಿತಾದ ಈ ಬಗೆಯ ತೀವ್ರವೂ ಸೂಕ್ಷ್ಮವೂ ಆದ ಸಂವೇದನೆಗಳ ವ್ಯಕ್ತರೂಪಗಳಾಗಿ ದೇವಾಲಯಗಳು ಹಾಗೂ ದೈವಕ್ಕೆ ಸಂಬಂಧಿಸಿದ ಆಚರಣೆಗಳ ರಾಶಿಯಿದೆ. ದೈವವನ್ನು ಕುರಿತಾದ ಮಾನವನ ನಂಬಿಕೆಗಳು ಕಾಲಾಂತರದಲ್ಲಿ ವಿವಿಧ ಬಗೆಯ ವಿಸ್ತರಣೆಗಳನ್ನು ಪಡೆದುಕೊಂಡಿತ್ತಾದರೂ ಹನ್ನೆರಡನೆಯ ಶತಮಾನದ ಹೊತ್ತಿಗೆ ಅದು ಕೇವಲ ಶುಷ್ಕವಾದ ಆಚರಣೆಗಳ ಸಮೂಹವಾಗಿದ್ದಿತು. ನಂಬಿಕೆ, ಶ್ರದ್ಧೆಗಳು ಮರೆಯಾಗಿ ಮೂಢನಂಬಿಕೆ, ಡಾಂಭಿಕತೆ, ತೋರಿಕೆಗಳೇ ಎದ್ದುಕಾಣುತ್ತಿದ್ದವು. ಅಂತೆಯೇ ಶ್ರದ್ಧಾಕೇಂದ್ರಗಳಾದ ದೇವಾಲಯಗಳು ಶೋಷಣೆಯ ಕೇಂದ್ರಗಳಾಗಿ ಮಾರ್ಪಟ್ಟಿದ್ದವು. ಇಷ್ಟು ಸಾಲದೆಂಬಂತೆ ಜನರು ನೂರಾರು ದೈವಗಳ ಬೆನ್ನತ್ತಿಹೋಗಿ ಅನರ್ಥಗಳ ಕಗ್ಗಾಡಿನಲ್ಲಿ ತೊಳಲುತ್ತಿದ್ದರು. ಇಂತಹ ಅತಂತ್ರ ಸ್ಥಿತಿಯಿಂದ ಜನರನ್ನು ಹೊರತರುವ ಪ್ರಯತ್ನವಾಗಿ ಮೂಡಿದ್ದು ಬಸವಣ್ಣನ ಕಾಯಕವೇ ಕೈಲಾಸ ಎನ್ನುವ ತತ್ತ್ವ. ಈ ಭಾವವನ್ನು ಅಭಿವ್ಯಕ್ತಿಸುವ ಪದ್ಯ ಕೆಳಗಿನಂತಿದೆ:

ಉಳ್ಳವರು ಶಿವಾಲಯವ ಮಾಡುವರು
ನಾನೇನು ಮಾಡಲಿ ಬಡವನಯ್ಯಾ
ಎನ್ನ ಕಾಲೇ ಕಂಭ, ದೇಹವೇ ದೇಗುಲ,
ಶಿರ ಹೊನ್ನ ಕಳಶವಯ್ಯಾ,
ನೋಡಯ್ಯ, ಕೂಡಲಸಂಗಮದೇವಾ, ಕೇಳಯ್ಯ,
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ (821, ಬಸವಣ್ಣನವರ ವಚನಸಂಪುಟ)

ಆಂತರ್ಯದಲ್ಲಿಯೇ ದೈವವನ್ನು ಸಾಕ್ಷಾತ್ಕರಿಸಿಕೊಳ್ಳುವ ಸಾಧ್ಯತೆಯನ್ನು ಜನರಿಗೆ ತೊರಿಸಿಕೊಟ್ಟಿದ್ದು ಬಹುದೊಡ್ಡ ಕ್ರಾಂತಿಯೇ ಸರಿ. ಶತಮಾನಗಳ ಕಾಲ ಜೀವಂತವಾಗಿದ್ದ ದೇಗುಲದ ನೆಲೆಯಲ್ಲಿನ ಶೋಷಣೆಯಿಂದ ಜನರು ಹೀಗೆ ಮುಕ್ತವಾಗಿದ್ದರು. ಕಾಯಕ ಮತ್ತು ದಾಸೋಹಗಳಿಂದ ಬದುಕಿಗೆ ಅರ್ಥವನ್ನು ಕಂಡುಕೊಂಡಿದ್ದ ಶರಣರಿಗೆ ದೈವಸಾಕ್ಷಾತ್ಕಾರಕ್ಕಾಗಿ ದೇವಾಲಯದ ಮೊರೆಹೋಗಬೇಕಿಲ್ಲ, ಆಂತರ್ಯದಲ್ಲೇ ಆ ಬೆಳಕಿನ ಸಾಕಾರ ಸಾಧ್ಯ ಎನ್ನುವ ಸತ್ಯದ ಅರಿವಾಗಿತ್ತು.

ಸ್ತ್ರೀ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ

ಶರಣಕ್ರಾಂತಿಯ ಯಶಸ್ಸಿನ ಕಥೆಗಳಲ್ಲಿ ಅದು ಸ್ತ್ರೀ–ಪುರುಷ ಸಮಾನತೆ, ಸ್ತ್ರೀ ಸ್ವಾತಂತ್ರ್ಯ ಹಾಗೂ ಸ್ತ್ರೀ ಅಭಿವ್ಯಕ್ತಿಗೆ ಒದಗಿಸಿದ ಅನುಪಮವಾದ ಭೂಮಿಕೆ – ಇವುಗಳು ಸೇರುತ್ತವೆ. ಸಾಂಪ್ರದಾಯಿಕವಾದ ದೃಷ್ಟಿಯು ಹೆಣ್ಣನ್ನು ಅಡುಗೆಮನೆಗೆ ಸೀಮಿತಗೊಳಿಸಿದರೆ ಶರಣರ ಪುರೋಗಾಮಿಯಾದ ದೃಷ್ಟಿಯು ಹೆಣ್ಣಿನೊಳಗಿನ ಅನಂತ ಚೈತನ್ಯದ ಸಾಕಾರಕ್ಕೆ ವೇದಿಕೆಯನ್ನು ಒದಗಿಸಿತು. ಈ ನಿಟ್ಟಿನಲ್ಲಿ ಮುಂದುವರೆದು ಅನೇಕ ಶರಣೆಯರು ಬದುಕಿನ ಗಮ್ಯವನ್ನು ಕಂಡುಕೊಂಡರು. ಪುರುಷನ ನೆರಳಾಗಿ, ಅವನ ಅಡಿಯಾಳಾಗಿ, ಅವನ ಸೇವೆಯಲ್ಲೇ ಗಂತವ್ಯವನ್ನು ಕಾಣುತ್ತಿದ್ದ ಸ್ತ್ರೀಯರು ಶರಣೆಯರಾಗಿ ಪುರುಷರಿಗೆ ಸರಿಸಮವಾಗಿ ತಮ್ಮ ವಿಚಾರಗಳನ್ನು ಅಭಿವ್ಯಕ್ತಿಸುವ, ಪುರುಷರ ತಪ್ಪುಗಳನ್ನು ತೋರಿ ಅವರನ್ನು ಎಚ್ಚರಿಸುವ ಧಾರ್ಷ್ಟ್ಯವನ್ನು ಪ್ರಕಟಿಸಿದರು. ವೇಶ್ಯಾವೃತ್ತಿಯಲ್ಲಿ ತೊಡಗಿದ್ದ ಸಂಕವ್ವೆ ಹಾಗೂ ಗಂಗಮ್ಮನಂಥವರಿಗೂ ಕೂಡ ಶರಣೆಯರಾಗಲು ಅವಕಾಶ ನೀಡಿ ಆಂತರ್ಯದ ಬೆಳಕನ್ನು ಕಂಡುಕೊಳ್ಳುವ ಅವಕಾಶವನ್ನು ಶರಣಚಳವಳಿಯು ಒದಗಿಸಿತ್ತು. ಇವರಂತೆಯೇ ಅನೇಕ ಶರಣೆಯರು ಘನತೆಯ ಬದುಕನ್ನು ನಡೆಸಿ ಅರ್ಥವಂತಿಕೆಯ ಕುರುಹುಗಳನ್ನು ಉಳಿಸಿಹೋದರು. ಶರಣೆಯರು ಪ್ರಕಟಿಸುವ ವೈಚಾರಿಕ ಗಟ್ಟಿತನ, ನಿರ್ದಾಕ್ಷಿಣ್ಯ ನಿಲುವುಗಳು, ಅಭಿವ್ಯಕ್ತಿಯ ಸೂಕ್ಷ್ಮತೆ ಮೊದಲಾದ ಗುಣಗಳು ಶರಣಕ್ರಾಂತಿಯ ಮೌಲಿಕತೆಗೆ ಸಂದ ಕೊಡುಗೆಗಳಾಗಿವೆ. ಸಾಂಪ್ರದಾಯಿಕ ಸಮಾಜದಲ್ಲಿ ಇದ್ದಂತೆ ಇರದೆ, ಶರಣೆಯೋರ್ವಳು ತನ್ನನ್ನು ತನ್ನ ಸುತ್ತಲಿನ ಬದುಕಿನ ಅವಿಭಾಜ್ಯ ಅಂಗವಾಗಿ ಪರಿಭಾವಿಸಿದ್ದಳು, ಒಟ್ಟಾರೆ ಶರಣ ಸಮುದಾಯವೂ ಅದೇ ರೀತಿ ಭಾವಿಸಿತ್ತು. ಆಯ್ದಕ್ಕಿ ಲಕ್ಕಮ್ಮ ತನ್ನ ಪತಿ ಮಾರಯ್ಯನನ್ನು ಕಾಯಕದ ಸಂದರ್ಭದಲ್ಲಿ ಎಚ್ಚರಿಸುತ್ತ ಅವನನ್ನು ತಿದ್ದುವ ಸಂದರ್ಭವನ್ನು ಗಮನಿಸಿದ್ದೇವೆ. ಕೂಡಲಸಂಗಮದಲ್ಲಿ ಐಕ್ಯವಾಗಲು ಉದ್ದೇಶಿಸಿದ್ದ ಬಸವಣ್ಣ ಅಪ್ಪಣ್ಣನ ಮೂಲಕ ನೀಲಾಂಬಿಕೆಗೆ ತನ್ನನ್ನು ಕೂಡಿಕೊಳ್ಳುವಂತೆ ಕಳಿಸುವ ಸಂಕೇತಕ್ಕೆ ಪ್ರತಿಯಾಗಿ ನೀಲಾಂಬಿಕೆಯು ಪ್ರಕಟಿಸುವ ನಿಲುವು ಹಾಗೂ ತಳೆಯುವ ಧೋರಣೆಯಲ್ಲಿಯೂ ಶರಣೆಯರ ವ್ಯಕ್ತಿತ್ವದ ಗಟ್ಟಿತನವು ಪ್ರಕಟವಾಗುತ್ತದೆ. ತಾನು ಇರುವೆಡೆಯೇ ಕೂಡಲ ಸಂಗಮನು ಇರುವುದು ಬಸವಣ್ಣನಿಗೆ ತಿಳಿದಿಲ್ಲವೇ ಎನ್ನುವ ಪ್ರಶ್ನೆಯ ಮೂಲಕ ನೀಲಾಂಬಿಕೆ ತನ್ನ ವೈಚಾರಿಕ ಗಟ್ಟಿತನವನ್ನು ಪ್ರಕಾಶಿಸುತ್ತಾಳೆ. ಅಪ್ಪಣನ ನುಡಿಗಳನ್ನು ಗೌರವದಿಂದ ಸ್ವೀಕರಿಸಿದರೂ ಕರಸ್ಥಲದಲ್ಲಿನ ಲಿಂಗದಲ್ಲಿಯೇ ತಾನು ಲೀನವಾಗುವುದಾಗಿ ನೀಲಮ್ಮ ನುಡಿಯುತ್ತಾಳೆ.

ಸಂಗನ ಬಸವಣ್ಣನೆಂದ ನಿರೂಪಕ್ಕೆ
ಹಿಂಗದೆ ಕರವೆತ್ತಿ ಮುಗಿವುತಲಿ
ಸಂಗಮನಾಥನೆ ಈತನೆಂದೆನುತಲಿ
ಎನ್ನಂಗೈಯ ಲಿಂಗದೊಳಡಗುವೆ. (ಶಿವಶರಣೆಯರ ವಚನ ಸಂಪುಟ, 1072)

ಭಕ್ತಿ–ಜ್ಞಾನಗಳ ಸಾಕಾರರೂಪವಾದ ಬಸವಣ್ಣನಿಗೆ ತಾನು ಐಕ್ಯವಾಗಬೇಕೆಂದಿರುವ ನೆಲೆ ಕೂಡಲಸಂಗಮದಲ್ಲಿರುವ ಸಂಗಯ್ಯ ಕಲ್ಯಾಣದಲ್ಲೂ ಇರುವನೆನ್ನುವ ಸತ್ಯ ಕಾಣದಾಯಿತೇ? ತನ್ನ ಕರಸ್ಥಲದಲ್ಲಿ ಸಂಗಮನಾಥನಿರುವಾಗ ಅವನನ್ನು ಅರಸುತ್ತ ಕೂಡಲಸಂಗಮಕ್ಕೆ ಹೋಗಲೇಕೆ? ನೀಲಾಂಬಿಕೆಯ ಈ ಪ್ರಶ್ನೆಗಳು ವಚನಚಳವಳಿಯ ಮಹಿಳೆಯರಲ್ಲಿ ಬಿತ್ತಿದ್ದ ವೈಚಾರಿಕ ಧಾರ್ಷ್ಟ್ಯಕ್ಕೆ ದ್ಯೋತಕವಾಗಿದೆ.

ವಚನ ಚಳವಳಿಯು ಹೀಗೆ ವೀರಶೈವ ಧಾರ್ಮಿಕ ಸಿದ್ಧಾಂತಗಳ ತಳಹದಿಯ ಮೇಲೆ ರೂಪುಗೊಂಡ ಚಳವಳಿಯಾದರೂ ಉದ್ದಕ್ಕೂ ಅದರ ಭೂಮಿಕೆ ಸಮಾಜವೇ ಆಗಿತ್ತು. ಅದರ ಉದ್ದೇಶ ಸಮಾಜವನ್ನು ಸುಧಾರಿಸುವುದಾಗಿತ್ತು, ಅದನ್ನು ಚೈತನ್ಯಯುಕ್ತಗೊಳಿಸುವುದಾಗಿತ್ತು. ಇದಕ್ಕೆ ಶರಣಕ್ರಾಂತಿಯು ಕಂಡುಕೊಂಡ ಮಾರ್ಗ ಸಮಾಜದ ಕೆಳವರ್ಗಗಳಲ್ಲಿ ಚಲನಶೀಲತೆಯನ್ನು ತರುವುದಾಗಿತ್ತು. ಶರಣರ ಈ ಮಹದೋದ್ದೇಶದ ಈಡೇರುವಿಕೆಗೆ ಅವರು ಕಟ್ಟಿಕೊಂಡ ಕಾಯಕ, ದಾಸೋಹ, ದೇಹವೇ ದೇಗುಲ ಎನ್ನುವ ಪರಿಕಲ್ಪನೆಗಳು ಹಾಗೂ ಹೆಣ್ಣಿನ ಘನತೆ ಹಾಗೂ ಚೈತನ್ಯಶೀಲತೆಯ ಬಗ್ಗೆ ಶರಣಚಳವಳಿಯು ಹೊಂದಿದ್ದ ನಂಬಿಕೆಗಳು ಒದಗಿದವು. ತನ್ಮೂಲಕ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯ ಅಸದೃಶವಾದ ಜೀವಂತಿಕೆಯ ಅಧ್ಯಾಯವಾಗಿ ಶರಣ ಚಳವಳಿಯು ಉಳಿಯುವಂತಾಯಿತು.

ಪರಾಮರ್ಶನ ಗ್ರಂಥಗಳು

1. ಶರಣರ ಅನುಭಾವ ಸಾಹಿತ್ಯ : ಡಾ. ಎಚ್. ತಿಪ್ಪೇರುದ್ರಸ್ವಾಮಿ, ಮುರುಘರಾಜೇಂದ್ರ ಗ್ರಂಥಮಾಲೆ, ಮುರುಘಾಮಠ, ಚಿತ್ರದುರ್ಗ, 2016
2. ವಚನ ಧರ್ಮ ಸಾರ : ಎಂ. ಆರ್. ಶ್ರೀನಿವಾಸಮೂರ್ತಿ, ಕನ್ನಡ ಸಾಹಿತ್ಯ ಪರಿಷತ್ತು, 2009

3. ಕಾಯಕ ನಿಷ್ಠೆ ಜಂಗಮ ಸ್ವರೂಪಿ : ಪ್ರೊ. ಎಚ್. ಲಿಂಗಪ್ಪ, ರಶ್ಮಿ ಪ್ರಕಾಶನ, ಚಿತ್ರದುರ್ಗ, 2019
4. ವಚನ ಸಾಹಿತ್ಯ – ವೈಚಾರಿಕ ಅಧ್ಯಯನ : ಡಾ. ಎಚ್. ತಿಪ್ಪೇರುದ್ರಸ್ವಾಮಿ, ಪ್ರಸಾರಾಂಗ, ಕವಿವಿ, ಧಾರವಾಡ, 2004
5. ಸಮಗ್ರ ವಚನ ಸಂಪುಟ –ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗೂರು, 2001
6. ವಚನಗಳಲ್ಲಿ ವೀರಶೈವ ಧರ್ಮ – ಡಾ. ತಿಪ್ಪೇರುದ್ರಸ್ವಾಮಿ, ಡಿ. ವಿ. ಕೆ. ಮೂರ್ತಿ, ಮೈಸೂರು, 1997
7. ವಚನ ಚಳವಳಿ: ಬಸವರಾಜ ಸಬರದ, ಪಲ್ಲವಿ ಪ್ರಕಾಶನ, ಗುಲ್ಬರ್ಗಾ, 1992
8. ಕನ್ನಡದ ವಚನಕಾರ್ತಿಯರು : ಡಾ. ಎ. ಗಾಯತ್ರಿ, ಕೀರ್ತನ್ ಗ್ರಾಫಿಕ್ಸ್, ಮೈಸೂರು, 2014
9. ಶರಣ ಕ್ರಾಂತಿ – ವಿಭಿನ್ನ ಪ್ರತಿಕ್ರಿಯೆಗಳು: ಸಂ. ಬಸವರಾಜ ಸಾದರ, ಲಡಾಯಿ ಪ್ರಕಾಶನ, ಗದಗ, 2020
10. ವಚನ ಸಾಹಿತ್ಯ – ಒಂದು ಸಾಂಸ್ಕೃತಿಕ ಅಧ್ಯಯನ : ಡಾ. ಪಿ. ವಿ. ನಾರಾಯಣ, ಮುರುಘರಾಜೇಂದ್ರ ಗ್ರಂಥಮಾಲೆ, ಮುರುಘಾಮಠ, ಚಿತ್ರದುರ್ಗ, 2016.

ಲಂಕೇಶರ ಕಥನ ಸಾಹಿತ್ಯದಲ್ಲಿ ಬದುಕಿನ ಸಂಕೀರ್ಣತೆಯ ಅನಾವರಣ

ಡಾ. ಸಂಗಮೇಶ ಎಸ್. ಗಣಿ
ಕನ್ನಡ ಪ್ರಾಧ್ಯಾಪಕರು, ಮಾನವಿಕ ವಿಭಾಗ,
ಹೆಚ್.ಕೆ.ಬಿ.ಕೆ ತಾಂತ್ರಿಕ ಮಹಾವಿದ್ಯಾಲಯ
ನಾಗವಾರ, ಬೆಂಗಳೂರು
savisanga@gmail.com

“

ಸೃಜನಶೀಲತೆಯನ್ನು ಪ್ರಜ್ಞಾಪೂರ್ವಕವಾಗಿ, ಸಾಮುದಾಯಿಕ ಹಿತಕ್ಕಾಗಿ ದುಡಿಸಿಕೊಂಡ ಪಿ. ಲಂಕೇಶ್ ಅವರು ವಿಶೇಷವಾಗಿ ಈ ನಾಡು ಕಂಡ ಅಪರೂಪದ ಲೇಖಕ, ಚಿಂತಕ. ಬಹುಮುಖ ಪ್ರತಿಭೆಯ ಲಂಕೇಶರು ಬೋಧನೆ, ಕತೆ, ಕಾವ್ಯ, ಕಾದಂಬರಿ, ನಾಟಕ, ಅನುವಾದ, ಪತ್ರಿಕೋದ್ಯಮ, ಚಲನಚಿತ್ರ ಹೀಗೆ ವೈವಿಧ್ಯಮಯ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಕನ್ನಡದ ವಿವೇಕವನ್ನು ವಿಸ್ತರಿಸಿದವರು. ಲಂಕೇಶ್ ಅವರು ಕನ್ನಡ ಕಥನ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅನುಪಮವಾದುದು. ಅವರ ಕಥೆಗಳಲ್ಲಿ ವ್ಯಕ್ತವಾದ ಬದುಕಿನ ಸಂಕೀರ್ಣತೆಯನ್ನು ಅವರ ಕಥೆಗಳ ಮೂಲಕವೇ ಗುರುತಿಸುವ ಮತ್ತು ಅವಲೋಕಿಸುವ ಉದ್ದೇಶದಿಂದ ಈ ಲೇಖನವನ್ನು ಸಿದ್ಧಪಡಿಸಲಾಗಿದೆ.

ಲಂಕೇಶ್‌ರ ಸೃಜನಶೀಲತೆಯ ಸ್ವರೂಪ :

ಲಂಕೇಶರು ತಮ್ಮ ಸೃಜನ ಪ್ರತಿಭೆಯನ್ನು ಸಾಮಾಜಿಕ ಬದಲಾವಣೆಗೆ ಮತ್ತು ಅಭಿವ್ಯಕ್ತಿಯನ್ನು ಸಮರ್ಥವಾಗಿ ದುಡಿಸಿಕೊಂಡವರವರು. ಮನುಷ್ಯನ ಅನುಭವದ ವೈಯಕ್ತಿಕತೆಯ ಪಾತಳಿಯ ಮೇಲೆ ಲಂಕೇಶರು ತಮ್ಮ ಕಥೆಗಳನ್ನು ಕಟ್ಟುತ್ತಾರೆ ಎಂಬುದನ್ನು ಗಮನಿಸಬೇಕು. ಲಂಕೇಶರು ಸಿದ್ಧಾಂತಗಳ ಆಚೆಗೆ ಬದುಕನ್ನು ನೋಡಿದವರು ಮತ್ತು ತಮ್ಮ ಕಥೆಗಳಲ್ಲಿ ಅದನ್ನು ಕಾಣಿಸಿದವರು. ಸಾಂಪ್ರದಾಯಿಕವಾದ ಚಿಂತನೆಗಳನ್ನು ನಿರಾಕರಿಸಿ ಮನುಷ್ಯ ಸ್ವಭಾವದ ಬಗ್ಗೆ ವಿಶಿಷ್ಟವಾದ ನಿಲುವೊಂದನ್ನು ತಮ್ಮ ಕಥೆಗಳಲ್ಲಿ ನಿರಂತರವಾಗಿ ಶೋಧಿಸಿದವರು. ಮನುಷ್ಯನ ಇಡೀ ಮಾನಸಿಕ ಜೀವನವನ್ನು, ಇತರರ ಮೇಲೆ ಅವನು ನಡೆಸುವ ಹಿಂಸೆ ಮತ್ತು ಅದು

ಸಾಧ್ಯವಾಗದಿದ್ದಾಗ ವೈಯಕ್ತಿಕವಾಗಿ ಅನುಭವಿಸುವ ಅವಮಾನ ಸಂಶಯಗಳನ್ನು ಉದ್ದಕ್ಕೂ ತಮ್ಮ ಕಥೆಗಳಲ್ಲಿ ಶೋಧಿಸುವ ಪ್ರವೃತ್ತಿಯನ್ನು ಇಲ್ಲಿ ಗುರುತಿಸಬೇಕಾಗುತ್ತದೆ.

ಲಂಕೇಶ್ ಕಥೆಗಳಲ್ಲಿ ಅನಾವರಣಗೊಂಡ ಬದುಕಿನ ಸಂಕೀರ್ಣತೆ :

ಲಂಕೇಶ್ ಜನಪ್ರಜ್ಞೆಯ ಕಥೆಗಾರ. ಸಮುದಾಯ ಪ್ರಜ್ಞೆಯು ಅವರ ಬಹುತೇಕ ಕತೆಗಳಲ್ಲಿ ಅನಾವರಣಗೊಂಡಿದೆ. ಮನುಷ್ಯನ ಅನುಭವಲೋಕದ ಸಂಕೀರ್ಣತೆಯನ್ನು ಲಂಕೇಶ್ ಕಥೆಗಳು ಕಟ್ಟಿಕೊಡುತ್ತವೆ. 1990ರಲ್ಲಿ ಪ್ರಕಟವಾದ 'ಕಲ್ಲು ಕರಗುವ ಸಮಯ'ದಲ್ಲಿ ಕತೆಗಾರನ ಹೊಸಹುಟ್ಟು ಸಂಭವಿಸಿದೆ. ಇಲ್ಲಿ ಅವನು ಹುಸಿ ವಿಗ್ರಹಗಳನ್ನು ಕೆಡಹುತ್ತಾನೆ. ಮಾತ್ರವಲ್ಲ, ಅದಕ್ಕಿಂತ ಹೆಚ್ಚು ಉತ್ಸಾಹದಿಂದ ಹುಸಿಯಲ್ಲದ ವಿಗ್ರಹಗಳನ್ನೂ ಕಟ್ಟಿಕೊಡುತ್ತಾನೆ. ಹೀಗೆ ಮಾಡಲು ನಂಬಿಕೆ ಬೇಕು, ಕನಸುಗಳು ಬೇಕು, ಮನುಷ್ಯನ ಮಿತಿಗಳನ್ನು ತಿಳಿದರೂ ಕುಂದದ ಆಶಾವಾದ ಬೇಕು. ಇಲ್ಲಿನ ಕತೆಗಳು ಇವೆಲ್ಲವನ್ನೂ ಕಂಡುಕೊಳ್ಳುವುದು ಜನಸಮುದಾಯಗಳ ನಡುವೆ. ಕತೆಗಾರನಿಗೆ ತಾನು ಕೆಡವಬಯಸುವ ಮತ್ತು ಕಟ್ಟಬಯಸುವ ವಿಗ್ರಹಗಳ ಮೇಲೆ ಅನುಕಂಪವಿದೆ. ಈ ಕತೆಗಳ ಪಾತ್ರಗಳು ವಸ್ತುಸ್ಥಿತಿಗಿಂತ ಹೆಚ್ಚಾಗಿ ಭವಿಷ್ಯದ ಸಾಧ್ಯತೆಗಳ ಕಡೆಗೆ ಕೈಮಾಡುತ್ತಿರುತ್ತವೆ. ಇಲ್ಲಿ ಲೇಖಕನ ಕಾಣ್ಕೆಯು ಕಥೆಗಳ ಸ್ವರೂಪವನ್ನು ನಿರ್ಧರಿಸುತ್ತದೆ. ಚಿತ್ರಿತವಾದ ವಾಸ್ತವದ ಅಧಿಕೃತತೆ ಮತ್ತು ಆಶಾಚಿಂತನೆಗಳ ನಡುವಿನ ಗಡಿಗೆರೆಗಳು ಎಲ್ಲಿಯೋ ಅಳಿಸಿಹೋದವೇನೋ ಎಂಬ ಶಂಕೆಗೆ ಅವಕಾಶವಾಗುತ್ತದೆ. ಆದರೆ, ಕೆಲವು ಕತೆಗಳು ಲೇಖಕರ ಬಾಹ್ಯಪ್ರಜ್ಞೆಯ ಹಿಡಿತವನ್ನು ಮೀರಿ, ಅವರಿಗೂ ಅಚ್ಚರಿ ತರುವ ಆಯಾಮಗಳನ್ನು ಪಡೆದುಕೊಳ್ಳುತ್ತವೆ. "ಉರಿದ ಊರಿನವರು', 'ಒಂದು ಬಾಗಿಲು', 'ಕಣ್ಮರೆ' ಮುಂತಾದವು ಈ ಬಗೆಯವು. ಇದೇ ಹಂತದಲ್ಲಿ, ಲಂಕೇಶರು ಹಳೆಯ ಕತೆಗಳ ಮರುರೂಪಣವನ್ನು ಶುರು ಮಾಡಿದರು. ಇವು ರಾಮಾಯಣ, ಮಹಾಭಾರತಗಳಂಥ ಪರಿಚಿತ ಕೃತಿಗಳಿಂದ ಬಂದವಲ್ಲ. ಇವು ತಾನು ಹೇಳಬೇಕಾದುದನ್ನು ಆದಷ್ಟು ಸರಳವಾಗಿ, ನೇರವಾಗಿ ಹೇಳಬೇಕೆಂಬ ತುಡಿತದಿಂದ ಬಂದವು. ಅದು ಬೇರೊಬ್ಬರ ಕತೆಯ ಜ್ಞಾಪಕರೂಪವಾದರೂ ಪರವಾಗಿಲ್ಲ. ಇಂಥ ಕತೆಗಳಲ್ಲಿ ರಚನಾಕ್ರಮವು ತಿರುವುಮುರುವಾಗುತ್ತದೆ. ಕತೆಯಲ್ಲಿ ಬರುವ ವಿವರಗಳು ಬಹುಮಟ್ಟಿಗೆ ವಸ್ತುವಿನಿಂದಲೇ ನಿಯಂತ್ರಿತವಾಗಿರುತ್ತವೆ. ಇಂತಹ ಕತೆಗಳಲ್ಲಿ ಬಹಳ ಸೊಫಿಸ್ಟಿಕೇಟೆಡ್ ಆದ ಕಲೆಗಾರಿಕೆ ಅಥವಾ ಕುಸುರಿಕೆಲಸವನ್ನು ಬೇಕೆಂದೇ ಕೈಬಿಡಲಾಗಿದೆ. ಇವು ಟಾಲ್‌ಸ್ಟಾಯ್ ಅವರ ಕೊನೆಕೊನೆಯ ಕತೆಗಳನ್ನು ನೆನಪಿಗೆ ತರುತ್ತವೆ. ಕೊನೆಯ ಸಂಕಲನವಾದ ಮಂಜು ಕವಿದ ಸಂಜೆ'ಯಲ್ಲಿ ಲಂಕೇಶರ ಅನೇಕ ಕತೆಗಳು ಈ ಮಾದರಿಯನ್ನೇ ಅನುಸರಿಸುತ್ತವೆ.

"ಉಲ್ಲಂಘನೆ' ಮತ್ತು ಮಂಜು ಕವಿದ ಸಂಜೆ' ಸಂಕಲನಗಳ ತುಂಬ ಬೇರೆ ಬಗೆಯ ಆತಂಕಗಳಿವೆ. ಅವು ಮುಪ್ಪು, ಸಾವು, ಅಸಹಾಯಕತೆ, ದಿಗ್ಭ್ರಮೆ, ಕಲೆಯ ಅ–ಮಹತ್ವ ಮುಂತಾದ ಸಂಗತಿಗಳ ಬಗೆಗಿನ ಧ್ಯಾನದಲ್ಲಿ ತೊಡಗಿವೆ. ಕಲ್ಲು ಕರಗುವ ಸಮಯ'ದ ಆಶಾವಾದವೂ ಇಲ್ಲಿ ಕರಗಿಹೋಗಿದೆ. ಇದು ಕರ್ನಾಟಕದಲ್ಲಿ ನಡೆಯುತ್ತಿದ್ದ ರಾಜಕೀಯ/ಸಾಮಾಜಿಕ ವಿದ್ಯಮಾನಗಳಿಗೆ ಹಿಡಿದ ಕನ್ನಡಿಯೂ ಹೌದು. ನಂಬಿಕೆ ದ್ರೋಹ' ಮತ್ತು 'ವೃದ್ಧಾಪ್ಯಕ್ಕೆ ಸಹಜವಾದ 'ಆತುರದ ಹಪಹಪಿಗಳು' ಕೂಡ ಅವರನ್ನು ಕಾಡುತ್ತಿದ್ದವು. ಈ ಕತೆಗಳಲ್ಲಿ ತಾನು ಕಂಡ ಸತ್ಯಗಳನ್ನು ನಿರಲಂಕಾರವಾಗಿ, ಆದಷ್ಟು ಆದ್ರವಾಗಿ, ಆದಷ್ಟು ಸರಳವಾಗಿ ಹೇಳಿಬಿಡುವ ತಹತಹವಿದೆ. ಪ್ರೀತಿ ಮತ್ತು 'ನಾನಲ್ಲ' ಕಥೆಯ 'ನಾನು', 'ರೊಟ್ಟಿ' ಕಥೆಯ 'ಆಕೆ' ಎಂಬ ಮುದುಕಿ ಈ ಎರಡು ಪಾತ್ರಗಳು ವಿಶಿಷ್ಟವಾದವು. ಇನ್ನುಳಿದ ಕಥೆಗಳ ನಾಯಕರಿಗೆ, ನಾಯಕಿಯರಿಗೆಲ್ಲಾ ಹೆಸರುಗಳಿವೆ. 'ಆಕ್ಟೋಪಸ್' ಕಥೆಯ ನಾಯಕರಿಗೆ, ನಾಯಕಿಯರಿಗೆಲ್ಲಾ ಹೆಸರುಗಳಿವೆ 'ಆಕ್ಟೋಪಸ್' ಕಥೆಯ ಆನಂದು, 'ವಾಸನೆ' ಕಥೆಯ ಬಸವರಾಜಯ್ಯ, 'ಹುಡುಕಾಟ' ಕಥೆಯ ಲಕ್ಷ್ಮಣ ಮುಂತಾದವರೆಲ್ಲ ಒಂದಲ್ಲ ಒಂದು ಸನ್ನಿವೇಶಗಳಿಗೆ ಸಿಕ್ಕಿ ತಮ್ಮ ವ್ಯಕ್ತಿತ್ವದಲ್ಲಿ ಅಡಗಿರುವ ಹೊಸತನ ಎಂಬಂತೆ 'ನಾನು' ಎಂಬ ಪ್ರಜ್ಞೆಯನ್ನು ಹೊರಗೆಡವಲು ಹವಣಿಸುವ ತುಡಿತವನ್ನು ಕಾಣಬಹುದು. ವರ್ತಮಾನವೇ ಈ ಎಲ್ಲಾ ಕಥೆಗಳ ಪ್ರಧಾನ ಕಾಲ. ಲಂಕೇಶರು ಮುಂದೆ ತಮ್ಮ ಕಥೆಗಳಲ್ಲಿ ವರ್ತಮಾನದ ಜೊತೆಗೆ ಭೂತಕಾಲವನ್ನೂ ತಂದಿದ್ದುಂಟು. ಅವರ ಕಥಾನಕ ಗುಣ ಇಲ್ಲಿಯ 'ವಾಸನೆ', 'ರೊಟ್ಟಿ' ಕಥೆಗಳಲ್ಲಿ, 'ಮಾರಲಾಗದ ನೆಲ', 'ಜೊತೆಗಾರ' ಕಥೆಗಳಲ್ಲಿ ಇನ್ನೂ ದಟ್ಟವಾದದ್ದರ ಚಿತ್ರವನ್ನು ಕಾಣಬಹುದು. 'ನಾನಲ್ಲ' ಸಂಕಲನದ ಕಥೆಗಳಲ್ಲೆಲ್ಲಾ ವ್ಯಕ್ತವಾಗುವ 'ನಾನಲ್ಲ' ಎಂಬ ಪ್ರಜ್ಞೆಯಲ್ಲಿ 'ನಾನು' ಎಂಬ ಪ್ರಜ್ಞೆಯೇ ಗುಪ್ತವಾಗಿದೆ. ಈ ಕಥೆಗಳಲ್ಲೆಲ್ಲಾ ಚಿತ್ರಿತವಾಗುವುದು ವ್ಯಕ್ತಿಯ ಅಹಂಕಾರಜನ್ಯವಾದ ವ್ಯಕ್ತಿತ್ವದ ಒಳಸ್ವರೂಪ. ಆತನ ಅಂತರಂಗದ ಪ್ರವೃತ್ತಿ ಹಾಗೂ ಆತನ ಸುಪ್ತಪ್ರಜ್ಞೆಯ ಭಾವನೆಗಳ, ಕನಸುಗಳ ಒಳಪದರಗಳನ್ನು ಬಿಚ್ಚಿಡುತ್ತ ಈ ಕಥೆಗಳು ಸಾಗುತ್ತವೆ. ಮನುಷ್ಯನ ಸಣ್ಣತನಗಳು, ವಕ್ರತೆಗಳು, ಬೂಟಾಟಿಕೆಗಳು, ನಟನೆಗಳು ಇಲ್ಲಿನ ಕಥೆಗಳಲ್ಲಿ ಬರುತ್ತವೆ. ಬದುಕಿನ ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನು, ಸಂಕೀರ್ಣತೆಯನ್ನು ಈ ಕಥೆಗಳು ಪ್ರಕಟಿಸುತ್ತವೆ. ಇಲ್ಲಿಯ ಕಥೆಗಳಲ್ಲಿ ವ್ಯಕ್ತಿಯ ನಂಬಿಕೆ ವಿಶ್ವಾಸ ಇವುಗಳ ಶೋಧನೆಯ ಜೊತೆ ಜೊತೆಗೇ ನಗರದ ನಿರ್ಲಿಪ್ತತೆಯನ್ನು, ಕ್ರೌರ್ಯವನ್ನು ಹೆಣ್ಣಿನ ಒಬ್ಬಂಟಿತನದ ನೋವನ್ನು ಹಿಡಿದಿಡುವುದು ಪ್ರಧಾನವಾಗಿ ಕಂಡುಬರುತ್ತದೆ. ಇವುಗಳಿಗೆ ಹೆದರುವ, ಭಯಪಡುವ, ಸಂಶಯಪಡುವ ಮನಸ್ಸುಗಳೂ ಇಲ್ಲಿಯ ಕಥೆಗಳಲ್ಲಿ ಬರುತ್ತವೆ.

ಮಲ್ಲೇಶ್ವರದ ರಸ್ತೆಯಲ್ಲಿ ಅನಾಥವಾಗಿ ಬಿದ್ದಿರುವ ಹೆಣದ ದುರಂತ ಸ್ಥಿತಿಗೆ ಸ್ಪಂದಿಸಿದರೂ, ಅದಕ್ಕೆ ಕಾರಣರಾದವನು ಹೋಟೆಲ್ ಮಾಲೀಕನೆಂದು ಗೊತ್ತಾದರೂ, ಆತನನ್ನು ಪ್ರತಿಭಟಿಸಲಾಗದೆ ಅಸಹಾಯಕನಾಗಿ ನಿಲ್ಲುವ ''ನಾನಲ್ಲ' ಕಥೆಯ 'ನಾನು' ಎಂಬ ನಾಯಕ, 'ಸೆಪ್ಟೆಂಬರ್‌ನಲ್ಲಿ ಪ್ರಥಮ ರಾತ್ರಿ' ಕಥೆಯಲ್ಲಿ ನೊಂದ ಒಬ್ಬಂಟಿ ಹೆಣ್ಣಿನ ಜೊತೆ ಮಲಗಿದ ನಾಯಕನಿಗೆ, ಕೊನೆಗೆ ನಗರವನ್ನೇ ಬಿಟ್ಟು ಎಲ್ಲಾದರೂ ಕಾಡಿಗೆ, ಊರಿಗೆ ಓಡಿಹೋಗಬೇಕೆಂಬ ಕಾತರ; ತನ್ನ ಪ್ರಾಧ್ಯಾಪಕ ನರಸಯ್ಯನನ್ನು ಎದುರಿಸಲಾರದೆ ಅಸಹಾಯಕನಾಗಿ ತೊಳಲಾಡುವ 'ಆಕ್ಟೋಪಸ್' ಕಥೆಯ ಆನಂದು – ಇವರೆಲ್ಲಾ 'ನಾನಲ್ಲ' ಕಥಾಸಂಕಲನದ ಶೀರ್ಷಿಕೆಯ ಉಚಿತತೆಗೆ, ಸಮರ್ಪಕತೆಗೆ ಸಾಕ್ಷಿಯಾಗಿದ್ದಾರೆ ಎಂಬ ಕರೀಗೌಡ ಬೀಚನಹಳ್ಳಿ ಅವರ ಈ ಅಭಿಪ್ರಾಯವು ಲಂಕೇಶ ಕಥನ ಪ್ರತಿಭೆ ನಿರ್ವಹಿಸಿರುವ ರೀತಿಯನ್ನು ಸ್ಪಷ್ಟಪಡಿಸುತ್ತದೆ.

ಲಂಕೇಶರ ಮಹತ್ವಾಕಾಂಕ್ಷೆಯ ಕಥೆಗಳಲ್ಲಿ 'ಜೊತೆಗಾರ' ಕಥೆಯೂ ಒಂದು. ರಾಜಕಾರಣದ ವಿವಿಧ ಮುಖಗಳನ್ನು ಆಳಕ್ಕೆ ಹೋಗಿ ಚಿತ್ರಿಸುವ ಕಥೆ ಪರಿಣಾಮದಲ್ಲಿ ತನ್ನದೆಯಾದ ಛಾಪು ಮೂಡಿಸಿದೆ. ಭಾವನೆಗಳ ಅತೀ ಸೂಕ್ಷ್ಮತೆ ಮತ್ತು ಭಾಷೆಯ ಜೀವಂತಿಕೆಯನ್ನು ದುಡಿಸಿಕೊಳ್ಳುವ ಕಲೆ ಲಂಕೇಶರಿಗೆ ಚೆನ್ನಾಗಿ ಗೊತ್ತಿದೆ. ಬದುಕನ್ನು ಆತಂಕದಿಂದ ಮತ್ತು ತೀವ್ರವಾಗಿ ಬದುಕುವ ಕ್ರಿಯೆಯಲ್ಲಿ ಸಾಕ್ಷಿಪ್ರಜ್ಞೆಯಿಂದ ನೋಡುವ ದೃಷ್ಟಿ ಅವರಲ್ಲಿದೆ. ಒಂದು ರೀತಿಯಲ್ಲಿ ಅವರದು ಸಮಾಜವಾದಿ ಹಾಗೂ ಅಸ್ತಿತ್ವವಾದಿ ನಿಲುವು. ಸಾಮಾಜಿಕ ಹೊಣೆಗಾರಿಕೆ, ಜವಾಬ್ದಾರಿ ಲೇಖಕನಿಗೆ ಅನಿವಾರ್ಯ ಎಂದು ನಂಬಿದ ಈ ಲೇಖಕರು ಕುವೆಂಪು, ಬೇಂದ್ರೆ, ಕಾಮು, ಲೋಹಿಯಾ ಇವರ ಪ್ರಭಾವವನ್ನು ಒಪ್ಪಿಕೊಂಡವರು. ಇದರ ಜೊತೆಗೆ ಲಂಕೇಶ್ ಅವರಲ್ಲಿ ವ್ಯಂಗ್ಯವೇ ಅಭಿವ್ಯಕ್ತಿ ಮಾಧ್ಯಮವಾಗಿದೆ

'ರೊಟ್ಟಿ' ಲಂಕೇಶರ ಶಕ್ತಿಶಾಲಿ ಕಥೆ. ಅವರೊಬ್ಬರು ಸೃಷ್ಟಿಶೀಲ ಕಥೆಗಾರ ಎನ್ನುವುದಕ್ಕೆ ಈ ಕಥೆ ಸಾಕ್ಷಿ. ಉಳ್ಳವರ ಮತ್ತು ಇಲ್ಲದವರ ನಡುವಿನ ಸಂಘರ್ಷವನ್ನು ಈ ಕಥೆಯು ಚಿತ್ರಿಸಿದರೂ ಹಸಿವಿನ ತೀವ್ರತೆಯನ್ನು, ಸಾಮಾಜಿಕ ಪ್ರಜ್ಞೆಯನ್ನು ನಮ್ಮ ಗಮನಕ್ಕೆ ತಂದುಕೊಡುತ್ತದೆ. ಹಳ್ಳಿಯಿಂದ ನಗರಕ್ಕೆ ತನ್ನ ಮಗಳ ಬಾಣಂತನಕ್ಕಾಗಿ ಬಂದು, ಒಂದು ವಾರ ಮಗಳ ಆರೈಕೆ ಮಾಡಿ, ತಾನು ತಂದಿದ್ದ ತನ್ನ ಪುಟ್ಟ ಟ್ರಂಕು, ಬ್ಯಾಗು ತೆಗೆದುಕೊಂಡು ತನ್ನೂರಿಗೆ ಹೋಗಲು ರೈಲ್ವೆ ಸ್ಟೇಷನ್ನಿಗೆ ಆಕೆ ನಡೆದು ಬರುತ್ತಾಳೆ. ಅವಳ ಅಳಿಯ ಯಾವುದೋ ಆಫೀಸಿನಲ್ಲಿ ಗುಮಾಸ್ತ. ಮಧ್ಯಮ ವರ್ಗದ ಸಂಸಾರದ ಈ ಕಥೆ ಆರಂಭವಾಗುವುದೇ ಆಕೆ ಊರಿಗೆ ಹೊರಡುವಲ್ಲಿಂದ ರೈಲು ಬರುವುದು ಒಂದು ಗಂಟೆ ತಡ, ಸ್ಟೇಷನ್ ತುಂಬಾ ಜನ, ಆಕೆಗೆ ಕೂರಲೂ ಒಂದು ಚೂರು ಜಾಗವಿಲ್ಲ. ಆಕೆ ಯಾರ ಜೊತೆ ಮಾತನಾಡಿದರೂ ಅವರು ತಿರುಗಿ ಉತ್ತರ ಕೊಡುವುದಿಲ್ಲ. ಸಂವಾದ ಸಾಧ್ಯವಾಗದ ಗುಂಪು ಅದು. ಆಕೆಗೆ ಹಸಿವೆ ಬೇರೆ. ತಾನು ತಂದಿದ್ದ ಚೀಲದಲ್ಲಿರುವ ರೊಟ್ಟಿಯನ್ನು ತೆಗೆದು ತಿನ್ನಲು ಹವಣಿಸುವಳು. ಆಕೆ ವಾರದ ಹಿಂದೆ ಆ ಸಿಂಗಾರಪೇಟೆಯ ರೈಲ್ವೆ ಸ್ಟೇಷನ್ನಿನಲ್ಲಿ ಇಳಿದಾಗಲೇ ಆಕೆಗೆ ಅರ್ಥವಾಗದ ಕೂಲಿಗಳು, ಕೊಳಕು ಮೈ ಜನ, ಹರಿದ ಬಟ್ಟೆಯ ಜನ ಇಂಥವರನ್ನು ಕಂಡಿದ್ದಳು. ಗೋಡೆಗಳ ಮೇಲೆಲ್ಲಾ ತನಗೆ ಅರ್ಥವಾಗದ ಬಣ್ಣದ ಚೀಟಿಗಳು, ಬೈದಾಟಗಳು, ಊರೊಳಗೆ ನಡೆಯುತ್ತಿದ್ದ ಹತ್ತಾರು ಮೆರವಣಿಗೆಗಳು, ಬ್ಯಾನರುಗಳು, ಬೋರ್ಡ್‌ಗಳನ್ನು ನೋಡಿದ್ದಳು. ಅಲ್ಲಿ ಯಾವುದೋ ಕಾರಣಕ್ಕಾಗಿ ನಡೆಯುತ್ತಿದ್ದ ಹತ್ತಾರು ಮುಷ್ಕರಗಳು : ಹಸಿವನ್ನು ತೊಲಗಿಸಿ ಅಂತಲೋ, ಕೂಲಿ ಹೆಚ್ಚಿಸಿ ಅಂತಲೋ, ಸರ್ವಾಧಿಕಾರ ತೊಲಗಿಸಿ ಅಂತಲೋ, ವ್ಯಕ್ತಿ ಸ್ವಾತಂತ್ರ್ಯ ಉಳಿಸಿ ಅಂತಲೋ ಕಾರಣವಿರಬಹುದು. ಇಂತಹ ರೈಲ್ವೇ ನಿಲ್ದಾಣದಲ್ಲಿ ಒಬ್ಬಂಟಿ ಮೇಲುನೋಟಕ್ಕೆ ವರದಿ, ವೃತ್ತಾಂತ ಎಂಬಂತೆ ಕಂಡರೂ, ಇದು ವರದಿಯಂತೆ ಉದ್ದೇಶವುಳ್ಳದ್ದಾಗಿರದೆ ಓದುಗನನ್ನು ಆಲೋಚನೆಗೆ ಪಕ್ಕಾಗಿಸಿ, ಒಂದು ಸಾಮಾಜಿಕ ಸಂದರ್ಭ ಮತ್ತು ವ್ಯಕ್ತಿಯ ಅಸಹಾಯಕತೆಯನ್ನು ಭಾವುಕವಾಗದೆ, ಮನಸ್ಸನ್ನು ನೆಮ್ಮಿಕೊಳ್ಳುವ ನಿಟ್ಟಿನಲ್ಲಿ ಪರಿಣಾಮಕಾರಿಯಾಗಿ ಹಾಗೂ ವಿಶಿಷ್ಟ ರೀತಿಯಲ್ಲಿ ಕಲೆಯಾಗಿಸುತ್ತದೆ ಎಂದು ಕರೀಗೌಡ ಬೀಚನಹಳ್ಳಿ ಅವರು ಪ್ರಸ್ತಾಪಿಸುತ್ತಾರೆ.

'ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ (1973) ಲಂಕೇಶರ ಮೂರನೆಯ ಕಥಾಸಂಕಲನ ಕೆಲವು ವಿಶಿಷ್ಟ ಕಾರಣಗಳಿಗಾಗಿ ಇದು ಲಂಕೇಶರ ಸೃಜನಶೀಲ ಅಭಿವ್ಯಕ್ತಿಯ ಘಟ್ಟಗಳಲ್ಲಿ ಅತ್ಯಂತ ಮಹತ್ವದ ಕೃತಿ. ಅವರ ಹಿಂದಿನ ಕೆಲವು ಕಥೆಗಳಲ್ಲಿ ಕಂಡುಬರುತ್ತಿದ್ದ ಪ್ರತಿಮೆ, ಸಂಕೇತಗಳಾಗಲಿ ಇಲ್ಲಿ ಇಲ್ಲ. ಸರಳತೆಯಲ್ಲಿಯೇ ಸಂಕೀರ್ಣವಾದ, ನೇರ ನಿರೂಪಣೆಯಲ್ಲಿಯೇ ಶ್ರೀಮಂತವಾದ ಅಭಿವ್ಯಕ್ತಿ ಇಲ್ಲಿನ ಎಲ್ಲಾ ಕಥೆಗಳ ಉತ್ತಮ ಗುಣವಾಗಿದೆ. ಕಾವ್ಯಾತ್ಮಕವಾದ ಭಾಷೆಗೆ ಆಡುನುಡಿಯೂ ಸೇರಿ ಈ ಕಥೆಗಳ ಸೌಂದರ್ಯವನ್ನು ಹೆಚ್ಚಿಸಿವೆ.

ಲಂಕೇಶ್‌ರ 'ಮಾರಲಾಗದ ನೆಲ' ಕಥೆಯ ವಸ್ತು ಮೌಢ್ಯತೆ ಮತ್ತು ಭೂಮಿಯ ಸಂಬಂಧದ ವ್ಯವಹಾರವನ್ನು ಕುರಿತದ್ದು. ಹಳ್ಳಿಯ ಜೀವನ ಮೇಲುನೋಟಕ್ಕೆ ಕಾಣುವಷ್ಟು ಸರಳವಲ್ಲ. ಮೂಡನಂಬಿಕೆಗಳು, ಕಪಟ, ಮೋಸ, ವಂಚನೆ, ಹಾದರ, ದ್ವೇಷ, ಅಸೂಯೆ, ಹೊಟ್ಟೆಕಿಚ್ಚು, ಕ್ಷುದ್ರ ರಾಜಕಾರಣ ಹೀಗೆ ಇವೆಲ್ಲವುಗಳಿಂದ ತುಂಬಿ ತುಳುಕುವ ಹಳ್ಳಿಯ ಬದುಕು ತುಂಬಾ ಸಂಕೀರ್ಣ ವಾದುದು. ಇಂಥ ಹಳ್ಳಿಯೊಂದಕ್ಕೆ ವಿಶ್ವನಾಥ ಬೆಂಗಳೂರಿನಿಂದ ಹೋಗುತ್ತಾನೆ. ಏಕೆಂದರೆ ಆ ಹಳ್ಳಿಯಲ್ಲಿರುವ ತನ್ನ ಜಮೀನನ್ನು ಮಾರುವ ಸಲುವಾಗಿ, ಆದರೆ ಆ ಜಮೀನಿನ ಬಗ್ಗೆ ಹಳ್ಳಿಯ ಜನರಲ್ಲಿ ಇರುವ ಮೂಡನಂಬಿಕೆಯಿಂದಾಗಿ ಮಾರಲಾಗದೆ ನಗರಕ್ಕೆ ಹಿಂದಿರುಗುತ್ತಾನೆ. ಆ ಹಳ್ಳಿಯಲ್ಲಿ ಆತನಿಗೆ ಎರಡು ಮೂರು ದಿನದಲ್ಲಿ ಎದುರಾಗುವ ಹಲವಾರು ಸಮಸ್ಯೆಗಳ ಚಕ್ರವ್ಯೂಹದಿಂದ ಎಷ್ಟೊತ್ತಿಗೆ ಪಟ್ಟಣಕ್ಕೆ ಹಿಂತಿರುಗಿ ಹೋದೇನೋ ಅನ್ನಿಸಿಬಿಡುತ್ತದೆ. ಘಟನೆಯಿಂದ ಘಟನೆಗೆ ವ್ಯಕ್ತಿಯಿಂದ ವ್ಯಕ್ತಿಗೆ ಕಥೆ ಬೆಳೆಯುತ್ತಾ ಆಳವಾಗುತ್ತಾ, ದಟ್ಟವಾಗುತ್ತಾ ಹೋಗುತ್ತದೆ. ಆ ಹಳ್ಳಿಯ ಪರಿಸರ ಆತನನ್ನು ದಿಗ್ಭ್ರಮೆಯ ವಾತಾವರಣಕ್ಕೆ ತಳ್ಳಿ ವ್ಯಂಗ್ಯವಾಗಿ ನೋಡುತ್ತದೆ. ಈ ಕಥೆಯ ಸಂಕೀರ್ಣತೆ ಮತ್ತು ಕುತೂಹಲ ಕೊನೆಯವರೆಗೂ ಉಳಿದು ಕಥೆಯನ್ನು ಸಫಲಗೊಳಿಸಲು ಯಶಸ್ವಿಯಾಗಿದೆ. ಬದುಕಿನ ಸಂಕೀರ್ಣ ಅನುಭವಗಳನ್ನು ಶೋಧಿಸುವ ಲಂಕೇಶರ ಕಥನ ಪ್ರತಿಭೆ ಕನ್ನಡ ನವ್ಯ ಕಥಾ ಪ್ರಪಂಚಕ್ಕೆ ವಿಶೇಷವಾದುದನ್ನು ಸೇರ್ಪಡೆಗೊಳಿಸಿದೆ.

'ಮುಟ್ಟಿಸಿಕೊಂಡವನು' ಕಥೆಯಲ್ಲಿ ಮೇಲ್ಜಾತಿಯ ಬಸಲಿಂಗ, ಅಸ್ಪೃಶ್ಯ ಜಾತಿಯ ಕಣ್ಣಿನ ವೈದ್ಯ ಡಾಃ ತಿಮ್ಮಪ್ಪನವರಿಂದ ಚಿಕಿತ್ಸೆ ಪಡೆದುಕೊಂಡ ಮೇಲೆ ವೈದ್ಯರ ಜಾತಿ ಗೊತ್ತಾಗಿ ಹಲಬುತ್ತಾನೆ. ಅವನ ಈ ಸಣ್ಣ ಮನಸ್ಸಿನಿಂದಾಗಿ ಮತ್ತೆ ಬೇರೆ ಡಾಕ್ಟರಲ್ಲಿಗೆ ಹೋಗಿ ಸರಿಯಾದ ಆರೈಕೆ ಪಡೆಯದೇ ತನ್ನ ಒಂದು ಎಡಗಣ್ಣು ಕಳೆದುಕೊಳ್ಳುತ್ತಾನೆ. ಮತ್ತೊಂದು ಕಣ್ಣಿಗೂ ರೋಗ "ತಗುಲಿದಾಗ ಮೇಲ್ಜಾತಿಯ ಡಾಕ್ಟರಲ್ಲಿಗೆ ಹೋಗಿ ಗುಣವಾಗದೇ ಹತಾಶನಾಗಿ ಮತ್ತೆ ಡಾ. ತಿಮ್ಮಪ್ಪನವರಲ್ಲಿಗೇ ಹೋಗುವನು. ತಿಮ್ಮಪ್ಪ ಅವನ ಸ್ಥಿತಿಗೆ ಮರುಗಿ ಆಪರೇಷನ್ ಮಾಡಿ ಗುಣಪಡಿಸುವರು. ಬಸಲಿಂಗನಲ್ಲಿ ಅಂತರಂಗದಲ್ಲಿ ಹುದುಗಿದ್ದ ಜಾತಿ ನಾಶಗೊಂಡು, ವಿಶ್ವಮಾನವನಾಗುವನು. ಸಮಾಜಕ್ಕೆ ಕಳಂಕದಂತೆ ಅಂಟಿರುವ ಜಾಡ್ಯ ಅಸ್ಪೃಶ್ಯತೆಯನ್ನು ಹೋಗಲಾಡಿಸಿ ಸಮ ಸಮಾಜ ನಿರ್ಮಿಸಬೇಕೆಂಬ ಆಶಯ ಈ ಕಥೆಯಲ್ಲಿದೆ.

'ಸಹಪಾಠಿ' ಕಥೆಯು ಅಸ್ಪೃಶ್ಯತೆಯನ್ನು ಕುರಿತದ್ದು. ನಿರೂಪಕನೊಂದಿಗೆ ಒಂದೇ ತರಗತಿಯಲ್ಲಿ ಓದುತ್ತಿದ್ದ ಬಾಲ್ಯ ಸ್ನೇಹಿತ ಬಸವೇಗೌಡ, ಮುಪ್ಪಿನ ಸಮಯದಲ್ಲಿ ತೀವ್ರವಾದ ಕಾಯಿಲೆಗೆ ತುತ್ತಾಗುವನು. ಬಾಲ್ಯ ಸ್ನೇಹಿತನನ್ನು ಮತ್ತೆ ನೋಡಲು ಆಸೆಯಾಗಿ ಪತ್ರ ಬರೆಯುತ್ತಾನೆ. ನಲವತ್ತು ವರ್ಷಗಳ ಬಳಿಕ ಸ್ನೇಹಿತನನ್ನು ಮತ್ತೆ ನೋಡಲು ಹೋದ ನಿರೂಪಕ, ತನ್ನ ಗೆಳೆಯ ಬಸವೇಗೌಡ ಜಮೀನ್ದಾರನಾಗಿದ್ದು, ಜಾತಿ ಬೇಧ ಶ್ರೇಣೀಕೃತ ವ್ಯವಸ್ಥೆಯನ್ನು ಒಪ್ಪಿಕೊಂಡವನು. ಜಾತಿಯ ಕ್ರೂರ ವ್ಯವಸ್ಥೆಯನ್ನು, ಹಿಡಿತವನ್ನು ಸಡಿಲಗೊಳಿಸುವುದಕ್ಕಾಗಿ ಹೊಸ ತಂತ್ರವನ್ನು ಬಳಸುವನು. ಬಸವೇಗೌಡನ ನಿದ್ರಾಹೀನತೆಗೂ ಅವನು ಅಸ್ಪೃಶ್ಯನೊಬ್ಬನನ್ನು ಅವಮಾನಿಸಿ, ಹಿಂಸಿಸಿದ್ದಕ್ಕೂ ಸಂಬಂಧವಿದೆ ಎಂಬುದನ್ನು ವಿವರಿಸುವನು. ಬಸವೇಗೌಡನ ಅನುಯಾಯಿಗಳ ದಾಳಿಗೆ ಸಿಕ್ಕಿ ನೊಂದಿದ್ದ ಅಸ್ಪೃಶ್ಯನೊಬ್ಬನಿಗೆ ಜಮೀನ್ದಾರ ಶರಣಾಗಿ ಪಾದಪೂಜೆ ಮಾಡುವುದರೊಂದಿಗೆ ತನ್ನ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಅವನನ್ನು ಒಪ್ಪಿಸಿರುತ್ತಾನೆ. ಈ ಕ್ರಿಯೆ ಅವನನ್ನು ಸಾವಿನಿಂದ ಉಳಿಸಿಲ್ಲವಾದರೂ ಸಾಯುವಾಗ ನೆಮ್ಮದಿಯಿಂದ ಅವನು ವಿದಾಯ ಹೇಳಲು ಸಾಧ್ಯವಾಯಿತು ಎಂಬುದು ಕಥೆಯ ಆಶಯವಾಗಿದೆ.

'ಕಲ್ಲು ಕರಗುವ ಸಮಯ' ಕಥೆಯು ತಮ್ಮ ಜಾತಿಬದ್ಧ ಸಮಾಜದ ಅವನತಿಯ ಕಾರಣವನ್ನು ಶೋಧಿಸುತ್ತದೆ. ಜಾತಿಬೇಧವೇ ಕಾರಣವಾಗಿ ಮುಗ್ಧ ಪ್ರೇಮಿಗಳು ಎದುರಿಸಬೇಕಾಗಿಬಂದ ವಿರೋಧ ಹಾಗೂ ಘರ್ಷಣೆಗಳನ್ನು ಈ ಕಥೆ ನಿರೂಪಿಸುತ್ತದೆ. ಮಲ್ಲಯ್ಯನ ಒಬ್ಬಳೇ ಮಗಳು ಶ್ಯಾಮಲ ಕೆಳಜಾತಿಯ ಹುಡುಗ ತಿಪ್ಪಣ್ಣನನ್ನು ಪ್ರೇಮಿಸಿ ಮದುವೆಯಾಗಲು ನಿರ್ಧರಿಸಿದಾಗ ಈ ಸುದ್ದಿ ಗ್ರಾಮೀಣ ಸಮಾಜದಲ್ಲಿ ಎಬ್ಬಿಸಿದ ಅಲ್ಲೋಲ–ಕಲ್ಲೋಲ ಮತ್ತು ಉದ್ವೇಗಗಳನ್ನು ಪರಿಶೀಲಿಸುವ ಈ ಕಥೆಯು ಬೆಳೆಯುವ ಕ್ರಮ ಕುತೂಹಲಕಾರಿಯೂ, ಗಮನಾರ್ಹವೂ ಆಗಿದೆ. ಅಂತರ್‌ಜಾತಿ ವಿವಾಹ ಸಂದರ್ಭ ಹತ್ತಿರವಾಗುತ್ತಿದ್ದಂತೆ ಮದುವೆಗೆ ವಿರೋಧ ವ್ಯಕ್ತಪಡಿಸಿ ಹುಡುಗನನ್ನು ಕೊಲೆ ಮಾಡಲು ಹವಣಿಸಿದ ಹುಡುಗಿಯ ತಂದೆ ಮಲ್ಲಯ್ಯನ ಮದುವೆ ಖಾತ್ರಿ ಎಂದು ಗೊತ್ತಾದ ಮೇಲೆ ಖಿನ್ನವಾಗಿ ಮನೆ ಬಿಟ್ಟು ತೋಟ ಸೇರಿ, ಅಲ್ಲಿಯೇ ಜೀವಿಸತೊಡಗುವನು. ಈ ಸಮಸ್ಯೆ ಬಗೆಹರಿಸಲು ಬಂದಿದ್ದ ಮೇಲ್ಜಾತಿಯ ಸ್ವಾಮೀಜಿ ಯಾವುದೇ ನಿರ್ಣಯ ಕೊಡದೇ ಅಸಹಾಯಕನಾಗಿ ಮಠಕ್ಕೆ ಹಿಂತಿರುಗುವನು.

ಶತಮಾನಗಳ ರೂಢಮೂಲ ನಂಬಿಕೆಗಳು ಪರಿವರ್ತನೆಗೊಳ್ಳುವ ಸಂದರ್ಭದಲ್ಲಿ ಸಾಮಾಜಿಕ ತಳಮಳವುಂಟಾಗುವುದು ಸಹಜವೆಂದು ನಂಬುವ ಕಥೆಗಾರರು, ಪರಿವರ್ತನೆಗೆ ವಿರೋಧ ತೋರಿಸುವವರನ್ನು ವೈರಿಗಳೆಂದು ಭಾವಿಸದೇ ಅವರ ಮನಸ್ಸನ್ನು ಅರ್ಥ ಮಾಡಿಕೊಂಡು ಪ್ರೀತಿಯಿಂದ ಗೆಲ್ಲಲು ಪ್ರಯತ್ನಿಸಬೇಕೆಂಬ ಉದಾತ್ತ ಮೌಲ್ಯವನ್ನು ಪ್ರತಿಪಾದಿಸುತ್ತಾರೆ.

ಒಟ್ಟಾರೆ ಪಿ. ಲಂಕೇಶರು ತಮ್ಮ ಕಥೆಗಳ ಮೂಲಕ ಮನುಷ್ಯ ಬದುಕನ್ನು ಅನಾವರಣಗೊಳಿಸಿರುವುದಲ್ಲದೇ, ಬದುಕಿನ ಸಂಕೀರ್ಣತೆಯನ್ನೂ ಸಾಕ್ಷೀಕರಿಸಿದ್ದಾರೆ. ಕನ್ನಡದ ಕಥಾಲೋಕವನ್ನು ವಿಸ್ತರಿಸಿರುವ ಲಂಕೇಶರು, ಮಾನವೀಯ ಕಳಕಳಿಯುಳ್ಳ ಪ್ರಜ್ಞಾವಂತ ಸಮಾಜಚಿಂತಕ ಮತ್ತು ಕಥೆಗಾರ ಎಂಬುದು ಅವರ ಮೇಲ್ಕಂಡ ಕಥೆಗಳ ಕುರಿತ ಚಿಂತನೆಯಿಂದ ಸ್ಪಷ್ಟವಾಗುತ್ತದೆ.

ಪರಾಮರ್ಶನ ಗ್ರಂಥಗಳು :

1. ಕಲ್ಲು ಕರಗುವ ಸಮಯ, ಲೇ: ಪಿ. ಲಂಕೇಶ್, ಲಂಕೇಶ ಪ್ರಕಾಶನ, ಬೆಂಗಳೂರು, 2008
2. ವೃಷ್ಟಿ ಮತ್ತು ಸಮಷ್ಟಿ, ಕರೀಗೌಡ ಬೀಚನಹಳ್ಳಿ, ಅಜಂತ ಪ್ರಕಾಶನ, ಬೆಂಗಳೂರು, 1991
3. ಸಂಕಥನ, ಲೇ : ಕರೀಗೌಡ ಬೀಚನಹಳ್ಳಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2010
4. ಮಣ್ಣಿನ ಕಸುವು, ಲೇ: ಸುರೇಶ್ ನಾಗಲಮಡಿಕೆ, ದೀಪಂಕರ ಪ್ರಕಾಶನ, ತುಮಕೂರು, 2023
5. ನೀರಿಗೆ ಮೂಡಿದ ಆಕಾರ, ಲೇ: ಎಚ್.ಎಸ್. ರಾಘವೇಂದ್ರರಾವ್, ಪ್ರಸಾರಾಂಗ ಕವಿವಿ, ಹಂಪಿ, 2020
6. ನವ್ಯತೆ, ಲೇ: ನರಹಳ್ಳಿ ಬಾಲಸುಬ್ರಹ್ಮಣ್ಯ, ಅಭಿನವ ಪ್ರಕಾಶನ, ಬೆಂಗಳೂರು, 1990

ಸಂಕೀರ್ಣದೊಳಗೆ ಕಂಡ ಸರಳ ವ್ಯಕ್ತಿತ್ವದ ಕೃಷಿ

ಡಾ. ರವಿಶಂಕರ್ ಎ.ಕೆ
ಸಹಾಯಕ ಪ್ರಾಧ್ಯಾಪಕ
ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ
ಕೆ. ನಾರಾಯಣಪುರ, ಬೆಂಗಳೂರು 560077
ravishankar@kristujayanti.com

"

ಪ್ರೊ. ಜೆ.ಪಿ. ದೊಡಮನಿ ಅವರು ಕನ್ನಡ ಸಾಹಿತ್ಯ, ಸಂಸ್ಕೃತಿ ಕುರಿತು ಇದುವರೆಗೂ ನಡೆಸಿದ ಅಧ್ಯಯನಗಳ ವಿವಿಧ ಮಾದರಿಗಳು 'ಸಂಕೀರ್ಣ' ಕೃತಿಯಲ್ಲಿವೆ. ಸು. ಮೂವತ್ತೆರಡು ವರ್ಷಗಳ ಕಾಲದ ವಿವಿಧ ಸಂಶೋಧನ ಬರಹಗಳು ಇಲ್ಲಿವೆ. 1992ರಿಂದ 2024ರವರೆಗೂ ಅವರ ಸುದೀರ್ಘ ಅಧ್ಯಯನವು ಉಪನ್ಯಾಸ, ಸಂಶೋಧನೆ, ಲೇಖನ ಬರಹಗಳ ಸ್ವರೂಪವನ್ನು ಪಡೆದ ವಿವಿಧ ಹಂತಗಳ ಮಾದರಿಗಳು ಇಲ್ಲಿವೆ. ಈ ಎಲ್ಲಾ ಲೇಖನಗಳು ಆಯಾ ಸಂದರ್ಭಗಳಲ್ಲಿಯೇ ವಿವಿಧ ಕೃತಿಗಳಲ್ಲಿ ಪ್ರಕಟವಾಗಿವೆ. ವಿಭಿನ್ನ ಓದುಗಳ ನಡುವೆ ಹಲವು ವಿಚಾರಗಳು ನಮ್ಮ ಸಮಾಜದ ನಡುವೆ ಮಂಥನವಾಗಿರುವ ಈ ಹಿನ್ನಲೆಯಲ್ಲಿ ಎಲ್ಲಾ ಲೇಖನಗಳನ್ನು 'ಸಂಕೀರ್ಣ' ಎಂಬ ಹೆಸರಿನಡಿ ಹಿಡಿ ಓದುವಿಗೆ ದೊರಕಿಸಿಕೊಟ್ಟ ಲೇಖಕರ ಶ್ರಮ ಹಾಗೂ ಕರ್ತವ್ಯವು ಶ್ಲಾಘನೀಯ.

ಸಂಕೀರ್ಣ ಕೃತಿಯ ಲೇಖನಗಳನ್ನು ಅಧ್ಯಯನ ದೃಷ್ಟಿಯಿಂದ ವಿವಿಧ ಮಾದರಿಗಳಲ್ಲಿ ವಿಂಗಡಿಸಬಹುದು.

- ಕಾವ್ಯ, ಕೃತಿ ಅಧ್ಯಯನಗಳು
- ಆದರ್ಶ ವ್ಯಕ್ತಿಗಳ ಜೀವನಗಾಥೆ
- ಮಾರ್ಗದರ್ಶಿ ರೂಪ ಹಾಗೂ ಒಡನಾಟ
- ಸಮಾಜ ಮತ್ತು ಪರಿಸರಗಳ ಸಾಂಸ್ಕೃತಿಕ ಅಧ್ಯಯನ
- ಕಾವ್ಯ, ಕೃತಿ ಅಧ್ಯಯನಗಳು

ಹಳಗನ್ನಡ ಕಾವ್ಯದಿಂದ ಹೊಸಗನ್ನಡದ ಕೃತಿಗಳವರೆಗೆ ಆಯಾ ಕಾಲದ ಓದುವನ್ನು ವಿಭಿನ್ನವಾಗಿ ಪರಿಚಯಿಸುವ ಐದು ಲೇಖನಗಳಿವೆ. ಬಸವಣ್ಣನ ವಚನಗಳ ನಿರ್ವಚನದ ಜೊತೆಗೆ, ಹರಿಹರನ ಆದಯ್ಯನ

ರಗಳೆಯನ್ನು ವಿವರವಾಗಿ ಚರ್ಚಿಸಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಕೊಡುಗೆಯಾದ ಅನುವಾದ ಪ್ರಕ್ರಿಯೆಯನ್ನು ವಿಸ್ತೃತವಾಗಿ ಮಾಹಿತಿ ಸ್ವರೂಪದ ಹಿನ್ನಲೆಯಲ್ಲಿ ಸಂಶೋಧಿಸಿ ಸ್ನೇಹಸಿಂಧು ಕೃತಿಗಾಗಿ ರಚಿಸಿದ್ದಾರೆ. ಎಚ್. ತಿಪ್ಪೇರುದ್ರಸ್ವಾಮಿ ಅವರ 'ಅಳಿವಿನಿಂದ ಉಳಿವಿಗೆ' ಕಾದಂಬರಿಯ ಅಧ್ಯಯನ ಹಾಗೂ ಸುಮಿತ್ರಾ ಅವರ ಸೂರ್ಯ ಕವನ ಸಂಕಲನದ ವಿಮರ್ಶೆಯು ಹೊಸಬಗೆಯ ಸಂವೇದನೆಯಾಗಿದೆ.

ಹರಿಹರನ 'ಆದಯ್ಯನ ರಗಳೆ' ಒಂದು ಅಧ್ಯಯನ ಈ ಲೇಖನವು ಆದಯ್ಯನ ಚರಿತ್ರೆಯನ್ನು ಚರ್ಚಿಸುವ ಹಿನ್ನಲೆಯಲ್ಲಿ ಪ್ರಾರಂಭವಾಗಿದೆ. ಈ ಲೇಖನಕ್ಕೆ ಹರಿಹರನ ಆದಯ್ಯನ ರಗಳೆಯನ್ನು ಮತ್ತು ರಾಘವಾಂಕನ ಸೋಮನಾಥ ಚಾರಿತ್ರವನ್ನು ಆಕರಗಳಾಗಿ ಬಳಸಿ, ಆದಯ್ಯನ ಚರಿತ್ರೆಯನ್ನು ಹೊಸದಾಗಿ ಪರಿಶೀಲಿಸಲಾಗಿದೆ. ಅಂದಿನ ಜೈನರು ಮತ್ತು ಶೈವರ ನಡುವಿನ ಧಾರ್ಮಿಕ ಸಂಘರ್ಷಗಳನ್ನು ಸೂಕ್ತ ಉಲ್ಲೇಖಗಳೊಂದಿಗೆ ಚರ್ಚಿಸಲಾಗಿದೆ. ಆದಯ್ಯನೇ ಕಥಾ ನಾಯಕನಾದರೂ ವಿಮರ್ಶೆಯ ಓದುವಿನಲ್ಲಿ ಕಾಲಧರ್ಮದ ಘಟನೆಗಳು ತೌಲನಿಕ ಅಧ್ಯಯನಕ್ಕೆ ಒಳಪಡುತ್ತವೆ. ಇಲ್ಲಿ ಶರಣನೊಬ್ಬನ ಪ್ರಯಾಣವು ಸತಿ–ಪತಿ ಧರ್ಮದಲ್ಲಿ ಸೌರಾಷ್ಟ್ರದ ಸೋಮನಾಥನ ಒಲವಿಗೆ ಪಡುವ ಸಂಕಷ್ಟವು ಜೈನರ ಮುಂದೆ ಪವಾಡದಂತೆ ದರ್ಶನವಾಗುವುದು ವಿಶೇಷ. ಆದಯ್ಯನು ಶೈವಧರ್ಮದ ಪರವಾಗಿ ನಡೆಸಿದ ಹಲವು ಘಟನೆಗಳನ್ನು ಇಲ್ಲಿ ಧರ್ಮಾತೀತವಾಗಿ ವಿಚಾರ ವಿಶ್ಲೇಷಣೆ ಮಾಡಲಾಗಿದೆ.

"ಬಸವಣ್ಣ, ಅಲ್ಲಮಪ್ರಭು ಮುಂತಾದ ಶರಣರ ವಚನಗಳಲ್ಲಿ ಅನ್ಯಮತಗಳ ನಿಂದನೆ ಬರುತ್ತದಾದರೂ ಆದಯ್ಯನ ಹಾಗೆ ಜಿನಪ್ರತಿಮೆಯ ನಾಶಕ್ಕಾಗಿ ಅವರು ಹಂಬಲಿಸಿದವರಲ್ಲ. ಆದಯ್ಯನ ಜೀವನ ಚರಿತ್ರೆಯಲ್ಲಿ ಎರಡು ಧರ್ಮಗಳ ಕದನವೇ ಮುಖ್ಯವಾಗಿರುವುದರಿಂದ ಈ ವಸ್ತು ಹೆಚ್ಚಿನ ಬರಹಗಾರರನ್ನು ತನ್ನತ್ತ ಆಕರ್ಷಿಸಿಕೊಂಡಿಲ್ಲ"(ಹರಿಹರನ 'ಆದಯ್ಯನ ರಗಳೆ' ಒಂದು ಅಧ್ಯಯನ 18)

ವಚನ ಸಾಹಿತ್ಯದಲ್ಲಿ ಇನ್ನೊಂದು ಧರ್ಮವನ್ನು ಕಡೆಗಣಿಸುತ್ತಾ ಒಂದು ಧರ್ಮವನ್ನು ಮುಕ್ತವಾಗಿ ಬೆಳಸಿದ ಶರಣ ಚಿಂತನೆಯು ಕಂಡುಬರುವುದಿಲ್ಲ. ಆದರೆ, ಆದಯ್ಯನ ಚರಿತ್ರೆಯಲ್ಲಿ ಇಂತಹ ಹಲವು ಉಲ್ಲೇಖಗಳ ಸುದೀರ್ಘ ಅಧ್ಯಯನವನ್ನು ಇಲ್ಲಿ ಕಾಣಬಹುದು. ಧಾರವಾಡದ ಆಕಾಶವಾಣಿಯಲ್ಲಿ 'ಚಿಂತನ' ಕಾರ್ಯಕ್ರಮಕ್ಕಾಗಿ ನಿರೂಪಿಸಿದ ಉಂಬ ಬಟ್ಟಲು ಎಂಬ ಲೇಖನವು ಎರಡು ವಚನಗಳ ಅರ್ಥಪೂರ್ಣ ನಿರ್ವಚನವಾಗಿದೆ. ಇದೇ ಮಾದರಿಯಲ್ಲಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಪುನಶ್ಚೇತನ ಶಿಬಿರದಲ್ಲಿ ಮಂಡಿಸಿದ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರ ಅಳಿವಿನಿಂದ ಉಳಿವಿಗೆ – ಕಾದಂಬರಿ ಒಂದು ಅಧ್ಯಯನ ಲೇಖನವು ಅಳಿವಿನಿಂದ ಉಳಿವಿಗೆ ಕಾದಂಬರಿಯನ್ನು ವಿಸ್ತಾರವಾಗಿ ವಿಮರ್ಶೆಗೆ ಒಳಪಡಿಸಿದೆ. ಸಂಶೋಧಕರು ಯಾವ ದೃಷ್ಟಿಯಿಂದ ಒಂದು ಕಾದಂಬರಿಯನ್ನು ಪ್ರವೇಶಮಾಡಬೇಕು. ಕಾದಂಬರಿ ಎಂದರೇನು? ಅದರ ವಿಭಿನ್ನ ವ್ಯಾಖ್ಯಾನಗಳೇನು? ಎಂದು ವಿವರಿಸುತ್ತಲೇ ಕಾದಂಬರಿಯನ್ನು ಪ್ರವೇಶಿಸುತ್ತಾರೆ. 12ನೇ ಶತಮಾನದ ಶರಣರ ದೃಷ್ಟಿಕೋನಗಳನ್ನು ಕಾದಂಬರಿಕಾರರು ಕಥನ ಮಾದರಿಯಲ್ಲಿ ನಿರ್ವಚಿಸುವ ಕ್ರಮವನ್ನು ಪರಿಪೂರ್ಣವಾಗಿ ಬಿಡಿಸಿದ್ದಾರೆ. ಇದೊಂದು ರೀತಿಯಲ್ಲಿ ಮರುನಿರೂಪಣೆಯ ಕ್ರಮದಂತೆ ಇಡೀ ಕಾದಂಬರಿಯನ್ನು ಅವಲೋಕಿಸಿದ್ದಾರೆ. ಕಲ್ಯಾಣವು ಅಳಿವು ಎಂಬ ಪದದ ಮೂಲಕ ಉಳಿವಿನ ಕ್ರಾಂತಿಯ ಕಡೆ ಸಾಗುವ ದೃಷ್ಟಿಕೋನಗಳು ಇಲ್ಲಿವೆ.

ಸುಮಿತ್ರಾ ಅವರ ಸೂರ್ಯ ಕವನ ಸಂಕಲನವನ್ನು 'ನೇರ'ವಾಗಿ ಯಾವುದೇ ಪೀಠಿಕೆ ಇಲ್ಲದೆ ವಿಮರ್ಶೆಗೆ ಅಳವಡಿಸಿದ್ದಾರೆ. ಜೀವನಪ್ರೀತಿಯನ್ನು ಈ ಕವಿತೆಗಳು ಪ್ರತಿಕ್ಷಣ ಹಂಬಲಿಸುವ ಬಗೆಯನ್ನು ಕವಿಯನ್ನು ಓದುವಿನಿಂದ ಆಚೆ ಇಟ್ಟು ಸಹೃದಯ ಚಿಂತನೆಗೆ ಒಳಪಡಿಸುವ ಕ್ರಮವು ವಿಭಿನ್ನವಾಗಿದೆ. ಪ್ರೇಮ ಕವನಗಳನ್ನೇ ಒಳಗೊಂಡ ಈ ಕೃತಿಯು ಪ್ರೇಮ, ವಿರಹ, ಸಮಾಜದ ವಿರುದ್ಧದ ಪ್ರತಿಭಟನೆಯ ಜೊತೆಗೆ ನೀತಿಯ ಬಾಳ್ವೆಯನ್ನು ಹೊಸಮಾದರಿಯಲ್ಲಿ ನಿರೂಪಿಸುವುದನ್ನು ನಾವಿಲ್ಲಿ ಕಾಣಬಹುದು.

ಆದರ್ಶ ವ್ಯಕ್ತಿಗಳ ಜೀವನಗಾಥೆ

ಗುಂಜಳ್ಳಿ ಷಡಕ್ಷರಕವಿ ಎಂಬ ಲೇಖನವು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅಜ್ಞಾತವಾಗಿ ಉಳಿದುಹೋದ ಕವಿಗಳನ್ನು ಸರಿಯಾಗಿ ಪರಿಚಯಿಸುವ ಕೆಲಸಮಾಡಿದೆ. ಗುಂಜಳ್ಳಿ ಷಡಕ್ಷರಕವಿಯು ಒಟ್ಟು 13 ಕೃತಿಗಳನ್ನು ವಿವಿಧ ಛಂದೋಬಂಧಗಳಲ್ಲಿ ನಿರ್ಮಿಸಿದ ಶ್ರೇಷ್ಠ ಸಾಧಕ. ಈತನ ಜೀವನ ಚರಿತ್ರೆಯನ್ನು ಲಭ್ಯ ಮಾಹಿತಿಗಳೊಂದಿಗೆ ಪರಿಶೀಲಿಸುವ ಜೊತೆಯಲ್ಲಿ ಮುಪ್ಪಿನ ಷಡಕ್ಷರಿ, ಎಳಂದೂರು ಷಡಕ್ಷರಿ ಅವರಂತೆ ಅರ್ಥಪೂರ್ಣವಾದ ಸೇವೆ ಸಲ್ಲಿಸಿದ ಸಮ ಸಾಲಿನ ಕವಿಯಾಗಿ ಪರಿಚಯಿಸಿದ್ದಾರೆ. ಅಮರೇಶ್ವರ ಶತಕದ ಬರಿ ನಾಲ್ಕು ಶತಕ ಪದ್ಯಗಳನ್ನು ಮೆಚ್ಚಿ ಅಭಿನವ ಕಾಳಿದಾಸವೆಂಬ ಬಿರುದು ಹಾಗೂ ಬಂಗಾರದ ಗಂಟೆಯನ್ನು ಪಡೆದ ಸಾಧನೆ ಅವಿಸ್ಮರಣೀಯ.

ಸಂಕ್ಷಿಪ್ತವಾದ ಜೀವನಚರಿತ್ರೆಯನ್ನು ವಿಮರ್ಶಾತ್ಮಕವಾಗಿ ಗಮನಿಸಲು ಜೆ.ಪಿ ದೊಡಮನಿ ಅವರ ಲೇಖನಗಳು ಅರ್ಥಪೂರ್ಣ ಮಾದರಿಯಾಗುತ್ತವೆ ಎನ್ನಬಹುದು. ಚಿದಾನಂದಾವಧೂತರ ಕುರಿತು ಇಲ್ಲಿನ ಲೇಖನವು ಸರಳವಾದ ನಿರೂಪಣೆಯೊಂದಿಗೆ ವ್ಯಕ್ತಿಚಿತ್ರವನ್ನು

ಸಾಹಿತ್ಯಾತ್ಮಕವಾಗಿ ಪರಿಚಯಿಸಿದ್ದಾರೆ. ಭಾಮಿನಿ ಷಟ್ಪದಿಯಲ್ಲಿ ರಚನೆಯಾದ ಅವರ ಕೃತಿಗಳು ಅದ್ವೈತ ವೇದಾಂತವನ್ನು ಪ್ರತಿಪಾದಿಸುತ್ತವೆ. 'ಜ್ಞಾನಸಿಂಧು' ಕೃತಿಯ ಶ್ರೇಷ್ಠತೆಯ ಜೊತೆಗೆ, ದೇವಿಮಹಾತ್ಮೆ ಎಂಬ ಕೃತಿಯ ಭಾಷಾಂತರ ಸ್ವರೂಪವನ್ನು ಲೇಖಕರು ಸೂಕ್ಷ್ಮವಾಗಿ ಪರಿಶೀಲಿಸಿದ್ದಾರೆ. ಚಿದಾನಂದ ಅವಧೂತರ ಪಂಚೀಕರಣ, ತತ್ವಚಿಂತಾಮಣಿ ಮೊದಲಾದ ಗ್ರಂಥಗಳನ್ನೂ ಇಲ್ಲಿ ನೆನೆದಿದ್ದಾರೆ. ಇವು ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ಲೇಖನಗಳಾದರೂ ಲೇಖನಗಳ ಜೊತೆಗೆ ವಿಷಯದ ಸಂಕ್ಷಿಪ್ತತೆಯನ್ನು ಕಾಯ್ದುಕೊಂಡಿದ್ದಾರೆ.

ಲೇಖಕ ಜೆ.ಪಿ.ದೊಡಮನಿ ಅವರು ಮಹಾಮಾನವರಾಗಿ ಜ್ಯೋತಿರಾವ ಫುಲೆ ಹಾಗೂ ಸಾವಿತ್ರಿಬಾಯಿ ಫುಲೆ ಅವರನ್ನು ವಿಶೇಷವಾಗಿ ಅಧ್ಯಯನಮಾಡಿದ್ದಾರೆ. ಸಾವಿತ್ರಿಬಾಯಿ ಫುಲೆ ಅವರ ಕುರಿತು ಐದು ಲೇಖನಗಳಲ್ಲಿ ವಿಸ್ತಾರವಾದ ಚಿಂತನೆಗಳನ್ನು ವಿವಿಧ ಸಂದರ್ಭಗಳಲ್ಲಿ ಚರ್ಚಿಸಿದ್ದಾರೆ. ಸಾಮಾಜಿಕ ಪ್ರತಿರೋಧಗಳನ್ನು ಶಿಕ್ಷಣದ ಮೂಲಕ ಎದುರಿಸಿದ ಬಗೆಗಳನ್ನು ಸಾವಿತ್ರಿಬಾಯಿ ಫುಲೆ ಅವರ ವ್ಯಕ್ತಿತ್ವ ಹಾಗೂ ಜ್ಯೋತಿ ಬಾ ಫುಲೆ ಅವರ ದಿಟ್ಟ ನಿರ್ಧಾರಗಳು ಅಂದಿನ ಸಮಾಜದ ಬದಲಾವಣೆಗೆ ಕಾರಣವಾದ ಅಂಶಗಳನ್ನು ಅಧ್ಯಯನ ಮಾಡಿದ್ದಾರೆ. ಭಾರತೀಯ ಸಂಸ್ಕೃತಿಯಲ್ಲಿ ತಳಮೂಲ ಜಾಗೃತಿಯಾಗಿ ಅಕ್ಷರಕ್ರಾಂತಿಯನ್ನು ಸೃಷ್ಟಿಸಿದ ಮೊದಲ ಶ್ರೇಷ್ಠ ಸ್ಥಾನ ಸಾವಿತ್ರಿಬಾಯಿ ಫುಲೆ ಅವರದು. ಬುದ್ಧ, ಮಹಾವೀರ, ಸಾಕ್ರಟೀಸ್, ಪ್ಲೇಟೋ, ಬಸವಣ್ಣ, ಶಾಹೂ ಮಹಾರಾಜ, ಶ್ರೀ ನಾರಾಯಣ ಗುರು, ಪೆರಿಯಾರ್ ಈ ಮೊದಲಾದವರ ಸಾಲಿಗೆ ಜ್ಯೋತಿರಾವ ಫುಲೆ ಹಾಗೂ ಸಾವಿತ್ರಿಬಾಯಿ ಫುಲೆ ಈ ಇಬ್ಬರೂ ಸೇರುವ ಬಗೆಗಳನ್ನು ವಿವರವಾಗಿ ನಿರೂಪಿಸಿದ್ದಾರೆ. ತಥಾಗತನಿಂದ ಪ್ರಾರಂಭಿಸಿ, ವರ್ತಮಾನದ ತನಕ ಭಾರತೀಯ ಸಂಸ್ಕೃತಿಗಳ ಜಾತಿ ವಿರೋಧಗಳು, ಶೋಷಣೆಗಳು ಸಾಕಷ್ಟು ಜಾತಿಗಳ ಸಮುದಾಯಗಳನ್ನು ಅಕ್ಷರದಿಂದ ದೂರತಳ್ಳಿದ 'ನಿರಾಕರಣ' ಬೌದ್ಧಿಕತೆಯನ್ನು ಪ್ರಶ್ನಿಸಿದ್ದಾರೆ.

ನಮ್ಮ ಸಮಾಜದ ಓದುಗಳು ಈ ಆದರ್ಶದ ವ್ಯಕ್ತಿತ್ವಗಳನ್ನು ಆಚರಣೆಯ ಮೂಲಕ, ಬಿರುದುಗಳನ್ನು ನೀಡಿ ಹೊಗಳುವ ಮೂಲಕ ಅವರ ಕಾರ್ಯಸಾಧನೆಗಳನ್ನು ಬದಿಗೆ ಸರಿಸುವ ವರ್ತಮಾನದ ಪ್ರಸಿದ್ಧಿ ನೆಲೆಗಳನ್ನು ಪ್ರಶ್ನಿಸಿದ್ದಾರೆ. "ಮಹಾತ್ಮಾ ಜ್ಯೋತಿರಾವ ಫುಲೆ ಹಾಗೂ ಸಾವಿತ್ರಿಬಾಯಿ ಫುಲೆಯವರ ಹೆಸರುಗಳಿಂದ ಚಳುವಳಿಯನ್ನು ಮುಂದುವರಿಸದೆ, ತಿಳಿದುಕೊಳ್ಳದೆ ಕೇವಲ ಜಾತಿ ಬಂಧುಗಳನ್ನು ಸಂಘಟಿಸಿಕೊಂಡು, ರಾಜಕೀಯ ಮತಗಳೆಂಬ ಲಾಭವನ್ನು ಪಡೆದುಕೊಳ್ಳುವವರಿಂದ ಹಾಗೂ ಕೇವಲ ಒಂದು ಜಾತಿಯ ವಿಭೂತಿ ಪುರುಷರನ್ನಾಗಿ ಮಾಡಿಕೊಳ್ಳುವವರಿಂದ ಈ ದಂಪತಿಗಳ ಆಕಾಶದೆತ್ತರ ವ್ಯಕ್ತಿತ್ವವನ್ನು ಪ್ರಜ್ಞಾವಂತ ಭಾರತೀಯರು ಉಳಿಸಿಕೊಳ್ಳಬೇಕಾದ ಜವಾಬ್ದಾರಿಯನ್ನು ಹೊರಬೇಕಿದೆ. (ಲೇಖನ: ಮಹಾತ್ಮಾ ಜ್ಯೋತಿರಾವ ಫುಲೆ, ಪು.ಸಂ 79) "ಮಹಾತ್ಮಾ ಜ್ಯೋತಿರಾವ ಫುಲೆ ಹಾಗೂ ಸಾವಿತ್ರಿಬಾಯಿ ಫುಲೆ ಲೇಖನಗಳು ಶೈಕ್ಷಣಿಕ ಪಠ್ಯಗಳಾಗಿ ಹಲವು ನಿರ್ವಚನಗಳಿಗೆ ಕಾರಣವಾಗಿರುವುದು ಅಭಿನಂದನೀಯ. ಸಾವಿತ್ರಿಬಾಯಿ ಫುಲೆ ಅವರು ಶಿಕ್ಷಣ ನೀಡುವ ಜೊತೆಗೆ ಮೌಢ್ಯಗಳ ವಿರುದ್ಧ ಹೋರಾಡಿದ ಬಗೆ, ಪ್ಲೇಗ್ ನಂತಹ ರೋಗವು ಹಬ್ಬಿದಾಗ ಆರೈಕೆಯಲ್ಲಿ ತೊಡಗಿದ ಚಿಂತನೆಗಳನ್ನು ಕಥನ ಮಾದರಿಯಲ್ಲಿ ನಿರೂಪಿಸಿದ್ದಾರೆ.

ಮಾರ್ಗದರ್ಶಿ ರೂಪ ಹಾಗೂ ಒಡನಾಟ

ಈ ಸ್ವರೂಪದಲ್ಲಿ ಸಂಕೀರ್ಣ ಕೃತಿಯ ಮೂರು ಲೇಖನಗಳನ್ನು ಗಮನಿಸಬಹುದು. ಡಾ. ಎಂ.ಎಂ. ಕಲಬುರ್ಗಿಯವರೊಂದಿಗೆ ನಾನು, ಮಾರ್ಗದರ್ಶಕರಾಗಿ ಡಾ. ಎಸ್. ಪಿ. ಪಾಟೀಲ, ಶಿವಪುತ್ರ ಯಾದವಾಡರ ವ್ಯಕ್ತಿತ್ವ ಇವು ಬೇರೆ ಬೇರೆ ಉದ್ದೇಶಗಳಿಂದ ರಚನೆಯಾದರೂ ನೆನಪುಗಳ ಸಂಕಲನದಂತೆ ಮೂಡಿಬಂದಿವೆ. ಕಲಬುರ್ಗಿ ಅವರ ಒಡನಾಟವು ಅದೊಂದು ಮಾತನಾಡುವ ವಿಶ್ವಕೋಶದ ವಿದ್ವಾಂಸ ಕೋಶದಂತೆ. ಸಾಕಷ್ಟು ಬರಹಗಳು ಇದೇ ಮಾದರಿಯಲ್ಲಿ ಅವರೊಂದಿಗೆ ಜ್ಞಾನದ ಸತ್ಯ ಶೋಧವನ್ನು ಒಡನಾಡಿದ ಹಲವು ಬಗೆಗಳನ್ನು ಹಂಚಿಕೊಡಿದ್ದಾರೆ. ಅವರ ಗ್ರಹಿಕೆಗಳು, ಚಿಂತನೆಗಳು ಹಾಗೂ ಸ್ಪಷ್ಟತೆ ಇವುಗಳನ್ನು ಒಡನಾಟದ ವಿಶೇಷತೆಯಲ್ಲಿ ಅನುಭವಿಸಿದ ಆನಂದವನ್ನು ಹಂಚಿಕೊಂಡಂತೆ ಇಲ್ಲಿ ದಾಖಲಿಸಿದ್ದಾರೆ.

ಸಂಶೋಧನ ಮಾರ್ಗದರ್ಶಕರಾದ ಡಾ. ಎಸ್.ಪಿ.ಪಾಟೀಲ ಅವರ ಒಡನಾಟವು 'ಒಬ್ಬ ಸಂಶೋಧನ ಆಸಕ್ತರು ವಿವಿಧ ಹಂತಗಳಲ್ಲಿ ಮಾರ್ಗದರ್ಶಕರೊಂದಿಗೆ ಸಾಗುವ ವಿಷಯ–ವಿದ್ವತ್ತಿನ ಅನುಭವ, ಅಧ್ಯಯನ, ಮಾರ್ಗದರ್ಶನ ಮೊದಲಾದ ಸ್ವರೂಪಗಳನ್ನು' ಇಲ್ಲಿ ವಿವರವಾಗಿ ಚರ್ಚಿಸಿದ್ದಾರೆ. ಶಿವಪುತ್ರ ಯಾದವಾಡರ ವ್ಯಕ್ತಿತ್ವವು ಸಮಾಜಮುಖಿಯಾದುದು. ಅಥಣಿ ಭಾಗದಲ್ಲಿ ಮಾರ್ಗದರ್ಶಿ ಎಂಬಂತೆ ಸಮಾಜ–ಸಾಹಿತ್ಯ ಕ್ಷೇತ್ರದ ಹಿರಿಯ ಬಹುಮುಖ ಪ್ರತಿಭೆಯನ್ನು ಪರಿಚಯಾತ್ಮಕವಾಗಿ 'ಶಿವಪ್ರಭೆ' ಕೃತಿಗಾಗಿ ಅಭಿನಂದನೆ ಸಲ್ಲಿಸಿದ್ದಾರೆ.

ಅಥಣಿ ಪರಿಸರದ ವಾಲ್ಮೀಕಿ ಸಮುದಾಯದ ಕಲಾವಿದರು ಎಂಬ ಲೇಖನವು ಸ್ಥಳೀಯವಾಗಿ ಹುಟ್ಟುವ ಗ್ರಾಮೀಣ ಕಲೆಗಳನ್ನು ದಾಖಲಿಸಬೇಕಾದ ಸ್ವರೂಪವು ಇಲ್ಲಿದೆ. ಕಲೆ ಎಂದರೇನು, ಕಲಾವಿದನ ಕರ್ತವ್ಯಗಳೇನು, ಗ್ರಾಮೀಣ ಸಮುದಾಯಗಳ ನಡುವಿನ ಜಾತಿ ಸಂಸ್ಕೃತಿಯು ಹೇಗಿರುತ್ತದೆ, ಕಲಾವಿದರ ಆಯ್ಕೆಯ ಕಥೆ, ಕುಣಿತಗಳು ನಿರೂಪಣೆಗೊಳ್ಳುವ ಬಗೆಗಳನ್ನು ಸರಳವಾಗಿ ಚರ್ಚಿಸಿದ್ದಾರೆ. ನಾಟಕ, ಬಯಲಾಟ, ಕುದುರೆ ಕುಣಿತ, ಹಂತಿ ಪದ, ಸೋಬಾನೆ ಹಾಡುಗಳನ್ನು ಬದುಕಿನ ಭಾಗವಾಗಿ ಸ್ವೀಕರಿಸುವ ಕ್ರಮಗಳನ್ನು ಇಲ್ಲಿ ದಾಖಲಿಸಿದ್ದಾರೆ. ಜಾನಪದವು ಗ್ರಾಮೀಣ ಜನರ ಜೀವಾಳವಾಗಿ ಉಳಿಯುವ ಭಾವನೈಪುಣ್ಯತೆಯನ್ನು ಇಂತಹ ಬರಹಗಳ ಮೂಲಕ ತಿಳಿಯಬಹುದು.

ಜಾನಪದ ಸಾಹಿತ್ಯದಲ್ಲಿ ತಾಯಿ ಮತ್ತು ಮಗುವಿನ ಸಂಬಂಧ ಎಂಬ ಲೇಖನವು ಆಕಾಶವಾಣಿಯ ಉದ್ದೇಶದಲ್ಲಿ ರಚನೆಯಾದರೂ ಜನಪದ ಹಾಡುಗಳನ್ನು ಸಮಗ್ರವಾಗಿ ಗ್ರಹಿಸಿ, ತಾಯಿ ಮತ್ತು ಮಗುವಿನ ಸಂಬಂಧದ ಹಾಡುಗಳನ್ನೇ ಇಲ್ಲಿ ವಿಶ್ಲೇಷಿಸಿದ್ದಾರೆ. ಈ ಲೇಖನದಲ್ಲಿ ಜೈನ ಧರ್ಮದ ಹಾಡುಗಳನ್ನು ಆಯಾ ಧರ್ಮದ ಆಚರಣೆಯಾಗಿಯೂ ವಿಭಿನ್ನವಾಗುವ ಕ್ರಮವನ್ನು ಗ್ರಹಿಸಬಹುದಿತ್ತು. ಆದರೆ, ಲೇಖಕರು ಪರಿಕಲ್ಪನೆಗಳಿಗಷ್ಟೆ ತಮ್ಮ ಅಧ್ಯಯನ ಮೀಸಲಾಗಿಸಿರುವ ಉದ್ದೇಶದಲ್ಲಿ ಲೇಖನದ ವಿಸ್ತಾರ ನೋಟವು ಅನಗತ್ಯವೆನ್ನಬಹುದು. ಆದರೆ, ಇಂತಹ ಸಮಗ್ರೀಯ ಲೇಖನವೊಂದು ನಮ್ಮ ಹಾಮಾನಾಯಕ, ಜೀಶಂಪ ಅವರ ಲೇಖನ ಮಾದರಿಗಳನ್ನು ಮುಂದುವರೆಸುವ ಬಗೆಯಾಗಿ ಗ್ರಹಿಸಬಹುದು.

ಜಾಗೃತ ಸಮಾಜ, ಡಾ. ಬಾಬಾಸಾಹೇಬ ಅಂಬೇಡ್ಕರ್ ಈ ಲೇಖನಗಳು ಆಕಾಶವಾಣಿ 'ಚಿಂತನ' ಕಾರ್ಯಕ್ರಮಕ್ಕಾಗಿ ರಚನೆಯಾದ ಕಾರಣ ಮಾರ್ಗದರ್ಶಿ ಸಮಾಜಮುಖಿ ಆಲೋಚನೆಗಳಾಗಿ ಇಲ್ಲಿ ನಿರೂಪಿಸಿದ್ದಾರೆ.

ಇಡೀ ಕೃತಿಯಲ್ಲಿ ಪಠ್ಯ ದಾಖಲೆಯಾಗಿ, ಅಧ್ಯಯನ ವಿಷಯ ಸಂಗ್ರಹವಾಗಿ ಸಾಕಷ್ಟು ಶ್ರಮದ ಫಲವಾಗಿ ನಿರೂಪಿತವಾದ ಲೇಖನವೆಂದರೆ 'ಕನ್ನಡದಲ್ಲಿ ಬಂದ ಅನುವಾದ ನಾಟಕಗಳು'. ಕನ್ನಡದಲ್ಲಿ ಅನುವಾದ ಕಾರ್ಯಗಳ ಉಗಮ, ಪ್ರಾರಂಭದಿಂದ ಕಳೆದ ಶತಮಾನದವರೆಗೂ ನಡೆದ ಭಾಷಿಕವಾದ ಅನುವಾದ ಪ್ರಕ್ರಿಯೆಗಳನ್ನು ಇಲ್ಲಿ ವಿಶ್ಲೇಷಿಸಿದ್ದಾರೆ. ಸಂಸ್ಕೃತ ನಾಟಕಗಳು, ಮರಾಠಿ ನಾಟಕಗಳು, ತೆಲುಗು ನಾಟಕಗಳು, ಮಲೆಯಾಳಂ, ತಮಿಳು, ಕೊಂಕಣಿ, ಹಿಂದಿ, ಇಂಗ್ಲೀಷ್ ಈ ಎಲ್ಲಾ ಭಾಷೆಗಳ ಮೂಲಕ ಕನ್ನಡ ಪ್ರವೇಶಿಸಿದ ನಾಟಕಗಳ ಚರಿತ್ರೆ ಇಲ್ಲಿದೆ.

ಪ್ರೊ. ಜೆ.ಪಿ ದೊಡಮನಿಯವರು ಹಿರಿಯ ಸಹೃದಯ ಓದುಗರು. ತಮ್ಮ ಓದನ್ನು ಕಾರ್ಯ ಕಾರಣವೆಂಬಂತೆ ಹಲವು ಕೃತಿಗಳಲ್ಲಿ ತಮ್ಮ ಲೇಖನ ಚಿಂತನೆಗಳನ್ನು ನಿರೂಪಿಸಿದ್ದಾರೆ. ಆಕಾಶವಾಣಿಯಲ್ಲಿ ನುಡಿದಿದ್ದಾರೆ. ಇವರ ಚಿಂತನೆಗಳು ಕರ್ನಾಟಕದಲ್ಲಿ ಪೂರ್ಣವಾಗಿ ವಿಸ್ತರಣೆಯಾಗಬೇಕಿತ್ತು. ಉತ್ತರ ಕರ್ನಾಟಕದಲ್ಲಿ ಈಗಾಗಲೇ ಪರಿಚಿತರಾದ ಇವರು, ದಕ್ಷಿಣ ಕರ್ನಾಟಕ, ಕರಾವಳಿ ಹೀಗೆ ಎಲ್ಲಾ ಕಡೆಯೂ ಓದುಗರಿಗೆ ಲಭ್ಯವಾಗಬೇಕಿದೆ.

ಕನ್ನಡದ ಒಬ್ಬ ವಿದ್ವಾಂಸರಾಗಿ ಒಂದು ಪಠ್ಯ, ಕೃತಿ, ಕಲೆ, ವ್ಯಕ್ತಿತ್ವಗಳನ್ನು ಸಹೃದಯ ಮಾದರಿಯಲ್ಲಿ ನೋಡುವ ಚಿಕಿತ್ಸಕ ನೋಟ ಇವರದು. ಸಂಕೀರ್ಣದಂತಹ ಕೃತಿ ಮೂಡಲು 1995ರಿಂದ ಇಲ್ಲಿಯ ತನಕ ಗಂಭೀರವಾಗಿ ಕಾದಿದೆ. ಅದು ಅಲ್ಲಲ್ಲೆ ಕಾರ್ಯಕಾರಣದಲ್ಲಿ ಅಭಿವ್ಯಕ್ತಗೊಂಡಿದ್ದರೂ, ಒಟ್ಟಿಗೆ ಒಡಮೂಡಿರುವ ಈ ಅರ್ಥಪೂರ್ಣ ಕಾರ್ಯ ವಿಶೇಷವಾಗಿದೆ.

ಅಧ್ಯಯನ ಕೃತಿ:

■ ಸಂಕೀರ್ಣ., ಜೆ.ಪಿ ದೊಡಮನಿ., ಸುಶಿಲ್ ಪ್ರಕಾಶನ, ತೇರದಾಳ, 2024

“

ಯುರೋಪಿನ ಫ್ಯಾಂಟಸಿ ಕತೆಗಳಲ್ಲಿನ ಸಂರಚನೆಗಳು: Hansel and Gartel ಕತೆಯ ಓದು

ಡಾ. ಸರಸ್ವತಿ ಕೆ.ಬಿ
ಸಹ–ಪ್ರಾಧ್ಯಾಪಕರು, ಆಂಗ್ಲ ವಿಭಾಗ
ಬಿ.ಎಂ.ಎಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಹುಳಿಯಾರು

ಸಂಸ್ಕೃತಿ ಅಧ್ಯಯನಗಳ ಹಾದಿಯಲ್ಲಿ ಸಿಗುವ ಅನಿರೀಕ್ಷಿತ ಹೊಳಹುಗಳು ಸಂಭ್ರಮ ತರುತ್ತವೆ. ಆ ಬೆಳಕಲ್ಲಿ ಕಾಣುವ ಸತ್ಯಗಳು ಚಂದವಾಗಿರುತ್ತವೆ. ಆದರೆ ಕೆಲವೊಂದು ಸಾಹಿತ್ಯ ಕಥನಗಳ ಸಂರಚನೆಯ ಆಳದಲ್ಲಿ ಅಡಗಿರುವ ಭೀಕರತೆಯು ಆ ಕಾಲಘಟ್ಟದ ಇತಿಹಾಸ ಮತ್ತು ಸಮಾಜದ ನಿಷ್ಠುರ ಸತ್ಯಗಳನ್ನು ಪ್ರತಿಫಲಿಸುತ್ತಿರುತ್ತವೆ.

ಸಾಹಿತ್ಯ ಕಥನಗಳು ಸಮಾಜದಲ್ಲಿ ಪ್ರಚಲಿತವಾಗಿರುವ ಕೆಲವು ಆಚರಣೆಗಳನ್ನು ಸಂಕೇತ ರೂಪದಲ್ಲಿ ತಮ್ಮೊಳಗೆ ಅಡಗಿಸಿಟ್ಟಿರುತ್ತವೆ. ಇದನ್ನು ಸ್ಟಿವಾರ್ಟ ಹಾಲ್ ಕೋಡಿಂಗ್ ಎಂದು ಕರೆಯುತ್ತಾನೆ. ಆಯಾ ಕಾಲದ ಐತಿಹಾಸಿಕ ಸತ್ಯಗಳು ಬೀಜರೂಪದಲ್ಲಿ ನಂತರದ ಪೀಳಿಗೆಗೆ ದಾಟಿಸಲ್ಪಟ್ಟಿರುತ್ತವೆ. ಎಷ್ಟೋ ಶತಮಾನಗಳ ನಂತರ ಓದುಗನಿಗೆ ಆ ಸತ್ಯಗಳು ಮಣ್ಣಿನಲ್ಲಿ ಮುಚ್ಚಿಹೋದ ವಜ್ರದಂತೆ ಕಾಣಿಸಲಾರವು. ಓದುಗ ಈ ಸಂಕೇತಗಳನ್ನು ಡೀ–ಕೋಡ್ ಮಾಡಬೇಕಾಗುತ್ತದೆ. ಆದರೆ ಕೆಲವೊಂದು ಐಡಿಯಾಲಜಿಗಳು ತಮ್ಮ ಅಧಿಕಾರ ಸ್ಥಾಪಿಸಲು ಡೀ–ಕೋಡಿಂಗ್ ಪ್ರಕ್ರಿಯೆಯನ್ನು ನಿಷ್ಕ್ರೀಯಗೊಳಿಸುತ್ತವೆ. ಎಚ್ಚರದ ಓದುಗ ಈ ಹೊತ್ತಿನ ಅಗತ್ಯ.

ಅದು ಕ್ರಿ ಶ ೧೩೦೦ರ ಯುರೋಪ್. ಕೃಷಿ ಕ್ರಾಂತಿಯ ಸೊಬಗನ್ನು, ಅದರ ಸಮೃದ್ಧಿಯನ್ನು ಅನುಭವಿಸುತ್ತಾ ಖುಷಿಯಾಗಿದ್ದ ಕಾಲ. ಭೂಮಿಯ ಹುಲುಸಾದ ಫಸಲಿನ ಧೈರ್ಯದಲ್ಲಿ ತಾಯಿತಂದೆಯರು ಬಹಳಷ್ಟು ಮಕ್ಕಳು ಮರಿ ಮಾಡಿಕೊಂಡು ತಿಂದುಂಡು ಸುಖವಾಗಿದ್ದ ಕಾಲವದು.

ಸುಮಾರು ೧೩೧೫ರ ಹೊತ್ತಿಗೆ ಮಧ್ಯ ಮತ್ತು ಉತ್ತರ ಯೂರೋಪನ್ನು ಭೀಕರ ಬರಗಾಲ ಕಾಡಿತ್ತು. ಜೊತೆಗೆ, ಶೀತಗಾಳಿ, ಅನಿರೀಕ್ಷಿತ ಹವಾಮಾನ ವೈಪರೀತ್ಯಗಳು, ಅಸಹಜವಾದ ವಿಪರೀತ ಮಳೆಯ ಕಾರಣದಿಂದ ಸಾರ್ವತ್ರಿಕ ಬೆಳೆನಾಶ ಹಾಗು ಬೆಲೆ ಏರಿಕೆಯಿಂದ ಯುರೋಪ್ ತತ್ತರಿಸಿತು. ತಮ್ಮ ಸರ್ವ ಸುಖವನ್ನೂ ತೇಲಿಬಿಟ್ಟು, ಅಸಹಾಯಕತೆಯಲ್ಲಿ ಕಂಪಿಸಿದ ಜನತೆ ಕಂಡರಿಯದ ಸಾಂಸ್ಕೃತಿಕ ಪಲ್ಲಟಗಳಿಗೆ ಸಾಕ್ಷಿಯಾದರು.

ಬಡತನದ ಬೇಗೆಯಲ್ಲಿ ಅಸಂಖ್ಯ ಮಕ್ಕಳ ಲಾಲನೆ ಪಾಲನೆಯ ಹೊರೆಯನ್ನು ಹೊರಲಾರದೆ ಪೋಷಕರು ದಿಕ್ಕೆಟ್ಟರು. ಕನಿಷ್ಠ ಆಹಾರ ಧಾನ್ಯಗಳನ್ನೂ ಸಹ ಕೊಳ್ಳಲಾರದೆ ಮಿಲಿಯನ್ ಸಂಖ್ಯೆಯಲ್ಲಿ ಯೂರೋಪಿಯನ್ನರು ಹುಳಗಳಂತೆ ಸತ್ತರು. ಬಹಳಷ್ಟು ತಾಯಿ–ತಂದೆಯರು ತಮ್ಮ ಕಣ್ಣೆದುರೇ ಅನ್ನವಿಲ್ಲದೆ ಹಸಿವಿನಿಂದ ಸಾಯುವ ಮಕ್ಕಳನ್ನು ನೋಡಲಾರದೆ ಕಾಡಿನಲ್ಲಿ ಬಿಟ್ಟು ಬಂದರು. ಕಾಡಿನಲ್ಲಿ ಅದೃಷ್ಟವಶಾತ್ ಬದುಕಬಹುದು ಅಥವಾ ಯಾವುದೋ ತರಹದ ಅನುಕಂಪ ಹುಟ್ಟಿಸುವ ದಯಾನೀಯ ಸಾವನ್ನು ಸಾಯಬಹುದು ಎಂಬ ಹಂಬಲದಲ್ಲಿ.

ಅವರೆದುರು ಮತ್ತೊಂದು ಆಯ್ಕೆಯಿತ್ತು. ಕುಟುಂಬದವರ ಪ್ರಾಣಗಳ ಉಳಿವಿಗಾಗಿ ಅಸಹಾಯಕ ಮಗುವಿನ ನರಬಲಿ. ನರಭಕ್ಷಣೆ ರೂಢಿಯಲ್ಲಿದ್ದ ಕಾಲವದು. ಮಗುವನ್ನು ಕೊಂದು ಜೀವ ಉಳಿಸಿಕೊಳ್ಳುವ ಮಾರ್ಗವದು. ಬರಗಾಲದ ಅನಿವಾರ್ಯತೆಯನ್ನು ಎದುರಿಸಲಾರದೆ ಹುಟ್ಟಿಕೊಂಡ ಆಚರಣೆಯಿದು.

ಜನಪದರ ಬಾಯಲ್ಲಿ ಇಂತಹ ಸಂದರ್ಭಗಳು ಕತೆಗಳಾಗಿ ಹರಿದಾಡಿದವು. ಬಾಲ್ಯದಲ್ಲಿ ಕೇಳಿ, ಓದಿ ಆನಂದಿಸಿದ ಅನೇಕ ಯುರೋಪಿನ ಮೂಲದ ಫ್ಯಾಂಟಸಿ ಕತೆಗಳು ಅವುಗಳ ಮಾಂತ್ರಿಕ ವಾಸ್ತವತೆಯಿಂದಲೇ ಎಲ್ಲರನ್ನೂ ಸೆಳೆಯುವುದಂತೂ ಖಚಿತ. ಕಾಲಾಂತರದಲ್ಲಿ ರೂಪಾಂತರಗೊಂಡು ಇತಿಹಾಸದ ಅನಿವಾರ್ಯತೆಗೆ ಅನುಗುಣವಾಗಿ ಮರುರಚಿಸಲ್ಪಟ್ಟವು. ರಮ್ಯವಾಗಿ ಕಾಣುವ, ಮುದ್ದು ಉಕ್ಕಿಸುವಂತಿರುವ ಈ ಕತೆಗಳ ಒಡಲಲ್ಲಿ ಭೀಕರವಾದ ಸತ್ಯಗಳು ಅಡಗಿರುತ್ತವೆ.

ನಾಲ್ಕು ಶತಮಾನಗಳ ನಂತರ...

೧೮ನೇ ಶತಮಾನದಲ್ಲಿ ಇಡೀ ಯೂರೋಪ್ Romanticismನ ಪ್ರಭಾವಕ್ಕೆ ಒಳಗಾಗಿತ್ತು. ರಾಷ್ಟ್ರೀಯ ಭಾವ, ಜನಪದರ ಬದುಕು–ಬಾಳ್ವೆಯ ಮಹತ್ವವನ್ನು ನೆನಪಿಸುವ ಲಾವಣಿ, ಕತೆಗಳನ್ನು ಸಂಗ್ರಹಿಸಿ ಮರು–ಓದಿಗೆ ಒಳಪಡಿಸಿ, ರಾಷ್ಟ್ರಪ್ರೇಮವನ್ನು ಎಚ್ಚರಿಸುವ ಪ್ರಯತ್ನಗಳು ಬಹಳಷ್ಟು ನಡೆದವು. ಜರ್ಮನಿಯ ಮಧ್ಯಯುಗದಲ್ಲಿ ಪ್ರಚಲಿತವಿದ್ದ ಸಾವಿರಾರು ಯಕ್ಷಿಣಿ ಕತೆಗಳನ್ನು ಸಂಗ್ರಹಿಸುವ ಸಾಹಸಕ್ಕೆ ಕೈಹಾಕಿದವರು ಜೆಕಬ್ ಮತ್ತು ವಿಲ್ಹೆಲ್ಮ್ ಸಹೋದರರು. ಗ್ರಿಮ್ ಸಹೋದರರರೆಂದೇ ಪ್ರಖ್ಯಾತರು.

ಏಕೀಕೃತ ರಾಷ್ಟ್ರೀಯ ಭಾವನೆ ತುಂಬಾ ಪೇಲವವಾಗಿದ್ದ ಕಾಲವದು. ೧೮ನೇ ಶತಮಾನದ ಅಂತ್ಯಭಾಗದಲ್ಲಿ ಫ್ರಾನ್ಸ್ ಮತ್ತು ಯೂರೋಪ್ ನಡುವೆ ನಡೆದ ಭೀಕರ ಸಂಘರ್ಷದಲ್ಲಿ ಫ್ರಾನ್ಸ್‌ನ ನೆಪೋಲಿಯನ್ ಜರ್ಮನಿಯನ್ನು ಗೆದ್ದು ೧೬ ಪ್ರಮುಖ ರಾಜ್ಯಗಳನ್ನಾಗಿ ಮರುವಿಂಗಡಿಸುತ್ತಾನೆ. ೧೮೧೫ರ ವಾಟರ್ಲೂ ಕದನದಲ್ಲಿ ನೆಪೋಲಿಯನ್ ಸೋಲಿನೊಂದಿಗೆ ಜರ್ಮನಿ ಸ್ವತಂತ್ರವಾಗುತ್ತದೆ. ಏಕೀಕರಣದ ಮತ್ತು ರಾಷ್ಟ್ರೀಯ ಪ್ರಜ್ಞೆಯ ಮಹತ್ವವನ್ನು ಅರಿತ ವಿದ್ಯಾವಂತರು, ಅಕಾಡೆಮಿಗಳ ಪ್ರಾಧ್ಯಾಪಕರು, ಕಲಿತವರು, ಶಿಕ್ಷಿತರು ಜರ್ಮನಿಯು ರಾಜಕೀಯವಾಗಿ ಬಲಿಷ್ಠವಾಗ ಬೇಕೆಂದರೆ ಅದರ ಇತಿಹಾಸ ಮತ್ತು ಪರಂಪರೆಯ ಮರು–ಓದು ಅವಶ್ಯವೆಂದು ಭಾವಿಸಿ ಕಾರ್ಯಪ್ರವೃತ್ತರಾಗುತ್ತಾರೆ.

ಗ್ರಿಮ್ ಸಹೋದರರು ಮಧ್ಯಯುಗದ ಸಾವಿರಾರು ಜನಪದ ಕತೆಗಳನ್ನು ೧೮೧೨–೧೮೫೭ರ ಅವಧಿಯಲ್ಲಿ ಪರಿಷ್ಕರಿಸಿ, ಅಗತ್ಯ ಬದಲಾವಣೆಗಳೊಂದಿಗೆ "Children's and Household Tales" ಸಂಕಲನದಲ್ಲಿ ಮುದ್ರಿಸುತ್ತಾರೆ. ಜರ್ಮನಿಯ ಕಾನೂನು, ಸಂಸ್ಕೃತಿ ಮತ್ತು ಸ್ಥಳೀಯ ನಂಬಿಕೆಗಳ ಹೆಣಿಗೆಯನ್ನು ಸ್ಥಾಪಿಸಲು ಯತ್ನಿಸುತ್ತಾರೆ. ನೆಪೋಲಿಯನ್ ಆಕ್ರಮಣದಿಂದ ಭಗ್ನಗೊಂಡಿದ್ದ ಜರ್ಮನಿಯ ಸಂಸ್ಕೃತಿಯನ್ನು ಉಳಿಸಲು ಗತಪರಂಪರೆಯ ಜ್ಞಾನವನ್ನು ಪ್ರತಿಫಲಿಸುವ ಜನಪದದ ನೆರವನ್ನು ಪಡೆಯುತ್ತಾರೆ. ಶಿಕ್ಷಣ ತಜ್ಞರಾದ ಇವರು ಈ ಸಂಕಲನವನ್ನು ಸಂಗ್ರಹಿಸಿದ್ದು ಮಕ್ಕಳಿಗಾಗಿ ಅಲ್ಲ; ಸಂಶೋಧಕರಿಗಾಗಿ. ಈ ಸಂಕಲನವು ಅಸಂಖ್ಯ ಮರುಮುದ್ರಣ ಕಾಣುತ್ತದೆ. ನಾವು ಕೇಳಿರುವ ಸಿಂಡ್ರೆಲಾ, ಸ್ಲೀಪಿಂಗ್ ಬ್ಯುಟಿ, ದಿ ಪ್ರಾಗ್ ಪ್ರಿನ್ಸ್, ಸ್ನೋ ವೈಟ್ ಕತೆಗಳು ಇದರಲ್ಲಿ ಇವೆ. ವಾಲ್ಟ್ ಡಿಸ್ನಿ ಇವುಗಳನ್ನು ಸಿನಿಮಾ ಕೂಡ ಮಾಡಿದ್ದಾರೆ.

ಈ ಲೇಖನದ ಅವಶ್ಯಕತೆಗಾಗಿ ಆರಿಸಿಕೊಂಡಿರುವ ಕತೆ Hansel and Gartel, ಜರ್ಮನಿಯ ಜನಪದ ಕತೆ. ತನ್ನ ಮೂಲ ಆವೃತ್ತಿಯಲ್ಲಿ ಈ ಕತೆಯು ನರ–ಭಕ್ಷಣೆ, ಶಿಶು ಹತ್ಯೆ ಮತ್ತು ವಾಮಾಚಾರದ ಥೀಮ್ ಅನ್ನು ಒಳಗೊಂಡಿದೆ. ಪರಿಷ್ಕೃತ ಕತೆಯ ಸಾರಾಂಶ ಹೀಗಿದೆ:

Gartel & Hansel ಅಕ್ಕ–ತಮ್ಮ. ಕಾಡಂಚಿನ ಮನೆಯ ಮರಕಡಿಯುವವನ ಮಕ್ಕಳು. ಸೊಬಗಿನ ನದಿ ದಂಡೆಯಲ್ಲಿ ಪುಟ್ಟ ಮನೆಯಲ್ಲಿ ಅಪ್ಪನೊಂದಿಗೆ ಜೀವನ ಸಾಗಿಸುತ್ತಿದ್ದ ತಾಯಿ ಕಾಣದ ಮಕ್ಕಳು. ಒಂದು ದಿನ ಅಪ್ಪ ಕಾಡಿನಲ್ಲಿ ಸೊಪ್ಪು–ಸದೆ ಆರಿಸುತ್ತಾ, ಮದ್ದು–ಕಷಾಯ ಅರೆಯುವುದರಲ್ಲಿ ನಿಷ್ಣಾತಳಾದ ಹೆಣ್ಣೊಬ್ಬಳನ್ನು ಕರೆದುಕೊಂಡು ಬರುತ್ತಾನೆ. ಮಕ್ಕಳಿಗೆ ತೋರಿಸಿ, ನಿಮ್ಮ ಮಲತಾಯಿ ಎನ್ನುತ್ತಾನೆ. ಮಕ್ಕಳು ಅವಳನ್ನು ನೋಡಿ ಗಾಬರಿ ಬೀಳುತ್ತಾರೆ. ಹೊಸ ಹೆಂಡತಿ ಮಕ್ಕಳಿಬ್ಬರನ್ನು ಕಾಡಿನಲ್ಲಿ ಬಿಟ್ಟು ಬರುವಂತೆ ತಂದೆಗೆ ಒತ್ತಾಯಿಸುತ್ತಿರುವ ಸಂಚನ್ನು ಕದ್ದು ಕೇಳಿಸಿಕೊಳ್ಳುವ ತಮ್ಮ, ಅಕ್ಕನಿಗೆ ತಿಳಿಸುತ್ತಾನೆ. ಅಕ್ಕ ಬುದ್ದಿವಂತೆ. ದಾರಿ ಗುರುತಿಗಾಗಿ ನೀಲಿಕಲ್ಲುಗಳನ್ನು ಆರಿಸಿ ಇಟ್ಟುಕೊಳ್ಳುತ್ತಾಳೆ.

ದಟ್ಟ ಕಾಡಿನಲ್ಲಿ ತಮ್ಮನ್ನು ತೊರೆದು ಬರುವ ಅಪ್ಪ–ಅಮ್ಮನನ್ನು ಮರಳಿ ಹುಡುಕಿಕೊಂಡು ಬರುತ್ತಾರೆ. ಆತಂಕಗೊಂಡ ಮಲತಾಯಿ ಮತ್ತೆ ತನ್ನ ಗಂಡನನ್ನು ಮದ್ದಿನ ಮತ್ತಿನಲ್ಲಿ ಒಪ್ಪಿಸಿ ಮತ್ತೂ ದೂರದ ಕಾಡಿಗೆ ಮಕ್ಕಳನ್ನು ಬಿಟ್ಟು ಬರುತ್ತಾರೆ. ಅಕ್ಕನಿಗೆ ಹೆಚ್ಚು ಕಲ್ಲುಗಳನ್ನು ಆರಿಸಿ ಇಟ್ಟುಕೊಳ್ಳಲಾಗುವುದಿಲ್ಲ. ತಮ್ಮ ದಾರಿಯುದ್ದಕ್ಕೂ ತನ್ನ ಬಳಿಯಿರುವ ರೊಟ್ಟಿ ಚೂರುಗಳನ್ನು ಹಾಕಿರುತ್ತಾನೆ. ಪಕ್ಷಿಗಳು ರೊಟ್ಟಿ ತಿಂದು ಈ ದಾರಿಯನ್ನು ಅಳಿಸಿ ಹಾಕುತ್ತವೆ.

ಚಳಿ ಮತ್ತು ಹಸಿವಿನಿಂದ ಬಳಲಿದ ಮಕ್ಕಳು ಕಾಡಿನಲ್ಲಿ ದಾರಿ ಕಾಣದೆ ಅಲೆಯುವಾಗ ಸಿಹಿರೊಟ್ಟಿಯ, ಸಕ್ಕರೆ ಅಚ್ಚಿನ, ಜೇನುಸುರಿಸುವ ಮನೆಯನ್ನು ಎದುರಾಗುತ್ತಾರೆ. ಸುಂದರ ಹೆಣ್ಣಿನ ರೂಪದಲ್ಲಿರುವ ಮಾಟಗಾತಿ ಮುದುಕಿಯ ಸಂಚಿಗೆ ಬಲಿಯಾಗುತ್ತಾರೆ. ಎಲ್ಲೂ ಕಂಡರಿಯದ ಸಿಹಿ ಉಂಡು, ಮೆತ್ತನೆ ಹಾಸಿಗೆಯಲ್ಲಿ ಮಲಗಿ ಸುಖಿಸುತ್ತಾರೆ. ಮರುದಿನ ಎಲ್ಲಾ ಮಾಯ?!

ತನ್ನ ನಿಜರೂಪ ತೋರಿಸುವ ಮಾಟಗಾತಿ ಹುಡುಗನನ್ನು ಬಂಧಿಸಿ, ಹುಡುಗಿಯನ್ನು ತನ್ನ ಚಾಕರಿ ಮಾಡಲು ಇರಿಸಿಕೊಳ್ಳುತ್ತಾಳೆ. ದುಷ್ಟ ಮಾಟಗಾತಿಯನ್ನು ತನ್ನ ಬುದ್ಧಿವಂತಿಕೆಯಿಂದ ಬೆಂಕಿಗೆ ನೂಕಿ ತಮ್ಮನನ್ನೂ, ಆಕೆಯ ಅಪಾರ ನಗ–ನಾಣ್ಯವನ್ನೂ ಹೊತ್ತು ತರುವ ಮಕ್ಕಳನ್ನು ಅಪ್ಪ (ಹೆಂಡತಿ ಓಡಿಹೋಗಿರುತ್ತಾಳೆ/ಸತ್ತಿರುತ್ತಾಳೆ) ಸಂಭ್ರಮದಿಂದ ಸ್ವಾಗತಿಸುವಲ್ಲಿಗೆ ಕತೆ ಸುಖಾಂತವಾಗುತ್ತದೆ.

ಗ್ರಿಮ್ ಸಹೋದರರು ಈ ಕತೆ ಬರೆದದ್ದು ಮಕ್ಕಳಿಗಲ್ಲ. ನರಭಕ್ಷಣೆ, ಶಿಶುಹತ್ಯೆ ಮತ್ತು ಮಾಟಗಾತಿಯರ ವಿಚಾರಣೆ (Witch Trial) ಅಂಶಗಳನ್ನು ಒಳಗೊಂಡ ಈ ರಕ್ತ–ಸಿಕ್ತ ಕತೆಯನ್ನು ವಿದ್ವಾಂಸರ ಅವಗಾಹನೆಗಾಗಿ ಬರೆದದ್ದು. ಯಾವುದೇ ಹಿಂಜರಿಕೆಯಿಲ್ಲದೆ ಕ್ರೂರ ಸತ್ಯಗಳನ್ನು ಹೊಂದಿರುವ ಈ ಕತೆಯನ್ನು ಅಲ್ಪ ಬದಲಾವಣೆಗಳೊಂದಿಗೆ, ಹೆಚ್ಚು ಕ್ರಿಶ್ಚಿಯನ್ ಧೋರಣೆಗಳನ್ನೂ, ಪಿತ್ರುಪ್ರಧಾನ ಅಂಶಗಳನ್ನು, ಕುಲಪ್ರಜ್ಞೆಯನ್ನು ಒಳಗೊಳ್ಳುವಂತೆ ಮರು–ರಚಿಸಿ ಪ್ರಕಟಿಸಲಾಯಿತು. ಜರ್ಮನಿಯ ಕಾನೂನು, ಸಂಸ್ಕೃತಿ ಮತ್ತು ಆ ಕಾಲದ ಜನರ ನಂಬಿಕೆಗಳನ್ನು ಈ ಕತೆಗಳು ಬೆಸೆದವು. ೨೦ನೇ ಶತಮಾನದ ಮಧ್ಯಭಾಗದಲ್ಲಿ ನಾಜಿ ಜರ್ಮನಿ ಈ ಕತೆಗಳನ್ನು ತನ್ನ ಸಿದ್ಧಾಂತಗಳ ಪ್ರಚಾರಕ್ಕಾಗಿ ಬಳಸಿಕೊಂಡಿತು.

೧೫೮೧ ಮತ್ತು ೧೫೯೩ರ ನಡುವೆ ಜರ್ಮನಿಯ ಟ್ರಿರ್ ಪ್ರಾಂತ್ಯದಲ್ಲಿ ನಡೆದ ಮಾಟಗಾತಿಯರ ವಿಚಾರಣೆ ಇತಿಹಾಸದ ಒಂದು ಕ್ರೂರ ದಾಖಲೆ. ೩೬೮ ಜನರ ಬಲಿಪಡೆದ ನ್ಯಾಯಸಮ್ಮತ ಮಾರಣಹೋಮ. ಕ್ರಿಶ್ಚಿಯನ್ ಧರ್ಮವು ಯುರೋಪಿಯನ್ ಪ್ರಾಂತ್ಯದಲ್ಲಿ ಬೀರಿದ ಪ್ರಭಾವವನ್ನು ಚರ್ಚ್ ನಿಯಂತ್ರಿಸಿತು. ಮನಸ್ಸು ಮತ್ತು ಬುದ್ಧಿಯ ನಿಯಂತ್ರಣಕ್ಕೆ ಸಿಗದ/ಮೀರಿದ ಗ್ರಹಿಕೆಗಳನ್ನು, ತರ್ಕಕ್ಕೆ ಸಿಗದ ಸಂವೇದನೆಗಳನ್ನು ಅಸಹಜ ಹಾಗು ಕೇಡಿನ ಪರಾಕಾಷ್ಟೆ ಎಂದು ಬಿಂಬಿಸಿ ತನ್ನ ಅಧಿಕಾರ ಮತ್ತು ರಾಜಕೀಯ ಪ್ರಭಾವವನ್ನು ಗಟ್ಟಿಪಡಿಸಿಕೊಂಡಿತು. ಮಾನವನ ಗ್ರಹಿಕೆಗೆ ಇರುವ ಅಸಾಧ್ಯ ಸಾಧ್ಯತೆಯನ್ನು ತಮ್ಮದನ್ನಾಗಿಸಿಕೊಳ್ಳುವವರ ಪ್ರಯತ್ನಗಳನ್ನು, ಅವರ ಅರಿವನ್ನು ಅಪಮಾನಗೊಳಿಸಲಾಯಿತು. ಇಂತಹ ಆಚರಣೆಗಳಲ್ಲಿ ತೊಡಗಿಸಿಕೊಂಡವರನ್ನು ಮಾಟ–ಮದ್ದು ಮಾಡುವವರೆಂದು ಬಿಂಬಿಸಿ ಕ್ರೂರವಾಗಿ ಶಿಕ್ಷಿಸಲಾಯಿತು.

೧೮೧೭ರಲ್ಲಿ ಜರ್ಮನಿ ಮತ್ತೊಮ್ಮೆ ಭೀಕರ ಬರಗಾಲಕ್ಕೆ ತುತ್ತಾಯಿತು. ಚರ್ಚ್‌ನ ಅನುಯಾಯಿಗಳಾಗಿದ್ದ ಬಹುಸಂಖ್ಯೆಯ ಸಾಮಾನ್ಯರಿಗೆ ಬರಗಾಲದ ಸರ್ವನಾಶಕ್ಕೆ ಹೊಣೆಯಾಗಿಸಲು ಯಾರಾದರೊಬ್ಬರು ಬೇಕಿತ್ತು. ರಾಜಕಾರಣಿಗಳನ್ನು, ಅವರ ನೀತಿ–ನಿಯತ್ತುಗಳನ್ನು ಪ್ರಶ್ನಿಸುವುದು ಅಷ್ಟು ಸುಲಭವಲ್ಲ. ತಮ್ಮ ರಾಜಕೀಯ ಅಧಿಕಾರವನ್ನು, ಸ್ಥಾನ–ಮಾನಗಳನ್ನು ಉಳಿಸಿಕೊಳ್ಳಲು ಹಾತೊರೆಯುತ್ತಿದ್ದ ರಾಜಕಾರಣಿಗಳನ್ನು ಎದುರಿಸಲಾರದ ಸಾಮಾನ್ಯ ಜನರ ಕಿಚ್ಚಿಗೆ ಸುಲಭದ ದಾಳಗಳಾದವರು ವಯಸ್ಸಾದ, ಒಂಟಿ, ಮುಪ್ಪಿನ ಮುದುಕಿಯರು. ಮೂಢತೆಯನ್ನು ಬಲುವಾಗಿ ನಂಬುತ್ತಿದ್ದ ಕಾರ್ಮಿಕರ/ ರೈತರ/ ಬಡವರ ಕೋಪವು ಈ ಪಾಪದ ಬಡಪಾಯಿಗಳನ್ನು ಆರೋಪಿಸ್ಥಾನಕ್ಕೆ ನಿಲ್ಲಿಸಿತು. ಸ್ಥಳೀಯ ಕಾನೂನು ವ್ಯಕ್ತಿಯ ಬಲಹೀನತೆಯನ್ನು, ಸನ್ನಿವೇಶದ ಅಸಹಾಯಕತೆಯನ್ನು ಕಾರಣವಾಗಿಟ್ಟುಕೊಂಡು ಮುಪ್ಪಿನ ಮುದುಕರಿಂದ ಹಿಡಿದು, ೧೨ ವರುಷದ ಒಳಗಿನ ಮಕ್ಕಳನ್ನೂ ಸಹ ಮಾಟ–ಮದ್ದು ಮಾಡುತ್ತಾರೆಂದು ಆರೋಪಿಸಿ ಹತ್ಯಗೈಯಲಾಯಿತು. ಇವರ ಪರವಾಗಿ ನಿಂತವರನ್ನು, ಇಡೀ ಹಳ್ಳಿಗಳನ್ನೇ ಕ್ರೂರವಾಗಿ ಮುಗಿಸಲಾಯಿತು. ಅಧಿಕಾರ ಪಡೆಯಲು ಒಬ್ಬರನ್ನೊಬ್ಬರು ದೂರುತ್ತಾ ಕಾಲಕಳೆಯಲಾಯಿತು.

ಈ ಮಾಟಗಾರರ ದೃಷ್ಟಿ ಸರಿಇರುವುದಿಲ್ಲ, ಇವರು ಮದ್ದು ಬಲ್ಲವರು, ಸ್ವತಂತ್ರವಾಗಿ ತಮ್ಮ ಇಚ್ಛೆಯಂತೆ ಬದುಕುತ್ತಾರೆ. ವಿಶೇಷ ಜ್ಞಾನ ಹೊಂದಿರುತ್ತಾರೆ. ಕಾಡಿನ ಸಸ್ಯಪ್ರಭೇಧಗಳನ್ನು ಬಳಸಿ ವೈದ್ಯಮಾಡುತ್ತಾರೆ. ಸಾಮಾನ್ಯರಂತೆ ಅಲ್ಲ. ಸಾಂಸ್ಥೀಕರಣಕ್ಕೆ ಒಳಪಡುವುದಿಲ್ಲ. ಪುರುಷಪ್ರಧಾನತೆಯನ್ನು ಮಾನ್ಯಮಾಡಲಾರರು. ಇಂತಹವರನ್ನು ಸಾಮಾಜಿಕ ಶಿಸ್ತಿಗೆ ಒಳಪಡಿಸುವುದು ಕಠಿಣ. ಹೆಣ್ಣಿನಲ್ಲಿ ಮಾತೃ ಸ್ವರೂಪವನ್ನು ಮಾತ್ರವೇ ಉತ್ತೇಜಿಸುವ, ಕೇವಲ ಪುರುಷ/ವ್ಯವಸ್ಥೆಗೆ ಅದೀನವಾಗಿರುವ ಲಕ್ಷಣ ತೋರಿಸುವ ಹೆಣ್ತನವನ್ನು ಉಳಿಸಿಕೊಳ್ಳುವ ಸಂರಚನೆಗಳನ್ನು ಸೃಷ್ಟಿಸಲು ಈ Witch Trial ಗಳು ಇಂಬು ನೀಡಿದವು. ಈ ಶಾಪಕ್ಕೆ ಬಲಿಯಾದ ವ್ಯಕ್ತಿ/ಕುಟುಂಬಗಳ ಆಸ್ತಿಯನ್ನು ಮಟ್ಟುಗೋಲು ಹಾಕಿಕೊಳ್ಳಲಾಯಿತು.

Hansel and Gartel ಕತೆಯಲ್ಲಿ ಮಕ್ಕಳು ಕೊನೆಯಲ್ಲಿ ಮಾಟಗಾತಿಯ ಆಸ್ತಿ ಅಷ್ಟನ್ನೂ ಅಪ್ಪನಿಗೆ ನೀಡುವುದರೊಂದಿಗೆ ಪಿತೃಪ್ರಧಾನತೆಯನ್ನು ಮರುಸ್ಥಾಪಿಸಲಾಯಿತು. ಮಕ್ಕಳು ತಮ್ಮ ಬುದ್ಧಿವಂತಿಕೆಯನ್ನು 'ಅನ್ಯ' ರನ್ನು ನಾಶಮಾಡಲು ಬಳಸಿಕೊಳ್ಳಬೇಕು. ತಂದೆ ಅಸಹಾಯಕ. ತಾಯಿ ಕುಟುಂಬದಲ್ಲಿ ಪ್ರಧಾನವಾದರೆ ನಾಶ ಶತ:ಸಿದ್ಧ ಎಂದು ನಂಬುವಂತಾಯಿತು.

ಈ ಫ್ಯಾಂಟಸಿ ಕತೆಗಳು ಅನೇಕ ತರಹದ ಸಂರಚನೆಗಳನ್ನು ಅಡಗಿಸಿಕೊಂಡಿರುತ್ತವೆ. ಸಮಾಜದಲ್ಲಿ ಸಾಮಾನ್ಯರು ಬಹಳವಾಗಿ ನಂಬಿದ್ದ ವಿಷಯಗಳನ್ನು ಅಡಗಿಸಿಕೊಂಡಿರುತ್ತವೆ. ಭೀಕರ ಬರಗಾಲದ ಸಂದರ್ಭಗಳಲ್ಲಿ ಹುಟ್ಟಿದ ಕತೆಗಳಲ್ಲಿ ಬಗೆಬಗೆಯ ಭಕ್ಷ್ಯ ಬೋಜನಗಳ/ ಸುಖ–ಸಮೃದ್ಧಿಗಳ ಫ್ಯಾಂಟಸಿಗಳು ಮತ್ತೆ ಮತ್ತೆ ಕಂಡು ಬಂದವು. ಸಿಂಡ್ರೆಲಾ ಕತೆಯಲ್ಲಿ ಪುಟ್ಟ ಪಾದಗಳಿಗೆ ಹೋಲುವ ಚಿಕ್ಕ ಚಪ್ಪಲಿ, ಹೆಣ್ಣಿನ ಸೌಂದರ್ಯವನ್ನು ನಿರ್ಧರಿಸುವ ಮಾಪನವಾಯಿತು. ಚೀನದ ಮಹಿಳೆಯರು ತಮ್ಮ ಕಾಲುಗಳನ್ನು ಚಿಕ್ಕಂದಿನಿಂದಲೇ ಬಂಧಿಸಿ ಪುಟ್ಟ ಪಾದಗಳ ಒಡತಿಯರಾಗುವುದೇ ಜೀವಮಾನದ ಸಾಧನೆ ಎಂದು ಹೆಮ್ಮೆ ಪಡುವಂತಹ ಅನಿಷ್ಟ ಆಚರಣೆಗಳು ಚಾಲ್ತಿಗೆ ಬಂದಿದ್ದವು. ಕತೆಗಳು ಮನರಂಜನೆಗಾಗಿ ಅಷ್ಟೇ ಇರುವುದಿಲ್ಲ. ಅವು ಸಮಾಜದ ಸ್ಥಿತಿ–ಗತಿಗಳ ಒಗಟುಗಳು. ಪ್ರತಿಯೊಂದು ಸಮುದಾಯವು ತನ್ನ ಉಳಿವಿಗಾಗಿ ನಡೆಸುವ ಹೋರಾಟಗಳ ದಾಖಲೆಗಳು. ಸಂಶೋದಕರು ಸಾಹಿತ್ಯ ಕಥನಗಳು ಕಟ್ಟಿಕೊಡುವ ಅರ್ಥಗಳನ್ನು ಪೂರ್ವಗ್ರಹಿಕೆಯಿಲ್ಲದೆ ಪರಾಮರ್ಶಿಸಿ ಅನ್ವಯಿಸಿಕೊಳ್ಳುವ ಉನ್ನತ ಜವಾಬ್ದಾರಿಯನ್ನು ನಿಭಾಯಿಸುವಾಗ ಎಡವಬಾರದು. ಯಾಕೆಂದರೆ ಎಚ್ಚರದ ಓದುಗ ಪರಂಪರೆಗಳ ನೈಜತೆಯನ್ನು, ಅರ್ಥಪೂರ್ಣತೆಯನ್ನು, ಪ್ರಸ್ತುತ ಸನ್ನಿವೇಶಕ್ಕೆ/ಕಾಲಮಾನಕ್ಕೆ ಅನ್ವಯಿಸಿಕೊಳ್ಳುವ ಜಾಣ್ಮೆಯನ್ನು ಕಲಿಯಬೇಕಾದ್ದು ನಿಜದ ಅರಿವು.

‘ಶ್ರೀರಾಮಾಯಣ ದರ್ಶನಂ’ ಸ್ವಪ್ನಗಳ ಪಾತ್ರ

ಶಿವರಾಜು ಎಸ್.
ಸಂಶೋಧನಾ ವಿದ್ಯಾರ್ಥಿ
ಸರ್ಕಾರಿ ಕಲಾ ಕಾಲೇಜು,
ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – ೫೬೦೦೦೧
ಬೆಂಗಳೂರು ನಗರ ವಿಶ್ವವಿದ್ಯಾನಿಲಯ

“

“ಕನಸು ಮೂಲತಃ ಒಂದು ಅನುಭವ”[೧] ಮಾನವ ತನ್ನ ದಿನನಿತ್ಯದ ವ್ಯವಹಾರಕ್ಕಾಗಿ ಭಾಷೆಯನ್ನು ರೂಪಿಸಿಕೊಂಡಿದ್ದಾನೆ. ಹಾಗಾಗಿ ತನಗೆ ಬೀಳುವ ಕನಸುಗಳನ್ನು ತನ್ನ ಭಾಷೆಯ ಮೂಲಕ ವ್ಯಕ್ತಪಡಿಸುತ್ತಾನೆ. ಹಾಗಾದರೆ ‘ಸ್ವಪ್ನ’ ಎಂದರೇನು ಎನ್ನುವ ವಿಚಾರವನ್ನ ಬೆನ್ಹತ್ತಿ ಹೊರಟಾಗ ನಮಗೆ ಸಿಗುವ ಉತ್ತರ: ‘ಮನುಷ್ಯನ ಮನಸ್ಸಿನಲ್ಲಿ ಎರಡು ಪದರಗಳಿವೆ.’ ಅವುಗಳೆಂದರೆ; ಒಂದು ಜಾಗೃತ ಚೇತನ (ಜಾಗೃದಾವಸ್ಥೆ)–ಈ ಸ್ಥಿತಿಯಲ್ಲಿದ್ದಾಗ ನಾವು ಏನನ್ನು ಯೋಚಿಸುತ್ತೇವೆ? ಹೇಗೆ ವಿಚಾರ ಮಾಡುತ್ತೇವೆ? ಎಂದು ತಿಳಿಯುವುದು ಸುಲಭ. ಮತ್ತೊಂದು ಸುಪ್ತ ಚೇತನ (ಸುಪ್ತಾವಸ್ಥೆ)– ಈ ಸ್ಥಿತಿಯಲ್ಲಿದ್ದಾಗ ನಾವು ಏನನ್ನು ಯೋಚಿಸುತ್ತೇವೆ? ಹೇಗೆ ವಿಚಾರ ಮಾಡುತ್ತೇವೆ? ಎಂದು ತಿಳಿಯುವುದು ಕಷ್ಟ. ಹಾಗಾಗಿ ಸಿಗ್ಮಂಡ್ ಫ್ರಾಯ್ಡ್ ಹೇಳುವುದು: ‘ಕನಸುಗಳಿಗೆ ಕಾರಣ ಮುಖ್ಯವಾಗಿ ದಮನಗೊಂಡ ಅತೃಪ್ತ ಬಯಕೆಗಳು; ಅದರಲ್ಲೂ ಪ್ರಮುಖವಾಗಿ ಲೈಂಗಿಕ ಬಯಕೆಗಳು ಹಾಗೂ ಆಕ್ರಮಣಕಾರಿ ಪ್ರವೃತ್ತಿಗಳು. ಈ ಬಯಕೆಗಳು ಅನೈತಿಕವಾಗಿದ್ದು, ಅಪಾಯಕಾರಿಯಾಗಿದ್ದು, ನಾಗರಿಕ ಸಮಾಜದಲ್ಲಿ ಅವನ್ನು ಅಭಿವ್ಯಕ್ತಿಗೊಳಿಸುವುದು ಸಾಧ್ಯವೇ ಇಲ್ಲ. ಆದರೆ ಅವು ಪ್ರಬಲ ಬಯಕೆಗಳಾಗಿದ್ದು, ಸುಮ್ಮನಿರುವುದಿಲ್ಲ. ಒಂದಲ್ಲ ಒಂದು ರೀತಿಯ ಅಭಿವ್ಯಕ್ತಿಗಾಗಿ ಹಾತೊರೆಯುತ್ತಿರುತ್ತವೆ. ನೇರವಾಗಿ, ಪ್ರಜ್ಞಾತ್ಮಕವಾಗಿ, ಕ್ರಿಯಾತ್ಮಕವಾಗಿ ತೃಪ್ತಿಗೊಳ್ಳುವುದು ಅಸಾಧ್ಯವಾದುದರಿಂದ, ಈ ಬಯಕೆಗಳು ಮಾನಸಿಕವಾಗಿ, ಸಾಂಕೇತಿಕವಾಗಿ, ರೂಪಾಂತರಗೊಂಡು, ನಾವು ನಿದ್ರಾಸ್ಥಿತಿಯಲ್ಲಿ ಇರುವಾಗ, ಕನಸಾಗಿ ಹೊರಹೊಮ್ಮುತ್ತವೆ. ಫ್ರಾಯ್ಡ್‌ನ ಸ್ವಪ್ನ ಸಿದ್ಧಾಂತವೆಂದರೆ: ‘ತಡೆಹಿಡಿದ ಅತೃಪ್ತ ಬಯಕೆಗಳು ಮಾರುವೇಷದಲ್ಲಿ ತೃಪ್ತಿಗೊಳ್ಳುವ ಪ್ರಕ್ರಿಯೆಯೇ ಕನಸು.’

ಕಾರ್ಲ್ ಯೂಂಗ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸುಪ್ತಚೇತನವನ್ನು ಸಾಮೂಹಿಕ ಸುಪ್ತಚೇತನ ಎಂದು ಕರೆಯುತ್ತಾನೆ. 'ಸುಪ್ತಚೇತನವೆಂಬುದು ಪ್ರತಿಯೊಬ್ಬ ವ್ಯಕ್ತಿಗೂ ಆನುವಂಶಿಕವಾಗಿ ಬಂದಿರುವ ಸಾಮಾನ್ಯ ಮಾನಸಿಕ ಹಿನ್ನೆಲೆ. ಈ ದೃಷ್ಟಿಯಲ್ಲಿ, ಸಾಮೂಹಿಕ ಸುಪ್ತಚೇತನ ಸುಪ್ತ ಸ್ಮೃತಿಗಳ ಭಂಡಾರ... ಪ್ರತಿಯೊಂದು ವರ್ಗ, ಜನಾಂಗ ಹಾಗೂ ವಂಶದ ಜೀವಿಗಳು ನಿರಂತರವಾಗಿ ಅನುಭವಿಸಿದ ಆಗುಹೋಗುಗಳ ಸಾರಸರ್ವಸ್ವವೆಲ್ಲಾ ಇಲ್ಲಿ ಹುದುಗಿರುತ್ತದೆ.' ಎನ್ನುತ್ತಾನೆ. ಕನಸಿನ ವಿಚಾರವಾಗಿ ನಮಗೆ ತಿಳಿದಿರುವುದನ್ನು ಡಿಕ್ಷನರಿಯೊಂದು ಸಂಕ್ಷಿಪ್ತವಾಗಿ ಹೇಳುವುದು ಹೀಗೆ: 'ನಿದ್ದೆಯ ಕೆಲವು ಹಂತಗಳಲ್ಲಿ ಮನಸ್ಸಿನಲ್ಲಿ ಅನೈಚ್ಛಿಕವಾಗಿ ಸಾಲಾಗಿ ಬರುವ ಚಿತ್ರಗಳ, ಭಾವನೆಗಳ, ಉದ್ವೇಗಗಳ ಹಾಗೂ ಸಂವೇದನೆಗಳ ಸರಣಿಯೇ ಕನಸು. ಹಾಗಾಗಿ ಕನಸು ಒಂದು ಮಾನಸಿಕ ಪ್ರಕ್ರಿಯೆ.'

'ಸ್ವಪ್ನ ಎನ್ನುವುದು ವ್ಯಕ್ತಿಯೊಬ್ಬ ತನ್ನ ಪ್ರಜ್ಞೆಯಲ್ಲಿ ಪಡೆದ ಅನುಭವ' ಮನುಷ್ಯನ ಬಯಕೆಗಳು, ಶಂಕೆಗಳು, ಭಯಗಳು, ನೆನಪುಗಳು, ಅನುಭವಗಳು ಅವನ ಜಾಗೃದಾವಸ್ಥೆಯಲ್ಲಿ ಪ್ರಕಟಗೊಳ್ಳಲು ಅವಕಾಶವಿಲ್ಲದಿದ್ದಾಗ ಅದಕ್ಕೆ ವ್ಯತಿರಿಕ್ತವಾದ ಸುಪ್ತಾವಸ್ಥೆಯಲ್ಲಿ ಪ್ರಕಟಗೊಳ್ಳುತ್ತವೆ. ಅಂದರೆ ನಿದ್ರೆಯಲ್ಲಿ ಮನಸ್ಸಿನ ಎರಡನೇ ಪದರವಾದ ಸುಪ್ತಚೇತನದ ಭಾವನೆಗಳು ಕನಸುಗಳ ಮೂಲಕ ಪ್ರಕಟಗೊಳ್ಳುತ್ತವೆ. ಆದರೆ ಅವು ನೇರವಾಗಿ ಪ್ರಕಟಗೊಳ್ಳುವುದಿಲ್ಲ, ಬದಲಿಗೆ ಹಾವು, ಮನೆ, ನೀರು, ಬೆಟ್ಟ, ಬೆಂಕಿ ಇತ್ಯಾದಿ ಸಂಕೇತಗಳ ಮೂಲಕ ಪ್ರಕಟಗೊಳ್ಳುತ್ತವೆ. ಇಂತಹ ಕನಸುಗಳು "ಅರ್ಥಪೂರ್ಣವಾಗಿರಬಹುದು, ಅರ್ಥಹೀನವಾಗಿರಬಹುದು; ವಾಸ್ತವವನ್ನ ಹೋಲಬಹುದು, ಹೋಲದೆ ಇರಬಹುದು, ಆದರೆ, ಮನುಷ್ಯನ ಒಳಪ್ರಜ್ಞೆಯ ತಲಾತಲದಲ್ಲಿ ಹುದುಗಿದ ಆಸೆ–ಭಯ–ಆಶಂಕೆ ಇತ್ಯಾದಿಗಳಿಗೆ 'ನಿದ್ರಾ ಸಮುದ್ರ ಶಿಲ್ಪಿ ಕಡೆದೆಬ್ಬಿಸಿದ ಆಕಾರಗಳು' ಹೇಗಿರುತ್ತವೆ ಎಂಬುದನ್ನು ಸೂತ್ರೀಕರಿಸಿ ಹೇಳಲು ಸಾಧ್ಯವಿಲ್ಲ."[೨] ಸ್ವಪ್ನ ಸ್ಥಿತಿಯಲ್ಲಿ ಮನುಷ್ಯ ಪಡೆಯುವ ಅನುಭವ; ಜಾಗೃದಾವಸ್ಥೆಗೆ ಮಿಥ್ಯೆಯಾಗಿದ್ದರೂ ಕೂಡ ಅದನ್ನು ಸತ್ಯವಲ್ಲವೆಂದು ಕಡೆಗಣಿಸುವಂತಿಲ್ಲ. ಒಂದೆಡೆ ಕುವೆಂಪು ಹೇಳುವಂತೆ "ಸ್ವಪ್ನವು ಜಾಗೃದಾವಸ್ಥೆಯ ಅನುಭವಗಳಿಗೆ ಜಾಗ್ರಜಗತ್ತಿನ ಆಕಾರಗಳನ್ನೇ ಕಲ್ಪಿಸಿದರೆ ಆಗ ಆ ಸೃಷ್ಟಿ ಪ್ರತಿಕೃತಿಯಾಗುತ್ತದೆ. ಹಾಗಲ್ಲದೆ ಜಾಗ್ರದವಸ್ಥೆಯ ಅನುಭವಕ್ಕೆ ಸಾಂಕೇತಿಕ ಪ್ರತೀಕವನ್ನು ನಿರ್ಮಿಸಿದರೆ ಆಗ ಆ ಸೃಷ್ಟಿ ಪ್ರತಿಮೆಯಾಗುತ್ತದೆ. ಆ ಪ್ರತಿಮೆಯಂತಹ ಆಕೃತಿಯನ್ನು ನಾವು ಜಾಗೃದವಸ್ಥೆಯ ಜಗತ್ತಿನಲ್ಲಿ ಎಲ್ಲಿಯೂ ಎಂದೂ ಕಾಣದಿದ್ದರೂ ಅದನ್ನು 'ಸುಳ್ಳು' ಎನ್ನಲಾಗುವುದಿಲ್ಲ."[೩]

ಕವಿಯನ್ನು ಕನಸುಗಾರ ಎಂದು ಕರೆಯುವ ವಾಡಿಕೆ ಇದೆ. ಕವಿಯು ತಾನು ಕಂಡ 'ಕನಸು' ಮತ್ತು 'ಕಲ್ಪನೆ'ಗಳನ್ನು ವಾಸ್ತವದೊಂದಿಗೆ ಸಮೀಕರಿಸಿ, ಅವು ಸಾಹಿತ್ಯದಲ್ಲಿ ಜೀವತಳೆವಂತೆ ಮಾಡುತ್ತಾನೆ.(ಕವಿ ಕಂಡ ಕನಸು ನಿದ್ರೆ ಮಾಡುವಾಗ ಕಂಡದ್ದಲ್ಲ; ಎಚ್ಚರಿದ್ದಾಗಲೇ ಕಂಡದ್ದು!) ಕವಿಯಾದವನು ಸಾಹಿತ್ಯದೊಳಗೆ, ವಾಸ್ತವದಲ್ಲಿ ಘಟಿಸದ ಘಟನೆಗಳನ್ನು, ಅಪೌರುಷೇಯವಾಗಿ ಘಟಿಸುವ ಘಟನೆಗಳನ್ನು ಹಾಗೂ ತಾನು ಮಂಡಿಸಿದ ವಿಚಾರಗಳು ವಾಸ್ತವದಲ್ಲಿ ಅರಗಿಸಿಕೊಳ್ಳಲಾಗದು ಎನ್ನುವ ಘಟನೆಗಳನ್ನು ಕನಸಿನ ಮೂಲಕ ವ್ಯಕ್ತಪಡಿಸುತ್ತಾನೆ. ಜತೆಗೆ ಕನಸನ್ನು ಒಂದು ತಂತ್ರವಾಗಿ ಬಳಸಿಕೊಳ್ಳುತ್ತಾನೆ. ಕವಿ ನಿರ್ಮಿತಿಯಲ್ಲಿ ಬಳಕೆಯಾಗಿರುವ ಕನಸುಗಳ ಸಾರಸ್ಯವನ್ನು ಸಂಕ್ಷಿಪ್ತವಾಗಿ ಹೀಗೆ ನೋಡಬಹುದು: ಕವಿತೆ, ಕಾದಂಬರಿ, ಪುರಾಣ, ಕಾವ್ಯ ಹಾಗೂ ಮಹಾಕಾವ್ಯಗಳಲ್ಲೆಲ್ಲಾ, 'ಕನಸು'ಗಳು ಮುಖ್ಯವಾಗಿ ಅಂತರಂಗದ ಬಯಕೆಗಳಿಗೆ ಕನ್ನಡಿಯಾಗಿ ಅಥವಾ ಮುಂದಾಗುವುದನ್ನು ಸೂಚಿಸುವ ಭವಿಷ್ಯವಾಣಿಯ ಸಂಕೇತಗಳಾಗಿ, ಪ್ರತಿಮೆಗಳಾಗಿ ಬಳಕೆಯಾಗಿರುವುದು ಸಾಮಾನ್ಯ ಸಂಗತಿಯಾಗಿದೆ.

ಸಾಮಾನ್ಯವಾಗಿ ಪುರಾಣ ಹಾಗೂ ಮಹಾಕಾವ್ಯಗಳ ನಾಯಕರಾದ ಮಹಾವ್ಯಕ್ತಿಗಳು ಜನಿಸುವ ಮುನ್ನ, ಅವರ ತಾಯಂದಿರಿಗೆ ವಿಲಕ್ಷಣವಾದ ಶುಭ ಸ್ವಪ್ನಗಳು ಬೀಳುತ್ತವೆಂಬಂತೆ ಚಿತ್ರಿತವಾಗಿರುವುದು (ಮಹಾಕಾವ್ಯದ) ಒಂದು ಸಿದ್ಧ ತಂತ್ರವಾಗಿದೆ. ಬುದ್ಧನ ಜೀವನಕ್ಕೆ ಸಂಬಂಧಿಸಿದಂತೆಯೂ ಈ ರೀತಿಯ ಘಟನೆಗಳು ಚಿತ್ರಿತವಾಗಿವೆ. ನಾವು ಪ್ರಮುಖವಾಗಿ ಗಮನಿಸಬೇಕಾದದ್ದು ಜೈನಪುರಾಣಗಳಲ್ಲಿ, ಅದರಲ್ಲಿಯೂ ಕನ್ನಡದಲ್ಲಿ ಪಂಪನಾದಿಯಾಗಿ ಬಹುಪಾಲು ಜೈನಕವಿಗಳು ಈ ರೀತಿಯಾಗಿ ಚಿತ್ರಿಸಿದ್ದಾರೆ. 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿಯೂ ರಾಮ ಜನಿಸುವ ಮುನ್ನ ಕೌಸಲ್ಯೆಗೂ ಈ ರೀತಿಯ ಶುಭ ಸ್ವಪ್ನಗಳು ಬೀಳುತ್ತವೆ.

ಭಾರತೀಯ ಮಹಾಕಾವ್ಯ ಪರಂಪರೆಯಲ್ಲಿ, ಅದರಲ್ಲಿಯೂ ಮುಖ್ಯವಾಗಿ ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ 'ಸ್ವಪ್ನಗಳು ಕಥೆಗೊಂದು ಪ್ರಮುಖ ತಿರುವನ್ನ ತಂದುಕೊಡುತ್ತವೆ; ಸಂದರ್ಭಕ್ಕೆ ಸಿಲುಕಿ ಕೆಟ್ಟದ್ದನ್ನು ಬಯಸುವ ಪಾತ್ರಗಳು ತರುವಾಯ ತಮ್ಮ ಸುಪ್ತಚೇತನದೊಳಗೆ ಅಡಗಿರುವ ವ್ಯಕ್ತಿತ್ವಗಳು ಹೊರಹೊಮ್ಮಿ, ಶರಣಾಗತಿಯ ಭಾವವನ್ನು ಬಯಸುವ ಮೂಲಕ ಓದುಗನ ಎದೆಯೊಳಗೆ ಅನುಕಂಪವನ್ನು ಹುಟ್ಟಿಸುತ್ತವೆ'.

'ಶ್ರೀರಾಮಾಯಣ ದರ್ಶನಂ' ಮಹಾಕಾದಲ್ಲಿ ಸುಮಾರು ಹದಿನೈದು ಕಡೆಗಳಲ್ಲಿ ಸ್ವಪ್ನಗಳ ಪ್ರಸ್ತಾಪ ಬರುತ್ತವೆ. ಅವುಗಳಲ್ಲಿ ಆರು ಸ್ವಪ್ನಗಳು ಮುಖ್ಯವಾದವು ಮತ್ತು ವಿಸ್ತೃತವಾದವುಗಳು.

'ಮಮತೆಯ ಸುಳಿ ಮಂಥರೆ' ಸಂಚಿಕೆಯಲ್ಲಿ ಮಂಥರೆಗೆ ಬೀಳುವ 'ಕನಸು' ಇಡೀ ಕಥೆಗೆ ಮಹತ್ತರ ತಿರುವನ್ನ ತಂದುಕೊಡುತ್ತದೆ. ಶ್ರೀರಾಮನಿಗೆ ಪಟ್ಟಾಭಿಷೇಕವನ್ನು ಮಾಡಬೇಕೆಂದು, ದಶರಥ ನಿರ್ಣಯವನ್ನು ಕೈಗೊಂಡ ದಿನ ಕೈಕೆ, ಭರತನಿಗಾಗಿಯೇ ಬದುಕಿದ್ದ 'ಮಮತೆಯ ಸುಳಿ ಮಂಥರೆ'ಗೆ ಆ ಇರುಳು ಒಂದು ಕನಸು ಬೀಳುತ್ತದೆ, ಅದು ಹೀಗಿದೆ,

ಮುದುಕಿಯಾದಾ ಕೈಕೆ ಭರತನಂ ಕೈವಿಡಿದು
ಮರುಧರೆಯನಲೆಯುತಿರ್ದಳ್ ವಿಧವೆಯೋಲ್, ಕುಬ್ಜೆ
ಕರೆದೊಡಂ ಕಿವಿಗೊಡದೆ, ಮಗನೊಡನೆ ಕಿರಿರಾಣಿ
ಮುಂದು ಮುಂದೆಯ್ದುತಿರೆ, ಬೈಗುಗಳ್ತಲೆಯಿಳಿದು
ನುಂಗಿದತ್ತಿರ್ವರಂ. ತೊಳ ತೊಳಲಿ ನೀರಡಸಿ
ದೆಸೆದೆಸೆಗೆ ಬಾಯ್ಬಿಟ್ಟು ನಿಡುವೊರಲಿ ಗೂನಿ ತಾಂ
ಕೆಡೆದಳಾ ಮರುಳುಗಾವಲಿಯಿಳೆಗೆ, ರಾಮನಂ
ಕರೆಕರೆದು ನಿಡುಸರದೊಳಾಕ್ರಂದಿಸುತೆ ಕೂಗಿ.
ಕ್ರೂರ ದುಃಸ್ವಪ್ನ ಜೇಡನ ಪೀಡನೆಗೆ ಸಿಲ್ಕಿ
ನಡುನಡುಗುತೊದ್ದಾಡಿದತ್ತು ಮಂಥರೆಯೊಡಲ್,
ಬಲಗೆ ಬಿಳ್ದೊಂದು ಪುಳುವಂತೆ. ಹಾಸಗೆ ಕೆದರೆ
ಕುಳ್ತಳ್ ಧಿಗಿಲ್ಲೆಂದು. ಬಡಿದುದು ಭಯಗ್ರಹಂ
ಮಂಥರೆಗೆ. ಕೇಡದೇನಂ ಸ್ವಪ್ನಮಾಡಿದುದೊ
ತನಗೆನುತೆ ಚಿಂತಿಸುತ್ತಿರೆ, ಕಿವಿಗೆವಂದುದಯ್
ನಲಿವ ಮಂಗಳವಾದ್ಯ ಸಂಭ್ರಮಂ.[೪]

ಈ ಕನಸಿನ ಸಂಕೇತಿಕತೆ, ರಾಮನ ಪಟ್ಟಾಭಿಷೇಕದಿಂದ, ಕೈಕೆ ಭರತರಿಗೆ ಎಂತಹ ದುಃಸ್ಥಿತಿ ಒದಗುವುದೆಂದು, ಮಂಥರೆಯ ಮನಸ್ಸು ಕಲ್ಪಸಿಕೊಂಡಿತೋ ಅದಕ್ಕೆ ತಕ್ಕುದಾಗಿದೆ. ಬಹುಶಃ ಮಂಥರೆಯು ಈ ಸಮಯದಲ್ಲಿ ತನ್ನ ವರ್ತನೆಯ ಮೂಲಕ ಕೈಕೆಯನ್ನು ಬದಲಾಯಿಸಿ; ದಶರಥನು ಎಂದೋ ಕೊಟ್ಟ ವರಗಳನ್ನು ಜ್ಞಾಪಿಸದಿದ್ದರೆ; ಕೈಕೆ ವರಗಳನ್ನೇ ಕೇಳುತ್ತಿರಲ್ಲಿಲ್ಲ. ರಾಮಾಯಣದ ಕಥೆಯೆ ಬೇರೆಯಾಗಿರುತ್ತಿತ್ತೇನೊ. ಅಯೋಧ್ಯೆಯಲ್ಲಿ ದಶರಥನೂ ಸಾಯುತ್ತಿರಲ್ಲಿಲ್ಲ; ಕಿಷ್ಕಿಂದೆಯಲ್ಲಿ ವಾಲಿಯೂ ಸಾಯುತ್ತಿರಲಿಲ್ಲ; ಲಂಕೆಯಲ್ಲಿ ರಾವಣ ಕುಂಭಕರ್ಣಾದಿಗಳು ಸಾಯುವುದಿರಲಿ; ಕಲ್ಪನೆಗೂ ಬರುತ್ತಿರಲ್ಲಿಲ್ಲವೇನೊ?

ಕೈಕೆ, ಮಂಥರೆಯ ಪ್ರೇರಣೆಯಿಂದ ವರಗಳನ್ನೇನೊ ಪಡೆಯುತ್ತಾಳೆ, ಆದರೆ ತನ್ನ ಸಹಿತ ಎಲ್ಲರನ್ನೂ ದುಃಖದ ಮಡುವಿಗೆ ತಳ್ಳುತ್ತಾಳೆ. ನಿಜವಾಗಿ ಮಂಥರೆಯ ಅಂತರಂಗದೊಳಗೆ ಹುದುಗಿದ್ದ ತಾಯಿ ಮಮತೆ, ಕಲ್ಪಿಸಿಕೊಂಡ ಕೆಡುಕಿನ ಭಯ ಇಲ್ಲಿ ಕನಸಾಗಿ ಹೊಮ್ಮುತ್ತದೆ. "ಮಂಥರೆ ಸೀತೆ ರಾಮ ರಾವಣರೆಲ್ಲರುಂ ಸೂತ್ರಗೊಂಬೆಗಳಲ್ತೆ ಆ ವಿಧಿಯ ಹಸ್ತದಲಿ?"[೫] ಎನ್ನುವ ಮಾತು ಸತ್ಯ. 'ರಾವಣನ ಆತ್ಮೋದ್ಧಾರ ಮಾಡಿಸುವ, ಅವನನ್ನು ದುರಂತ ನಾಯಕನನ್ನಾಗಿಸಿ ನಮ್ಮ ಮನದಲ್ಲಿ ಸದಾ ಕರುಣೆಯ ನೆಲೆಯಲ್ಲಿ ನಿಲ್ಲುವಂತೆ ಮಾಡುವ ಹಾಗೂ ರಾಮನ ಮಹತ್ವವನ್ನು ಜಗಕ್ಕೆ ಸಾರುವ; ಮಹತ್ಕಾರ್ಯದ ಮೂಲ ಬೀಜವೇ ಮಮತೆಯ ಸುಳಿ ಮಂಥರೆ.'

ಮಂಥರೆಯಿಂದಾದ ನಾಂದಿಗೆ; ರಾವಣ ಹಿಡಿಯುವ ಹಾದಿ, ಸೀತಾಪಹರಣ. 'ಸಂಸ್ಕೃತಿ ಲಂಕಾ' ಸಂಚಿಕೆಯಲ್ಲಿ ಚಂದ್ರನಖಿಯ ಕಾವಲಿನಲ್ಲಿರುವ ಜಾನಕಿಗೆ ಬೀಳುವ ಕನಸು; ಅವಳ ಮನದಲ್ಲಿ ಹುಟ್ಟಿದ ತಪ್ಪು ಕಲ್ಪನೆಯ ಅರಿವು ಅವಳಿಗೇ ಒದಗಿದಂತಿದೆ. ಆಗ ಸೀತೆಗೆ ಸುಖದ ಕನಸೊಂದು ಬೀಳುತ್ತದೆ: ಅವರು ವನವಾಸವನ್ನು ಮುಗಿಸಿ ಅಯೋಧ್ಯೆಗೆ ಹಿಂದಿರುಗಿದ್ದಾರೆ. ಜನ ಸಂತೋಷದಿಂದ ನಲಿದಿದೆ, ಕುಣಿದಿದೆ. ಎಲ್ಲೆಲ್ಲೂ ಗಾನದಿಂಪು, ಪರಿಮಳದ ಕಂಪು ತುಂಬಿದೆ. ಕೈಕೆ ಊರ್ಮಿಳೆ ಭರತ ಕೌಸಲ್ಯೆಯರ ಆನಂದ ಹೇಳತಿರದು. ಆದರೆ ರಾಮನೆಲ್ಲಿ? ಸೀತೆ ಬೆಚ್ಚಿ ಬೆದರಿ "ಅಯ್ಯಯ್ಯೋ ಸೌಮಿತ್ರಿ, ರಾಮನನ್ನು ಕಾಡಿನಲ್ಲಿ ಬಿಟ್ಟು ಬಂದೆವೊ!" ಎಂದು ಏಳಲೆಳಸಿ, ಏಳಲಾರದೆ ಕೆಳಗುರುಳುತ್ತಾಳೆ.

ಈ ಕನಸು ಅಂದು ಸೀತೆಯಿಂದಾದ ಅಚಾತುರ್ಯದ ಪಶ್ಚಾತಾಪದಂತಿದೆ. ಪಂಚವಟಿಯಲ್ಲಿ ಸೀತೆ ಮಾಯಾಮೃಗವನ್ನು ನೋಡಿ, ಅದಕ್ಕೆ ಮರುಳಾಗಿ ಅದು ಬೇಕೆಂದು ರಾಮನನ್ನು ಕೇಳುತ್ತಾಳೆ. ರಾಮ–ಲಕ್ಷ್ಮಣರು ಅದು ಮಾಯೆ ಎಂದು ಎಷ್ಟು ಹೇಳಿದರೂ

ಕೇಳುವುದಿಲ್ಲ. ರಾಮ ಮಾಯಾಮೃಗದ ಬೆನ್ನಟ್ಟಿ ಹೋಗಿ ಹೊಡೆದಾಗ, ಮಾರೀಚ ರಾಮನ ಧ್ವನಿಯಲ್ಲಿ ಚೀರುತ್ತಾನೆ. ಅದನ್ನು ಕೇಳಿದ ಸೀತೆ, ರಾಮ ಅಪಾಯದಲ್ಲಿದ್ದಾನೆಂದು ಭಾವಿಸಿ; ಲಕ್ಷ್ಮಣನಿಗೆ ಸಹಾಯಕ್ಕೆ ಹೋಗುವಂತೆ ಹೇಳುತ್ತಾಳೆ. ಆದರೆ ಅದು ರಾಕ್ಷಸನ ಮಾಯೆಯೆಂದು ಅರಿತಿದ್ದ ಲಕ್ಷ್ಮಣ, ಸೀತೆಯ ಮಾತನ್ನು ನಿರಾಕರಿಸುತ್ತಾನೆ; ಜತೆಗೆ ಅವಳನ್ನು ಸಮಾಧಾನ ಪಡಿಸಲು ಯತ್ನಿಸುತ್ತಾನೆ. ಆದರೆ ಸೀತೆ, ಅವನ ಮೇಲೆ ಇಲ್ಲದ ಆಪಾದನೆ ಮಾಡುತ್ತಾಳೆ. ವಿಧಿಯಿಲ್ಲದೆ ಲಕ್ಷ್ಮಣ ತೆರಳುತ್ತಾನೆ. ಆದರೆ ಅದರ ಫಲವನ್ನು ತನ್ನೊಂದಿಗೆ ಎಲ್ಲರು ಅನುಭವಿಸುವಂತೆ ಮಾಡುತ್ತಾಳೆ. ಅಂದು ಅವಳಲ್ಲಿ ಮೂಡಿದ ತಪ್ಪು ಕಲ್ಪನೆಯೆ ಈಗ ಕನಸಿನ ರೂಪದಲ್ಲಿ ಅರಿವಾಗಿದೆ ಎನಿಸುತ್ತದೆ. ಈ ಸ್ವಪ್ನವೆ ಸೀತೆಯನ್ನ 'ನಿತ್ಯತಪಸ್ವಿನಿ'ಯನ್ನಾಗಿ ಮಾಡುತ್ತದೆ.

ಸೀತೆ ಅಶೋಕ ವನದಲ್ಲಿರುವಾಗ ಅವಳ ಕಾವಲು ಕಾಯುತ್ತಿದ್ದ ತ್ರಿಜಟೆಗೆ, ಒಂದು ದಿನ ಸೀತೆಗೆ ಶುಭವಾಗುವಂತೆ ಸ್ವಪ್ನ ಬೀಳುತ್ತದೆ. ತ್ರಿಜಟೆ ಆ ಕನಸನ್ನ ಸೀತೆಗೆ ಹೇಳುತ್ತಾಳೆ: "ಪುಣ್ಯೆ, ಆ ಶುಭ ಶಕುನವನ್ನು ನೆನೆದರೆ ರೋಮಾಂಚನವಾಗುತ್ತದೆ. ಒಂದು ಸರೋವರ. ಅದರಲ್ಲಿ ಸಹಸ್ರದಲಗಳ ತಾವರೆಗಳೆರಡು. ಒಂದು ನೀಲವರ್ಣ; ಮತ್ತೊಂದು ಕನಕವರ್ಣ. ತಂಗಾಳಿ ತೀಡುತ್ತಿತ್ತು. ತುಂಬಿ ಝೇಕರಿಸುತ್ತಿತ್ತು. ಇದ್ದಕ್ಕಿದ್ದಂತೆ ನೀರನ್ನು ಕದಡುತ್ತ ಮೊಸಳೆಯೊಂದು ಮೇಲೆದ್ದಿತು. ಮೆಲ್ಲಮೆಲ್ಲನೆ ಕನಕ ತಾವರೆಯ ಹತ್ತಿರ ಸರಿದು ಮೂಗರಳಿಸಿ ಅದರ ಕಂಪನ್ನು ಮೂಸತೊಡಗಿತು. ಹೂವು ನಡುಗಿತು. ಒಡನೆಯೇ ಹೂಕುಡಿಯುತ್ತಿದ್ದ ದುಂಬಿಗಳು ಎದ್ದು ಝೇಂಕರಗೈಯುತ್ತ ಅದರ ಮೇಲೆ ಬಿದ್ದು ಕೊಂಡಿಯಿಂದ ಚುಚ್ಚಿ ಅದನ್ನು ಕೊಂದವು. ಅದರ ಶವ ನನ್ನೆಡೆ ತೇಲಿಬರಲು ಅದರಲ್ಲಿ ರಾವಣನ ಕಳೇಬರವನ್ನು ಗುರುತಿಸಿ ಬೆಚ್ಚಿದೆನು. ನೈದಿಲೆಯನ್ನಪ್ಪಿಕೊಂಡು ತಾವರೆಯಲ್ಲಿದ್ದ ನಿನ್ನನ್ನು ಕಂಡು ಅಚ್ಚರಿಗೊಂಡೆನು. ಕಣ್ದೆರೆದು ನೋಡಿದೆ. ನೀನು ಪದ್ಮಾಸನಳಾಗಿ ಧ್ಯಾನನಿರತಳಾಗಿದ್ದೆ."[೬]

ಇಲ್ಲಿ 'ತ್ರಿಜಟೆ ಕಂಡ ಕನಸು ಮನಃಪರಿವರ್ತನೆಯೂ ಹೌದು; ರಾವಣನ ಭವಿಷ್ಯ ಸಂಕೇತವೂ ಹೌದು.' ಈ ಎರಡೂ ವಿಷಯಗಳನ್ನು ಕುರಿತು ವಿವೇಚಿಸುದಾದರೆ: ಸ್ವಭಾವತಃ ರಾಕ್ಷಸಿಯಾದ ತ್ರಿಜಟೆಯ ಮನಸ್ಸು ಈ ಕನಸಿನಿಂದಾಗಿ ಪರಿವರ್ತನೆಯಾಗಿದೆ. ಇಲ್ಲಿ ತ್ರಿಜಟೆ ರಾವಣನಿಂದ ನೊಂದ ಸೀತೆಯನ್ನು ಸಮಾಧಾನಿಸುತ್ತಾಳೆ ಹಾಗೂ ಜಾನಕಿಗೆ ಒಳಿತಾಗುವುದೆಂದು ನಂಬಿದ್ದಾಳೆ. ಹಾಗಂತ ಹೇಳಿ ಇವಳಿಗೆ ಸ್ವಾಮಿನಿಷ್ಠೆ ಇಲ್ಲ ಎಂದು ಹೇಳುವಂತೆಯೂ ಇಲ್ಲ; ಏಕೆಂದರೆ ರಾವಣನ ಸ್ಥಿತಿಗೆ ಇವಳೂ ಮರುಗುತ್ತಾಳೆ. ಮತ್ತು ಅವನ ಮನಃಪರಿವರ್ತನೆಗೆ ಪ್ರಾರ್ಥನೆ ಗೈಯುತ್ತಾಳೆ. ಇಲ್ಲಿಯ ತನಕ ತ್ರಿಜಟೆಯೊಂದಿಗೆ ಬೆರೆಯದಿದ್ದ ಸೀತೆ; ಈ ಕನಸ್ಸನ್ನು ಕೇಳಿದ ಮೇಲೆ ಅವಳೊಂದಿಗೆ ಮುಕ್ತವಾಗಿ ಬೆರೆಯುತ್ತಾಳೆ. ಅಂತೆಯೇ ಇಬ್ಬರೂ ತಾಯಿ–ಮಗಳಂತಾಗುತ್ತಾರೆ. ರಾವಣನ ಮನಃಪರಿವರ್ತನೆಗೆ ಸೀತೆಯ ಪ್ರಾರ್ಥನೆಯೂ ಇದೆ; ಹಾಗೆಯೆ ಅವನ ದುಃಸ್ಥಿತಿಗೆ ಮರುಕವೂ ಇದೆ. ಇಲ್ಲಿ ರಾವಣನ ಅಂತ್ಯದ ಮನ್ಸೂಚನೆಯೂ ಇದೆ. ಈ ಸ್ವಪ್ನ ಸೀತೆಯಲ್ಲಿ, ರಾಮನನ್ನು ಸೇರುವ ಸಂತೋಷವನ್ನು; ಮಂಡೋದರಿಯ ಭವಿಷ್ಯದ ಸ್ಥಿತಿಯನ್ನು ನೆನೆದು ದುಃಖವನ್ನು ಹೆಚ್ಚಿಸುತ್ತದೆ.
'ಅದ್ವಿತೀಯಮಾ ದ್ವಿತೀಯಂ ದಿನಂ' ಸಂಚಿಕೆಯಲ್ಲಿ ರಾವಣನಿಗೆ ಮತ್ತು ಅನಲೆಗೆ ಬೀಳುವ ಕನಸುಗಳು ವಿಶಿಷ್ಟವಾದವು. ರಾವಣ ಕಂಡ ಕನಸು, ಅವನ ಕಾಮದ ವಿರುದ್ಧ ಜಯದ ಮೆಟ್ಟಿಲನ್ನೇರ ಹೊರಟರೆ; ಅನಲೆ ಕಂಡ ಸ್ವಪ್ನ ಮನುಷ್ಯ ಜೀವನದ ಸುಖ–ದುಃಖದ ಚಲನೆಯನ್ನು; ರಾವಣನ ಆತ್ಮೋದ್ಧಾರದ ಸೂಚನೆಯನ್ನು ನೀಡುತ್ತದೆ.

ಲಂಕೆಯಲ್ಲಿ ಯುದ್ಧದ ಎರಡನೇ ದಿನ; ರಾವಣನ ಮನದಲ್ಲಿ ಕಾಮದ ವಿರುದ್ಧ ಆಧ್ಯಾತ್ಮದ ಯುದ್ಧವೂ ಪ್ರಾರಂಭವಾಗಿದೆ. ಕ್ರಮಕ್ರಮವಾಗಿ ರಾವಣನಿಗೆ ಸೀತೆಯಲ್ಲಿದ್ದ ಕಾಮತ್ವಗುಣ ಕಡಿಮೆಯಾಗಿ; ಮಾತೃತ್ವಗುಣ ಬೆಳೆಯಲು ಪ್ರಾರಂಭವಾಗಿದೆ. ರಾವಣನಿಗೆ ಮುಂದೊದಗಬಹುದಾದ ಮಹದ್ ಘಟನೆಯೊಂದರ ಮೂಲ ಇಲ್ಲಿ ಮೊಳಕೆಯೊಡೆಯುತ್ತದೆ. ಅದು ರಾವಣನ ಕನಸಿನಲ್ಲಿ ಹೀಗೆ ವ್ಯಕ್ತವಾಗುತ್ತದೆ: "ರಾಣಿ, ನೆನ್ನೆಯ ರಾತ್ರಿ ನನಗೆ ಒಂದು ಕನಸಾಯಿತು. ನಿರ್ಭಾಗ್ಯಳಾದ ವೇದವತಿಯು ಚಿತೆಗೇರಿದ ಆ ಭೀಕರ ದೃಶ್ಯವನ್ನು ಪುನಃ ನೋಡಿದೆನು. ಆ ಸುಂದರಿಯ ಸುಂದರ ಶರೀರವು ಕಣ್ಣ ಮುಂದೆ ಉರಿದು ಬಿಳಿಯ ಬೂದಿಯ ರಾಶಿಯಾಯಿತು. ನಾನು ಅದನ್ನು ನೋಡುತ್ತಿರಲು ಒಂದು ತಿಳಿಗಾಳಿಯು ಆ ಬೂದಿಯನ್ನು ಮೆಲ್ಲಗೆ ಹಾರಿಸಿತು. ಕೆದರಿದ ಆ ಮೃತ ಭಸ್ಮರಾಶಿಯಲ್ಲಿ ಕವಿರಚಿತ ರಮಣೀಯವಾದ ಒಂದು ಅಮೃತ ಮೂರ್ತಿಯು ನಿಧಾನವಾಗಿ ಗೋಚರಿಸಿತು. ಅದರಲ್ಲಿ ಈ ಮಹಾತಪಸ್ವಿನಿಯಾದ ಸೀತೆಯನ್ನು ಗುರುತಿಸಿದೆನು. ಕಾರಣವು ತಿಳಿಯಿತು. ನಡುಗಿ ಕಣ್ಣು ತೆರೆದು ಏಳಲು ಬೆವರಿದ್ದ ಮೈಯನ್ನು ನೋಡಿ ಸ್ವಪ್ನದ ಚೇಷ್ಟೆಗೆ ನನ್ನಲ್ಲಿ ನಾನೇ ನಕ್ಕೆನು. ಸುಳ್ಳು ಕನಸಿನ ಅನುಮಾನವನ್ನು ನಿವಾರಿಸಿಕೊಳ್ಳಲು ಹೋಗಿ ಆ ಜನಕಜಾತೆ ಸೀತೆಯನ್ನು ನೋಡಿದೆನು. ಆ ಕೃಶಳಾದವಳನ್ನು ನೋಡಿ ನನ್ನ ಅನುಮಾನವು ಕಳೆಯಿತು. ಇವಳೆಲ್ಲಿ? ಅವಳೆಲ್ಲಿ? ಬುದ್ಧಿಯು ನಿದ್ರಿಸುವಾಗ ಮೃದುವಾದ ಮೆದುಳು ಈ ವಿಕಾರಗಳನ್ನು ಬಡಿದೆಬ್ಬಿಸುತ್ತದೆ."[೭] ಮೊದಮೊದಲು ರಾವಣ ತನ್ನಲ್ಲಿ ಉಂಟಾಗುತ್ತಿದ್ದ ಬದಲಾವಣೆಯನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಾನೆ. ಮಂಡೋದರಿ ರಾವಣನ ಒಳಮನಸಿನಂತೆ ಬುದ್ಧಿಯನ್ನು ಹೇಳುತ್ತಾಳೆ, ರಾವಣ ಅವಳ ಮಾತನ್ನು ಕೇಳುವುದಿಲ್ಲ; ಆದರೆ ಈ ಸ್ವಪ್ನ ಅವನ ಬದಲಾವಣೆಯ ಮುನ್ನುಡಿಯಾಗುತ್ತದೆ.

ವೇದವತಿ (ವೇದವತಿಯ ಮರುಜನ್ಮವೇ ಸೀತೆ ಎಂದು ಪುರಾಣ ಕಾವ್ಯಗಳು ಚಿತ್ರಿಸಿವೆ.) ಚಿತೆಗೇರಿದಂತೆ, ರಾವಣನಿಗೆ ಸೀತೆಯಲ್ಲಿದ್ದ ಕಾಮತ್ವವೂ ಚಿತೆಗೇರುತ್ತದೆ. ಶ್ವೇತ ವರ್ಣದ ಬೂದಿ ರಾಶಿಯಿಂದೆದ್ದ ಸೀತೆ ರಾವಣನಿಗೆ ಮಾತೆಯಾಗಿ ಕಾಣುತ್ತಾಳೆ. ರಾವಣನ ಕನಸಿನ ಜಾಗೃತಿಗೆ ಮುಂದಿನ ಭಾಗವಾಗಿ ಅನಲೆಯ ಕನಸು ಹೆಣೆದುಕೊಳ್ಳುತ್ತದೆ. ಅವಳ ಕನಸು ಅತಿಶಯವಾದದು. “ತ್ರಿಜಟೆ ತನ್ನ ಕೆಲಸವನ್ನು ಮುಗಿಸಿ ಮಲಗಿದಳಂತೆ. ದೇವಿ ಕಣ್ಣುಮುಚ್ಚದೆ ಯೋಗಿನಿಯಂತೆ ಅಂತರ್ಮುಖಿಯಾಗಿ ಕುಳಿತಿದ್ದಳಂತೆ. ಮಹಾಜ್ಯೋತಿಯೊಂದು ಪರ್ಣಶಾಲೆಯನ್ನೆಲ್ಲ ತುಂಬಿದಂತಾಯಿತಂತೆ. ಅನಲೆ ಪುಳಕಿತಳಾಗಿ ನೋಡಿತ್ತಿರಲು ಸೀತೆ ಯಾರೊಡನೆಯೊ ಮಾತನಾಡುತ್ತಿದ್ದಂತೆ ಕಾಣಿಸಿತಂತೆ. ಆ ಪೂಜೆ ಅಲ್ಲಿದ್ದರೂ ಎಲ್ಲೆಲ್ಲಿಯೂ ಚರಿಸುತ್ತಿದ್ದಂತೆ, ಸರ್ವವನ್ನೂ ಕಾಣುತ್ತಿದ್ದಂತೆ, ಅಲ್ಲಿ ತಾಟಸ್ಥ್ಯ ಸ್ಥಿತಿಯಲ್ಲಿದ್ದರೂ ಸೃಷ್ಟಿಚಕ್ರವನ್ನೆ ತಿರುಗಿಸುತ್ತಿದ್ದಂತೆ ಗೋಚರಿಸಿದಳಂತೆ. ಆ ದೃಶ್ಯವನ್ನು ಕಂಡು ಭಯಭೀತಳಾಗಿ ಅನಲೆ ಮೆಯ್ಮರೆತಳಂತೆ.”[೮] ಹೀಗೆ ಮಂಡೋದರಿ ರಾವಣನಿಗೆ, ಅನಲೆ ಕಂಡ ಸ್ವಪ್ನದ ಮಹತ್ವವನ್ನ ವಿವರಿಸುತ್ತಾಳೆ.

‘ಶ್ರೀರಾಮಾಯಣ ದರ್ಶನಂ’ನಲ್ಲಿ ಮುಂದೊದಗಬಹುದಾದ ರಾವಣನ ಆತ್ಮೋದ್ಧಾರಕ್ಕೆ, ಪ್ರತೀಕವಾಗಿ ಕಾಣಿಸಿಕೊಳ್ಳುವ ಈ ಮುಂದಿನ ಕನಸು; ಸರ್ವೋದಯ, ಪೂರ್ಣದೃಷ್ಟಿ ತತ್ತ್ವಗಳನ್ನು ಪ್ರತಿಪಾದಿಸುತ್ತದೆ. ಇಲ್ಲಿ ‘ರಾವಣನ ಸ್ವಪ್ನಸಿದ್ಧಿಗಾಗಿಯೇ ಅಲ್ಲ; ಮಹಾಕಾವ್ಯದ ಸ್ವಪ್ನಸಿದ್ಧಿಗಾಗಿಯೂ ತಂದಿರಿಸಿದ ಸಂಚಿಕೆಯಂತಿದೆ ‘ಶ್ರೀರಾಮಾಯಣ ದರ್ಶನಂ’ನ ‘ದಶಾನನ ಸ್ವಪ್ನಸಿದ್ಧಿ’.’ ಈ ಸಂಚಿಕೆಯಲ್ಲಿ ಕನಸೊಳಗೊಂದು ಕನಸು, ಕನಸೊಡೆಯುವಂತೆ’ ಚಿತ್ರಿತವಾಗಿದೆ.

‘ದಶಾನನ ಸ್ವಪ್ನಸಿದ್ಧಿ’– ‘ಶ್ರೀರಾಮಾಯಣ ದರ್ಶನಂ’ನ ಒಂದು ಶಿಖರ ಸಂಚಿಕೆ’ “ರಾವಣನಿಗೆ ಸೀತೆಯ ಬಗೆಗಿದ್ದ ಅದಮ್ಯವಾದ ಕಾಮರುಚಿ ಸಂಪೂರ್ಣ ವಿನಾಶವಾಗಿ, ಅವನ ಮನಸ್ಸು ಆಮೂಲಾಗ್ರವಾಗಿ ಪರಿವರ್ತನೆಯಾದ ಬಗೆಯನ್ನು ಒಂದು ಅದ್ಭುತವಾದ ‘ಪ್ರತಿಮೆ’ಯ ಮೂಲಕ ಚಿತ್ರಿಸುತ್ತದೆ. ಇಡೀ ಸಂದರ್ಭ ರಾವಣನಿಗೆ ತನ್ನ ಅರಿವು–ಇರವುಗಳನ್ನು ಸ್ಪಷ್ಟಪಡಿಸುತ್ತದೆ. ಪಾಳು ಲಂಕೆಯಲ್ಲಿ ಲಂಕಾಲಕ್ಷ್ಮಿಗೆ ಒದಗಿದ ದುರವಸ್ಥೆಯಿಂದ ಮೊದಲ್ಗೊಂಡ ಕನಸು ಬದಲಾಗಿ ಮಹಾಕಾಳಿಯ ದೇಗುಲದಲ್ಲಿ ಒದಗಿದ ಸಾಕ್ಷಾತ್ಕಾರದ ‘ಸ್ವಪ್ನದರ್ಶನ’ದಂತೆ ಚಿತ್ರಿತವಾಗಿದೆ. ಈ ‘ಸ್ವಾಪ್ನಿಕಮನೋಮಯ’ದಲ್ಲಿ, ರಾವಣ ತಾಯಿ ದುರ್ಗೆಯನ್ನು ಕುರಿತು, ರಾಮನು ರಣದಲ್ಲಿ ಸೋಲುವಂತೆಯೂ, ಸೀತೆ ತನಗೆ ವಶವಾಗುವಂತೆಯೂ ವರವನ್ನು ಕರುಣಿಸು ಎಂದು ಕೇಳಿಕೊಳ್ಳುತ್ತಾನೆ. ಜಗದಂಬೆ ‘ತಥಾಸ್ತು’ (ಹಾಗೆಯೆ ಆಗಲಿ) ಎನ್ನುತ್ತಾಳೆ. ರಾವಣ ಆಶ್ಚರ್ಯಗೊಂಡು– ‘ಸೀತೆ ಸೋಲ್ವಳೇ, ರಾಮನಂ ಗೆಲ್ವೆನಿದು ದಿಟಮೆ?’ ಎನ್ನುತ್ತಾನೆ. ತಾಯಿ ಕಾಳಿ ಹೇಳುತ್ತಾಳೆ: ‘ಸೀತೆಯಾಲಿಂಗಿಪಳ್, ಚುಂಬಿಸಿ ಎರ್ದೆಗೊತ್ತುವಳ್; ರಣದಿ ರಾಮನ ಸೋಲಿಪಯ್, ಪುನರ್ ಜನ್ಮದೊಳ್!’ ಆ ಕೂಡಲೆ ರಾವಣ ಮತ್ತೊಂದು ಕನಸಿನಕಾಣ್ಕೆಗೆ ಜಾರುತ್ತಾನೆ.

ರಾವಣನಿಗೆ, ದೇವಾಲಯದ (ಮನಸ್ಸಿನ) ಪೀಠಾಗ್ರದಲ್ಲಿ ಮಾತೃಸ್ವರೂಪಿಯಾದ ದೇವಿಯ ಬದಲು, ಕಾಮಸ್ವರೂಪಿಯಾದ ಕುದುರೆ ಕಾಣುತ್ತದೆ. ಅದರಲ್ಲಿಯೂ ಕಾಮದ ಉತ್ಕಟತೆಯನ್ನು ಸೂಚಿಸುವಂತೆ; ಮುಂಗಾಲುಗಳನ್ನು ಮೇಲೆತ್ತಿ ಹಿಂಗಾಲುಗಳಲ್ಲಿಯೆ ನಿಂತಿರುವ ಕುದುರೆ. ಇಲ್ಲಿ ರಾವಣನಲ್ಲಿ ಅಡಗಿದ್ದ ಆಧ್ಯಾತ್ಮ ಎಚ್ಚರಗೊಳ್ಳುತ್ತದೆ. ಹಾಗೆಯೆ ರಾವಣನ ಆತ್ಮೋದ್ಧಾರಕ್ಕಾಗಿ, ಸೀತಾ–ಮಂಡೋದರಿಯರು ಮಾಡಿದ ಪ್ರಾರ್ಥನೆಯೆ; ನಭದ ಖಡ್ಗ ಮುಷ್ಠಿಯಾಗಿ ರಾವಣನ ಮನದಲ್ಲಿ ಸೀತೆಯ ಬಗೆಗಿದ್ದ ಕಾಮದ ಉತ್ಕಟತೆಯನ್ನು ಬಲಿಗೆಡಹುತ್ತದೆ. ಇದರಿಂದ ಜಾಗೃತವಾದ ರಾವಣನ ಮನಸ್ಸು, ಆತ್ಮೋದ್ಧಾರದ ದೋಣಿಯನ್ನ ಹತ್ತಿ ಮುಂದೆ ಮರುಹುಟ್ಟು ಪಡೆಯಲು ಸಿದ್ಧವಾಗುತ್ತದೆ. ‘ಮುಂದೆ ನದೀಜಲವೆಲ್ಲ ನೆತ್ತರಾಗಿ, ದಶಾನನನು ಏರಿದ್ದ ದೋಣಿ ತಲೆಕೆಳಗಾಗಿ, ನೆತ್ತರಿನ ಹೊಳೆಯೊಳಗೆ ಅವನು ತೇಲಿಮುಳುಗಿ, ಕೂಡಲೆ ತನ್ನ ಸಹೋದರ ಕುಂಭಕರ್ಣನನ್ನು ಕಂಡು ಕೂಗಲಾಗಿ, ಆ ಇಬ್ಬರೂ ಹೊಳೆಯೊಡನೆ ಹೋರಾಡಿ ಹೇಗೋ ದಡಕ್ಕೆ ಏರುತ್ತಾರೆ. ನೊಡುತ್ತಾರೆ, ಇದ್ದಕ್ಕಿದ್ದ ಹಾಗೆ ತಾವಿಬ್ಬರೂ ಶಿಶುಗಳಂತಗಿದ್ದಾರೆ! ಸುತ್ತಲೂ ಯಾವುದೋ ಋಷ್ಯಾಶ್ರಮದ ಶಾಂತಿ. ತಾವು ಯಾರು ಏನು–ಎಂಬ ಆ ಪೂರ್ವದ ಏನೊಂದೂ ನೆನಪಿಗೆ ಬರುತ್ತಿಲ್ಲ. ನೆನೆಯುವ ಆ ಪ್ರಯತ್ನವಷ್ಟೂ ವ್ಯರ್ಥವಾಗುತ್ತದೆ. ವಿಸ್ಮೃತಿಯ ವೈತರಣಿಯಲ್ಲಿ ಮುಳುಗಿಹೋಗಿ ಆತ್ಮ ಶಿಶುಶರೀರದಿಂದ ರಾವಣನೂ, ಕುಂಭಕರ್ಣನೂ ಆಗತಾನೆ ಹುಟ್ಟಿದ ಮಕ್ಕಳಂತೆ ಅಳತೊಡಗಿದಾಗ, ಅಲ್ಲಿಗೆ ಬಂದ ಸೀತೆ, ಮಕ್ಕಳನ್ನು ಎತ್ತಿ ಮುದ್ದಾಡುತ್ತಾಳೆ. ಹಾಡಿ ತೊಡೆಯ ಮೇಲೆ ಕೂಡಿಸಿ ಎದೆಗೊತ್ತಿಕೊಂಡು ಮೊಲೆಯೂಡಿಸಿ ಸಂತೈಸುತ್ತಾಳೆ.’

‘ವಾಸ್ತವವಾಗಿ ಇಲ್ಲಿ ಕಾಣುವ ಮಹದ್ ಭೀಮತನುವಿನ ಕುದುರೆ ಮನಸ್ಶಾಸ್ತ್ರದ ಪ್ರಕಾರ ಅದಮ್ಯವಾದ ಕಾಮದ ಸಂಕೇತ. ಅದನ್ನು ಸುದೀರ್ಘವಾದ ಖಡ್ಗವನ್ನು ಹಿಡಿದ ಕೈಯೊಂದು ಕತ್ತರಿಸುವುದು, ಅನಂತರ ಕತ್ತರಿಸಿದ ಕುದುರೆಯ ಮೈಯಿಂದ ಹರಿದ ರಕ್ತವು ಬಂದು ಮಹಾಪ್ರವಾಹವಾಗಿ ರಾವಣನು ಕೊಚ್ಚಿಹೋಗುವುದು, ಅನಂತರ ಪುನರ್ಜನ್ಮ ಸದೃಶವಾದ ಘಟನೆಯೊಂದು ಸಂಭವಿಸಿ,

ರಾವಣ–ಕುಂಭಕರ್ಣರಿಬ್ಬರೂ ಅವಳಿಮಕ್ಕಳಾಗಿ ಸೀತೆಯ ತೊಡೆಯೇರುವುದು–ಈ ಎಲ್ಲವೂ ರಾವಣನ ಕಾಮರುಚಿ ವಿನಾಶವಾಗಿ, ಆತನ ಮನಸ್ಸು ಸೀತೆಯ ಬಗೆಗಿನ ಮಾತೃಭಾವದಲ್ಲಿ ಉದಾತ್ತೀಕರಣಗೊಳ್ಳುವ ಪ್ರಕ್ರಿಯೆಯನ್ನು ಸೂಚಿಸುತ್ತವೆ. ಕುವೆಂಪು ಅವರು ಈ ಸಂದರ್ಭವನ್ನು ಚಿತ್ರಿಸುವಲ್ಲಿ ಮನೋವಿಜ್ಞಾನದ ತಿಳುವಳಿಕೆಯನ್ನು ಬಳಸಿಕೊಂಡಿರುವ ಕ್ರಮ ಅಪೂರ್ವವಾಗಿದೆ.'[೯]

ಒಟ್ಟಾರೆಯಾಗಿ ಕವಿಗಳು ಕನಸುಗಳನ್ನು ಕಾವ್ಯದ ವಸ್ತುವನ್ನಾಗಿ, ಸಂಕೇತ, ಪ್ರತೀಕ, ಪ್ರತಿಮೆಗಳನ್ನಾಗಿ, ತಮ್ಮ ನಿರೂಪಣೆಯ ತಂತ್ರಗಳನ್ನಾಗಿ ಬಳಸಿಕೊಂಡಿದ್ದಾರೆ. ಆದರೆ, 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಕನಸು ಎನ್ನುವುದು ಒಂದು ದರ್ಶನವಾಗಿ ನಿರೂಪಣೆಗೊಂಡಿದೆ. "ಪಾಪಿಗುದ್ಧಾರಮಿಹುದೌ ಸೃಷ್ಟಿಯ ಮಹದ್ ವ್ಯೂಹರಚನೆಯೊಳ್" ಎನ್ನುವ ತತ್ತ್ವದ ಸಾಕ್ಷಾತ್ಕಾರದ ಮಾಧ್ಯಮವಾಗಿ ಕನಸು ಪ್ರಕಟಗೊಂಡಿದೆ. ರಾವಣನ ಆದಿಯಾಗಿ ಬಹುಪಾಲು ಜೀವಗಳು ಬದುಕಿನಲ್ಲಿ ಎಡವಿದಾಗ ಕನಸಿನ ಕಾಣ್ಕೆ ಆ ಜೀವಗಳು ಆತ್ಮವಿಮರ್ಶೆ ಮಾಡಿಕೊಳ್ಳುವಂತೆ ಮಾಡಿ, ಆ ಜೀವಗಳು ಸರಿದಾರಿ ಹಿಡಿಯುವಂತೆ ಮಾಡಿದೆ.

ಕೊನೆಟಿಪ್ಪಣಿಗಳು:

೧. ಜಿ ಎಸ್ ಶಿವರುದ್ರಪ್ಪ : 'ಸಮಗ್ರ ಗದ್ಯ–೨', 'ಸ್ವಪ್ನಗಳ ಸ್ವಾರಸ್ಯ: ಸಾಹಿತ್ಯದಲ್ಲಿ', ಪುಟ–೮೫.
೨. ಅದೇ, ಪುಟ ೮೬.
೩. ಕುವೆಂಪು : 'ತಪೋನಂದನ', 'ಪ್ರತಿಮಾ ಮತ್ತು ಪ್ರತಿಕೃತಿ', ಪುಟ–೨೩,೨೪.
೪. ಕುವೆಂಪು : 'ಶ್ರೀರಾಮಾಯಂ ದರ್ಶನಂ', 'ಮಮತೆಯ ಸುಳಿ ಮಂಥರೆ', ಪುಟ–೭೧, ಸಾಲು ೧೩೮–೧೫೨.
೫. ಜಿ ಎಸ್ ಶಿವರುದ್ರಪ್ಪ : 'ಸಮಗ್ರ ಗದ್ಯ–೨', 'ಸ್ವಪ್ನಗಳ ಸ್ವಾರಸ್ಯ: ಸಾಹಿತ್ಯದಲ್ಲಿ', ಪುಟ–೮೯.
೬. ಕುವೆಂಪು : 'ಶ್ರೀರಾಮಾಯಣ ದರ್ಶನಂ', 'ಮಮತೆಯ ಸುಳಿ ಮಂಥರೆ', ಪಂಕ್ತಿ ೧೩೪–೧೩೫, ಪುಟ–೭೧
೭. ದೇಜಗೌ : 'ವಚನಚಂದಿಕೆ' ಪುಟ–೨೫೨.
೮. ಅದೇ. ಪುಟ– ೩೧೬.
೯. ಜಿ ಎಸ್ ಶಿವರುದ್ರಪ್ಪ : 'ಕುವೆಂಪು ಮುನರಾಲೋಕನ', 'ಶ್ರೀರಾಮಾಯಣದರ್ಶನಂ: ಒಂದು ನೋಟ', ಪುಟ–೬೬.

OOOOOOOOOOOO

ಪತ್ರಿಕೆಯ ನಿರ್ವಹಣೆ ಹಾಗೂ ಗುಣಮಟ್ಟಕ್ಕಾಗಿ **ನಿಗದಿತ ಶುಲ್ಕ**ವನ್ನು ಮುಂದಿನ ಸಂಚಿಕೆಯಿಂದ ಜಾರಿಗೊಳಿಸಲಾಗುವುದು ಹಾಗೂ ಪ್ರತಿ ಸಂಚಿಕೆಗೂ **ಸೃಜನ**(ಕವಿತೆ, ಕಥೆ, ಪ್ರಬಂಧ, ಕೃತಿ ಓದು, ಕಾದಂಬರಿ ಮೊದಲಾದಂತೆ) ಹಾಗೂ **ಸಂಶೋಧನ ಲೇಖನ**ಗಳಿಗೆ ಅವಕಾಶವಿರುತ್ತದೆ. ಎಂದಿನಂತೆ ವಿಶೇಷ ಸಂಚಿಕೆಗಳು ಇರುತ್ತವೆ. ಪತ್ರಿಕೆಯು ಮುದ್ರಣ ಸ್ವರೂಪದ ಐ.ಎಸ್.ಬಿ.ಎನ್ ಸಂಖ್ಯೆ ಹೊಂದಿದ್ದು, ಎಂದಿನಂತೆ ಕೃತಿರೂಪದಲ್ಲಿ ಸಿದ್ಧಪಡಿಸಿ, ಪಿಡಿಎಫ್ ಮಾದರಿಯಲ್ಲಿ ನೀಡಲಾಗುವುದು. ಪತ್ರಿಕೆಯು ಓದುಗರಿಗೆ ನಮ್ಮ ಜಾಲತಾಣದಲ್ಲಿ ಉಚಿತವಾಗಿ ಲಭ್ಯವಿರುತ್ತದೆ.

ಪ್ರತಿಸ್ಪಂದ ಪತ್ರಿಕೆಯು ಉನ್ನತ ಅಧ್ಯಯನಗಳ ಕಡೆಗೆ ಎಂಬ ತೀರ್ಮಾನದೊಂದಿಗೆ ಕಾಲೇಜು, ಸ್ವಾಯತ್ತ ಕಾಲೇಜು, **ವಿಶ್ವವಿದ್ಯಾಲಯ**ಗಳಲ್ಲಿ ಒಂದು ದಿನದ (ಮೂರು ತಾಸು) ಕಾರ್ಯಾಗಾರವನ್ನು ಏರ್ಪಡಿಸುವ ಆಸಕ್ತಿ ಹೊಂದಿದೆ. ಆಸಕ್ತರು ನಮ್ಮನ್ನು ಸಂಪರ್ಕಿಸಿ, ಕಾರ್ಯಕ್ರಮ ಆಯೋಜಿಸಬಹುದು. ಸಂಪನ್ಮೂಲ ವ್ಯಕ್ತಿಗಳೊಂದಿಗೆ ನಮ್ಮ ತಂಡವು ನಿಮ್ಮ ಬಳಿಗೆ ಆಗಮಿಸುತ್ತದೆ. ಇದು ಉಚಿತ ಕಾರ್ಯವಾಗಿರುತ್ತದೆ.

ಜಾಲತಾಣ :https://prathispandha.wordpress.com/

ಇ– ಅಂಚೆ : prathispandha@gmail.com

ಸಾಹಿತ್ಯ, ಸಂಸ್ಕೃತಿ - ಸಂಶೋಧನ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
LITERATURE, CULTURE - RESEARCH QUARTERLY
PEER - REVIEWED JOURNAL
ISSN: 2320-9941

ಪ್ರತಿಸ್ಪಂದ

ಪ್ರಕಟಣೆ :
ಸಾಹಿತ್ಯ, ಸಂಸ್ಕೃತಿ – ಸಂಶೋಧನ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
ತೋಟದ ಮನೆ ನಂ ೧೦೭(೨೫)
ಕಂಚಾಘಟ್ಟ ಹೊಸ ಬಡಾವಣೆ
ತಿಪಟೂರು ೫೭೨೨೦೧
E-MAIL: PRATHISPANDHA@GMAIL.COM
WEBSITE : HTTPS://PRATHISPANDHA.WORDPRESS.COM/